

# ಪುಸ್ತಕ ಪ್ರಕಾಶನ

91, 9ನೇ ಮುಖ್ಯ ರಸ್ತೆ
ಸರಸ್ವತಿಪುರಂ,
ಮೈಸೂರು – 570 009
ಫೋನ್: 0821–2545 774

ಅಂಚೆ ಮೂಲಕ ತರಿಸಿಕೊಳ್ಳುವವರಿಗೆ:
ಪುಸ್ತಕ ಪ್ರಕಾಶನ
ಬುಕ್‌ಪೋಸ್ಟ್ ಸರ್ವೀಸ್, ಪಿ.ಬಿ.ನಂ.58
ಮೂಡಿಗೆರೆ, ಚಿಕ್ಕಮಗಳೂರು ಜಿಲ್ಲೆ–577 132
ಫೋನ್: 08263–228353,240202,
ಮೊಬೈಲ್: 94482 03730
e-mail: raghu202@bsnl.in

## ಪುಸ್ತಕ ಬೆಲೆ ಪಟ್ಟಿ – 2015 *

**ಶ್ರೀ ಕೆ.ಪಿ.ಪೂರ್ಣಚಂದ್ರ ತೇಜಸ್ವಿ:**

| | |
|---|---|
| ಕಿರಗೂರಿನ ಗಯ್ಯಾಳಿಗಳು | ....90.00 |
| ಕರ್ವಾಲೊ | ....105.00 |
| ಚಿದಂಬರ ರಹಸ್ಯ | ...165.00 |
| ಸಹಜ ಕೃಷಿ | ....60.00 |
| ಪರಿಸರದ ಕತೆ | ....105.00 |
| ಮಿಸ್ಸಿಂಗ್ ಲಿಂಕ್ | ....87.00 |
| ಅಲೆಮಾರಿಯ ಅಂಡಮಾನ್ ಹಾಗೂ ಮಹಾನದಿ ನೈಲ್ | ...114.00 |
| ಜುಗಾರಿ ಕ್ರಾಸ್ | ...165.00 |
| ಏರೋಪ್ಲೇನ್ ಚಿಟ್ಟೆ ಮತ್ತು ಇತರ ಕತೆಗಳು | ....63.00 |
| ಫ್ಲೈಯಿಂಗ್ ಸಾಸರ್ಸ್ (1) | ....75.00 |
| ಫ್ಲೈಯಿಂಗ್ ಸಾಸರ್ಸ್ (2) | ....81.00 |
| ಕಾಡಿನ ಕತೆಗಳು (1) | ....72.00 |
| ಕಾಡಿನ ಕತೆಗಳು (2) | ....72.00 |
| ಕಾಡಿನ ಕತೆಗಳು (3) | ....75.00 |
| ಕಾಡಿನ ಕತೆಗಳು (4) | ....75.00 |
| ರುದ್ರಪ್ರಯಾಗದ ಭಯಾನಕ ನರಭಕ್ಷಕ | ....105.00 |
| ಕನ್ನಡನಾಡಿನ ಹಕ್ಕಿಗಳು(1)–ಮಿಂಚುಳ್ಳಿ | ....81.00 |
| ಕನ್ನಡನಾಡಿನ ಹಕ್ಕಿಗಳು(2)– | ....81.00 |
| ಹೆಜ್ಜೆ ಮೂಡದ ಹಾದಿ | ....90.00 |
| ಹಕ್ಕಿ – ಪುಕ್ಕ | ...369.00 |
| ಅಣ್ಣನ ನೆನಪುಗಳು | ...180.00 |
| ಹುಲಿಯೂರಿನ ಸರಹದ್ದು | ....105.00 |
| ಅಬಚೂರಿನ ಪೋಸ್ಟಾಫೀಸು | ....90.00 |
| ಮಿಲನಿಯಮ್(1) – ಹುಡುಕಾಟ | ....81.00 |
| ಮಿಲನಿಯಮ್(2) – ಜೀವನ ಸಂಗ್ರಾಮ | ....72.00 |
| ಮಿಲನಿಯಮ್(3) – ಪೆಸಿಫಿಕ್ ದ್ವೀಪಗಳು | ....78.00 |
| ಮಿಲನಿಯಮ್(4) – ಚಂದ್ರನ ಚೂರು | ....81.00 |
| ಮಿಲನಿಯಮ್(5) – ನೆರೆಹೊರೆಯ ಗೆಳೆಯರು | ....81.00 |
| ಮಿಲನಿಯಮ್(6) – ಮಹಾಯುದ್ಧ(1) | ....87.00 |
| ಮಿಲನಿಯಮ್(7) – ಮಹಾಯುದ್ಧ(2) | ....87.00 |
| ಮಿಲನಿಯಮ್(8) – ಮಹಾಯುದ್ಧ(3) | ....81.00 |
| ಮಿಲನಿಯಮ್(9) – ದೇಶ ವಿದೇಶ(1) | ....81.00 |
| ಮಿಲನಿಯಮ್(10) – ದೇಶ ವಿದೇಶ(2) | ....81.00 |
| ಮಿಲನಿಯಮ್(11) – ದೇಶ ವಿದೇಶ(3) | ....81.00 |
| ಮಿಲನಿಯಮ್(12) – ದೇಶ ವಿದೇಶ(4) | ....81.00 |
| ಮಿಲನಿಯಮ್(13) – ವಿಸ್ಮಯ ವಿಶ್ವ(1) | ....72.00 |
| ಮಿಲನಿಯಮ್(14) – ಮಹಾ ಪಲಾಯನ | ....87.00 |
| ಮಿಲನಿಯಮ್(15) – ವಿಸ್ಮಯ ವಿಶ್ವ(2) | ....72.00 |
| ಮಿಲನಿಯಮ್(16) – ಅಡ್ವೆಂಚರ್ | ....72.00 |
| ಮಾಯಾಲೋಕ–1 | ...216.00 |
| The Stories of my environment | ...144.00 |
| ಪಾಕ ಕ್ರಾಂತಿ ಮತ್ತು ಇತರ ಕತೆಗಳು | ....72.00 |
| ವ್ಯಕ್ತಿ ವಿಶಿಷ್ಟ ಸಿದ್ಧಾಂತ ಮತ್ತು ಯಮಳ ಪ್ರಶ್ನೆ | ....60.00 |
| ಬೃಹನ್ನಳೆ ಸೋಮುವಿನ ಸ್ವಗತ ಲಹರಿ ಮತ್ತು ಇತರ ಕವನಗಳು | ....60.00 |
| ವಿಮರ್ಶೆಯ ವಿಮರ್ಶೆ | ....162.00 |
| ಮಾಯೆಯ ಮುಖಗಳು(ಚಿತ್ರ ಲೇಖನ) | ....600.00 |
| ಹೊಸ ವಿಚಾರಗಳು | ....450.00 |
| ಕಾಡು ಮತ್ತು ಕ್ರೌರ್ಯ | ಬರಲಿದೆ |
| ಹಕ್ಕಿಗಳ ಗ್ರೀಟಿಂಗ್ ಕಾರ್ಡ್ (6 ಬಗೆಯವು) ಒಂದು ಕಾರ್ಡಿನ ಬೆಲೆ | ....15.00 |

**ಶ್ರೀ ಕೆ.ಪಿ.ಪೂರ್ಣಚಂದ್ರ ತೇಜಸ್ವಿ–ಶ್ರೀ ಪ್ರದೀಪ ಕೆಂಜಿಗೆ:**

| | |
|---|---|
| ವಿಸ್ಮಯ(1), (2), (3) ಪ್ರತಿಯೊಂದು | 78.00 |
| ಪ್ಯಾಪಿಲಾನ್(1),(2) ಪ್ರತಿಯೊಂದು | ....147.00 |

**ಶ್ರೀ ಕೆ.ಪಿ.ಪೂರ್ಣಚಂದ್ರ ತೇಜಸ್ವಿ–ಡಾ. ವಿ.ವಿ. ಬೆಳವಾಡಿ**

| | |
|---|---|
| ನಡೆಯುವ ಕಡ್ಡಿ! ಹಾರುವ ಎಲೆ! | ....63.00 |

| | |
|---|---|
| **ಶ್ರೀ ಪ್ರದೀಪ ಕೆಂಜಿಗೆ** :ಬರ್ಮುಡಾ ಟ್ರ್ಯಾಂಗಲ್ | ....72.00 |
| ಅದ್ಭುತ ಯಾನ | ....108.00 |
| ಹೆಬ್ಬಾವಿನೊಡನೆ ಹೋರಾಟ | ....120.00 |
| **ಶ್ರೀ ಎಂ. ಶಿವಕುಮಾರ್:** ಸೈಕಲ್‌ವಾಲ | ....40.00 |
| ಕಂಪ್ಯೂಟರ್ ಕಲಿಯಿರಿ | ...147.00 |
| ಗಡಿಯಾರ ವಿಕಾಸದ ಹಾದಿಯಲ್ಲಿ | ...66.00 |

**ವಿದ್ವಾನ್ ಶ್ರೀ ಕೊಳಂಬೆ ಪುಟ್ಟಣ್ಣ ಗೌಡರು**

| | |
|---|---|
| ಅಚ್ಚಗನ್ನಡ ನುಡಿಕೋಶ | ...360.00 |
| **ಶ್ರೀ ನರೇಂದ್ರ ರೈ ದೇರ್ಲ**:ಸಾವಯವ ಕೃಷಿ | ....51.00 |

**ಶ್ರೀ ಕೃಪಾಕರ – ಸೇನಾನಿ**

| | |
|---|---|
| ಸೆರೆಯಲ್ಲಿ ಕಳೆದ ಹದಿನಾಲ್ಕು ದಿನಗಳು | ....93.00 |
| **ಶ್ರೀ ಕೃಷ್ಣ ಆಲನಹಳ್ಳಿ:** ಗೋಡೆ | ....66.00 |

**ಡಾ. ಎಸ್.ಎಂ.ವೃಷಭೇಂದ್ರ ಸ್ವಾಮಿ:**

| | |
|---|---|
| ತರಗತಿಗಳಲ್ಲಿ ಕುವೆಂಪು | ....198.00 |

**ಶ್ರೀ ದೇವನೂರು ಮಹಾದೇವ:**

| | |
|---|---|
| ಕುಸುಮಬಾಲೆ | ....60.00 |
| ದ್ಯಾವನೂರು ಹಾಗೂ ಒಡಲಾಳ | ....96.00 |

**ಶ್ರೀಮತಿ ತಾರಿಣಿ ಚಿದಾನಂದ:**

| | |
|---|---|
| ಮಗಳು ಕಂಡ ಕುವೆಂಪು | ...330.00 |

**ಶ್ರೀಮತಿ ಪದ್ಮಾ ಶ್ರೀರಾಮ:**

| | |
|---|---|
| ಗಿಡಗಂಟೆಯ ಕೊರಳು | ....78.00 |

**ಡಾ. ಕೆ.ಚಿದಾನಂದ ಗೌಡ:**

| | |
|---|---|
| ಬದುಕು.. ಬೆಳಕು... ಚುಟುಕು....! ಭಾಗ1 | ....89.00 |
| ಬದುಕು.. ಬೆಳಕು... ಚುಟುಕು....! ಭಾಗ2 | ....90.00 |

**ಶ್ರೀಮತಿ ರಾಜೇಶ್ವರಿ ತೇಜಸ್ವಿ:**

| | |
|---|---|
| ನನ್ನ ತೇಜಸ್ವಿ | ...369.00 |

*ಹೊಸ ಆವೃತ್ತಿ(Edition) ಬಿಡುಗಡೆಗೊಂಡಾಗ್ಯೂ ಮುಖಪುಟ ಬೆಲೆಯಲ್ಲಿ ವ್ಯತ್ಯಾಸವಿರುವುದು.

# ಹೊಸ ಮನುಷ್ಯ

ಸಮಾಜವಾದಿ ಮಾಸಿಕ

ಆಗಸ್ಟ್ ೨೦೧೫(ವಿಶೇಷ ಸಂಚಿಕೆ) **ಸಂಪಾದಕ : ಡಿ.ಎಸ್.ನಾಗಭೂಷಣ** ಸಂಪುಟ: ೫ ಸಂಚಿಕೆ: ೧

**ಚಂದಾ** : ವಾರ್ಷಿಕ: ರೂ. ೧೫೦/–(ವ್ಯಕ್ತಿಗಳಿಗೆ) ರೂ.೨೫೦/–(ಸಂಸ್ಥೆ/ಗ್ರಂಥಾಲಯಗಳಿಗೆ) ಬಿಡಿ ಪ್ರತಿ: ರೂ. ೨೦/– ಪುಟ: ೮೪

**ವಿಳಾಸ**: ಎಚ್.ಐ.ಜಿ-೫, 'ನುಡಿ', ಕಲ್ಲಳ್ಳಿ ಬಡಾವಣೆ, ವಿನೋಬ ನಗರ, ಶಿವಮೊಗ್ಗ-೫೭೭ ೨೦೪

**ದೂ:** ೦೮೧೮೨-೨೪೮೫೭೪ **ಸಂಚಾರಿ:** ೯೪೪೯೨ ೪೨೨೮೪ ***ಈ ಮೇಲ್:*** **dsnagabhushana@gmail.com**

## ಸಂಪಾದಕರ ಟಿಪ್ಪಣಿಗಳು

ಪ್ರಿಯ ಓದುಗರೇ,



ಈ ಮೂಲಕ 'ಹೊಸ ಮನುಷ್ಯ'ದ ನಾಲ್ಕನೇ ವಾರ್ಷಿಕ ವಿಶೇಷ ಸಂಚಿಕೆಯನ್ನು ನಿಮ್ಮ ಕೈಗಿಡಲು ಹೆಮ್ಮೆಯೆನಿಸುತ್ತಿದೆ. ಕಾರಣ, ಪತ್ರಿಕೆ ನಾಲ್ಕು ವರ್ಷಗಳನ್ನು ಪೂರೈಸಿ ಐದನೇ ವರ್ಷಕ್ಕೆ ಕಾಲಿಡುತ್ತಿರುವ ಈ ಸಂದರ್ಭದಲ್ಲಿ ಪತ್ರಿಕೆಯನ್ನು ಆರಂಭಿಸಿದಾಗ ಈ ನನ್ನ ಸಾಹಸ ಇಷ್ಟು ಯಶಸ್ವಿಯಾಗುತ್ತದೆಯೆಂದು ನಾನು ಕನಸು ಮನಸಿನಲ್ಲಿಯೂ ನಂಬಿರಲಿಲ್ಲ. ಹಾಗಿತ್ತು ಅಂದಿನ ಪರಿಸ್ಥಿತಿ. ನಾನು ಪತ್ರಿಕೆಯ ಆರಂಭದ ಸುದ್ದಿ ತಿಳಿಸಿದಾಗ ನನ್ನ ಕೆಲ ಗೆಳೆಯರು ಸುಮ್ಮನೆ ನಕ್ಕರೆ, ಇನ್ನು ಕೆಲವರು ಹಾಸ್ಯಾಸ್ಪದ ವೈಫಲ್ಯವನ್ನು ಆಹ್ವಾನಿಸುತ್ತಿದ್ದೀರಾ ಎಂದು ಬುದ್ಧಿ ಹೇಳಿದರು. ಅವರು ಹಾಗೆ ಪ್ರತಿಕ್ರಿಯಿಸಲು ಕಾರಣವೂ ಇತ್ತು. ಅಳುದುಳಿದ ಹಳೆಯ ತಲೆಮಾರಿನ ಕೆಲವರ ಹೊರತಾಗಿ ಸಮಕಾಲೀನ ತಲೆಮಾರಿನ ಬಹುತೇಕ ಜನ ಹೆಸರೇ ಕೇಳಿರದ ಅಥವಾ ಕೇಳಿರುವವರೂ ಬಹು ಹಿಂದೆಯೇ ತನ್ನ ವಿಶ್ವಾಸಾರ್ಹತೆಯನ್ನು ಕಳೆದುಕೊಂಡಿರುವ ಒಂದು ರಾಜಕೀಯ ಅವಶೇಷದಂತೆ ಮಾತ್ರ ಪರಿಗಣಿಸುವ ಸಮಾಜವಾದದ ಹೆಸರಿನಲ್ಲಿ ನಾನು ಪತ್ರಿಕೆ ಮಾಡಹೊರಟಿದ್ದೆ. ಇದು ನನ್ನ ಪಾಲಿಗೆ ಅಕ್ಷರಶಃ ಹುಚ್ಚೇ ಆಗಿತ್ತು. ಕೆಲವರ ಪ್ರಕಾರ ವೈಯುಕ್ತಿಕ ತೆವಲು!


ಹುಚ್ಚು? ಹೌದು ಅದು ಹುಚ್ಚೇ ಆಗಿತ್ತು. ಏಕೆಂದರೆ ಕಳೆದ ನಲವತ್ತು ವರ್ಷಗಳ ಕಾಲದಿಂದ ನಾನು ಒಂದು ಜ್ಞಾನ ಶಿಸ್ತಾಗಿ ಅಧ್ಯಯನ ಮಾಡುತ್ತಾ ಮತ್ತು ಒಂದು ಜೀವನ ಕ್ರಮವಾಗಿ ಸಾಧ್ಯವಾದಷ್ಟೂ ಪರಿಪಾಲಿಸುತ್ತಾ ಬಂದ ಸಮಾಜವಾದ ನನ್ನ ಪ್ರಕಾರ ಅದು ಸೋತಿದೆಯೆಂದು ಹೇಳಲಾದ ದಿನದಿಂದಲೂ ತನ್ನ ಪ್ರಸ್ತುತತೆಯನ್ನು ಹೆಚ್ಚಿಸಿಕೊಳ್ಳುತ್ತಲೇ ಬಂದಿದೆ. ಉದಾಹರಣೆಗೆ, ಯಾವ ಆರ್ಥಿಕ ಉದಾರೀಕರಣ ಕ್ರಮಗಳು ಸಮಾಜವಾದದ ಸಾವನ್ನು ಘೋಷಿಸಿದವೋ ಅವು ಅನಾವರಣ ಮಾಡಿದ ಹೊಸ ಸಮೃದ್ಧಿಯ ಸ್ವರೂಪ, ವ್ಯಾಪ್ತಿ ಮತ್ತು ಅದು ಸೃಷ್ಟಿಸಿದ ಹೊಸ ಸಾಮಾಜಿಕ ವಿನ್ಯಾಸಗಳ ಒಡಲಲ್ಲೇ ಹೊಸ ಸಮಾಜವಾದದ ಬೀಜಗಳು ಅಡಗಿದ್ದುದನ್ನು ನಾನು ಗಮನಿಸಿದ್ದೆ. ಅದಕ್ಕೆ ಮತ್ತೆ ನಾನು ಅರಿತುಕೊಂಡ ಸಮಾಜವಾದವೇ ಕಾರಣವಾಗಿತ್ತು. ಅಥವಾ ಇನ್ನೂ ಸ್ಪಷ್ಟವಾಗಿ ಹೇಳುವುದಾದರೆ, ನಾನು ಸಮಾಜವಾದವನ್ನು ಅರಿತುಕೊಂಡ ಬಗೆಯೇ ಕಾರಣವಾಗಿತ್ತು. ಅದು ಆಧುನಿಕ ಪರಿಭಾಷೆಯ ನೆಲೆಯಲ್ಲಿ ಒಂದು ರಾಜಕೀಯ ಪರಿಕಲ್ಪನೆಯೇ ಆಗಿದ್ದರೂ, ಅದರಲ್ಲಿ ಅದನ್ನು ಮೀರಿದ ದೊಡ್ಡ ಅರ್ಥ ನನಗೆ ಕಂಡಿತ್ತು. ಸಾಂಪ್ರದಾಯಿಕ ಧರ್ಮಗಳು ಸಂದೇಹಾಸ್ಪದವೆನಿಸತೊಡಗಿದ್ದ ಆಧುನಿಕ ಕಾಲದಲ್ಲಿ ಅದೊಂದು ಹೊಸ ಲೋಕದೃಷ್ಟಿಯನ್ನು ಪ್ರತಿನಿಧಿಸುವ ಹೊಸ ಧರ್ಮವೇ ಆಗಿತ್ತು. ಇವೊತ್ತು ಹೊಸ ಪೋಪ್‌ರು ಆಡುತ್ತಿರುವ ಮಾತುಗಳು ನನ್ನ ಮಾತನ್ನು ಸಮರ್ಥಿಸುವಂತಿವೆ.

ಪೋಪ್ ಅವರ ಮಾತುಗಳಿಗೆ ನಂತರ ಬರೋಣ. ಅದಕ್ಕೆ ಮೊದಲು ನನ್ನ ಈ ಮೇಲಿನ ಮಾತುಗಳನ್ನು ಸ್ವಲ್ಪ ವಿವರಿಸಬೇಕು. ನಾವು ಸಮಾಜವಾದವನ್ನು ಕೈಗಾರಿಕಾ ಯುಗದದ ಉತ್ಪನ್ನವೆಂದು, ಆಧುನಿಕ ಯೂರೋಪ್‌ನಿಂದ ಬಂದ ಒಂದು ರಾಜಕೀಯ ತತ್ವಜ್ಞಾನವೆಂದು ಪರಿಭಾವಿಸಿದ್ದೇವೆ. ಆದರೆ ಈ ಸಮಾಜವಾದದ ಯೌವ್ವನದ ದಿನಗಳಲ್ಲೇ ಅದರ ಅವತಾರಗಳನ್ನು ಕಂಡಿದ್ದ ಗಾಂಧಿ ಸಮಕಾಲೀನ ಸಮಾಜವಾದಿಗಳ ಆಟೋಟೋಪಕ್ಕೆ 'ನೀವು ಕಲಿತ ಸಮಾಜವಾದಿಗಳಾಗಿದ್ದರೆ, ನಾನು ಹುಟ್ಟು ಸಮಾಜವಾದಿ' ಎಂದು ಸವಾಲೆಸೆದಿದ್ದರು ಎಂಬುದನ್ನು ನಾವು ನೆನಪಿಸಿಕೊಳ್ಳಬೇಕು. ಹಾಗೇ, ಗಾಂಧಿ ತಮ್ಮ ಕೊನೆಯ ದಿನಗಳ ಹೊತ್ತಿಗೆ ತಮ್ಮ ರಾಜಕೀಯ ಉತ್ತರಾಧಿಕಾರಿಗಳ ರಾಜಕಾರಣದಿಂದ ಎಷ್ಟು ರೋಸಿಹೋಗಿದ್ದರೆಂದರೆ, ಅವರು ತಮ್ಮ ರಾಜಕೀಯ ಪರಂಪರೆಯ ನಿರಂತರತೆಯನ್ನು ಸಮಾಜವಾದಿಗಳಲ್ಲಿ ಕಂಡುಕೊಂಡಿದ್ದರೆಂಬ ಸೂಚನೆಗಳು ನಮಗೆ ದೊರೆಯುತ್ತವೆ. ನಿರ್ದಿಷ್ಟವಾಗಿ, ತರುಣ ಲೋಹಿಯಾರತ್ತ ಅವರ ವಿಶೇಷ ದೃಷ್ಟಿ ಬಿದ್ದಿತ್ತು. (ಈ ಸಂಚಿಕೆಯಲ್ಲಿನ ಎಸ್.ಆರ್. ನೆನೆಯವರ ಲೇಖನ ನೋಡಿ) ಇಲ್ಲಿ ಮುಖ್ಯ ಸಂಗತಿ ಎಂದರೆ, ಆ ಹೊತ್ತಿಗೆ ತಮ್ಮೊಂದಿಗೆ ಸದಾ ವೈಚಾರಿಕ ಘರ್ಷಣೆಯಲ್ಲಿರುತ್ತಿದ್ದ ಸಮಾಜವಾದಿಗಳೊಡನೆಯ ಸಂವಾದಗಳಿಂದ ಗಾಂಧೀಜಿಯ ಆಲೋಚನೆಗಳು ಎಷ್ಟು ಪ್ರಭಾವಿತವಾಗಿದ್ದವೋ ಅಷ್ಟೇ ಪ್ರಭಾವವನ್ನು ಅವರು ಸಮಾಜವಾದಿಗಳ ಮೇಲೂ ಬೀರಿದ್ದರು. ಇದರ ಪರಿಣಾಮವೆಂದರೆ, ಭಾರತದ ಸಮಾಜವಾದ ತನ್ನೆಲ್ಲ ಐರೋಪ್ಯ ಚಹರೆಗಳನ್ನು, ಆ ಮೂಲಕ ಪರಿಭಾಷೆಯನ್ನೂ ಕಳೆದುಕೊಂಡು ಹೆಚ್ಚೂ ಕಡಿಮೆ ಒಂದು ಭಾರತೀಯ ಪರಿಕಲ್ಪನೆಯೇ ಆಗಿತ್ತು. ಹಾಗಾಗಿ ಯಾವುದೇ ಭಾರತೀಯ ಅಥವಾ ಪೌರ್ವಾತ್ಯ ಪರಿಕಲ್ಪನೆಯಂತೆ ಈ ಸಮಾಜವಾದವೂ ಏಕಾಯಾಮದ ವಿದ್ಯಮಾನವಾಗಿರಲು  ನಿರಾಕರಿಸಿ ತನ್ನ ರಾಜಕೀಯ ಚಹರೆಗಳನ್ನೂ ಮೀರಿ ಒಂದು ಸಮಗ್ರ ಲೋಕದೃಷ್ಟಿಯ ರೂಪ ಪಡೆಯಿತು. ಹೀಗಾಗಿ ನಾನು ಅವಧೂತ ಸಮಾಜವಾದಿ ಎಂದು ಕರೆಯುವ ಲೋಹಿಯಾ ತಮ್ಮ ಸಮಾಜವಾದಿ ವೈಚಾರಿಕತೆಯುದ್ದಕ್ಕೂ ಹೇಳಿದ್ದು, ಅದು ಸಮಾಜವಾದವೇ ಆಗಲಿ, ಬಂಡವಾಳಶಾಹಿಯೇ ಆಗಿರಲಿ, ಅವುಗಳ ಮೂಲಕ ಹೊಮ್ಮುವ ಸಾಮಾನ್ಯ ಐರೋಪ್ಯ ಲೋಕದೃಷ್ಟಿಯಾದ ಒಂದು ಮಿತಿಯ ಕಲ್ಪನೆಯೇ ಇಲ್ಲದ ಸದಾ ಏರುತ್ತಾ ಹೋಗುವ ಜೀವನ ಮಟ್ಟದ ತುಡಿತವು ಜಗತ್ತಿನಲ್ಲಿ ಯುದ್ಧ, ಅಭದ್ರತೆ ಮತ್ತು ಅಶಾಂತಿಗಳನ್ನು ನಿರಂತರಗೊಳಿಸುವುದು ಎಂಬುದು. ಜಗತ್ತು ಈ ಐರೋಪ್ಯ ಲೋಕದೃಷ್ಟಿಗೆ ಒಳಗಾದ ದಿನದಿಂದಲೂ ನಾವು ಕಾಣುತ್ತಿರುವುದು ಇದನ್ನೇ ಅಲ್ಲವೆ? ಸಮಾಜವಾದ ಎಂದರೆ ಆಧುನಿಕ ಮಾನವನ ಅಂತರಂಗದಲ್ಲಿ ಸದಾ ಮಾರ್ದನಿಸಬೇಕಾದ ಈ ಎಚ್ಚರಿಕೆಯ ಗಂಟೆ.

ಸಮಾಜವಾದ ಎಂದರೆ ಸಮಾನತೆಯ ರಾಜಕೀಯ ಮೀಮಾಂಸೆ ಎಂದು ನಂಬಿ ಅದನ್ನು ಸಾಧಿಸಲು ಮತ್ತೆ ಅದೇ ಆಧುನಿಕ ಯೂರೋಪ್‌ನ ಲೋಕದರಷ್ಟಿಯ ತಂತ್ರ–ಸಾಧನೆಗಳನ್ನು ಬಳಸುವ ಮೂಲಕ ನಾವು ನಮಗೆ ಗೊತ್ತಿಲ್ಲದೇ ಮತ್ತೆ ಅದೇ ಲೋಕದೃಷ್ಟಿಯ ದಾಸರಾಗುವ–ಅಂದರೆ ನವವಸಾಹತುಶಾಹಿಗೆ ಬಲಿಯಾಗುವ–ಅಪಾಯವಿದ್ದೇ ಇರುತ್ತದೆ. ಇದನ್ನರಿಯದೆ ಸಮಾಜವಾದ ಸಮಾನತೆಯನ್ನು ಒಂದು ರಾಜಕೀಯ ಗುರಿಯಾಗಿ ಮಾತ್ರ ಬೆನ್ನತ್ತಿ ಹೋದದ್ದೇ ಅದರ ಸೋಲಿಗೆ, ವಿಶ್ವಾಸಾರ್ಹತೆಯ ನಷ್ಟಕ್ಕೆ(ಮತ್ತು ಜಾಗತೀಕರಣದ ಆಗಮನಕ್ಕೆ) ಕಾರಣವಾಯಿತೆಂದು ನನ್ನ ಭಾವನೆ. ಸಮಾನತೆ ಸಮೃದ್ಧಿಯ ಅಥವಾ ಶ್ರೀಮಂತಿಕೆ ಸೃಷ್ಟಿಯ ಹತಾರಗಳಿಂದ ಸಾಧಿತವಾಗುವಂತಹದುಲ್ಲ. ಹೆಚ್ಚೆಂದರೆ ಅದು ಎಂದೂ ತಣಿಯದ ಸಮಾನತೆಯ ದಾಹವನ್ನು ಹೆಚ್ಚಿಸುತ್ತಾ ಮನುಷ್ಯನನ್ನು ಸದಾ ಅಶಾಂತಿಯಲ್ಲೇ ಇಟ್ಟಿರುತ್ತದೆ. (ಈ ಹಿನ್ನೆಲೆಯಲ್ಲಿಯೇ ಈ ಹಿಂದೆ ನಾನು ಇಂದು ಬಡತನ ನಿವಾರಣೆಯ ನಿಜವಾದ ಮಾರ್ಗವೆಂದರೆ ಶ್ರೀಮಂತಿಕೆಯ ನಿವಾರಣೆಯ ಮಾರ್ಗ ಎಂದಿದ್ದುದು.)

ಹಾಗಾಗಿಯೇ ಲೋಹಿಯಾ ಸಮಾನತೆ ಎಂಬ ಶಬ್ದವನ್ನು ಕೈಬಿಟ್ಟು ಸಮಾಜವಾದದ ಆಶಯವನ್ನು ಸಮತೆ ಎಂದು ಪುನರ್‌ನಿರೂಪಿಸಿದ್ದರು. ಈ ಅರ್ಥದಲ್ಲಿ ಸಮಾನತೆ ಎಂದರೆ ಆಂತರಿಕ ಪ್ರಶಾಂತಿ ಮತ್ತು ಬಾಹ್ಯ ಬಂಧುತ್ವ. ಒಮ್ಮೆಗೇ ವೈಯುಕ್ತಿಕವೂ, ಸಾಮಾಜಿಕವೂ ಆಗಿರುವ ಒಂದು ಸಮತೋಲನವದು. ಅದಕ್ಕಾಗಿ ಅವರು ಗಾಂಧಿ ಪರಂಪರೆಯಿಂದ ಪಡೆದ ಬೇರೆಯೇ ಹತಾರಗಳನ್ನು ಪ್ರತಿಪಾದಿಸಿದರು. ಒಂದೇ ಮಾತಲ್ಲಿ ಹೇಳುವುದಾದರೆ ಅದು ವಿಕೇಂದ್ರೀಕೃತ ಉತ್ಪಾದನೆ ಮತ್ತು ಆಡಳಿತ. ಇಂದಿನ ಜಾಗತೀಕರಣವೆಂದರೆ ಇದಕ್ಕೆ ತದ್ವಿರುದ್ಧವಾದ ರಾಜಕಾರಣ.

ಹಾಗಾಗಿ ಜಾಗತೀರಣ, ಉದಾರೀಕರಣ, ಮುಕ್ತ ಮಾರುಕಟ್ಟೆ ಇತ್ಯಾದಿ ಮಾಯಾವಿ ಹೆಸರುಗಳಲ್ಲಿ ನಮ್ಮನ್ನು ಆವರಿಸಿರುವ ಹೊಸ ಆರ್ಥಿಕತೆ ನಮ್ಮ ಸಮಾಜದಲ್ಲಿ ಉಂಟು ಮಾಡಿರುವ ಹಲವು ವಕ್ರತೆ ಮತ್ತು ವಿಕ್ಷಿಪ್ತತೆಗಳು ಹಾಗೂ ಅವು ಸೃಷ್ಟಿಸಿರುವ ಬಗೆ ಬಗೆಯ ಹೊಸ ಹಿಂಸಾಚಾರಗಳು ನಿಧಾನವಾಗಿಯಾದರೂ ನಮ್ಮನ್ನೀಗ ತಾಕತೊಡಗಿವೆಯೆಂದು ತೋರುತ್ತದೆ. ರೈತರ ನಿರಂತರ ಆತ್ಮಹತ್ಯೆಗಳಂತಹ ಸ್ಥೂಲ ಉದಾಹರಣೆಗಳು ಕಣ್ಣಿಗೆ ಕಾಣುವಂತೆಯೇ ಇದ್ದು, ಒಂದು ಸೂಕ್ಷ್ಮ ಉದಾಹರಣೆಯಾಗಿ, ಇಂದು ನಮ್ಮ ಹೊಸ ತಲೆಮಾರಿನವರು ಬದುಕಿಗಾಗಿ ನಡೆಸಲಾಗುತ್ತಿರುವ ದುಡಿಮೆ ಅಥವಾ ವೃತ್ತಿಯು ಅವರ ದಿನ ನಿತ್ಯದ ಬದುಕನ್ನೇ ಎಷ್ಟು ಘಾಸಿಗೊಳಿಸಿ, ಅವರ ಒಟ್ಟು ಬದುಕಿನ ಅರ್ಥವನ್ನೇ ಅವರಿಂದ ಹೇಗೆ ಕಸಿದುಕೊಂಡಿದೆ ಎಂಬುದನ್ನು ಗಮನಿಸಿ. ಹಾಗಾಗಿಯೇ 'ಹೊಸ ಮನುಷ್ಯ'ದಂತಹ ಪತ್ರಿಕೆ ನಮ್ಮ ಸಮಾಜದ ಒಂದು ಸಣ್ಣ ವರ್ಗಕ್ಕಾದರೂ ಇಂದು ಹೆಚ್ಚೆಚ್ಚು ಅಗತ್ಯವೆಂಬಂತೆ ಕಂಡುಬರುತ್ತಿದೆ. ಇದರರ್ಥ ಪತ್ರಿಕೆಯ ಓದುಗರು ಹೆಚ್ಚಾಗುತ್ತಿದ್ದಾರೆಂದಲ್ಲ. ಅದು ಸಾಧ್ಯವೂ ಅಲ್ಲ; ಪತ್ರಿಕೆಯ ಉದ್ದೇಶಕ್ಕನುಗುಣವಾಗಿಯೇ ನಾನದನ್ನು ನಿರೀಕ್ಷಿಸುವುದೂ ಇಲ್ಲ. ಸಮಕಾಲೀನ ಬದುಕಿನ ಹಲವು ಮುಖ್ಯ ಮತ್ತು ಸೂಕ್ಷ್ಮ ಸಂಗತಿಗಳನ್ನು ರೂಢಿಗೆ ವಿರುದ್ಧವಾಗಿ ನೋಡಿ ಚರ್ಚಿಸುವ ಪತ್ರಿಕೆಯ ಪ್ರಯತ್ನದಲ್ಲಿ ಸಾಮಾನ್ಯ ಓದುಗರ ಕುತೂಹಲ ಮತ್ತು ಭಾಗೀದಾರಿಕೆ ಹೆಚ್ಚಾಗತೊಡಗಿದೆ. ಈ ವಿಶೇಷ ಸಂಚಿಕೆಯಲ್ಲಿ ಪ್ರಕಟವಾಗಿರುವ ಪತ್ರಗಳು ಈ ಎಲ್ಲವನ್ನೂ ಹೇಳುವಂತಿವೆ. ಅಲ್ಲದೆ ಈ ಸಂಚಿಕೆಯ ಪ್ರಕಟಣೆಗೆ ಸಿಕ್ಕ ಪ್ರೋತ್ಸಾಹ ಮತ್ತು ಸದಾಶಯ ಪತ್ರಿಕೆಯನ್ನು ಹಲವು ವೈಯುಕ್ತಿಕ ಕಾರಣಗಳಿಂದಾಗಿ ಈ ವರ್ಷಕ್ಕೆ ಸಾಕುಮಾಡಬೇಕೆಂದಿದ್ದ ನನ್ನಲ್ಲಿ ಇನ್ನೂ ಒಂದು ವರ್ಷ ಮುಂದುವರೆಸುವ ಚೈತನ್ಯ ತುಂಬಿದೆ. ಪತ್ರಿಕೆಯನ್ನು ಆರಂಭಿಸಿದ್ದು ಅದು ನನ್ನ ವೈಯುಕ್ತಿಕ ತೆವಲೇ ಆಗಿದ್ದಿರಬಹುದು. ಆದರೆ ನಾಲ್ಕು ವರ್ಷಗಳ ನಂತರ ಆ ತೆವಲು ಬರೀ ನನ್ನದಾಗಿರದೆ ಹಲವರದ್ದಾಗಿಹೋಗಿದೆ!



ಫ್ರಾನ್ಸಿಸ್ ಪೋಪ್

ಈಗ ಪೋಪ್‌ರ ಮಾತುಗಳಿಗೆ ಬರೋಣ. ಇಡೀ ಜಗತ್ತಿನ ಕ್ರಿಶ್ಚಿಯನ್ ಮತಾನುಯಾಯಿಗಳ ಧರ್ಮಗುರುಗಳಾದ ಪೋಪ್‌ರು ಕೇವಲ ಧರ್ಮಗುರುಗಳಲ್ಲ. ಅವರು ಪಶ್ಚಿಮದ ಲೋಕದೃಷ್ಟಿಯ ಮತ್ತು ಅದು ಕಟ್ಟಿರುವ ರಾಜಕಾರಣದ ಪರೋಕ್ಷ ವಕ್ತಾರರೂ ಎಂದು ಹೇಳಬಹುದಾಗಿದೆ. ಈ ಹಿಂದಿನ ಪೋಪ್‌ಗಳ ವರ್ತನೆಯೂ ಹೆಚ್ಚೂ ಕಡಿಮೆ ಹಾಗೇ ಇತ್ತು. ಆದರೆ ಪಶ್ಚಿಮದಲ್ಲೇ ನಿರ್ಲಕ್ಷಿತವಾಗಿದ್ದ ಅಥವಾ ಭಿನ್ನಮತೀಯವಾಗಿದ್ದ ಲ್ಯಾಟಿನ್ ಅಮೆರಿಕಾದಿಂದ(ಅರ್ಜೆಂಟೈನಾದಿಂದ) ಬಂದಿರುವ ಈ ಹೊಸ ಪೋಪ್ ಈಗ ಆಡಲಾರಂಭಿಸಿರುವ ಮಾತುಗಳನ್ನು ಈ ದೃಷ್ಟಿಯಿಂದ ಗಮನಿಸಿದಾಗ ಅವು ಪಶ್ಚಿಮದ ಪಶ್ಚಾತ್ತಾಪದ ಮಾತುಗಳಾಗಿ ಕೇಳಿಸುತ್ತವೆ. ಅವರು ಬಡವನಾದ ಜೀಸಸ್‌ನನ್ನು ನೆನೆಸಿಕೊಂಡಿದ್ದಾರೆ. ಹಣದ ದುಷ್ಟ ಶಕ್ತಿಯ ಬಗ್ಗೆ, ಮಾರುಕಟ್ಟೆ ಬಂಡವಾಳಶಾಹಿಯ ಬಗ್ಗೆ, ಅದು ಜಗತ್ತಿನಾದ್ಯಂತ ಸೃಷ್ಟಿಸುತ್ತಿರುವ ಮನುಷ್ಯನ ಹೆಚ್ಚೆಚ್ಚು ಸುಖಸಾಧನಗಳ ದಾಹದ ಬಗ್ಗೆ, ಅದರ ಪರಿಣಾಮವಾಗಿ ಹೆಚ್ಚುತ್ತಿರುವ ಮನುಷ್ಯರ ಹೃದಯಹೀನತೆಯ ಬಗ್ಗೆ, ಜಾಗತಿಕ ಬಡತನದ ಬಗ್ಗೆ, ಹೆಚ್ಚುತ್ತಿರುವ ಈ ಭೂಮಿಯ ಅನಾರೋಗ್ಯದ ಬಗ್ಗೆ ಮಾತನಾಡುತ್ತಿದ್ದಾರೆ. ಪೋಪ್ ಫ್ರಾನ್ಸಿಸ್ ಅವರು ಕ್ರಾಂತಿಕಾರಿ ಚೆ'ಗೆವಾರಾನ ಬೊಲಿವಿಯಾಗೆ ಹೋಗಿ ಬಂದರು. ಅಷ್ಟೇ ಅಲ್ಲ, ಒಂದು ಜಾಗತಿಕ ಐತಿಹಾಸಿಕ ಬೆಳವಣಿಗೆ ಎನಿಸಿರುವ ಕ್ಯೂಬಾ ಮತ್ತು ಅಮೆರಿಕಾಗಳು ಗೆಳೆಯರಾಗಲು ಅನುವು ಮಾಡಬಹುದಾದ ಕ್ಯೂಬಾದ ಅಧ್ಯಕ್ಷ ರೌಲ್ ಕ್ಯಾಸ್ಟ್ರೋ ಮತ್ತು ಒಬಾಮಾರ ನಡುವಣ ಭೇಟಿಯ ಹಿಂದೆ ಈ ಪೋಪ್‌ರ ಮಧ್ಯಸ್ಥಿಕೆ ಇದೆ ಎಂದೂ ಹೇಳಲಾಗುತ್ತಿದೆ. ಇವರ ಇನ್ನೂ ಒಂದು ದೊಡ್ಡ ಕೊಡುಗೆಯೆಂದರೆ, ಇಸ್ಲಾಂನ್ನು ಶಾಂತಿಯ ಧರ್ಮವೆಂದು ಕರೆದು ಇಸ್ಲಾಂನ್ನು ವಿಪತ್ಕಾರಕವೆಂದು ನೋಡುವ ಪಶ್ಚಿಮದ ನಿಲುವನ್ನು ಸಮ್ಮತಿಸದಿರುವುದು. ವ್ಯಾಟಿಕನ್ 'ರಾಜ್ಯ'ದ ಪ್ರಭುವೇ ಆದ ಈ ಪೋಪ್ ಎಲ್ಲ ರಾಜ ವೈಭೋಗಗಳನ್ನೂ ತೊರೆದು ಕನಿಷ್ಟ ಅಗತ್ಯಗಳ ಸರಳ ಬದುಕನ್ನು ನಡೆಸಲು ತೀರ್ಮಾನಿಸಿದ್ದಾರೆ.

ಇಂತಹ ಪೋಪ್ ಹೇಗೆ ಬಂದರು? ಏಕೆ ಬಂದರು? ಜಗತ್ತಿನಲ್ಲಿ ಸಮಾಜವಾದ ಜೀವಂತವಾಗಿರುವುದು ಹೀಗೆ. ಮಾರುಕಟ್ಟೆ ಆರ್ಥಿಕತೆಯ ಅನಾಹುತಗಳ ವಿರುದ್ಧವಾಗಿ ಸಮಾಜವಾದ ಒಂದು ಜಾಗತಿಕ ಮಟ್ಟದ ಧರ್ಮವಾಗಿ ಎದ್ದು ನಿಲ್ಲುವುದು ಹೀಗೆ. ಸಮಾಜವಾದ ಹೀಗೆ ಒಂದು ಧರ್ಮವಾಗಿ ವ್ಯಕ್ತವಾದಾಗಲೇ ಅದು ಒಂದು ಸಮಾಜವಾದಿ ರಾಜಕಾರಣವಾಗಿ ಕೂಡ ಮೈ ಪಡೆಯುವುದು. ಆದರೆ ಅದು ಭಾರತದಲ್ಲಿ ಸಂಭವಿಸಲೇ ಇಲ್ಲ. ಗಾಂಧಿ ಇನ್ನೂ ಒಂದಷ್ಟು ಕಾಲ ಬದುಕಿದ್ದರೆ ಅದು ಲೋಹಿಯಾ ಮತ್ತವರ ಸಹವರ್ತಿಗಳ ಮೂಲಕ ಸಂಭವಿಸಬಹುದಿತ್ತೋ ಏನೋ! ಆದರೆ ಭಾರುತದಲ್ಲಿ ಸೋತದ್ದು ಇಂತಹ ಸಮಾಜವಾದವಲ್ಲ. ಬದಲಿಗೆ, ಐರೋಪ್ಯ ಮೂಲ ಮಾದರಿಯ 'ಪ್ರಗತಿಪರತೆ–ಅಭಿವೃದ್ಧಿ'ಯ ಭಾಷೆಯ ಸಮಾಜವಾದ. ಅದು ನೆಹರೂ ಸಮಾಜವಾದ.

ಆದರೆ ಭಾರತದಲ್ಲಿ ಇಂದು ಧರ್ಮವಾದಿಗಳೆಂದು ಹೇಳಲಾಗುವ ರಾಜಕಾರಣವೇ ವಿಜೃಂಭಿಸುತ್ತಿದ್ದರೂ ಸಮಾಜವಾದಕ್ಕೆ ಇಲ್ಲಿ ಜಾಗವಿಲ್ಲ. ಬದಲಿಗೆ ಈ ಧರ್ಮವಾದಿಗಳು ಸಮಾಜವಾದದ ಕಟ್ಟಾ ವಿರೋಧಿಗಳು. ಕಾರಣ, ಇವರ ಧರ್ಮ ಕೂಡ ಆಧುನಿಕ ಐರೋಪ್ಯ ಧರ್ಮದ ಸ್ಫೂರ್ತಿಯಲ್ಲೇ ಪುನರ್ರೂಪಿತವಾಗಿರುವುದು. ಇವರ ತಾತ್ವಿಕ ಗುರು ಸಾವರ್ಕರ್ 'ಹಿಂದೂ' ಧರ್ಮವನ್ನು ಅದರ ಪೌರ್ವಾತ್ಯ ಬೇರುಗಳಿಂದ(ಬಹು ಸಂಸ್ಕೃತಿ ತತ್ವದಿಂದ) ಬೇರ್ಪಡಿಸಿ ಆಧುನಿಕ(ವೈಜ್ಞಾನಿಕ?) ಕ್ರಿಶ್ಚಿಯನ್ ಧರ್ಮದ ಏಕೀಕೃತ ಮಾದರಿಯಲ್ಲಿ ಮಂಡಿಸಿದ್ದನ್ನೂ, ಅವರ 'ಬಲಿಷ್ಠ ಭಾರತ' ಕಲ್ಪನೆಗೆ ಆಧಾರವಾದ ಅವರ 'ಅಭಿವೃದ್ಧಿ'ವಾದವನ್ನೂ ಇಲ್ಲಿ ನೆನಪಿಸಿಕೊಳ್ಳಬಹುದು. ಆದರೆ ಇವರ ಇಂತಹ ಆಧುನಿಕತೆಯ ಪರಿಣಾಮಗಳ ವಿರುದ್ಧ ಈ ಆ ಪರಂಪರೆಯ ಇಂದಿನ ಉತ್ತರಾಧಿಕಾರಿಯೆನಿಸಿದ ಪೋಪ್‌ರೇ ಮಾತನಾಡತೊಡಗಿರುವುದನ್ನು ಭಾರತದ ಈ ಧರ್ಮವಾದಿಗಳು ಗಮನಿಸುವ ಗೋಜಿಗೆ ಹೋಗಿಲ್ಲ. ಗಮನಿಸುವಂತಾಗಿದ್ದರೆ ಇವರ 'ಹಿಂದೂ' ಧರ್ಮದ ಕಲ್ಪನೆಯೇ ಬದಲಾಗುವ ಸಾಧ್ಯತೆ ಇತ್ತು. ಬಹುಶಃ ಇದಕ್ಕೆ ಕಾರಣ, ಇವರ ಧರ್ಮಕ್ಕೆ ಜೀಸಸ್‌ನಂತಹ ಬಡ ನಾಯಕನಿಲ್ಲ. ಏನಿದ್ದರೂ ಧನುರ್ಧಾರಿ, ಚಕ್ರಧಾರಿ ಅಥವಾ ತ್ರಿಶೂಲಧಾರಿಗಳೇ ಇವರ ನಾಯಕರು. ಹಾಗಾಗಿಯೇ ಇವರು ಆಧುನಿಕ 'ಬಲಿಷ್ಠ ಭಾರತ'ವನ್ನು ಕಟ್ಟಹೊರಟಿದ್ದಾರೆ. ಇಲ್ಲಿ ಸನಾತನ ಧರ್ಮವನ್ನು ದಟ್ಟವಾಗಿ ಪ್ರಭಾವಿಸಿ ಅದನ್ನು 'ಹಿಂದೂ'ವಾಗಿಸಿದ ಬುದ್ಧನಿಗೆ ಜಾಗವಿಲ್ಲ. ಹಾಗಾಗಿಯೇ ಇವರ ಬಳಿ ಸಮಾಜವಾದ ಸುಳಿಯಲಾರದು.

ಹೀಗಾಗಿ ಇವರು ಕಟ್ಟ ಹೊರಟಿರುವ ಬಲಿಷ್ಠ ಭಾರತದಲ್ಲಿ ಬಲಿಷ್ಠರಲ್ಲದವರಿಗೆ ಮತ್ತು ಬಲಿಷ್ಠರಾಗಲೊಲ್ಲದವರಿಗೆ ಬಹಳ ಕಷ್ಟದ ದಿನಗಳು ಎದುರಾಗುವ ಎಲ್ಲ ಸೂಚನೆಗಳೂ ಈಗಾಗಲೇ ಕಾಣತೊಡಗಿವೆ ಎಂದಷ್ಟೇ ಸದ್ಯಕ್ಕೆ ಹೇಳಿದರೆ ಸಾಕೆಂದು ಕಾಣುತ್ತದೆ. ವಿವರಣೆ ಅಗತ್ಯವಿಲ್ಲದಷ್ಟು ಅವು ರಾಷ್ಟ್ರ ಜೀವನದ ಹಲವು ಸ್ತರಗಳಲ್ಲಿ ಎದ್ದು ಕಾಣತೊಡಗಿವೆ. ದುರಂತವೆಂದರೆ, ಇದಕ್ಕೆ ನಿಜವಾಗಿ ಸವಾಲೆಸೆಯುಂತಹ ಛಾತಿ ಇರುವ ರಾಜಕೀಯ ಶಕ್ತಿಯೇ ಇವೊತ್ತು–ಆಪ್ ಎಂಬ ದುಃಸ್ವಪ್ನದ ನಂತರವಂತೂ–ಭಾರತದಲ್ಲಿ ಕಾಣೆಯಾಗಿದೆ. ಹೇಗೂ ಮೋದಿಯವರು ಭರವಸೆ ನೀಡಿದ ಆ 'ಅಚ್ಛೇ ದಿನ'ಗಳು ಬರಲು ಇನ್ನೂ ೨೫ ವರ್ಷಗಳು ಬೇಕು ಎಂದು ಅವರ ಪಕ್ಷದ ಅಧ್ಯಕ್ಷ ಅಮಿತ್‌ಶಾ ಅವರೇ ಹೇಳಿದ್ದಾರಲ್ಲಾ? ಅಲ್ಲಿಯವರೆಗೆ ನಮಗೆ ಕಾಲಾವಕಾಶವಿದಯೇನೋ!

**–ಸಂಪಾದಕ**


**ಈ ಸಂಚಿಕೆ :**

ರಕ್ಷಾಪುಟ: **ಚರಿತಾ**

ಒಳಪುಟಗಳ ರೇಖಾ ಚಿತ್ರಗಳು: **ಸಿ. ರವೀಂದ್ರನಾಥ್, ರೂಪ ಹಾಸನ ಮತ್ತು ಎಚ್.ಎಸ್. ರಾಮನ ಗೌಡ**

ಸಂಪಾದಕೀಯ ಸಹಕಾರ:

**ಸವಿತಾ ನಾಗಭೂಷಣ ಮತ್ತು ಟಿ.ಎಲ್ ರೇಖಾಂಬ**

ಪುಟ ವಿನ್ಯಾಸ ಮತ್ತು ಸಂಪಾದನೆ: **ಡಿ.ಎಸ್. ನಾಗಭೂಷಣ**

ಮುದ್ರಣ: **ಇಳಾ ಮುದ್ರಣ,** ಬೆಂಗಳೂರು

# ಐದನೇ ವರ್ಷದ ಹೊಸ್ತಿಲಲ್ಲಿ: ನಿಮ್ಮ ಪತ್ರಗಳು

### ಹುಡುಕಾಟದ ಹಾದಿ ನಿರಂತರವಾಗಿರಲಿ

ಪ್ರತಿ ತಿಂಗಳೂ ನಾನು ಕುತೂಹಲದಿಂದ ಎದುರು ನೋಡುವ ಮಾಸಪತ್ರಿಕೆ, ಗೆಳೆಯ ಡಿ.ಎಸ್.ನಾಗಭೂಷಣ ಸಂಪಾದಕತ್ವದ 'ಹೊಸ ಮನುಷ್ಯ'. ಕೈಗೆ ಸಿಕ್ಕೊಡನೆ ಎಲ್ಲ ಪುಟಗಳ ಮೇಲೂ ಅವಸರದಿಂದ ಒಮ್ಮೆ ಕಣ್ಣಾಡಿಸಿ, ಕೆಲವು ವಿಷಯಗಳ ಬಗ್ಗೆ ಆಮೇಲೆ ನಿಧಾನವಾಗಿ ಚಿಂತನೆ ಮಾಡುವುದು ನಾನು ಬೆಳೆಸಿಕೊಂಡ ಚಟ.

ಕಳೆದ ಶತಮಾನದ ಎಪ್ಪತ್ತರ ದಶಕ ನನ್ನ ಪೀಳಿಗೆಯ ಅನೇಕರ ಬದುಕಿನಲ್ಲಿ ಸಂಚಲನ ಮೂಡಿಸಿದ ಅವಧಿ. ಆ ಜನಪರ ಆಂದೋಲನಗಳ ಸ್ಪರ್ಶದಿಂದಲೇ ನಮ್ಮ ವ್ಯಕ್ತಿತ್ವಕ್ಕೊಂದು ಚೆಹರೆ ಬಂದಿದ್ದು. ಶಂಕರಪ್ಪ, ನಂಜುಂಡಸ್ವಾಮಿ, ಲಂಕೇಶ, ತೇಜಸ್ವಿ ಮುಂತಾದ ಹಿರಿಯ ಸಂಗಾತಿಗಳ ಒಡನಾಟ. ಡಿ.ಎಸ್.ಎನ್ ಅಂದಿನಿಂದಲೂ ನಮ್ಮನ್ನು ಸೆಳೆದದ್ದು ತಮ್ಮ ವೈಚಾರಿಕ ಸ್ಪಷ್ಟತೆಯಿಂದ ಮತ್ತು ಅದರ ನಿಖರ, ಪಾರದರ್ಶಕ ಅಭಿವ್ಯಕ್ತಿಯಿಂದ. ಒಮ್ಮೊಮ್ಮೆ ಮುಂಚೂಣಿ ನಾಯಕರು ಜಡವಾಗಿಬಿಡುತ್ತಾರೆ. ಆಗ ಅವರನ್ನೂ ಒರೆಗಲ್ಲಿಗೆ ತಿಕ್ಕಬೇಕಾಗುತ್ತದೆ. ಆ ಕೆಲಸ ಮಾಡುತ್ತಿದ್ದವರು ಡಿ.ಎಸ್.ಎನ್.. ಕಮ್ಯುನಿಸ್ಟ್ ಮತ್ತು ಆರ್.ಎಸ್.ಎಸ್ ವಲಯಗಳಲ್ಲಿ ಇಂಥ ಚಿಂತನ–ಮಂಥನಕ್ಕೆ ಇಂಬು ಇರುವುದಿಲ್ಲ. ಇಂಡಿಯಾದ ಸಮಾಜವಾದಿ ಚೇತನಗಳು ಯಾವುದೇ ಪಕ್ಷ–ಸಂಘಟನೆಗಳಲ್ಲಿ ಇದ್ದರೂ ಇಂಥ ವೈಚಾರಿಕ ಸಂಘರ್ಷವನ್ನು ಚಾಲ್ತಿಯಲ್ಲಿ ಇಟ್ಟಿವೆ.

ಸಮಕಾಲೀನ ರಾಜಕೀಯದ ಎಲ್ಲ ಗೊಂದಲಗಳಲ್ಲಿ ಸಮಾಜವಾದ–ಗಿಮಾಜವಾದ ಎಲ್ಲಿವೆ ಅಂತ ಹುಡುಕಬೇಕಾಗಿದೆ. ನಮ್ಮ ಸೈನ್ಯ ತುಕಡಿ ತುಕಡಿಯಾಗಿ ಎಲ್ಲ ಕಡೆ ಹರಿದು ಹಂಚಿಹೋಗಿದೆ. ಆದರೆ ಚಿಂತನೆಯ ಗುಪ್ತಗಾಮಿನಿ ಇದ್ದೇ ಇದೆ. ಆ ಧಾರೆಗೆ ಒಂದು ಸ್ಪಷ್ಟ ವೇದಿಕೆ ಒದಗಿಸಿರುವುದು 'ಹೊಸ ಮನುಷ್ಯ'. ತನ್ನ ಪರಿಮಿತ ಚೌಕಟ್ಟಿನಲ್ಲಿಯೇ ಅನೇಕ ವಿಷಯಗಳನ್ನು ಅಡಕ ಮಾಡಿಕೊಂಡು ಸಾಧ್ಯವಾದಷ್ಟು ವಸ್ತುನಿಷ್ಠ ಬಗೆಯಲ್ಲಿ ವಾದ ಮಂಡಿಸುತ್ತಾ ಗಂಭೀರ ಚರ್ಚೆಗೆ ಅನುವು ಮಾಡಿಕೊಡುತ್ತಿರುವ ಪತ್ರಿಕೆಯ ನೀತಿ ಅನನ್ಯ. ಡಿ.ಎಸ್.ಎನ್ ಅವರ 'ಸಂಪಾದಕೀಯ ಟಿಪ್ಪಣಿಗಳು' ಮುಖ್ಯ ಆಕರ್ಷಣೆ. ಇಂಥ ಕಿರು ಪತ್ರಿಕೆಗಳಿಗೆ ಪ್ರಸಾರಕ್ಕಿಂತ ಪ್ರಚಾರ ಮುಖ್ಯ. ಒಬ್ಬ ಓದುಗ ಮತ್ತೆ ಐವರನ್ನು ಪತ್ರಿಕೆಯ ತೆಕ್ಕೆಗೆ ತರಬೇಕು. ಇಡೀ ದೇಶದ, ಮುಖ್ಯವಾಗಿ ನಮ್ಮ ನಾಡಿನ ಸಮಾಜವಾದಿ ಚಿಂತಕರ ಪರಿಚಯವೂ ಹೊಸ ಪೀಳಿಗೆಗಳಿಗೆ ಪತ್ರಿಕೆಯ ಮೂಲಕ ಲಭ್ಯವಾಗುತ್ತಿದೆ. 'ಹೊಸ ಮನುಷ್ಯ' ನ ಈ ಪರಿಯ ಹುಡುಕಾಟದ ಹಾದಿ ನಿರಂತರವಾಗಿರಲಿ.

**–ಚಂದ್ರಶೇಖರ ಪಾಟೀಲ**, ಬೆಂಗಳೂರು

### ಗೆಳೆಯರಿಗೂ, ವಿರೋಧಿಗಳಿಗೂ ಒಂದೇ ತಕ್ಕಡಿ...

'ಹೊಸ ಮನುಷ್ಯ' ನಾಲ್ಕು ವರ್ಷಗಳನ್ನು ಮುಗಿಸಿರುವುದು ತುಂಬಾ ಸಂತೋಷ. ಈ ನಾಲ್ಕು ವರ್ಷಗಳ ನಿಮ್ಮ ಸಾಧನೆ ಮೆಚ್ಚುವಂತಹದ್ದೆ. ಸಾಮಾನ್ಯವಾಗಿ ನಮ್ಮ ಟಿ.ವಿ. ನಿರೂಪಕರು ಮತ್ತು ಪತ್ರಿಕೆಗಳವರು ಆಳುವ ಪಕ್ಷವನ್ನು ಓಲೈಸುವುದರಲ್ಲಿ ನಿರತರಾಗಿರುತ್ತಾರೆ. ಅಲ್ಲಿ ಇಲ್ಲಿ ಆಳುವವರನ್ನು ವಿರೋಧಿಸಿದಂತೆ ನಟಿಸಿದರೂ, ಅದು ಪ್ರಾಮಾಣಿಕವಾಗಿರುವುದಿಲ್ಲ. ಇಂಥ ಸಂದರ್ಭದಲ್ಲಿ "ಹೊಸ ಮನುಷ್ಯ" ಮಾತ್ರ ಗೆಳೆಯರನ್ನೂ, ವಿರೋಧಿಗಳನ್ನೂ ಒಂದೇ ತಕ್ಕಡಿಯಲ್ಲಿಟ್ಟು ವಿಶ್ಲೇಷಿಸುತ್ತಿರುವುದು ಒಳ್ಳೆಯ ನಡೆ.

ಭಾರತದ ರಾಜಕೀಯದಲ್ಲಿ ಎರಡು ಮುಖ್ಯ ವಾಹಿನಿಗಳಿವೆ. ಒಂದು ಮೃದು ಯಥಾಸ್ಥಿತಿವಾದಿಗಳಾದರೆ ಎರಡನೆಯದು ಉಗ್ರ ಯಥಾಸ್ಥಿತಿವಾದಿಗಳದ್ದು. ಯಥಾಸ್ಥಿತಿವಾದವೆಂದರೆ ಜನತೆಯ ಮೌಢ್ಯ, ಜಾತಿ, ಭ್ರಷ್ಟಾಚಾರ ಇವುಗಳನ್ನು ನಾಶ ಮಾಡಲು ಪ್ರಯತ್ನಿಸದೆ ನಾಶ ಮಾಡುವವರಂತೆ ನಟಿಸಿ ಒಳಗೊಳಗೆ ಇವೆಲ್ಲಕ್ಕೂ ಪ್ರೋತ್ಸಾಹಿಸುವವರೇ ಆಗಿದ್ದಾರೆ. ಕಾಂಗ್ರೆಸ್ ಮೃದು ಯಥಾಸ್ಥಿತಿವಾದಿಗಳಾದರೆ, ಬಿಜೆಪಿ ಉಗ್ರ ಯಥಾಸ್ಥಿತಿವಾದಿಗಳು ಇವರಿಬ್ಬರ ನಡುವೆ ಭಾರತೀಯರು ಕಂಗಾಲಾಗಿದ್ದಾರೆ. ಭಾರತೀಯರಿಗೆ ದಾರಿ ತೋರಬೇಕಾಗಿದ್ದ ಸಮಾಜವಾದಿಗಳು ಮತ್ತು ಕಮ್ಯುನಿಸ್ಟರು ಉಸಿರೇ ಇಲ್ಲದಂತಾಗಿದ್ದಾರೆ. ಈ ಸಂದಿಗ್ಧ ಸಮಯದಲ್ಲಿ 'ಹೊಸ ಮನುಷ್ಯ' ಕನ್ನಡಿಗರಿಗೆ ದಾರಿ ತೋರುವಲ್ಲಿ ತನ್ನ ಅಳಿಲು ಸೇವೆಯನ್ನು ಪ್ರತಿ ತಿಂಗಳು ಸಲ್ಲಿಸುತ್ತಿದೆ.

ಇನ್ನು ಮುಂದೆ "ಹೊಸ ಮನುಷ್ಯ"ನ ಮುಂದೆ ಭಾರಿ ಸವಾಲುಗಳೇಳಬಹುದು. ಸಂವಿಧಾನಾತ್ಮಕವಾಗಿಯೆ ಕೇಂದ್ರ ಸರ್ಕಾರವು ಕೇಂದ್ರ ಮಾಹಿತಿ ಆಯುಕ್ತರನ್ನು ಮತ್ತು ಕೇಂದ್ರ ಜಾಗೃತ ಆಯೋಗದ ಆಯುಕ್ತರನ್ನು ನೇಮಿಸಲು ಒಂದು ವರ್ಷ ತೆಗೆದುಕೊಂಡಿದ್ದು, ಬಹುಶಃ ಆಂಗ್ಲೊ ಇಂಡಿಯನ್ ಒಬ್ಬರನ್ನು ಪಾರ್ಲಿಮೆಂಟಿಗೆ ನಾಮಕರಣ ಮಾಡದಿರುವುದು ಸಂವಿಧಾನಕ್ಕೆ ತೋರುವ ಅಗೌರವವಲ್ಲವೇ? ನಮ್ಮಲ್ಲೇ ಲೋಕಾಯುಕ್ತ ಭಾಸ್ಕರ್‌ರಾಯ, ಲಾಟರಿ ರಾದ್ಧಾಂತ, ಪರೀಕ್ಷಾ ರಾದ್ಧಾಂತ ಇವೆಲ್ಲವುಗಳನ್ನು ಜನತೆಗೆ ತಿಳಿಸುವುದು. ವಿರೋಧಿಸುವುದು ನಮ್ಮ ಎಲ್ಲ ಓದುಗರಲ್ಲೂ ವಿಚಾರ ಪ್ರಚೋದನೆಗೆ ಸವಾಲಾಗಿದೆ. ಹೊಸ ಮನುಷ್ಯ ಇವೆಲ್ಲ ಸವಾಲುಗಳನ್ನು ಎದುರಿಸಿ ಜನತೆಗೆ ಮಾರ್ಗದರ್ಶಕನಾಗಲಿ ಎಂದು ಆಶಿಸುತ್ತೇನೆ.

**–ಪ್ರೊ.ಬಿ.ಎನ್.ಶ್ರೀರಾಮ, ,**ಮೈಸೂರು

### ಸಮುದಾಯದ ಆಳದಲ್ಲಿರುವ ಸಾಂಸ್ಕೃತಿಕ ಅಗತ್ಯದ ಪ್ರತಿಫಲ

'ಹೊಸ ಮನುಷ್ಯ' ಪತ್ರಿಕೆಯ ನಿರಾಡಂಬರ ಸಹಜತೆಯೆ ಅದರ ನಿಜವಾದ ಶಕ್ತಿಯಾಗಿದೆ. ಪತ್ರಿಕೆಗಳು ತಮ್ಮ ಸಂಖ್ಯಾಬಲದ ಅನೈತಿಕ ಅಧಿಕಾರದಿಂದಾಗಿ ಭ್ರಷ್ಟವಾಗುತ್ತ ಹೋಗುವ ಕಾಲದಲ್ಲಿ ಈ ಪತ್ರಿಕೆ ತನ್ನ ಐಚ್ಛಿಕ ಸರಳತೆಯನ್ನು ಉಳಿಸಿಕೊಂಡಿದೆ. ಹೀಗಾಗಿ ಗಾತ್ರದಲ್ಲಿ, ಓದುವವರ್ಗವನ್ನು ಸಂಪಾದಿಸುವ ಕೆಲಸದಲ್ಲಿ ಅತಿ ಆಕಾಂಕ್ಷೆ ತೋರಿಸದೇ ತನ್ನ ಅನೌಪಚಾರಿಕ ಸಂವಾದದ ಗುಣವನ್ನು ಪಡೆದುಕೊಂಡಿದೆ. ಒಂದು ಕಡೆಗೆ ಜನಪ್ರಿಯತೆಯ ವಾಂಛೆ ಇನ್ನೊಂದು ಕಡೆಗೆ ಪಾಂಡಿತ್ಯದ ಜಡತೆ–ಇವೆರಡನ್ನೂ ಸಮಾನ ದೂರದಲ್ಲಿಟ್ಟು ಸಶಕ್ತವಾದ ಬರವಣಿಗೆಯನ್ನು ಪ್ರೋತ್ಸಾಹಿಸಿದೆ.

ಇದೆಲ್ಲದರಷ್ಟೇ ಮುಖ್ಯವೆಂದರೆ ನೈಜವಾದ ಸಮಕಾಲೀನತೆಗೆ ಮಿಡಿಯುವ ಅದರ ಗುಣ. ೨೪ ಗಂಟೆಗಳ ಸುದ್ದಿವಾಹಿನಿಗಳ ಈ ಕಾಲದಲ್ಲಿ ಸಮಕಾಲೀನತೆಯೆಂದರೆ 'Breaking News' ಮಾತ್ರವಾಗಿ ಬಿಟ್ಟಿದೆ. ಆದರೆ ಸಾರ್ವಜನಿಕ ಪ್ರಕಾರಗಳನ್ನು ಮೀರಿದ ಜನಸಾಮಾನ್ಯರ ಮಾನಸವನ್ನು ಪ್ರಭಾವಿಸುವ ಸಮಕಾಲೀನತೆಯೊಂದಿದೆ. ಅದು ಸಮಾಜದ ಅರಿವು, ನಡವಳಿಕೆಗಳು ಹಾಗೂ ಯುಗಧರ್ಮದಲ್ಲಿ ಆಗುವ ಸೂಕ್ಷ್ಮ ಪಲ್ಲಟಗಳನ್ನು ಒಳಗೊಂಡಿರುತ್ತದೆ. ಈ ಸಮಕಾಲೀನತೆಯು 'ಹೊಸ ಮನುಷ್ಯ' ಪತ್ರಿಕೆಯ ಜೀವಾಳವಾಗಿದೆ. ನನಗೆ ಸಾಂಸ್ಕೃತಿಕವಾಗಿ ಮುಖ್ಯವಾಗಿ ಕಾಣುವುದೆಂದರೆ ಸಣ್ಣ ಪತ್ರಿಕೆಗಳು, ಸೂಕ್ಷ್ಮಚಿಂತನೆ, ಸಂವಾದ ಇವೆಲ್ಲವುಗಳು ಇಂದಿನ ಕಾಲದಲ್ಲಿ ಅಪ್ರಸ್ತುತವಾಗಿಬಿಟ್ಟಿದೆ ಎನ್ನುವ ಸಿನಿಕತನದ ತೀರ್ಮಾನಗಳು ಹುಸಿ ಎನ್ನುವ ಹಾಗೆ 'ಹೊಸ ಮನುಷ್ಯ' ಕನ್ನಡ ಸಮುದಾಯದ ಆಳದಲ್ಲಿರುವ ಸಾಂಸ್ಕೃತಿಕ ಅಗತ್ಯದ ಪ್ರತಿಫಲನವೂ ಆಗಿದೆ.

**–ಡಾ. ರಾಜೇಂದ್ರ ಚೆನ್ನಿ, ಶಿವಮೊಗ್ಗ**

> 'ನಿಸ್ಸಂದೇಹವಾಗಿ 'ಹೊಸ ಮನುಷ್ಯ' ಇಂದು ಉಳಿದಿರುವ ಒಂದೇ ಒಂದು ಪ್ರಾಮಾಣಿಕ, ಮೌಲಿಕ ಪತ್ರಿಕೆ.
>
> **–ಡಾ. ಎಚ್.ಎಸ್. ರಾಘವೇಂದ್ರ ರಾವ್**, ಬೆಂಗಳೂರು

### ಆತ್ಮಾವಲೋಕನ ಪ್ರಕ್ರಿಯೆಯಲ್ಲಿ ತೊಡಗುವಂತೆ ಪ್ರೇರೇಪಿಸಿದೆ

ಕಳೆದ ನಾಲ್ಕು ವರ್ಷಗಳಿಂದ ಸಮಾಜವಾದಿ ವ್ಯಕ್ತಿತ್ವವನ್ನು ಒಂದು ಸಮುದಾಯ ಪ್ರಜ್ಞೆಯಾಗಿ ಎಲ್ಲ ಬಗೆಯ ಸಮಾನತೆಯ ಪರವಾಗಿ, ತನ್ನಂತಹ ಹತ್ತು ಹಲವರನ್ನು ಕೂಡಿಕೊಂಡು ಪ್ರಕಟಿಸುತ್ತಿರುವ 'ಹೊಸ ಮನುಷ್ಯ' ಬತ್ತುತ್ತಿರುವ ಎದೆಗಳಲ್ಲಿ ಸಮಾನತೆಯ ಆಸೆಗಳನ್ನು ಚಿಮ್ಮಿಸಲು ಯತ್ನಿಸಿದೆ. ನಮ್ಮ ಇಂದಿನ ದೈನಿಕಗಳು ನಡೆಸಲು ಹಿಂಜರಿಯುವ ಸಂವಾದಗಳನ್ನು, ಪ್ರಕಟಿಸಲು ನಿರಾಕರಿಸುವ ಲೇಖನಗಳನ್ನು ಪ್ರಕಟಿಸಿ ಚಿಂತನೆಗೆ ಅನುವು ಮಾಡಿಕೊಟ್ಟಿದೆ. ಇಂಥ ಪ್ರತಿ ಸಂವಾದದ ಮುನ್ನ ಅದಕ್ಕೆ ಸಂಬಂಧಿಸಿದಂತೆ ಸಂಪಾದಕರು ಬರೆದಿರುವ ಪೀಠಿಕೆಗಳು ಮುಖ್ಯ ಪ್ರಶ್ನೆಗಳನ್ನು, ವೈಚಾರಿಕ ತರಂಗಗಳನ್ನು ಮೂಡಿಸಲು ಸಹಕಾರಿಯಾಗಿವೆ. ಜೊತೆಗೆ, ಯುವ ಲೇಖಕರ ಬರಹಗಳನ್ನು ಪ್ರಕಟಿಸಿ, ಯುವ ಜನಾಂಗದ ನಾಡಿ ಮಿಡಿತವನ್ನು ಅರಿಯಲು ಸಹಕಾರಿಯಾಗಿದೆ. ಇದರ ನಡುವೆಯೇ ಪಾಶ್ಚಿಮಾತ್ಯ ಚಿಂತನೆಯ ಪ್ರಭಾವ ಅಥವಾ ಆಕ್ರಮಣದಿಂದಾಗಿ ದೇಶಿ ಸಂಸ್ಕೃತಿ ಉಪೇಕ್ಷೆಗೆ ಒಳಪಟ್ಟಿದೆ ಎಂಬ ಕೆಲವು ಚಿಂತನಾ ಬರಹಗಳು ಪ್ರಕಟಗೊಂಡಿದ್ದು, ಅವು ತಮಗರಿವಿದ್ದೋ ಇಲ್ಲದೆಯೋ ವೈದಿಕ ಸಂಸ್ಕೃತಿಯ ಪರವಾಗಿ ಮಾತನಾಡುತ್ತಿದ್ದೇವೆಯೇನೋ ಎಂಬ ಗುಮಾನಿಯನ್ನು ಮೂಡಿಸಿವೆ.

ಒಟ್ಟಿನಲ್ಲಿ ಯುವ ಜನಾಂಗದಲ್ಲಿ ಜನಪರ ಆಲೋಚನೆಯನ್ನೂ,

ಹಿರಿಯರಲ್ಲಿ ಆತ್ಮಾವಲೋಕನ ಪ್ರಕ್ರಿಯೆಯಲ್ಲಿ ತೊಡಗುವಂತೆಯೂ ಪ್ರೇರೇಪಿಸಿದೆ. ಸಮಾಜವಾದಿ ಚಿಂತನೆಯನ್ನು ಮೂಲ ಸ್ಥಾಯಿಯನ್ನಾಗಿಟ್ಟುಕೊಂಡು ಸಾಮಾಜಿಕ 'ರಾಜಕಾರಣ' ಸಾಂಸ್ಕೃತಿಕ ಅಸಮಾನತೆಯ ವಿರುದ್ಧವಾಗಿ ದಿಟ್ಟ ಚಿಂತನೆಗಳನ್ನು ಬಿತ್ತರಿಸುತ್ತಿದೆ.

ಪತ್ರಿಕೆಯಿಂದ ಮುಂದಿನ ದಿನಗಳಲ್ಲಿ ಬಹಳಷ್ಟು ಆಗಬೇಕಿದೆ. ಇತ್ತೀಚಿನ ನಮ್ಮ ಬುದ್ಧಿಜೀವಿ–ಜನಪರ ಚಿಂತಕರಲ್ಲಿ ಭೋಗ ಸಂಸ್ಕೃತಿಯ ಲಾಲನೆ ಅತಿಯಾಗಿದೆ. ಆಳುವ ಸರ್ಕಾರದ ಮರ್ಜಿ ಹಿಡಿದು ವರ್ತಿಸುವ ಇವರಲ್ಲಿ ಬದ್ಧತೆಯೇ ನಾಶವಾಗಿದೆ. ಇದರ ಜೊತೆಗೆ, ತಳ ಸಾಮಾಜಿಕ ಪದರದಿಂದ ಬಂದು, ಸಂವಿಧಾನದತ್ತವಾಗಿ ಬಂದಿರುವ ಅನುಕೂಲಗಳನ್ನು ಪಡೆದು ಆರ್ಥಿಕವಾಗಿ ಸಬಲರಾಗಿರುವ ಬಹುಪಾಲು ಮಂದಿ ಹಿಂದೂ ಸಂಘಟನೆಗಳ ಸೈನಿಕರಂತೆ ನಡೆದುಕೊಳ್ಳುತ್ತಿದ್ದಾರೆ. ಇಂಥವರು ನಿಜ ವೈದಿಕರಿಗಿಂತ ಅಪಾಯಕಾರಿಗಳ ರೀತಿಯಲ್ಲಿ ನನಗೆ ಕಾಣುತ್ತಿದ್ದಾರೆ. ತಾವು ಮುಂದೆ ಬರಲು ಕಾರಣರಾದ ಗಾಂಧಿ, ಲೋಹಿಯಾ, ಅಂಬೇಡ್ಕರ್‌ರನ್ನು ಮರೆತಿದ್ದಾರೆ. ಪತ್ರಿಕೆ ಇಂಥವರನ್ನು ಮುಲಾಜಿಲ್ಲದೇ ಪ್ರಶ್ನೆ ಮಾಡಿ ಬಹಿರಂಗಪಡಿಸಬೇಕಾಗಿದೆ. ನಮ್ಮ ಬೆಂಗಳೂರಿನ ಬುದ್ಧಿಜೀವಿಗಳು ತೋರುವ 'ರಿಯಾಯ್ತಿ' ಗುಣವನ್ನು ನಿರಾಕರಿಸಿ ಸತ್ಯನಿಷ್ಠ– ಮನುಷ್ಯನಿಷ್ಠ– ಜೀವನಿಷ್ಠ ನೆಲೆಯನ್ನು ಎತ್ತಿ ಹಿಡಿಯುವುದು ಮುಖ್ಯ.

ನಮ್ಮ ಹಿರಿಯ ಸಮಾಜವಾದಿಗಳನ್ನು ಪರಿಚಯ ಮಾಡಿಕೊಟ್ಟ ಹಾಗೆ ಈಗ ಬದುಕಿರುವ ಮತ್ತು ಸಾಮಾಜಿಕ–ಜನಪರ ಹೋರಾಟದಲ್ಲಿ ತೊಡಗಿಸಿಕೊಂಡಿರುವವರನ್ನು ಕೂಡಾ ಗುರುತಿಸಿ ಬೆಳಕಿಗೆ ತರಬೇಕಾಗಿದೆ. ವರ್ತಮಾನದ ಜ್ವಲಂತ ಸಮಸ್ಯೆಗಳ ಬಗ್ಗೆ ಈಗ ನಡೆಯುತ್ತಿರುವ ಸಂವಾದ ಮುಂದುವರಿಯುವುದು ಅನಿವಾರ್ಯವಾಗಿದೆ.

**–ಪ್ರೊ. ಶಿವರಾಮು ಕಾಡನಕುಪ್ಪೆ,** ಮೈಸೂರು

## ನಮ್ಮ ಎಲ್ಲ ಆಸೆಗಳ–ಕನಸುಗಳ ಪ್ರತಿರೂಪ

**'ಹೊ**ಸ ಮನುಷ್ಯ'ದ ಆರಂಭದ ಓದುಗ ನಾನು. ಓದುಗನಷ್ಟೆ ಅಲ್ಲ, ಅಭಿಮಾನಿ ಮತ್ತು ಭಾಗೀದಾರ. ನಮ್ಮೆಲ್ಲ ಸಮಾಜವಾದಿ ಧೋರಣೆಗಳ ಪ್ರತಿಬಿಂಬ 'ಹೊಸಮನುಷ್ಯ'. ಜಡ್ಡುಗಟ್ಟಿರುವ ಸಮಾಜಕ್ಕೆ ಏನಾದರೂ ಹೊಸತು ದಕ್ಕೀತೇನೋ ಎಂದು ಸಂಚಿಕೆಯ ಆಗಮನಕ್ಕೆ ಪ್ರತಿ ತಿಂಗಳ ಆರಂಭದಂದು ಕಾಯುತ್ತಿರುತ್ತೇನೆ. ಇಷ್ಟು ವರ್ಷ ಇಷ್ಟು ತಿಂಗಳು ಅದು ನಿರಾಶೆಯನ್ನುಂಟು ಮಾಡಿಲ್ಲ.

ಸ್ವತಂತ್ರ ಭಾರತ ಒಂದು ಸಮಾಜವಾದಿ ಭಾರತವಾಗುತ್ತದೆ ಎಂದು ಕನಸು ಕಂಡವರು ನಾವು. ಸಮಸುಖದ ಸಮದು:ಖದ ಸಮಪಾಲಿನ ನಾಡಾಗುತ್ತದೆ, ರಸದ ಬೀಡಾಗುತ್ತದೆ ಎಂದು ಆಶಿಸಿದವರು. ಮೇಲುಕೀಳುಗಳಿಲ್ಲದ, ವರ್ಗರಹಿತವಾದ, ಜಾತ್ಯಾತೀತವಾದ ಪವಿತ್ರ ನಾಡಾಗಲಿ ಎಂದು ಹಾರೈಸಿದವರು. ಜಾತಿ ವಿನಾಶಕ್ಕಾಗಿ ಅನೇಕ ಚಳುವಳಿಗಳಲ್ಲಿ ಪಾಲುಗೊಂಡು ನಿರಾಶರಾದವರು. ನಾವು ನಂಬಿದ ರಾಜಕಾರಣಿಗಳೇ, ಸಂವಿಧಾನವೇ ನಮಗೆ ದ್ರೋಹಬಗೆಯಿತೆ ಎಂದು ಈಗಲೂ ಪರಿತಪಿಸುವವರು. ಇದ್ದುದರಲ್ಲೇ ಒಳ್ಳೆಯದನ್ನು ಮಾಡಲು ಸಾಧ್ಯವಾಗುವ ಮನಸ್ಸುಗಳ ಜೊತೆಗೆ ಸಹನೀಯ ಬದುಕನ್ನು ಬದುಕಲು ಪರಿತಪಿಸುತ್ತಿರುವವರು.

ಈ ಎಲ್ಲ ಆಸೆಗಳ ಕನಸುಗಳ ಪ್ರತಿರೂಪವಾಗಿ ಹೊಸಮನುಷ್ಯ ಬರುತ್ತಿದೆ. ಅದು ಒಂದು ರೀತಿಯಲ್ಲಿ ನೆಮ್ಮದಿ ತರುತ್ತಿರುವ ಸಮಾಜವಾದಿ ಮಾಸಿಕ.

ಬಿಜೆಪಿ, ಕಾಂಗ್ರೆಸ್, ಬಿಎಸ್‌ಪಿ, ತೃಣಮೂಲ, ಆಪ್ ಮುಂತಾದ ಎಲ್ಲ ಪಕ್ಷಗಳ ಎಡ ಬಿಡಂಗಿತನವನ್ನು, ಪಡಪೋಶಿತನವನ್ನು ಸಂಪಾದಕರ ಟಿಪ್ಪಣಿಗಳು ಬಯಲುಗೆಳೆಯುತ್ತವೆ. ಸಾಮಾಜಿಕ ಒಳಿತನ್ನು ಉಂಟುಮಾಡುವ ಯಾವುದೇ ಘಟನೆ ಜರುಗಿದರೆ ಅದು ಪತ್ರಿಕೆಯಲ್ಲಿ ಸ್ಥಾನ ಪಡೆಯುತ್ತದೆ. ಅನಾಮಧೇಯ ಸಮಾಜವಾದಿಗಳೂ ನಮಗೆ ಪರಿಚಿತರಾಗುತ್ತಿದ್ದಾರೆ. ಹಗರಣ, ಭ್ರಷ್ಟಾಚಾರ, ಅತ್ಯಾಚಾರ, ಅನಾಚಾರಗಳನ್ನು ಕುರಿತಂತೆ ಕೂಲಂಕಷ ಚರ್ಚೆಗಳು ನಡೆಯುತ್ತಿವೆ. ಬಿ.ಕೃಷ್ಣಪ್ಪ ನೆನಪಿನ ಮಾಲೆ ನಿರಂತರವಾಗಿ ಬರುತ್ತಿದ್ದು ಚಳುವಳಿಯ ನೆನಪು ಮುಂದಿನ ಕಾರ್ಯಸೂಚಿಗಳಿಗೆ ಸಹಾಯವಾಗುತ್ತದೆ.

ನಮ್ಮೆಲ್ಲರ ಸಮಾಜವಾದಿ ಮನಸ್ಸಿನ ಆರೋಗ್ಯವನ್ನು ಜತನದಿಂದ ಕಾಪಾಡುತ್ತಿರುವ 'ಹೊಸ ಮನುಷ್ಯ' ಮತ್ತು ಸಂಪಾದಕ ಮಿತ್ರರಾದ ಡಿ.ಎಸ್.ನಾಗಭೂಷಣ ಅವರಿಗೆ ಹೃದಯಪೂರ್ವಕ ಅಭಿನಂದನೆಗಳು.

**– ಡಾ. ಎಂ.ಜಿ.ಈಶ್ವರಪ್ಪ,** ದಾವಣಗೆರೆ

**'ಹೊ**ಸ ಮನುಷ್ಯ'ಕ್ಕೆ ಕೈಬರಹದ ಪತ್ರಿಕೆಯ ಗುಣ ಇದೆ. ಅಂದರೆ ಏನಂತ ಹೇಳಲು ಬರುತ್ತಿಲ್ಲ... ಆದರೆ ಅದು ನನಗೆ ಇಷ್ಟ...

**–ಜಯಂತ ಕಾಯ್ಕಿಣಿ,** ಗೋಕರ್ಣ

## ಬದುಕನ್ನು ಕಟ್ಟಿಕೊಳ್ಳುವ ಮಾದರಿಯನ್ನು ಶೋಧಿಸಿ ಕೊಟ್ಟಿದೆ

**ಲಂ**ಕೇಶರು ಬದುಕಿದ್ದಾಗ ಇದ್ದ 'ಲಂಕೇಶ್ ಪತ್ರಿಕೆ'ಯಿಂದ ಪಡೆದ ಸಮಾಜವಾದಿ ಸಿದ್ಧಾಂತದ ಬಗೆಗಿನ ಒಲವನ್ನು ಇಡಿಯಾಗಿ ಬೆಳೆಸಿ ಪೋಷಿಸಿ ಆಳಕ್ಕಿಳಿಸಿದ ಪತ್ರಿಕೆಯೆಂದರೆ 'ಹೊಸ ಮನುಷ್ಯ'. ಈ ಪತ್ರಿಕೆಯು, ನನ್ನ ಮಟ್ಟಿಗೆ ಲಂಕೇಶ್‌ರ ನಿಧನದ ನಂತರ ಕನ್ನಡ ಪತ್ರಿಕಾ ಲೋಕದಲ್ಲಿ ಸೃಷ್ಟಿಯಾಗಿದ್ದ ಒಂದು ರೀತಿಯ ಶೂನ್ಯವನ್ನು ಸಮರ್ಥವಾಗಿ ತುಂಬಿ ಉತ್ತಮ ಸಮಾಜದ ನಿರ್ಮಾಣಕ್ಕಾಗಿ ಬೇಕಾದ ತಾತ್ವಿಕತೆಯನ್ನು ನಮ್ಮಲ್ಲಿ ತುಂಬಿದೆ ಎಂದೆ ನನಗನಿಸುತ್ತದೆ.

ಪ್ರಧಾನವಾಗಿ ಹೇಳಬಹುದಾದ ವಿಷಯಗಳೆಂದರೆ ಮೊದಲನೆಯದಾಗಿ, ಪತ್ರಿಕೆಯು ನಾವೆಲ್ಲಾ ಅತ್ಯಂತ ಮೇಲ್ಪದರದಲ್ಲಿ ತಿಳಿದುಕೊಂಡಿದ್ದ ಸಮಾಜವಾದಿ ಸಿದ್ದಾಂತ ಮತ್ತು ಚಿಂತನೆಯನ್ನು ಅದರ ಎಲ್ಲಾ ಆಳ, ಅಗಲ ಮತ್ತು ಸೌಂದರ್ಯಗಳೊಂದಿಗೆ ಅರ್ಥ ಮಾಡಿಸುದರಲ್ಲಿ ಅತ್ಯಂತ ಯಶಸ್ವಿಯಾಗಿದೆ. ಪತ್ರಿಕೆಯು ಸಮಾಜವಾದಿ ಚೌಕಟ್ಟನ್ನು ಇಟ್ಟು ಕೊಂಡೇ ಕಳೆದ ೪ ವರ್ಷಗಳಿಂದ ಪ್ರಸ್ತಾಪಿಸಿದ, ಚರ್ಚಿಸಿದ ವಿಷಯಗಳು ಮತ್ತು ಅದರ ಮೂಲಕ ಕಟ್ಟಿಕೊಟ್ಟ ತಾತ್ವಿಕತೆ ನಮ್ಮನ್ನು ನಿರಂತರವಾಗಿ ಹೊಸ ಮನುಷ್ಯನನ್ನಾಗಿ ಮಾಡುತ್ತ ಸಾಗಿದೆ. ಎರಡನೆಯದಾಗಿ,ಈ ಕಾಲಮಾನದಲ್ಲಿ ನಮ್ಮ ಸಮಾಜಕ್ಕೆ ಬಹುದೊಡ್ಡ ಅಪಾಯವಾಗಿ ಎದಿರಾಗುತ್ತಿರುವ ಜಾಗತೀಕರಣ ಪ್ರಕ್ರಿಯೆ ಮತ್ತು ನವವಸಾಹಾತುಶಾಹಿ ಆರ್ಥಿಕ ವ್ಯವಸ್ಥೆಯನ್ನು, ಅವುಗಳ ಎಲ್ಲಾ ಮಗ್ಗುಲುಗಳನ್ನು ಆಳದಿಂದ ವಿಶ್ಲೇಷಿಸಿ ಅದು ನಿಜಕ್ಕು ನಮ್ಮೆಲ್ಲಾ ಅಸ್ತಿತ್ವಕ್ಕೆ ನಾವು ಕಟ್ಟಿಕೊಂಡ ವೈವಿಧ್ಯಮಯ ಸಮಾಜಕ್ಕೆ ಅಪಾಯಕಾರಿಯಾಗಿ ನಮ್ಮ ಬುಡದ ಬೇರುಗಳನ್ನೇ ಕತ್ತರಿಸುತ್ತಿವೆ ಮತ್ತು ಕೊನೆಗೆ ಅದು ಒಟ್ಟಾರೆ ಭಸ್ಮಾಸುರನ ಅವತಾರ ತಳೆಯುತ್ತಿದೆ ಎಂಬುದನ್ನು ಮನಮುಟ್ಟುವಂತೆ ಕಟ್ಟಿಕೊಟ್ಟಿರುವಿರಿ. ಇದಕ್ಕೆ ಎದುರಾಗಿ/ ಪರ್ಯಾಯವಾಗಿ ಗಾಂಧಿ ಮತ್ತು ಲೋಹಿಯರ ಚಿಂತನೆಯ ನೆಲೆಯಲ್ಲಿ ಸಣ್ಣದು ಸುಂದರ, ಹಿತಮಿತ, ಸರಳ, ಸಭ್ಯ ಎನ್ನುವ ಸುಸ್ಥಿರ ಸಮಾಜ ವ್ಯವಸ್ಥೆ ಮತ್ತು ಬದುಕನ್ನು ಕಟ್ಟಿಕೊಳ್ಳುವ ಮಾದರಿಯನ್ನು ಶೋಧಿಸಿ ಕೊಟ್ಟಿದೆ.

ಮೂರನೇಯದಾಗಿ ಹಾಗೂ ಬಹು ಮುಖ್ಯವಾಗಿ ಗಾಂಧಿ ದರ್ಶನವನ್ನು ಪತ್ರಿಕೆಯು ಓದುಗರಲ್ಲಿ ಸ್ಥಾಪಿಸಿದ ರೀತಿ ಅನನ್ಯವಾದದ್ದು. ಗಾಂಧಿಯನ್ನು ಬಹಳ ತೆಳುವಾಗಿ ಗ್ರಹಿಸಿದ್ದ ನಮಗೆ ಅವರ ಚಿಂತನೆಯನ್ನು, ಮತ್ತು ಅದರ ಪ್ರಸ್ತುತತೆಯನ್ನು, ಗಾಂಧಿಯಂತೆ ಸಂತತ್ವದ ಬದುಕನ್ನು ಬಯಸದ ನಮ್ಮಂತಹ ಜನಸಾಮಾನ್ಯರಲ್ಲೂ ಮನಗಾಣಿಸಿದ ಹಾಗೂ ನಮ್ಮ ಬದುಕಿಗೆ ಹತ್ತಿರವಾಗುವಂತೆ ಮಾಡಿದ ರೀತಿ ಪತ್ರಿಕೆಯ ಬಹು ಮುಖ್ಯ ಸಾಧನೆ ಎಂದೇ ತಿಳಿದಿದ್ದೇನೆ. ಈ ಸಾಧನೆ ಲೋಹಿಯಾರ ಮುಂದುವರೆದ ಕಾರ್ಯವಾಗಿದೆ.

ನಮ್ಮ ಇಂದಿನ ಸಮಾಜದ ಅನೇಕ ಪ್ರಚಲಿತ ವಿದ್ಯಮಾನಗಳಿಗೆ ಪತ್ರಿಕೆಯು ತೀಕ್ಷ್ಣವಾಗಿ ಸ್ಪಂದಿಸಿದೆ. ಪರ್ಯಾಯ ಮಾರ್ಗಗಳನ್ನೂ ಕಾರ್ಯಗತ ಮಾಡುವ ನಿಟ್ಟಿನಲ್ಲಿ ಓದುಗರನ್ನು ಎಚ್ಚರಿಸುತ್ತಾ ಬಂದಿದೆ. ಎಚ್ಚರಗೊಂಡ ಓದುಗರೆಲ್ಲಾ ಸೇರಿ ಒಂದು ಜನಾಂದೋಲನ ರೂಪಿಸಿ ಬದಲಾವಣೆ ತರುವ ಪ್ರಯತ್ನ ಮಾಡಬೇಕಷ್ಟೆ.

ನಾಲ್ಕನೇಯದಾಗಿ ನಾವು ಸ್ವಾತಂತ್ರ್ಯ ಬಂದಾಗಿನಿಂದ, ಹಾಗೇ ೯೦ರ ನಂತರ ತೀವ್ರಗತಿಯಲ್ಲಿ ಕಟ್ಟಿಕೊಳ್ಳುತ್ತಿರುವ ಅಭಿವೃದ್ಧಿ ಮತ್ತು ನಾಗರಿಕತೆಯ ಮಾದರಿಗಳು ಎಷ್ಟು ಹುಸಿಯಾಗಿರುವಂತದ್ದು ಮತ್ತು ನಾವು ರೂಪಿಸಿಕೊಂಡ ಸಂವಿಧಾನವು ಎಷ್ಟು ಕೇಂದ್ರೀಕರಣಗೊಂಡ ಆಡಳಿತ ಮಾದರಿ ಮತ್ತು ಅದರಿಂದ ದೇಶಕ್ಕೆ ಆಗುತ್ತಿರುವ ಅನಾಹುತಗಳನ್ನು ವಿಷದವಾಗಿ ಮನವರಿಕೆ ಮಾಡಿಕೊಡುತ್ತಾ ಅದರ ಪರ್ಯಾಯವಾಗಿ ಸ್ವರಾಜ್ಯ ಮಾದರಿಯ ವಿಕೇಂದ್ರೀಕರಣಗೊಂಡ ಆಡಳಿತ ವ್ಯವಸ್ಥೆಯನ್ನೇ ರೂಪಿಸಿಕೊಳ್ಳುವ ಬಗೆಯನ್ನು ಪತ್ರಿಕೆ ಚರ್ಚಿಸಿದ್ದು ಬಹುಮುಖ್ಯ ವಿಷಯಗಳಲ್ಲಿ ಒಂದು. ಈ ಒಂದೇ ಮಾದರಿಯು ನಮ್ಮ ಸಮಾಜದ ವೈವಿಧ್ಯಮಯ ಬದುಕು, ಸಂಸ್ಕೃತಿ, ಭಾಷೆ, ಇತ್ಯಾದಿಗಳನ್ನು ಕಾಪಾಡಿ ನಿಜವಾದ ಒಕ್ಕೂಟ ಸ್ಥಾಪಿಸಬಲ್ಲದು ಎಂಬ ಅರಿವು ಮೂಡಿಸಿರುವುದು ಪತ್ರಿಕೆಯ ಹೆಮ್ಮೆಯ ಸಾಧನೆಗಳಲ್ಲೊಂದು.

ಅತ್ಯಂತ ಮೌಲಿಕವಾದ ಇಂತಹ ಪತ್ರಿಕೆಗಳು ನಮ್ಮ ನಾಡಿನ ಸಾರ್ವಜನಿಕ/ಕಾಲೇಜಿನ/ವಿಶ್ವವಿದ್ಯಾಲಯಗಳ/ಗ್ರಂಥಾಲಯಗಳಲ್ಲಿ ಲಭ್ಯವಿದ್ದು ಹೆಚ್ಚು ಜನರಿಗೆ ತಲುಪಬೇಕಾಗಿತ್ತು. ಆದರೆ ಇದು ಆಗಿಲ್ಲದಿರುವುದು ಬೇಸರ ಹುಟ್ಟಿಸುತ್ತದೆ. ನಮ್ಮ ಯುವ ಸಮುದಾಯ ಪತ್ರಿಕೆಯ ಉದಾತ್ತ ವಿಚಾರಗಳಿಂದ ವಂಚಿತರಾಗಿದ್ದಾರೆಂದೇ ಅನಿಸುತ್ತದೆ. ನಾವು ಓದುಗರು ಹೆಚ್ಚು ಜನರಿಗೆ ತಲುಪಿಸುವ ಪ್ರಯತ್ನ ಮಾಡಬೇಕು ಪತ್ರಿಕೆಯು ಯುವಜನರ ತವಕ ತಲ್ಲಣ ಅವರ ಸಮಸ್ಯೆಗಳು, ಅವರು ಇಂದಿನ ಜಾಗತೀಕರಣದ ಹುಚ್ಚುಹೊಳೆಯಲ್ಲಿ ಕೊಚ್ಚಿಕೊಂಡು ಹೋಗದೆ ಅದನ್ನು ಎದುರಿಸುತ್ತಲೇ ತಮ್ಮ ಜೀವನವನ್ನು ಕಟ್ಟಿಕೊಳ್ಳುವ ಮಾರ್ಗವನ್ನು ಸಮಕಾಲಿನ ವಿಷಯಗಳಲ್ಲಿ ಚರ್ಚೆಗೆ ತೆಗೆದುಕೊಳ್ಳಬಹುದು ಎನಿಸುತ್ತದೆ. ಕೆಲವು ಲೇಖನಗಳು ತೀರಾ ಅಕಡೆಮಿಕ್ ಭಾಷೆಯಲ್ಲಿರುವುದರಿಂದ ಪತ್ರಿಕೆಯು ಜನಸಾಮಾನ್ಯರ ಪತ್ರಿಯಾಗಿ ಮೂಡುವುದಕ್ಕೆ ತೊಡಕಾಗಿರುದರಿಂದ ಹೆಚ್ಚು ಸರಳವಾದ ಸಾಮಾನ್ಯರಿಗು ತಲುಪುವಂತಹ ಭಾಷೆಯಲ್ಲಿ ಲೇಖನಗಳು ಪ್ರಕಟವಾದರೆ ಉತ್ತಮ.

**–ಬಿ.ವಿ..ಸುರೇಂದ್ರ,** ಧಾರವಾಡ

**'ಹೊಸ ಮನುಷ್ಯ'** ತನ್ನ ಮಿತಿಗಳಲ್ಲೇ ಸೊಗಸಾಗಿ ಬರುತ್ತಿದೆ. ನಿಮಗೆ 'ಶಹಬ್ಬಾಸ್' ಎನ್ನಲೇಬೇಕು.

**–ನಾಗೇಶ್ ಹೆಗಡೆ,** ಬೆಂಗಳೂರು

### ಭಿನ್ನ ಚಿಂತನೆ, ನಿಲುವು, ಅಭಿಪ್ರಾಯಗಳಿಗೂ ಅವಕಾಶವಿರಲಿ

'ಹೊಸ ಮನುಷ್ಯ' ಪತ್ರಿಕೆ ಗಾತ್ರದಲ್ಲಿ ಪುಟ್ಟದಾದರೂ, ಅದು ಒಳಗೊಳ್ಳುತ್ತಿರುವ ವೈವಿಧ್ಯಮಯ ಬರಹಗಳು ಮತ್ತು ಬಹುಮುಖ್ಯ ವಿಚಾರಗಳನ್ನು ಮುಂದಿಡುತ್ತಿರುವುದರಿಂದ ಸತ್ವದ ದೃಷ್ಟಿಯಿಂದ ಬಹಳ ಮುಖ್ಯ ಪತ್ರಿಕೆಯಾಗಿದೆ. ನಿಷ್ಠುರವಾದ ಮತ್ತು ಸೂಕ್ಷ್ಮ ವಿಶ್ಲೇಷಣೆಯಿಂದ ಕೂಡಿರುವ ಸಂಪಾದಕೀಯ ಬರಹಗಳು ಗಮನ ಸೆಳೆಯುತ್ತಿವೆ. ಪ್ರಾಮಾಣಿಕವಾದ ಬದ್ಧತೆಯ ಹಿರಿಯ ಸಮಾಜವಾದಿ ಹೋರಾಟಗಾರರ ಪರಿಚಯ ಇಂದಿನ ಕಾಲಘಟ್ಟಕ್ಕೆ ಅತ್ಯಂತ ಅಗತ್ಯವಾಗಿದೆ. ಪ್ರೊ. ಬಿ. ಕೃಷ್ಣಪ್ಪ ಅವರ ನೆನಪಿನ ಮಾಲಿಕೆ ಕರ್ನಾಟಕದ ಬಹುಮುಖ್ಯ ಲೋಕವನ್ನು ಪರಿಚಯಿಸುತ್ತಿದೆ.

ಸಮಕಾಲೀನವಾದ ಗಂಭೀರ ವಿಷಯಗಳಲ್ಲಿ ಒಂದಲ್ಲ ಒಂದು ವಿಷಯದ ಕುರಿತು ಅತ್ಯಂತ ಪ್ರಬುದ್ಧವಾದ ಲೇಖನ, ಅನುವಾದ ಲೇಖನ ಅಥವಾ ಚರ್ಚೆಯನ್ನು ಈ ಪತ್ರಿಕೆ ಪ್ರಕಟಿಸುತ್ತಿದ್ದು ಓದುಗರ ಅರಿವನ್ನು ವಿಸ್ತರಿಸಲು ಸಹಕಾರಿಯಾಗಿದೆ. ಶಿಕ್ಷಣ ಮಾಧ್ಯಮ, ಕನ್ನಡ ಭಾಷೆ ಮತ್ತು ಮನಸ್ಸು, ಪರಿಸರ, ಸಾವಯವ ಕೃಷಿ, ಪಂಚಾಯತ್‌ರಾಜ್, ಪತ್ರಿಕೋದ್ಯಮ, ಸಂವಿಧಾನ, ನ್ಯಾಯಾಂಗ, ಸೆಕ್ಯುಲರಿಸಂ, ಮುಸ್ಲಿಮರ ಸಮಸ್ಯೆಗಳು, ಗಾಂಧಿ, ಅಂಬೇಡ್ಕರ್, ಬುದ್ಧರ ಚಿಂತನೆಗಳು, ಕೋಮುವಾದ, ಮೂಲಭೂತವಾದ ಈ ಮುಂತಾದ ವಿಷಯಗಳ ಕುರಿತು ಪ್ರಕಟವಾದ ಬರಹಗಳು ಆಯಾ ಕ್ಷೇತ್ರಗಳ ಕುರಿತು ಬೌದ್ಧಿಕ ಬಿಕ್ಕಟ್ಟುಗಳನ್ನು ಬಿಡಿಸಿಕೊಳ್ಳಲು ಸಹಕಾರಿಯಾಗುತ್ತಿವೆ.

ಆದರೆ ಪತ್ರಿಕೆ ತನ್ನ ಸಮಾಜವಾದಿ ನಿಲುವುಗಳನ್ನು ಮುಂದಿಡುತ್ತಿರುವಾಗ ಇತರ ಭಿನ್ನ ಚಿಂತನೆಗಳನ್ನು, ನಿಲುವು, ಅಭಿಪ್ರಾಯಗಳನ್ನು ಪರಿಗಣನೆಗೆ ತೆಗೆದುಕೊಳ್ಳುತ್ತಿಲ್ಲವೆಂದು ನನಗೆ ಅನ್ನಿಸುತ್ತಿದೆ. ಭಾರತದಂಥ ಬಹು ವಿಧದ, ಅಪಾರ ತರತಮಗಳು ಇರುವ ದೇಶದಲ್ಲಿ ಭಿನ್ನ ಚಿಂತನೆಗಳು ತಮ್ಮದೇ ಆದ ಕಾಲ, ಸಂದರ್ಭ, ವ್ಯಕ್ತಿ, ಸಮಾಜ ನಿರ್ದಿಷ್ಟತೆಯಲ್ಲಿ ರೂಪ ಪಡೆಯುತ್ತವೆ. ಅವುಗಳೆಲ್ಲವನ್ನು ಒಂದೇ ನಿಲುವಿನಲ್ಲಿ ನೋಡಲು ಸಾಧ್ಯವೇ?

ಇನ್ನುಳಿದಂತೆ, ಪತ್ರಿಕೆ ಉತ್ತಮ ಕೆಲಸವನ್ನು ಮಾಡುತ್ತಿದೆ. ಸಂಪಾದಕರ ಅಪಾರ ಶ್ರಮ ಅಭಿನಂದನಾರ್ಹ.

**–ಡಾ. ವಾಸುದೇವ ಬೆಳ್ಳೆ,** ಮಂಗಳೂರು

### ವಿದ್ಯಾರ್ಥಿಗಳೊಂದಿಗೆ ಅರ್ಥಪೂರ್ಣ ಸಂವಾದ ನಡೆಸಲು ಹಚ್ಚಿದೆ

ನಮ್ಮ ವಿದ್ಯಾರ್ಥಿ ದೆಶೆಯಲ್ಲಿ ದುರದೃಷ್ಟವಶಾತ್ ನಮ್ಮ ಪಠ್ಯಪುಸ್ತಕಗಳು ಪರಿಚಯಿಸದಿದ್ದ ಸಮಾಜವಾದಿ ವಿಚಾರಧಾರೆ ಕಡೆಗೆ ಸೆಳೆದು ಹೋಗಿ, ಲೋಹಿಯಾರ ವ್ಯಕ್ತಿತ್ವವನ್ನು ಸಂದರ್ಭಕ್ಕನುಸಾರವಾಗಿ ಪರಿಚಯಿಸುತ್ತಾ ಮುನ್ನಡೆಸಿದವರೆಂದರೆ, ನಮ್ಮ ನೆಚ್ಚಿನ ಗುರುಗಳಾದ ಹಸನ್ ನಯೀಂ ಸುರಕೋಡ. ಸಮಾಜವಾದದೊಂದಿಗೆ ವೈಚಾರಿಕತೆ ನೆಲೆಯ ಸಾಹಿತ್ಯವನ್ನು ಓದಿಸುತ್ತಾ ಬಂದ ಅವರು ನಾಲ್ಕು ವರ್ಷಗಳ ಹಿಂದೆ 'ನವ ಮಾನವ' ಎಂಬ ಹೆಸರಿನಿಂದ ಹೊರಡುತ್ತಿದ್ದ ಈ 'ಹೊಸ ಮನುಷ್ಯ'ನನ್ನು ಪರಿಚಯಿಸಿದರು. ಮುಖ್ಯವಾಗಿ ಇದರಲ್ಲಿನ 'ಸಂಪಾದಕರ ಟಿಪ್ಪಣಿಗಳು' ಗೆಳೆಯರ ನಡುವೆ ಚರ್ಚೆಗೆ ನಮ್ಮನ್ನು ಅಣಿ ಮಾಡುತ್ತಿವೆ.

ಸಮಾಜವಾದ, ಸಮಾಜವಾದಿ ಹೋರಾಟಗಳ ಬಗ್ಗೆ ಸೀಮಿತ ತಿಳುವಳಿಕೆ ಇದ್ದ ನಮಗೆ, 'ನಮ್ಮ ಸಮಾಜವಾದಿಗಳು' ಮಾಲಿಕೆ ನಮ್ಮನ್ನು ಎದ್ದು ಕೂರಿಸಿತು. ಪತ್ರಿಕೆಯಲ್ಲಿನ ಕನ್ನಡ ಭಾಷೆ, ಚಳವಳಿ, ಸಾಹಿತ್ಯ, ಗಾಂಧಿ, ಬುದ್ಧ, ಕಾರ್ಪೋರೇಟ್ ವಲಯ, ಸಮಕಾಲೀನ ಸಾಮಾಜಿಕ ಹೋರಾಟ ಮುಂತಾದ ವಿಷಯಗಳ ಕುರಿತ ಲೇಖನಗಳು ನಮ್ಮನ್ನು 'ಹೊಸ ಮನುಷ್ಯ'ರನ್ನಾಗಿಸಿದೆ. ಇತಿಹಾಸ ಬೋಧಕನಾದ ನನಗೆ ಈ ಪತ್ರಿಕೆ ಸಾಕಷ್ಟು ಪುಷ್ಟಿ ನೀಡಿ ವಿದ್ಯಾರ್ಥಿಗಳೊಂದಿಗೆ ಅರ್ಥಪೂರ್ಣ ಸಂವಾದ ನಡೆಸಲು ಹಚ್ಚಿದೆ.

**–ಡಾ. ಎ.ಬಿ.ವಗ್ಗರ,** ರಾಮದುರ್ಗ

### ನನ್ನ ಪ್ರತಿ ತಿಂಗಳ ಮಾರ್ಗದರ್ಶಿ

ಕಳೆದ ನಾಲ್ಕು ವರ್ಷಗಳಿಂದ ನಮ್ಮ ಬದುಕಿನ ಭಾಗವಾಗಿರುವ, **"ಹೊಸಮನುಷ್ಯ"** ಸಮಾಜವಾದಿ ಮಾಸಿಕ ಐದನೇ ವರ್ಷಕ್ಕೆ ಕಾಲಿಡುತ್ತಿರುವುದು ನನ್ನಂತಹ ಓದುಗರೆಲ್ಲರಿಗೂ ಸಂಭ್ರಮದ ಸಂದರ್ಭ. ನಾವು ಬಯಲುಸೀಮೆಯ ಈ ಹಳ್ಳಿಗಾಡಿನಲ್ಲಿ ಕಾಲದ ಜೊತೆ ಹೇಗೋ ಒದ್ದಾಡಿಕೊಂಡು ಬದುಕು ಸಾಗಿಸುತ್ತಿದ್ದೇವೆ. ಕಳೆದ ಏಳು ದಿನಗಳಿಂದ ಕರ್ನಾಟಕದ ಎಲ್ಲಾ ಭಾಗಗಳಲ್ಲಿ ದಿನ ನಿತ್ಯ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿರುವ ಸುದ್ದಿಗಳಿಂದ ದಿಗ್ಭ್ರಮೆಯಾಗಿದೆ. ವ್ಯವಸಾಯದ ಕಲೆ, ಅನ್ನ ತಿನ್ನಲು ಬೆಳೆಯುವ ಅದರ ಮೂಲನೆಲೆಗಳು ನಶಿಸುತ್ತಿವೆ. ನನ್ನೂರ ಕೆರೆ ತುಂಬಿ ಭತ್ತದ ಬೆಳೆ ಬೆಳೆದು ಯಾವ ಕಾಲವೋ ಆಯ್ತು! ಇದು ನಮ್ಮ ಬಯಲು ಸೀಮೆಯ ಬದುಕು ಮುಟ್ಟಿರುವ ವಿಷಾದಮಯ ಸ್ಥಗಿತತೆಗೊಂದು ರೂಪಕ.

ಇದೇಕೆ ಹೀಗಾಯಿತೆಂದು ಯೋಚಿಸಿದರೆ ಉತ್ತರ ಗೋಜಲು ಗೋಜಲು. ಈ ಗೋಜಲನ್ನು ಬಿಡಿಸಿ ಮುಂದಿನ ದಾರಿ ಇದಾಗಿರಬೇಕೆಂದು ಸೂಚಿಸುವ ನನ್ನ ಮಾರ್ಗದರ್ಶಿಯಾಗಿ ಪ್ರತಿ ತಿಂಗಳ ಮೊದಲ ವಾರದಲ್ಲಿ ತಪ್ಪದೆ ಆತ್ಮೀಯ ಗೆಳೆಯನಂತೆ, ತಂಗಾಳಿಯ ಸಿಂಚನದಂತೆ, ಚುಮು ಚುಮು ಮಳೆಯಂತೆ 'ಹೊಸ ಮನುಷ್ಯ' ನನ್ನ ಮನೆಗೆ ಬರುತ್ತಾನೆ. ಸಂಪಾದಕ ನಾಗಭೂಷಣರ ದಿಟ್ಟ–ನಿಷ್ಠುರ, ನಿಷ್ಪಕ್ಷಪಾತ ಸಂಪಾದಕೀಯ, ವರ್ತಮಾನದ ತುರ್ತಿಗೆ ನಮ್ಮನ್ನು ಅಣಿಗೊಳಿಸಲು ರೂಪಿಸುವ ಸಮಕಾಲಿನ ಪುಟಗಳು, ಆಗಿ ಹೋದ ಸಮಾಜವಾದಿಗಳ ಕುರಿತ ಒಳನೋಟಗಳುಳ್ಳ ಪರಿಚಯಾತ್ಮಕ ಲೇಖನಗಳು, ನಮ್ಮ ಕಾಲದಲ್ಲೇ ಬೆಳೆದು ಜನರನ್ನು ವಿಚಾರವಂತರಾಗಿ ಮಾಡಿದ ದಲಿತ ಹೋರಾಟದ ನೆನೆಪಿನ ಮಾಲೆ, ಸಂದರ್ಶನಗಳು, ಪುಸ್ತಕ ಪರಿಚಯ, ಸಂಗೀತ, ನಾಟಕ, ಪ್ರಗತಿಪರ ಸಭೆಗಳ ಕುರಿತು ವಿಶ್ಲೇಷಣೆಗಳು ನಮ್ಮನ್ನು ತಿಂಗಳು ತಿಂಗಳೂ ಸ್ಫೂರ್ತಿ ತುಂಬಿತ್ತಾ, ನಾವು ಸಿನಿಕರಾಗದಂತೆ ಕ್ರಿಯಾತ್ಮಕರಾಗುವಂತೆ, ಮಾನವಿಯರಾಗಿರುವಂತೆ ಬದುಕಿನ ಆಸೆಯನ್ನು ಹೆಚ್ಚಿಸುತ್ತದೆ. ಪ್ರಚಾರದ ಅಬ್ಬರದಲ್ಲಿ, ಟಿ.ವಿ.ಯ ಮೋಹಕತೆಯಲ್ಲಿ, ರದ್ದಿ ಪತ್ರಿಕೆಗಳ ಕಾರುಬಾರಲ್ಲಿ ನಾವು ಮುಳುಗಿ ಹೋಗದಂತೆ ತಡೆಯುತ್ತದೆ. ಸಮಕಾಲೀನ ಅಂಕಣ ಕನ್ನಡದ ಅಪೂರ್ವ ಲೇಖನ ಮಾಲೆ. ಇದರ ಮುಖ್ಯ ಭಾಗಗಳನ್ನ ಪುಸ್ತಕವಾಗಿ ಪ್ರಕಟಿಸಿ ಎಂದು ವಿನಂತಿಸುತ್ತೇನೆ. ನಮ್ಮ ಪತ್ರಿಕೆಗೆ ಐದನೇ ವರ್ಷದ ಹುಟ್ಟುಹಬ್ಬದ ಪ್ರೀತಿ ಪೂರ್ವಕ ಶುಭಾಶಯಗಳು!

**–ಡಿ.ಪಿ. ಸುರೇಶ್‌ಕುಮಾರ್,** ದೇವರ ಹೊಸಳ್ಳಿ (ನೆಲಮಂಗಲ ತಾ.)

### ಸ್ವಸ್ಥ ಸಮಾಜದ ಮುನ್ನುಡಿ ಬರೆಯುತ್ತಿರುವ ಪತ್ರಿಕೆ

ಆರಂಭದಿಂದಲೂ ಸಮಕಾಲೀನ ವಿಚಾರಗಳಲ್ಲಿನ ಅಂತರ್ಗತ ವಿಷಯಾವಲೋಕನ, ಸೂಕ್ತ ಸ್ಪಂದನದಿಂದ ಕೂಡಿದ ಸಮಯೋಚಿತ ಸಂಪಾದಕೀಯ ಲೇಖನಗಳು ಗಮನ ಸೆಳೆಯುತ್ತಿವೆ. ಸಮಾಜದ ಅನೇಕ ಹಿರಿ–ಕಿರಿಯ ಲೇಖಕರುಗಳು ಉಮೇದಿನಿಂದಲೇ ಲೇಖನಿ ಕೈಗೆತ್ತಿಕೊಂಡು ಪತ್ರಿಕೆಯ ಮೂಲಕ ವೈಚಾರಿಕ ಹೂರಣ ಕಲೆಸುತ್ತಿರುವುದು ಆಶಾದಾಯಕವೇ. ಒಟ್ಟಾರೆ ಸ್ವಸ್ಥ ಸಮಾಜದ ಮುನ್ನುಡಿ ಬರೆಯುತ್ತಿರುವ ಹೊಸ ಮನುಷ್ಯ'ನಿಗೆ ಹುಟ್ಟುಹಬ್ಬದ ಅಭಿನಂದನೆ.

**–ಹೊಸಕೊಪ್ಪ ಶ್ರೀಧರ್,** ಆಲೂರು–ಹೊಸಕೊಪ್ಪ (ತೀರ್ಥಹಳ್ಳಿ ತಾ.)

'ಹೊಸ ಮನುಷ್ಯ' ಪತ್ರಿಕೆಗೆ

ಐದನೇ ವರ್ಷಕ್ಕೆ ಕಾಲಿಡುತ್ತಿರುವ ಶುಭ ಸಂದರ್ಭದಲ್ಲಿ

**ಹುಟ್ಟುಹಬ್ಬದ ಶುಭಾಶಯಗಳು**

**ಹೋಮ ಮಾಡುವವರ ಕಂಡೆ**

**ಹೊಗೆ ನಿಲ್ಲಿಸುವವರನಾರನೂ ಕಾಣೆ**

**– ಅಲ್ಲಮ ಪ್ರಭು**



**ಸಿ.ಎಂ. ಅಂಗಡಿ**

ಸುಪ್ರೀಂ ಕೋರ್ಟ್ ವಕೀಲರು

ನಂ.೪, ಲಾಯರ್ಸ್ ಚೇಂಬರ್ಸ್(ಓಲ್ಡ್ ಬ್ಲಾಕ್)

ಸುಪ್ರೀಂ ಕೋರ್ಟ್

ನ್ಯೂ ಡೆಲ್ಲಿ–೧೧೦ ೦೦೧

**ಮನೆ:**

**ಫ್ಲ್ಯಾಟ್ ನಂ. 604, 2ನೇ ಬ್ಲಾಕ್**

**6ನೇ ಮಹಡಿ,, ಕೀರ್ತಿ ಅಪಾರ್ಟ್‌ಮೆಂಟ್ಸ್**

**ಸಮಾಚಾರ್ ಅಫಾರ್ಟ್‌ಮೆಂಟ್ಸ್ ಸಮೀಪ**

**ಮಯೂರವಿಹಾರ(ಫೇಸ್-1) ಎಕ್ಸ್‌ಟೆನ್ಷನ್**

**ದೆಹಲಿ-110 091**

ದೂರವಾಣಿ: 09811118334

## ಪತ್ರಿಕೆ: ಒಂದು ವರ್ಷದ ಹಿನ್ನೋಟ: ಸಮಕಾಲೀನ ಸಮಸ್ಯೆಗಳೊಡನೆ ನಿಷ್ಠುರ ಮುಖಾಮುಖಿ

–ತಾರಿಣಿ ಶುಭದಾಯಿನಿ




**ಹೊ**ಸ ಮನುಷ್ಯಕ್ಕೀಗ ಐದರ ಹರಯ. ದೃಢವಾಗಿ ಪಾದ ಊರಿ ನಡೆಯುವ ಆತ್ಮವಿಶ್ವಾಸವನ್ನು ಅದೀಗ ತೋರಿಸುತ್ತಿದೆ. ಲೋಹಿಯಾರ 'ಮ್ಯಾನ್‌ಕೈಂಡ್' ಪತ್ರಿಕೆಯ ಮಾದರಿಯಲ್ಲಿ ಆರಂಭವಾದ ಈ ಪತ್ರಿಕೆ ತನ್ನ ಆಶಯ ಹಾಗು ಆಕೃತಿಗಳಲ್ಲಿ ಸಮಾಜವಾದವನ್ನು ಇಟ್ಟುಕೊಂಡಿದೆ. ಸಮಾಜವಾದವು ಸಮಬಾಳ್ವೆ ಹಾಗು ಸಮಾನತೆಯನ್ನು ರಾಜಕೀಯ ಹಾಗು ಸಾಂಸ್ಕೃತಿಕ ನೆಲೆಗಳಲ್ಲಿ ಗುರುತಿಸಿಕೊಳ್ಳುತ್ತದೆ. ಅದರಂತೆ ಪತ್ರಿಕೆಯು ತನ್ನ ಸಮಾಜವಾದೀ ಧೋರಣೆಗನುಗುಣವಾಗಿ ರಾಜಕೀಯ ಚಿಂತನೆ, ಸಂವಾದ, ಚರ್ಚೆಗಳೊಂದಿಗೆ ಸಾಹಿತ್ಯ, ಸಂಸ್ಕೃತಿಗಳಿಗೆ ಸಮಾನವಾದ ಜಾಗ ಕೊಡುತ್ತಾ ಬಂದಿದೆ. ಈ ನಿಲುವು ಈಗ್ಗೆ ಹಿಂದಿನ ನಾಲ್ಕು ವರ್ಷಗಳಲ್ಲಿಯೂ ಮುಂದುವರೆದುಕೊಂಡು ಬಂದಿದೆ. ಇದರಲ್ಲಿ ಯಾವುದೇ ರಾಜಿಯಾಗಿಲ್ಲ. ಸಾಮಾನ್ಯವಾಗಿ ಪತ್ರಿಕೆಗಳು ಯಾವುದೋ ಒಂದು ರುಚಿಯನ್ನು ನಿರ್ಮಾಣ ಮಾಡಿ ಆನಂತರ ಅದರ ಲಾಭದ ಮೇಲೆ ನಡೆಸಲು ತೊಡಗುತ್ತವೆ. ಆದರೆ 'ಹೊಸ ಮನುಷ್ಯ'ಕ್ಕೆ ಇಂತಹ ಜಾಡ್ಯ ಅಂಟಿಲ್ಲ ಎನ್ನುವುದು ಹೆಮ್ಮೆಯ ಸಂಗತಿ. ಸಮಯಕ್ಕೆ ಸರಿಯಾಗಿ ತಲುಪುವ ಭರವಸೆ; ಅಗತ್ಯಕ್ಕಿಂತ ಹೆಚ್ಚಿನ ಚಂದಾ ಬೇಡದಿರುವುದು, ಗಟ್ಟಿ ವಿಚಾರಗಳನ್ನು ಪ್ರಸರಣ ಮಾಡುವ ಮೂಲಕ ತನ್ನ ಅಥೆಂಟಿಸಿಟಿಯನ್ನು ಕಾಪಾಡಿಕೊಂಡು ಐದನೇ ವರ್ಷಕ್ಕೆ ಕಾಲಿಡುತ್ತಿದೆ ಈ ಪತ್ರಿಕೆ.

ಪ್ರತಿ ವರ್ಷದಂತೆ ಪತ್ರಿಕೆ ಕಳೆದ ವರ್ಷವೂ ಆಗಸ್ಟ್‌ನಲ್ಲಿ ವಿಶೇಷಾಂಕವನ್ನು ತಂದಿತ್ತು. ಆ ಸಂಚಿಕೆ ಅನಂತಮೂರ್ತಿಯವರೊಡನೆಯ ಸಂದರ್ಶನವನ್ನೊಳಗೊಂಡಿದ್ದು, ಅದಕ್ಕೆ ಅವರ ಕೊನೆಯ ಸಂದರ್ಶನವನ್ನ ಹೊತ್ತ ಸಂಚಿಕೆ ಎಂಬ ಚಾರಿತ್ರಿಕ ಮಹತ್ವವೂ ಲಭ್ಯವಾಯಿತು. ಅನಂತಮೂರ್ತಿ ತಮ್ಮ ಕೊನೆಯ ದಿನಗಳಲ್ಲಿ ಮೋದಿಯ 'ರಾಜಕೀಯ'ದಲ್ಲಿ ಸಿಲುಕಿದ್ದರು. ವಾದ–ವಿವಾದಗಳು ಅವರನ್ನು ಸುತ್ತುವರೆದಿದ್ದವು. ಇವೆಲ್ಲ ಘಟಿಸುತ್ತಿರುವುದು ಅನಂತಮೂರ್ತಿಯವರ ದ್ವಂದ್ವ ನಿಲುವುಗಳಿಂದ ಇರಬಹುದೇ ಎಂಬ ಸಂದೇಹದೊಂದಿಗೆ ಆರಂಭವಾದ ಸಂದರ್ಶನ ನಿಷ್ಠುರವಾಗಿ ಕೆಲವು ಪ್ರಶ್ನೆಗಳನ್ನು ಎಸೆದಿದೆ. ಅದರಲ್ಲಿ ನವ್ಯ ಮತ್ತು ನವೋದಯ ಸಾಹಿತ್ಯದ ಬಗೆಗೆ ಅವರ ಬದಲಾದ ನಿಲುವು, ರಾಜಕೀಯ ಎಡಬಿಡಂಗಿತನ ಎಲ್ಲವೂ ಇದೆ. ಪ್ರಶ್ನೆಗಳು ಅನಂತಮೂರ್ತಿಯವರನ್ನು ತಬ್ಬಿಬ್ಬುಗೊಳಿಸಿದರೂ ಅವರು 'ಹೊಸ ಮನುಷ್ಯ'ದೊಂದಿಗೆ ಮಾತನಾಡುವಾಗ ಯಾವುದೇ ಮುಖವಾಡಗಳಿಲ್ಲದೆ ಮಾತನಾಡಿದ್ದಾರೆ ಎನ್ನುವುದು ವಿಶೇಷ.

ಕಳೆದ ವರ್ಷದ ಕಡೆ ಹಿನ್ನೋಟ ಹರಿಸಿದರೆ ರಾಜಕೀಯವಾಗಿ ಹೊಸಗಾಲದ ಶುದ್ಧ ರಾಜಕಾರಣಕ್ಕೆ ಅವಕಾಶ ನೀಡಬಹುದೆಂಬ ಆಸೆ ಹುಟ್ಟಿಸಿದ ಆಪ್‌ನದೇ ಸುದ್ದಿ. ಸ್ವತ: ಪತ್ರಿಕೆ ಆಪ್ ಜೊತೆ ಗುರುತಿಸಿಕೊಂಡಿತ್ತು. ಆದರೆ, ಆದರ್ಶ ಹಾಗು ರಾಜಕೀಯಗಳು ಬೇರೆ ಬೇರೆ ಎನ್ನುವುದನ್ನು ಆಪ್ ಕೂಡ ಬಿಂಬಿಸಿ ನಿರಾಸೆ ಉಂಟು ಮಾಡಿದ್ದನ್ನು ಸಂಪಾದಕರ ಟಿಪ್ಪಣಿಗಳಲ್ಲಿ ಕಾಣಬಹುದು. ವರ್ಷದ ಕೊನೆಯ ಸಂಚಿಕೆಯಲ್ಲಿ(ಜುಲೈ೨೦೧೫)ರಂದು ಬಂದ ಆಪ್‌ನ ಬಳಗದಲ್ಲಿದ್ದು ಹೊರದಬ್ಬಿಸಿಕೊಂಡ ರಾಜಕೀಯ ಚಿಂತಕ ಯೋಗೇಂದ್ರ ಯಾದವ್ ಅವರ ಸ್ವರಾಜ್ ಅಭಿಯಾನ ಕುರಿತ ಲೇಖನಗಳಲ್ಲಿ, ಈ ಅಭಿಯಾನವು ನಿಜಕ್ಕೂ ಸ್ವರಾಜ್ ಚಿಂತನೆಯನ್ನು ಭಾವಿಸಿ ಮೂಡುತ್ತಿದೆಯೇ ಎಂಬ ಗಂಭೀರ ಪ್ರಶ್ನೆಯನ್ನು ಎತ್ತಲಾಗಿದ್ದು, ಇದೆಲ್ಲ ಕಾರ್ಪೋರೇಟ್ ಬುದ್ಧಿವಂತನೊಬ್ಬನ 'ಸುಂದರ'ವಾದ ಮಂಡನೆಯಾಗಿಬಿಟ್ಟಿದೆಯೇ ಎಂಬ ಸಂದೇಹವನ್ನು ರಾಜಾರಾಂ ತೋಳ್ಪಾಡಿ ವ್ಯಕ್ತ ಪಡಿಸಿದ್ದಾರೆ. 'ಸರ್ವೋದಯ ಕರ್ನಾಟಕ' ಪಕ್ಷ ಹುಟ್ಟುಹಾಕಿದ ದೇವನೂರು ಅವರನ್ನು ಯೋಗೇಂದ್ರ ಅವರ ಸ್ವರಾಜ್ ಸಂವಾದದಲ್ಲಿ ಪಾಲ್ಗೊಂಡ ಬಗ್ಗೆ ಮಾತನಾಡಿಸಿದಾಗ ಅವರು ಸಹ ಮೇಲ್‌ಸ್ತರದಲ್ಲಿ ಉತ್ತರಿಸಿದ್ದಾರೆ ಎನ್ನಿಸುತ್ತದೆ ಎನ್ನುವುದನ್ನು ಪತ್ರಿಕೆಯ ಸಂಪಾದಕರು ಸೂಚಿಸಿದ್ದಾರೆ. ಹೊಸ ಮನುಷ್ಯದ ರೀತಿಯೇ ಇದು. ಅದು ಯಾರನ್ನೂ ಓಲೈಸದೆ, ನೈತಿಕವಾಗಿ ಟೀಕಿಸುವ ಸಂದರ್ಭ ಬಂದರೆ ನಿಷ್ಠುರವಾಗಿಯೇ ನಿಲ್ಲುತ್ತದೆ ಎನ್ನುವುದನ್ನು ಅನಂತಮೂರ್ತಿ ಹಾಗು ದೇವನೂರು ಇಬ್ಬರ ವಿಷಯದಲ್ಲೂ ಸಾಬೀತು ಪಡಿಸಿದೆ.

'ಸಮಕಾಲೀನ' ಎಂಬ ತಲೆಬರಹದಡಿ ಬರುವ ಲೇಖನಗಳು/ ಸಂವಾದಗಳು ಸಮಕಾಲೀನ ಸಮಾಜದ ಚರ್ಚೆಗಳನ್ನು ಎತ್ತಿಕೊಳ್ಳುತ್ತವೆ. ಇಲ್ಲಿ ಜ್ವಲಂತ ಪ್ರಶ್ನೆಗಳನ್ನು ಎತ್ತಿಕೊಳ್ಳುವುದರ ಹಿಂದೆ 'ಚರ್ಚೆಗಾಗಿ ಚರ್ಚೆ' ಎಂಬ ತರ್ಕಹೋರಾಟ ಮಾತ್ರ ಇರದೆ ಸಮಸ್ಯೆಯನ್ನು ಭಾವಿಸಿ ಆಲೋಚಿಸಲಾಗುತ್ತದೆ. ಹಾಗಾಗಿ ಬೌದ್ಧಿಕವಾಗಿ ಪ್ರಸ್ತುತಗೊಳ್ಳುವುದು ಮಾತ್ರವೇ ಪತ್ರಿಕೆಯ ನಿಲುವು ಅಲ್ಲ ಎನ್ನಬಹುದು. ಈ ಅಂಕಣದಲ್ಲಿ ಮತ್ತೆ ಮತ್ತೆ ಚರ್ಚೆಯಾಗಿರುವ ಸಂಗತಿಗಳೆಂದರೆ ಗಾಂಧಿ ಮತ್ತು ಅಂಬೇಡ್ಕರ್ ವಿಚಾರಗಳು. ಅಕ್ಟೋಬರ್ ಸಂಚಿಕೆ ಗಾಂಧಿಯವರ 'ಯಂತ್ರದರ್ಶನ'ದ ಬಗ್ಗೆ ಸಂವಾದಕ್ಕೆ ಅವಕಾಶವಿತ್ತರೆ ಮತ್ತೆ ಜುಲೈ ತಿಂಗಳಿನಲ್ಲಿ ಯೋಗೇಂದ್ರ ಯಾದವ್ ಅವರು ಶುರು ಮಾಡಿದ ಗಾಂಧಿಯವರ ಹಿಂದ್ ಸ್ವರಾಜ್ ಪರಿಕಲ್ಪನೆಯನ್ನು ವಿಶ್ಲೇಷಣೆಗೆತ್ತಿಕೊಳ್ಳಲಾಗಿದೆ. ಈ ಇಬ್ಬರು ಚಿಂತಕರು ಇಲ್ಲಿ ಪುನಾರಾವರ್ತನೆಯಾಗುವುದಕ್ಕೆ ಕಾರಣವೇನು ಎಂದು ಕೇಳಿಕೊಂಡರೆ ಮೇಲಿಂದ ಮೇಲೆ ಕಾಡುವ ಪ್ರಶ್ನೆಗಳಾದ ಜಾತಿ ಮತ್ತು ಆಧುನಿಕತೆಯಿಂದ ಮುಂದೆ ಹೆಜ್ಜೆಯಿಟ್ಟು ಇನ್ನೊಂದು ಬಗೆಯ ಬಂಡವಾಳಶಾಹಿಯಾಗುತ್ತಿರುವ ಸಮಾಜಗಳನ್ನು ಈ ಇಬ್ಬರು ಚಿಂತಕರು ಎದುರಿಸಿದ ರೀತಿಯ ಜೊತೆಯಿಟ್ಟು ನೋಡಬೇಕಾದ ಅನಿವಾರ್ಯತೆಯನ್ನು ಹೇಳುತ್ತವೆ.


ಇಂದು ಗಾಂಧಿ ಮತ್ತು ಅಂಬೇಡ್ಕರ್ ಅವರನ್ನು ಹೆಸರಿಸುವುದು, ಅವರ ವಿಚಾರಗಳನ್ನು ಸ್ಮರಿಸುವುದು, ಅವರು ಹೇಗೆ ಪ್ರಸ್ತುತವಾಗುತ್ತಾರೆ ಎನ್ನುವುದರ ಬಗ್ಗೆ ಚರ್ಚಿಸುವುದು ಕ್ಲೀಷೆಯ ಸಂಗತಿಯಾಗಿದೆ ಎನ್ನುವುದನ್ನು ಸಂಪಾದಕರು ತಮ್ಮ ಟಿಪ್ಪಣಿಯಲ್ಲಿ ಹೇಳಿದ್ದಾರೆ. ಈ ಇಬ್ಬರ ಚಿಂತನೆಗಳನ್ನು ಹೊಸಗಾಲಕ್ಕೆ ಬೇಕಾದ ಹಾಗೆ ಪ್ರಸ್ತುತಗೊಳಿಸಿಕೊಳ್ಳುವ ಬಗ್ಗೆ ಇಲ್ಲಿನ ಸಂವಾದಗಳು ಗಮನ ಹರಿಸಿವೆ. ಅದರಲ್ಲಿ ಒಂದು ಮುಖ್ಯವಾದ ಲೇಖನ ಎಂದರೆ ಎಚ್.ಎ.ಶಂಕರನಾರಾಯಣ ಅವರ 'ಗಾಂಧಿಯ ಯಂತ್ರದರ್ಶನ'. ಬಂಡವಾಳಶಾಹಿ ವ್ಯವಸ್ಥೆ ಹೇಗೆ ಯಂತ್ರ ಉತ್ಪಾದನೆಯಿಂದ ತಾಂತ್ರಿಕ ಜ್ಞಾನವಾಗುತ್ತಲಿದೆ ಎನ್ನುವ ಪಲ್ಲಟವನ್ನು ವಿವರಿಸುತ್ತದೆ. ಈ ಹೊಸ ವ್ಯವಸ್ಥೆಯಲ್ಲಿ ವಸ್ತುಗಳೀಗ 'ಅನ್ವಯ' ಸಾಧನಗಳಾಗಿ ಪರಿವರ್ತನೆಗೊಂಡಿವೆ ಎನ್ನುವ ಶಂಕರನಾರಾಯಣ ಅವರು ಜ್ಞಾನ ಉತ್ಪಾದನೆಯು ಜ್ಞಾನಕ್ಕೆ ಮಾತ್ರ ಆದ್ಯತೆ ಕೊಟ್ಟು ವಿವೇಕಕ್ಕೆ ಆಸ್ಪದ ನೀಡದೆ ಇರುವುದೇ ಇಂದಿನ ನಮ್ಮ ಅನೇಕ ಸಮಸ್ಯೆಗಳಿಗೆ ಕಾರಣ ಎಂದು ವಿಶ್ಲೇಷಿಸುತ್ತಾರೆ. ಗಾಂಧಿ ಆಧುನಿಕತೆಯನ್ನು ಯಂತ್ರೀಕರಣಕ್ಕೆ















ಪರ್ಯಾಯವಾಗಿ ಚರಕವನ್ನು ರೂಪಿಸಿದ್ದನ್ನು ಪ್ರಸನ್ನ ಅವರು ನೆನೆದಿದ್ದಾರೆ. ಕಳೆದ ವರ್ಷದ ಸಂಚಿಕೆಗಳಲ್ಲಿ ಆಧುನಿಕತೆಯು ಹುಟ್ಟುಹಾಕಿದ ಅಭಿವೃದ್ಧಿ ಕಲ್ಪನೆಯನ್ನು ಒರೆಹಚ್ಚುವ ಲೇಖನಗಳು ಕಾಕತಾಳೀಯವಾಗಿರಲಾರದು. ನಾಗೇಶ್ ಹೆಗಡೆ ಅವರು ಅಭಿವೃದ್ಧಿಯ ಕುರೂಪಗಳನ್ನು ವಿಜ್ಞಾನದ ದೃಷ್ಟಿಯಿಂದ ಅವಲೋಕಿಸಿದರೆ, ರಾಜೇಂದ್ರ ಚೆನ್ನಿಯವರು ಅಭಿವೃದ್ಧಿ ಮೀಮಾಂಸೆಗಳು ಹೇಗೆ ದುರಂತಗಳನ್ನೂ ಪ್ರವಾಸೀ ಆಕರ್ಷಣೆಯನ್ನಾಗಿಸುವ ವಿಕಾರಕ್ಕೆ ತಿರುಗುತ್ತಿದೆ ಎನ್ನುವುದನ್ನು ವಿವರಿಸಿದ್ದಾರೆ. ಪ್ರಿಯದರ್ಶಿನಿ ಸೇನ್ ಅವರು ಅಭಿವೃದ್ಧಿಯ ದುರಂತಕ್ಕೆ ಜೀವಂತ ಉದಾಹರಣೆಯಾದ ಸೋನ್‌ಭದ್ರಾದ ಚಿತ್ರಣವನ್ನು ನೀಡುತ್ತಾರೆ. ಇದೇ ವಿಷಯವು ಮಾರ್ಚಿ ತಿಂಗಳಿನಲ್ಲಿ ಬಂದ 'ಜಾಗತೀಕರಣ ಮತ್ತು ಹೆಣ್ಣು' ಸಂವಾದದಲ್ಲಿ ತೆಳುವಾಗಿ ಚರ್ಚೆಯಾಗಿದೆ.

ಅಂಬೇಡ್ಕರ್ ಅವರ ದಲಿತ ಮೀಮಾಂಸೆಯನ್ನು ಜಾತಿ, ಸಂಸ್ಕೃತಿ ಮತ್ತು ಆರ್ಥಿಕ ಮೀಮಾಂಸೆಗಳ ಆಯಾಮಗಳಲ್ಲಿ ಗಮನಿಸಬಹುದು. ಇದರಾಚೆ ಹೇಗೆ ಅಂಬೇಡ್ಕರ್ ಇಂದು ಪ್ರಸ್ತುತಗೊಳ್ಳುತ್ತಾರೆ ಎನ್ನುವುದನ್ನು ಡಿಸೆಂಬರ್ ಹಾಗು ಏಪ್ರಿಲ್ ತಿಂಗಳ ಸಂಚಿಕೆಗಳಲ್ಲಿ ಚರ್ಚಿಸಲಾಗಿದೆ. ಚೆನ್ನಿಯವರ ವಿಶ್ಲೇಷಣೆಯಲ್ಲಿ ಕರ್ನಾಟಕದಲ್ಲಿ ನಿಜವಾದ ಅಂಬೇಡ್ಕರ್‌ವಾದವಾಗಲೀ ಅಂಬೇಡ್ಕರ್‌ವಾದಿಗಳಾಗಲೀ ಇಲ್ಲ ಎಂಬ ಅರ್ಥ ಹೊಮ್ಮಿದೆ. ಇದು ಸವಾಲಿನ ಸಂಗತಿ. ಇದೇ ಸಂಗತಿ ಏಪ್ರಿಲ್(೨೦೧೫)ರ ಸಂಚಿಕೆಯಲ್ಲಿಯೂ ಮುಂದುವರೆದಿದ್ದು ದಲಿತ ರಾಜಕಾರಣ, ಸಾಂಸ್ಕೃತಿಕವಾಗಿ, ರಾಜಕೀಯವಾಗಿ(ಓಟ್ ಬ್ಯಾಂಕ್ ರಾಜಕಾರಣ) ಹೇಗೆ ಪ್ರತಿಫಲಿಸುತ್ತಿದೆ ಎನ್ನುವುದನ್ನು ಅಂಬೇಡ್ಕರೋತ್ತರ ಚಿಂತನೆಗಳಲ್ಲಿ ಗುರುತಿಸಬೇಕಾಗುತ್ತದೆ. ಹರ್ಷ ಮಂದರ್ ಹಾಗು ವಾಸುದೇವ ಬೆಳ್ಳೆ ಅವರ ಲೇಖನಗಳು ಈ ದೃಷ್ಟಿಯಿಂದ ಉತ್ತಮ ಎನ್ನಿಸುತ್ತವೆ. ಸಂವಿಧಾನದ ಪ್ರಸ್ತುತತೆಯನ್ನು ಎತ್ತಿಕೊಳ್ಳುವ ರವಿವರ್ಮಕುಮಾರ್ ಸಮನ್ವಯ ತತ್ವದ ಸಂಕಟಗಳನ್ನು ಕುರಿತು ವಿಶ್ಲೇಷಿಸುತ್ತಾರೆ.

ಪ್ರಾಯಶ: ಬಂಡವಾಳಶಾಹಿ ಸಮಾಜದ ಲಕ್ಷಣಗಳನ್ನು ಮೈಗೂಡಿಸಿಕೊಳ್ಳುತ್ತಿರುವ ಕನ್ನಡ ಸಮುದಾಯಗಳು ತಮ್ಮ ಭಾಷೆಯನ್ನು ಕಳೆದುಕೊಳ್ಳುತ್ತಿರುವ ಬಗ್ಗೆ ಇರುವ ಚರ್ಚೆ ಕೂಡ ಅಭಿವೃದ್ಧಿ ಮೀಮಾಂಸೆಯ ಭಾಗವೇ. ಏಕೆಂದರೆ ಕನ್ನಡ ಅನ್ನದ ಭಾಷೆಯಾಗಲಾರದೆಂಬ ಅಭದ್ರ ಭಾವನೆಯೇ ಇಂಗ್ಲಿಷ್ ಮಾಧ್ಯಮದ ಶಿಕ್ಷಣದತ್ತ ಮಧ್ಯಮವರ್ಗ ಜಾರುತ್ತಿರುವುದು. ಇದರ ಬಗ್ಗೆ ಇರುವ ಕೆಲವು ಮಿಥ್‌ಗಳನ್ನು ಎಚ್.ಎಸ್.ಆರ್ ಅವರು ತೋರಿಸಿದ್ದಾರೆ. ಅವಿನಾಶ್ ಹಾಗು ಎಸ್.ಮಂಜುನಾಥ್ ಅವರ ಲೇಖನಗಳು ಸ್ವಾನುಭವದ ಪ್ರತಿಕ್ರಿಯೆಯಾಗಿವೆ. ಚಂಪಾ ಅವರ ವಿಚಾರಗಳಲ್ಲಿ ಹೊಸತೇನೂ ಕಾಣಲಿಲ್ಲ.

ಕಳೆದ ವರ್ಷದಲ್ಲಿ ಪ್ರಾರಂಭವಾದ ಯುವಸಮಾಜವಾದಿ ಚಿಂತನ ವೇದಿಕೆ ಎಂಬ ಅಂಕಣವು ಹೊಸ ತಲೆಮಾರಿನವರ ಅಭಿವ್ಯಕ್ತಿಗೆ ಆದ್ಯತೆ ನೀಡಿದೆ. ಇಲ್ಲಿ ಯುವ ಚಿಂತಕರಿಗೆ ಕಾಡುವ ವಿಷಯಗಳೆಂದರೆ ಜಾತಿ ಮತ್ತು ಅಭಿವೃದ್ಧಿಯ ರೀತಿ. ಇದರಲ್ಲಿ ಗಮನ ಸೆಳೆಯುವುದು ಸುಶಿ ಕಾಡನಕುಪ್ಪೆ ಅವರ 'ಮೋದಿಯವರ ಸ್ಮಾರ್ಟ್ ನಗರಗಳೆಂಬ ದು:ಸ್ವಪ್ನಗಳು' ಎನ್ನುವ ಬರಹ. ಅಭಿವೃದ್ಧಿಯ ಹಿಂದೆ ಓಡಿದ ಚೀನಾ ಸಾಕಷ್ಟು ಸ್ಮಾರ್ಟ್ ನಗರಗಳನ್ನು ನಿರ್ಮಾಣ ಮಾಡಿತು. ಆದರೆ ಅವು ನಿರ್ಜನವಾಗಿ, ಯಾರೂ ಹೋಗದ ತಾಣಗಳಾಗಿ ಮಾರ್ಪಟ್ಟಿವೆ ಎಂಬ ಸತ್ಯವನ್ನು ಇಲ್ಲಿ ಸುಶಿ ಅವರು ಉದಾಹರಿಸುತ್ತಾರೆ. ಅಭಿವೃದ್ಧಿಯ ಮಾಯಾಕನ್ನಡಿಯಲ್ಲಿ ಇಂತಹ ಬಿಂಬಗಳನ್ನು ಕಂಡ ಮೇಲೂ ಅಲ್ಲಿ ಮುನ್ನುಗ್ಗುವುದು ಅಪಾಯಕಾರಿ ಎನ್ನುವ ಧ್ವನಿಯನ್ನು ಸುಶಿ ಅವರ ಈ ಲೇಖನ ಹೊಮ್ಮಿಸುತ್ತದೆ. ಅಪೂರ್ವ ಅವರ ಭೂಮಿಯ ಬಗೆಗಿನ ಲೇಖನ ಆಧ್ಯಾತ್ಮಿಕ ಆಯಾಮ ಹೊಂದಿದ್ದರೆ, ಕಾವ್ಯಶ್ರೀ ಹಾಗು ಚರಿತಾ ಅವರ ಬರಹಗಳು ಜೆಂಡರ್ ಕ್ಲೀಷೆಯನ್ನು ಪಕ್ಕಕ್ಕೆ ಸರಿಸಲು ಯತ್ನಿಸುತ್ತವೆ. ಜಾತಿ ಬಗ್ಗೆ ಸ್ವಾನುಭವಗಳನ್ನು ವಿವರಿಸುವ ಮಲ್ಲಿಕಾರ್ಜುನ ಹೊಸಪಾಳ್ಯ(ಇನ್ ಕಾಸ್ಟ್ ಔಟ್ ಕಾಸ್ಟ್) ಹಾಗು ದೊಗ್ಗಳ್ಳಿಗೌಡ್ರ  ಪುಟ್ಟರಾಜು ಅವರ ಬರಹಗಳು ಸಮಾಜವಾದಿ ನೆಲೆಯಲ್ಲಿ ಬಂದಿವೆ. ಕಲಿಕಾ ಮಾಧ್ಯಮ, ರಾಷ್ಟ್ರೀಯ ಆರೋಗ್ಯ ನೀತಿ ಇತ್ಯಾದಿಗಳ ಬಗ್ಗೆಯೂ ಯುವ ಮನಸ್ಸುಗಳು ಆಲೋಚಿಸಿವೆ.


ಇಡೀ ವರ್ಷದ ಸಂಚಿಕೆಯಲ್ಲಿ ಮುಸ್ಲಿಂ ಭಯೋತ್ಪಾದನೆ ಕುರಿತ ನಿರ್ಭಿಡೆಯ ಚರ್ಚೆಗಳಿವೆ. ನಿರ್ಭಿಡೆ ಏಕೆಂದರೆ ಮುಸ್ಲಿಂ ಪರ ಎಂದು ತೋರಿಸಿದರೆ ಪ್ರಗತಿಪರರೆಂದೂ ಮುಸ್ಲಿಮರ ಬಗ್ಗೆ ತಕರಾರು ಎತ್ತಿದರೆ ಅವರು ಮೂಲಭೂತವಾದಿಗಳೆಂದೂ ಬಿಂಬಿತವಾಗುವ ದಿನಗಳಿವು. ಇಂತಲ್ಲಿ ಸೂಕ್ಷ್ಮಸಂವೇದನೆಯ ಜನರು ದನಿಯೆತ್ತಲು ಸಾಧ್ಯವಿಲ್ಲ. ಅದನ್ನು ನಿವಾರಿಸುವಂತೆ ಪತ್ರಿಕೆ ಚರ್ಚೆಗೆ ಎಡೆಮಾಡಿಕೊಟ್ಟಿರುವುದು ಸ್ವಾಗತಾರ್ಹ.

ಕಳೆದ ವರ್ಷದ ಎಲ್ಲ ಸಂಚಿಕೆಗಳ ಬರಹಗಳು ಒಟ್ಟಾರೆಯಾಗಿ ಧ್ವನಿಸುವುದು ಆಧುನಿಕತೆ ತಂದೊಡ್ಡಿದ ಅಭಿವೃದ್ಧಿ ಮೀಮಾಂಸೆಯ ಸಂಕಟಗಳನ್ನು, ಸಂಘರ್ಷಗಳನ್ನು. ಭಾಷೆ, ಸಂಸ್ಕೃತಿ, ಸಾಹಿತ್ಯ ಎಲ್ಲದರ ಮೇಲೆ ಈ ವಿಷಯಗಳ ಪ್ರಭಾವ ಆಗಿದ್ದು ಅವುಗಳನ್ನು ಸಹ ಪರಿಶೀಲಿಸಿಕೊಳ್ಳಬೇಕಿದೆ. ಎಸ್.ಮಂಜುನಾಥ್ ಅವರ 'ಮುಕ್ಕಿದಷ್ಟೂ ದಾಹಿ ಕೆರಳಿಸುವ ಉಪ್ಪು'(ತಂತ್ರಜ್ಞಾನದ ಬಗೆಗೆ) ಲೇಖನ ಹಾಗು ಚೆನ್ನಿ ಅವರ 'ಜಾಗತೀಕರಣದ ಸಾಂಸ್ಕೃತಿಕ ಫಲಗಳು' ಲೇಖನ ಹಾಗು ಸಂಪಾದಕರು ಪ್ರಾಸಂಗಿಕವಾಗಿ ಟಿಪ್ಪಣಿಸಿರುವ ಹಲವು ಸಂಗತಿಗಳು ಈ ಸಂಗತಿಯನ್ನು ವಿವೇಚಿಸಿವೆ. ಕಳೆದ ವಿಶೇಷ ಸಂಚಿಕೆಯಲ್ಲಿ ಬಂದ ರಸೆಲ್ ಮೀನ್ಸ್ ಅವರ ಅನುವಾದಿತ ಲೇಖನವು ಬಂಡವಾಳಶಾಹಿ ಜಗತ್ತಿನ ಮೂಲಭೂತ ತಾತ್ವಿಕ ಟೀಕೆಯನ್ನು ಒಳಗೊಂಡಿದೆ. ಅತ್ಯಾಚಾರಗಳು ಅಭಿವೃದ್ಧಿಯ ಮೀಮಾಂಸೆಯ ಒಳಗೇ ಬರುವಂತವು. ಸೆಪ್ಟೆಂಬರ್ ತಿಂಗಳಿನ ಸಂವಾದದಲ್ಲಿ ಅತ್ಯಾಚಾರದ ಬಗ್ಗೆ ಟಿಪ್ಪಣಿಗಳಿವೆ. ಆದರೆ ಅವು ನಿರೀಕ್ಷಿತ ಮಟ್ಟದಲ್ಲಿ ವಿಷಯವನ್ನು ಕೊಂಡೊಯ್ದಂತಿಲ್ಲ.

ಅಭಿವೃದ್ಧಿ ಕಾಲಘಟ್ಟದ ಅವಾಂತರಗಳಿಗೆ ಪ್ರತಿಯಾಗಿ ಎಂಬಂತೆ ನಮ್ಮ ಜೊತೆಗೇ ಕೆಲವು ಸಮಾಜವಾದಿಗಳು ಪರ್ಯಾಯವಾದ ಮಾರ್ಗಗಳಲ್ಲಿ ಬದುಕುತ್ತಿದ್ದಾರೆ. ಅವರನ್ನು ಕುರಿತ ಸರಣಿ ಬರಹಗಳು(ಅಮ್ಮೆಂಬಳ ಆನಂದ, ರಾಚಪ್ಪ ಹಡಪದ್, ಸುರೇಂದ್ರ, ಎಂ.ನಾಗಪ್ಪ, ಸದಾಶಿವ ಕಾರಂತ, ಗಂಗಾಧರ ಪದಕಿ ಮುಂತಾದವರ ಬದುಕು) ಸ್ಫೂರ್ತಿದಾಯಕವಾಗಿವೆ.

ಇನ್ನು ಸಂಪಾದಕರ ಟಿಪ್ಪಣಿಗಳು ರಾಷ್ಟ್ರ ಹಾಗು ರಾಜ್ಯ ರಾಜಕಾರಣಗಳ ಬಗ್ಗೆ ಗಂಭೀರ ವಿಶ್ಲೇಷಣೆ ಮಾಡುತ್ತವೆ. ಪತ್ರಿಕೆಯ ಕೊನೆಯ ಪುಟಗಳಲ್ಲಿ ಸಾಹಿತ್ಯ–ಸಂಸ್ಕೃತಿ ಕುರಿತ ಟೀಕೆ–ಟಿಪ್ಪಣಿ ಮತ್ತು ಪುಸ್ತಕ ವಿಮರ್ಶೆಗಳಿದ್ದು ಮೇಲೆ ಹೇಳಿದ ಪತ್ರಿಕೆಯ ಬಗೆಗಿನ ಎಲ್ಲ ಮಾತುಗಳನ್ನೂ ಇವಕ್ಕೂ ಅನ್ವಯಿಸಬಹುದಾಗಿದ್ದು ಇವು ಕುತೂಹಲದ ಓದನ್ನು ಆಹ್ವಾನಿಸುವಂತಿರುತ್ತವೆ. ಇಂದಿರಾ ಕೃಷ್ಣಪ್ಪ ಅವರು ಬರೆಯುತ್ತಿರುವ ಕೃಷ್ಣಪ್ಪ ನೆನಪಿನ ಮಾಲಿಕೆ ಚೆನ್ನಾಗಿ ಬರುತ್ತಿದೆಯಾದರೂ *ಸ್ಟೇಲ್* ಆಗುತ್ತಿರುವ ಸೂಚನೆಗಳಿವೆ.

ಒಟ್ಟಾರೆ ವರ್ಷದ ಸಂಚಿಕೆಗಳು ರೂಪಿಸಿದ ಚರ್ಚೆಯನ್ನು ಹಿಂದಿರುಗಿ ನೋಡಿದರೆ ವರ್ತಮಾನಕ್ಕೆ ನಮ್ಮ ವಿಚಾರಗಳನ್ನು ಅಪ್‌ಡೇಟ್ ಮಾಡಿಕೊಳ್ಳಬೇಕಾದ ಅಗತ್ಯವನ್ನು ನೆನಪಿಸಿಕೊಡುವುದರೊಂದಿಗೆ ಅದಕ್ಕೆ ಬೇಕಾದ ಬೌದ್ಧಿಕ ಸಾಮಗ್ರಿಯನ್ನೂ ಒದಗಿಸಿಕೊಡುತ್ತವೆ.



**(ಚಿತ್ರದುರ್ಗದ ಪದವಿ ಕಾಲೇಜೊಂದರಲ್ಲಿ ಇಂಗ್ಲಿಷ್ ಅಧ್ಯಾಪಕಿಯೂ, ಪ್ರಭಾರ ಪ್ರಾಂಶುಪಾಲೆಯೂ ಆಗಿರುವ ಲೇಖಕಿ ತಾರಿಣಿ ಶುಭದಾಯಿನಿಯವರು ಕನ್ನಡದ ಭರವಸೆಯ ಕವಯಿತ್ರಿ ಹಾಗೂ ಸಾಹಿತ್ಯ ಚಿಂತಕಿಯೂ ಆಗಿದ್ದಾರೆ)**

# ನಮ್ಮ ಸಮಾಜವಾದಿಗಳು: ಸಾಹಸಮಯ ಬದುಕಿನ ಮುತ್ಸದ್ದಿ ಸಿ.ಜಿ.ಕೆ.ರೆಡ್ಡಿ

**–ಖಾದ್ರಿ. ಎಸ್. ಅಚ್ಯುತನ್**



**ದೇ**ಶಕ್ಕೆ ಸ್ವಾತಂತ್ರ್ಯ ಬರುವ ವೇಳೆಗೆ ಸರಿಯಾಗಿ ಕಾಂಗ್ರೆಸ್ಸಿನಲ್ಲಿ ಹಿರಿಯ ನಾಯಕರೆನಿಸಿದವರ ಸಂಖ್ಯೆ ಗಣನೀಯವಾಗಿ ತಗ್ಗಿತ್ತು. ಆದರೆ ಹೋರಾಟದ ಕೆಚ್ಚಿನ ಯುವನಾಯಕರ ದಂಡೇ ಸಮಾಜವಾದಿ ಆಂದೋಳನದಲ್ಲಿ ಕ್ರಿಯಾಶೀಲವಾಗಿತ್ತು. ಜೆ.ಪಿ., ಆಚಾರ್ಯ ನರೇಂದ್ರದೇವ, ರಾಮಮನೋಹರಲೋಹಿಯಾ, ಪಟವರ್ಧನ್ ಸಹೋದರರು ಅಶೋಕ್‌ಮೆಹ್ತಾ, ಎಸ್.ಎಂ. ಜೋಶಿ ತರುಣ ಸಮಾಜವಾದಿಗಳಿಗೆ ಸ್ಫೂರ್ತಿಯ ಸೆಲೆಯಾಗಿದ್ದರು. ಸಮಾಜವಾದಿ ಆಂದೋಲನ ಮೊದಲನೆಯ ಸಾರ್ವತ್ರಿಕ ಚುನಾವಣೆಯ ನಂತರ ಕುಸಿಯಲಾರಂಭಿಸಿತಾದರೂ ಎರಡನೇ ಸಾಲಿನ ಸಮಾಜವಾದಿ ಕಟ್ಟಾಳುಗಳ ಕೊರತೆ ಏನಿರಲಿಲ್ಲ. ಅವರ ಪೈಕಿ ಮಧುದಂಡವತೆ, ರಬಿರೇ, ಮಧುಲಿಮೆಯೆ, ಜಾರ್ಜ್‌ಫರ್ನಾಂಡೀಸ್ ಹಾಗೂ ಸಿ.ಜಿ.ಕೆ ರೆಡ್ಡಿ ಅವರ ಹೆಸರುಗಳು ಇಂದಿಗೂ ನೆನಪಿನಲ್ಲಿ ಹಸಿರಾಗಿದೆ.

೪೦ ವರ್ಷಗಳ ಹಿಂದೆ ದೇಶ ಇಂದಿರಾಗಾಂಧಿ ಅವರ ತುರ್ತುಪರಿಸ್ಥಿತಿ ಘೋಷಣೆಯಿಂದ ಸ್ವಾತಂತ್ರ್ಯವನ್ನು ಸ್ವಲ್ಪಕಾಲ ಕಳೆದುಕೊಂಡಿತ್ತು. ಆಗ ಭೂಗತರಾಗಿ ಬಂಡಾಯಕ್ಕೆ ಹಕ್ಕು ಹೂಡಿ ಜಾರ್ಜ್‌ಫರ್ನಾಂಡೀಸ್ ಅವರಿಗೆ ಸಾಥ್ ನೀಡಿದವರೆಂದರೆ ಸಿ.ಜಿ.ಕೆ. ರೆಡ್ಡಿಯವರು. ೨೫ನೇ ವಯಸ್ಸಿನಲ್ಲಿ ಸುಭಾಷ್ ಚಂದ್ರಬೋಸ್‌ರ ಇಂಡಿಯನ್ ನ್ಯಾಷನಲ್ ಆರ್ಮಿ ಸೇರಿ ಬ್ರಿಟಿಷ್ ಪ್ರಭುತ್ವದ ವಿರುದ್ಧ ತೋರಿದ್ದ ಕೆಚ್ಚನ್ನು ಅವರು ತಮ್ಮ ೫೪ನೇ ವಯಸ್ಸಿನಲ್ಲಿ ಮತ್ತೆ ಇಂದಿರಾರ ಸರ್ವಾಧಿಕಾರದ ವಿರುದ್ಧ ತೋರಿದರು.

ಈ ಅಗ್ರಗಣ್ಯ ಸಮಾಜವಾದಿಯ ಬದುಕು ಮತ್ತು ವ್ಯಕ್ತಿತ್ವ ಬಲು ರೋಚಕ. ೧೯೬೫ರ ಮೇ ತಿಂಗಳಲ್ಲಿ ಉದ್ಯೋಗ ಅರಸಿಕೊಂಡು ಬೆಂಗಳೂರಿಗೆ ಬಂದಾಗ ಈ ಲೇಖಕನಿಗೆ ಸಮಾಜವಾದಿ ಬಾಸು ಕೃಷ್ಣಮೂರ್ತಿಯವರು ತಡವಾಗಿ ಮದುವೆಯಾದ ಸಮಾರಂಭದಲ್ಲಿ ಸಿ.ಜಿ.ಕೆ.ರೆಡ್ಡಿಯವರನ್ನು ನೋಡುವ ಅವಕಾಶ ದೊರಕಿತು. ಈ ಸಿ. ಗೋಪಾಲಕೃಷ್ಣಮೂರ್ತಿರೆಡ್ಡಿ ಅವರ ಜನನ ಜನವರಿ ೧೨, ೧೯೨೧ರಂದು ಆಂಧ್ರಪ್ರದೇಶದ ಚಿತ್ತೂರು ಜಿಲ್ಲೆಯ ಕಟಮಂಚಿಯಲ್ಲಿ. ಪ್ರೌಢಶಾಲೆ ಶಿಕ್ಷಣ ಚಿತ್ತೂರಿನಲ್ಲಿ ನಂತರ ಮದರಾಸ್ ಕಾಲೇಜಿಗೆ ಸೇರ್ಪಡೆ. ಸೋದರ, ಸೋದರಿಯರಲ್ಲೆಲ್ಲಾ ಕಿರಿಯ. ಆದರೆ ಅವರೆಲ್ಲರನ್ನೂ ಮೀರಿಸಿದ ಪ್ರತಿಭೆ. ಹುಟ್ಟು ಬಂಡಾಯಗಾರ. ಏಕಾಂತಪ್ರಿಯ. ಸಂಪ್ರದಾಯ, ಕಂದಾಚಾರ, ಗೊಡ್ಡುನಿಯಮಗಳ ವಿರುದ್ಧ ಸಿಡಿದೇಳುವ ಪ್ರವೃತ್ತಿ. 'ಹದಿವಯಸ್ಸಿಗೆ ಮುನ್ನವೇ ದೇವರಲ್ಲಿ ನಂಬಿಕೆಯನ್ನು ತೊರೆದಿದ್ದೆ. ಅದೇ ಕಾಲದಲ್ಲಿ ಬ್ರಿಟಿಷ್ ವಿರೋಧಿಯಾದೆ. ಎಲ್ಲ ರೂಪದ ಅಧಿಕಾರಶಾಹಿಯನ್ನು ದ್ವೇಷಿಸತೊಡಗಿದೆ'. ಎಂದು 'ಬರೋಡ ಡೈನಮೈಟ್ ಸಂಚು– ಬಂಡಾಯದ ಹಕ್ಕು' ಪುಸ್ತಕದಲ್ಲಿ ಅವರೇ ಬರೆದುಕೊಂಡಿದ್ದಾರೆ.

ಸಮುದ್ರ ಶಾಸ್ತ್ರ ಇಂಜಿನಿಯರ್ ಆಗಿ ಶಿಕ್ಷಣ ಪಡೆದಿದ್ದ ರೆಡ್ಡಿವರು ೩೦ರ ದಶಕದ ಕೊನೆಯ ಭಾಗದಲ್ಲಿ *ಡಫರಿನ್* ತರಬೇತಿ ಹಡಗಿನಲ್ಲಿ ಕ್ಯಾಡೆಟ್ ಆಗಿದ್ದಾಗ ಮೇಲಿನವರ ಅಸಮಾಧಾನಕ್ಕೆ ಗುರಿಯಾಗಿ ನೌಕಾಪಡೆಗೆ ಆಯ್ಕೆಯಾಗಲಿಲ್ಲ. ಗಾಂಧಿ ಅನುಯಾಯಿ ಎಂಬ ರಹಸ್ಯ ವರದಿ ಇದಕ್ಕೆ ಕಾರಣ. ನಂತರ ಕಲ್ಕತ್ತೆಯಲ್ಲಿ ನೌಕಾ ಕಂಪನಿಯಲ್ಲಿ ಕಿರಿಯ ಇಂಜಿನಿಯರಾಗಿ ನೌಕರಿ ಹಿಡಿದರು. ಇದು ಅವರ ರಾಜಕೀಯ ಮತ್ತು ವಿಚಾರಯಾತ್ರೆಗೆ ಅಡಿಗಲ್ಲಾಯಿತು. ೧೯೩೮–೪೦ರ ಸಮಯ, ಸಮೀಪದ ನೇತಾಜಿ ಸುಭಾಷ್ ಚಂದ್ರ ಬೋಸರ ಮನೆ ಅವರನ್ನು ಆಕರ್ಷಿಸಿತು. ಆಗಾಗ ನೇತಾಜಿ ಜತೆ ಸಂಪರ್ಕ. ನೇತಾಜಿ ದೇಶ ಬಿಟ್ಟು ಪರಾರಿಯಾದಾಗ ಪೋಲೀಸರು ಸಿ.ಜಿ.ಕೆ.ಯನ್ನು ಬಂಧಿಸಿ ಗೌರವಿಸಿದರು. ಮತ್ತೆ ೧೯೪೨ರಲ್ಲಿ ನೇತಾಜಿ ಜತೆ ನಂಟು. *ಆಜಾದ್ ಹಿಂದ್ ಫೌಜ್*‌ಗೆ ಸೇರ್ಪಡೆ. ಅದರ ಮೊದಲ ತಂಡದಲ್ಲಿದ್ದ ೨೦ ಜನರಲ್ಲಿ ಸಿ.ಜಿ.ಕೆ. ಸಹ ಒಬ್ಬರು. ಸಮುದ್ರದ ಮೇಲೆ ಸಾಗುತ್ತಿದ್ದಾಗ ಅವರ ಹಡುಗು ಜಪಾನಿ ಸೇನೆಯ ದಾಳಿಗೆ ಸಿಕ್ಕಾಗ ತನ್ನ ಸಹ ಸೈನಿಕರನ್ನು ರಕ್ಷಿಸಿಕೊಳ್ಳಲು ಹೋರಾಡಿ ಸಮುದ್ರದ ಮೇಲೇ ಅನ್ನಾಹಾರಗಳಿಲ್ಲದೆ ದಿನಗಳನ್ನು ಕಳೆದ ಧೀರ ಅವರು. ಚಿತ್ತಗಾಂಗ್ ಜಿಲ್ಲೆಯ ಟೆಕ್ನಾಫ್ ಎಂಬ ಊರನ್ನು ಪ್ರವೇಶಿಸಿ ಕಲ್ಕತ್ತೆಗೆ ಸಾಗುತ್ತಿದ್ದಂತೆ ಬಂಧನ. ದೆಹಲಿಯ ಕೆಂಪುಕೋಟೆಯಲ್ಲಿ ಹಾಗೂ ಮದರಾಸಿನ ಕೋಟೆಯ ಡಂಜನ್ನುಗಳಲ್ಲಿ ಸೆರೆವಾಸ. ಬ್ರಿಟಿಷ್ ಚಕ್ರವರ್ತಿಯ ವಿರುದ್ಧ ಯುದ್ಧ ಸಾರಿದ್ದಕ್ಕೆ ವಿಚಾರಣೆಗೆ ಗುರಿ. ಎಲ್ಲಾ ೧೯ ತರುಣರನ್ನು ಗಲ್ಲಿಗೆ ಹಾಕಲು ಇಷ್ಟಪಡದ ನ್ಯಾಯಾಧೀಶರು ನಾಲ್ವರನ್ನು ಮಾತ್ರ ಮರಣದಂಡನೆಗೆ ಗುರಿ ಮಾಡಿದರು. ಸಹವರ್ತಿಗಳು ನೇಣುಗಂಬಕ್ಕೆ ಹೊರಟ ದೃಶ್ಯ ಸಿ.ಜಿ.ಕೆ. ಅವರಿಗೆ ಸಾವಿನ ಎಲ್ಲ ಅಂಜಿಕೆಯನ್ನು ತೊಡೆದುಹಾಕಿಬಿಟ್ಟಿತು. ೧೯೪೫ರ ಡಿಸಂಬರ್ ತನಕ ಸೆರೆಮನೆವಾಸ.

ಇದು ಅವರಲ್ಲಿ ಸಮಾಜವಾದ ಕುರಿತು ಶ್ರದ್ಧೆ ಕುದುರಿಸಲು ಬುನಾದಿಯಾಯಿತು. ಕಾರ್ಮಿಕ ಸಂಘಟನೆಯತ್ತ ದೃಷ್ಟಿ. ೧೯೪೬ರ ಏಪ್ರಿಲ್ ನಲ್ಲಿ ಕೋಲ್ಕತಾದಲ್ಲಿ ಡಾ. ರಾಮನೋಹರಲೋಹಿಯಾ ಭೇಟಿ . ೧೯೬೭ರಲ್ಲಿ ಡಾಕ್ಟರ್ ಸಾಹೇಬ್ ವಿಧಿವಶವಾಗುವವರೆಗೂ ಈ ಬಂಧುತ್ವಕ್ಕೆ ಚ್ಯುತಿ ಬರಲಿಲ್ಲ. "ನನ್ನ ಕಡೆಯಿಂದ ಮೆಚ್ಚಿಗೆ, ಅವರ ಕಡೆಯಿಂದ ಪ್ರೀತಿ ಮತ್ತು ನಂಬಿಕೆ ನಮ್ಮ ಸಂಬಂಧಗಳನ್ನು ಬೆಸೆದು ಬೆಳೆಸಿತು ಎನ್ನುವ ಸಿ.ಜಿ.ಕೆ., 'ರಾಜಕೀಯ ತೀಕ್ಷ್ಣದೃಷ್ಟಿ ಶೋಧಕ ಪ್ರವೃತ್ತಿ, ಯಾವುದನ್ನೂ ಪ್ರಶ್ನಿಸದೆ ಅಂಗೀಕರಿಸದ ಮನೋಧರ್ಮ ನನಗೆ ಬಂದುದು ಡಾ.ಲೋಹಿಯಾ ಅವರಿಂದಲೇ. ಅವರ ಶ್ರದ್ಧೆಯ ಪರಾಕ್ರಮ ಮತ್ತು ಕೆಡುಕನ್ನೂ, ಅನ್ಯಾಯವನ್ನೂ ಎದುರಿಸಿ ಹೋರಾಡುವ ಅವರ ಛಲ ನನಗೆ ಸ್ಫೂರ್ತಿಯಾದವು. ಗಾಂಧೀಜಿಯ ತರುವಾಯ ದೇಶದಲ್ಲಿ ಮೂಡಿದ ಅತ್ಯುನ್ನತ ರಾಜಕೀಯ ಚಿಂತಕ ಅವರು. ನಾನು ಕಂಡ, ಎಂದಿಗೂ ಕಾಣಬಹುದಾದ ಅತ್ಯಂತ ಮಾನವೀಯ ವ್ಯಕ್ತಿ. ಜವಾಹರ್‌ಲಾಲ್ ನೆಹರೂ ಅವರ ಅಪ್ರಾಮಾಣಿಕತೆ, ಕುಯುಕ್ತಿಗಳನ್ನು ಕಾಣುವಂತೆ ಮಾಡಿದವರೂ ಡಾ.ಲೋಹಿಯಾ' ಎಂದು ಅವರು ಲೋಹಿಯಾ ಮರಣಾನಂತರ ಬರೆದ ಸ್ಮರಣ ಲೇಖನವೊಂದರಲ್ಲಿ ಬರೆದಿದ್ದಾರೆ.

ಸಿ.ಜಿ.ಕೆ. ಹಾಗೂ ಕರ್ನಾಟಕದ ನಂಟು ಸಮಾಜವಾದಿ ಚಳವಳಿ ಹಾಗೂ ಪತ್ರಿಕೋದ್ಯಮಗಳ ಮೂಲಕ. ೧೯೪೮ರ ಆಸುಪಾಸಿನಲ್ಲಿ ಮೈಸೂರಿನಲ್ಲಿ ಜೆ.ಪಿ. ಬಂದಾಗ; ನಂತರ ಪ್ರಸಿದ್ಧ ಕಾಗೋಡು ಸತ್ಯಾಗ್ರಹದಲ್ಲಿ ಭಾಗಿ. ೧೯೪೯ರಲ್ಲಿ ಬೆಂಗಳೂರಿನಲ್ಲಿ ಸೋಷಲಿಸ್ಟ್ ಪಾರ್ಟಿಯ ಕಾರ್ಯಕಾರಣಿ ಸಭೆ ಯುಸುಫ್ ಮೆಹರಲಿ ಅವರ ಅಧ್ಯಕ್ಷತೆಯಲ್ಲಿ ನಡೆದಾಗ ಸಿ.ಜಿ.ಕೆ. ಅವರ ವ್ಯಕ್ತಿತ್ವ, ಪ್ರತಿಭೆ, ಸ್ನೇಹಮಯಿಗುಣ ಎಲ್ಲರನ್ನೂ ಆಕರ್ಷಿಸಿತು. ಅದೇ ಸಮಯಕ್ಕೆ ಪತ್ರಕರ್ತರಾಗಿ ಸಿ.ಜಿ.ಕೆ. ವೃತ್ತಿ ಆರಂಭಿಸಿದರು. ೧೯೪೮ರಲ್ಲಿ ಆರಂಭವಾದ *ಡೆಕನ್ ಹೆರಾಲ್ಡ್* ಮತ್ತು *ಪ್ರಜಾವಾಣಿ* ಪತ್ರಿಕಾ ಬಳಗದ ಪ್ರಥಮ ಪ್ರಧಾನ ವ್ಯವಸ್ಥಾಪಕರಾದರು. ಈ ಪತ್ರಿಕಾ ಸಂಸ್ಥೆ ಕಟ್ಟುವಲ್ಲಿ ಅವರ ನಿರ್ವಹಣಾ ಕ್ಷಮತೆ ಮೆರೆಯಿತು. ೧೯೫೦ರ ಕೊನೆಗೆ ಹುದ್ದೆಗೆ ರಾಜೀನಾಮೆ ನೀಡಿ ಸಮಾಜವಾದಿ ಪಕ್ಷದ ಸಂಘಟನೆಗೆ ಸಂಪೂರ್ಣ ತೊಡಗಿಸಿಕೊಂಡರು. ೧೯೫೧ರಲ್ಲಿ ಮೈಸೂರು ರಾಜ್ಯ ಸೋಷಲಿಸ್ಟ್ ಪಾರ್ಟಿಯ ಅಧ್ಯಕ್ಷರಾಗಿ ಆಯ್ಕೆಯಾದರು. ೧೯೫೨ರಲ್ಲಿ ರಾಜ್ಯದಿಂದ ರಾಜ್ಯಸಭೆಗೆ ಆಯ್ಕೆಯಾದರು. ಸದನದಲ್ಲಿ ನೆಹರೂ ನೀತಿಗಳ ಕಟು ಟೀಕಾಕಾರರಾದರು. ಸೋಷಲಿಸ್ಟ್ ಪಕ್ಷದ ನೀತಿಗಳನ್ನು ಸದನದಲ್ಲಿ ಅವರು ಪ್ರತಿಪಾದಿಸುತ್ತಿದ್ದ ವೈಖರಿಯಿಂದ ಮೊದಲ ಸಾಲಿನ ಸಂಸದೀಯ ಪಟುಗಳಲ್ಲಿ ಒಬ್ಬರೆಂಬ ಹೆಸರು ಗಳಿಸಿದರು.

ಡಾ. ಲೋಹಿಯಾ ಅವರಲ್ಲಿ ಅಚಲನಿಷ್ಠೆ ಹಾಗೂ ಜತೆಯಲ್ಲೇ ಮತ್ತೊಬ್ಬ ಹಿರಿಯ ಸಮಾಜವಾದಿ ಅಶೋಕ್‌ಮೆಹ್ತಾ ಜತೆ ನಿಕಟ ಸ್ನೇಹ. ಆದರೂ ಸೋಷಲಿಸ್ಟ್ ಪಕ್ಷ ಕಿಸಾನ್ ಮಜ್ದೂರ್ ಪ್ರಜಾಪಕ್ಷದೊಡನೆ ಸೇರಿ ಪ್ರಜಾ ಸೋಷಲಿಸ್ಟ್ ಪಕ್ಷ (ಪಿಎಸ್ಪಿ)ವಾಗುವುದನ್ನು ವಿರೋಧಿಸಿ ತಮ್ಮ ಆತಂಕಗಳನ್ನು ವಿವರಿಸಿ ಅಶೋಕ್‌ಮೆಹ್ತಾಗೆ ಬರೆದ ಪತ್ರ ಜೆ.ಪಿ. ಕೈ ಸೇರಿತು. ಆಗ ಜೆ.ಪಿ. ರೆಡ್ಡಿಯವರಿಗೆ ಮನ ಒಲಿಸುವ ಪತ್ರ ಬರೆದು 'ನೀನಿಲ್ಲದ ಮೈಸೂರು ಸೋಷಲಿಸ್ಟ್ ಪಾರ್ಟಿ ನನಗೆ ಊಹಿಸಿಕೊಳ್ಳಲು ಸಾಧ್ಯವಿಲ್ಲ. ಸಂಸತ್ತಿನಲ್ಲೂ ಪಕ್ಷದ ಪ್ರತಿಷ್ಠೆಯನ್ನು

ಗಮನಾರ್ಹವಾಗಿ ಹೆಚ್ಚಿಸಿರುವೆ. ನೀನು ಸಾಧಿಸಿದ್ದೆಲ್ಲವನ್ನೂ ಹಾಳುಗೆಡವಬೇಡ. ನೀನಿನ್ನೂ ತರುಣ. ನಿನಗೆ ಉತ್ತಮ ಭವಿಷ್ಯವಿದೆ 'ಎಂದಿದ್ದರು. ನಂತರದಲ್ಲಿ ಜೆ.ಪಿ.–ನೆಹರು ಮಾತುಕತೆ ಆರಂಭವಾಗಿ ಪಿಎಸ್ಪಿಯಲ್ಲಿ ಉಂಟಾದ ತೀವ್ರ ವಿವಾದ ಸಂದರ್ಭದಲ್ಲಿ ಸಿ.ಜಿ.ಕೆ. ಡಾ.ಲೋಹಿಯಾ ಅವರ ಮುಖ್ಯ ವಕ್ತಾರರಾದರು. ಅವರೇ ಹೆಮ್ಮೆಯಿಂದ ಹೇಳಿಕೊಂಡಿರುವಂತೆ ಲೋಹಿಯಾವಾದಿಗಳಲ್ಲಿ ಒಬ್ಬರೆಂಬ ಹೆಸರು ಪಡೆದರು. ಡಾ.ಲೋಹಿಯಾ ಅವರ ಸೋಷಲಿಸ್ಟ್ ಪಕ್ಷದ ಹೈದರಾಬಾದ್ ಸಂಸ್ಥಾಪನಾ ಸಮ್ಮೇಳನದವರೆಗೆ ಲೋಹಿಯಾ ಜತೆಗಿದ್ದ ಸಿ.ಜಿ,ಕೆ. ನಂತರ ಸಕ್ರಿಯ ರಾಜಕಾರಣದಿಂದ ವಿರಮಿಸಿದರು.

ರೆಡ್ಡಿಯವರೇ ಒಂದು ಕಡೆ ಹೇಳಿರುವಂತೆ ೧೯೫೪ರಲ್ಲಿ ಸಂಸತ್ತಿನಿಂದ ನಿವೃತ್ತರಾದ ನಂತರ ಅವರ ಹಣಕಾಸು ಸ್ಥಿತಿ ಸ್ಥಿರವಾಗಿರಲಿಲ್ಲ ಮಡದಿ ಮೂವರು ಮಕ್ಕಳ ಜವಾಬ್ದಾರಿ ಜತೆಗೆ ಲೋಹಿಯಾವಾದಿಗಳೆನಿಸಿಕೊಂಡ ಕೆಲವರ ನಡಾವಳಿ ಅವರನ್ನು ರಾಜಕೀಯದಿಂದ ವಿಮುಖಗೊಳಿಸಿತು. ಆದರೆ ಲೋಹಿಯಾ ಅವರಲ್ಲಿದ್ದ ಅಚಲ ಗೌರವ ಪ್ರೀತಿ ಎಳ್ಳಷ್ಟೂ ಕುಗ್ಗಿರಲಿಲ್ಲ. ಸಿ.ಜಿ.ಕೆ. ತಮ್ಮ ಒಬ್ಬ ಮಗನಿಗೆ ರಾಮಮನೋಹರ್ ಎಂದು ಹೆಸರಿಟ್ಟಿರುವುದೇ ಇದಕ್ಕೆ ನಿದರ್ಶನ. ರಾಜಕೀಯದಿಂದ ಹೊರಬಂದ ಸಿ.ಜಿ.ಕೆ. 'ಹಿಂದು' ಪತ್ರಿಕೆಯ ವಾಣಿಜ್ಯ ಪ್ರಬಂಧಕರಾಗಿ ಅದರ ಆಧುನೀಕರಣಕ್ಕೆ ಕೊಡುಗೆ ನೀಡಿದರು. 'ಸುದ್ದಿ ಪತ್ರಿಕೆಗಳ ಅಭಿವೃದ್ಧಿಗಾಗಿ ಸಂಶೋಧನಾ ಸಂಸ್ಥೆ' ಎಂಬುದನ್ನು ಸ್ಥಾಪಿಸಿ ಗ್ರಾಮೀಣ ಪತ್ರಿಕೆಗಳ ಅಭಿವೃದ್ಧಿಗೂ ಕೆಲಸ ಮಾಡಿದರು. ಸಾಗರದಿಂದ ಪ್ರಕಟವಾಗುತ್ತಿದ್ದ 'ಮಣ್ಣಿನ ವಾಸನೆ' ಇಂತಹ ಪತ್ರಿಕೆಗಳಲ್ಲೊಂದು.


೧೯೭೫ರ ತುರ್ತು ಪರಿಸ್ಥಿತಿ ಮತ್ತೆ ಸಿ.ಜಿ.ಕೆ. ಅವರ ಸ್ವಾತಂತ್ರ್ಯದ ಕೆಚ್ಚನ್ನು ಮರುಜಾಗೃತಗೊಳಿಸಿತು. ಅವರು ಅರೆಕ್ಷಣ ಯೋಚಿಸದೆ ಪತ್ರಿಕೋದ್ಯಮ ತೊರೆದು ಜಾರ್ಜ್‌ಫರ್ನಾಂಡೀಸ್ ಜತೆ ಕೈ ಜೋಡಿಸಿದರು. ಪ್ರಸಿದ್ಧ ಬರೋಡಾ ಡೈನಮೈಟ್ ಸಂಚಿನಲ್ಲಿ ಇವರೂ ಬಂಧಿತರಾದರು. ಆ ಕುರಿತು ಅವರೇ ತಮ್ಮ ಪುಸ್ತಕದಲ್ಲಿ 'ಜೀವನದ ತೀರಾ ಆರಂಭದೆಸೆಯಲ್ಲಿ ತೊರೆದು ಬಿಟ್ಟಿದ್ದ ಭಾವನೆಗಳು ಹಾಗೂ ಸದ್ಗುಣಗಳು ಜಾಗೃತಗೊಂಡವು' ಎಂದಿದ್ದಾರೆ. ಜಾಗತಿಕ ಮಟ್ಟದಲ್ಲಿ ವಿವಿಧ ದೇಶಗಳ ಸಮಾಜವಾದಿಗಳೊಂದಿಗೆ ನಿಕಟ ಸ್ನೇಹ–ಸಂಪರ್ಕಗಳನ್ನಿರಿಸಿಕೊಂಡು ಅದನ್ನು ಮುಂದುವರೆಸಿದ್ದ ಸಿ.ಜಿ.ಕೆ.ರೆಡ್ಡಿವರನ್ನು ಭಾರತದ ಸಮಾಜವಾದಿ ಚಳುವಳಿಗೆ ಜಾಗತಿಕ ಆಯಾಮ ನೀಡಿದ ಪ್ರಮುಖರಲ್ಲೊಬ್ಬರೆಂದೂ ಹೇಳಬಹುದು. ತುರ್ತು ಪರಿಸ್ಥಿತಿಯನ್ನು ತೆಗೆಯಲು ಇಂದಿರಾ ಗಾಂಧಿಯವರ ಮೇಲೆ ಒತ್ತಡ ಬಿದ್ದುದರಲ್ಲಿ ಇದೂ ಒಂದು ಕಾರಣವೆನ್ನಬಹುದು.

ರಾಜಕೀಯದಿಂದ ವಿಮುಖವಾದರೂ ತಮಗೆ ಪ್ರಿಯವಾದ ಮಾನವ ಹಕ್ಕುಗಳ ರಕ್ಷಣೆಯಲ್ಲಿ ತೊಡಗಿಸಿಕೊಂಡು ಅದರ ಕರ್ನಾಟಕ ಘಟಕದ ಅಧ್ಯಕ್ಷರಾಗಿ ಕೆಲಸ ಮಾಡಿದರು. ಸತ್ತೆಯ ಮುಂದೆ ತಲೆ ಬಾಗಲಿಲ್ಲ. ತಮ್ಮ ಕೆಳಗಿನವರ ಮೇಲೆ ದರ್ಪ ತೋರಲಿಲ್ಲ. ಶಿಷ್ಟಾಚಾರ ಸಂಪ್ರದಾಯ ಶರಣರಾಗಲೇ ಇಲ್ಲ. ಸರಳವಾಗಿ ಬದುಕಿದರು. ಮಹತ್ತನ್ನು ಸಾಧಿಸಿದರು. ಪರಿಚಯವೇ ಇಲ್ಲದವರು ಅವರ ಅಂಗಿ ಜಗ್ಗಿ ಮಾತನಾಡಿಸಬಹುದಾಗಿತ್ತು. ಶ್ರೀಮಂತರಾಗಿರುವುದಕ್ಕಿಂತ ಬಡವರು ಸಾಮಾನ್ಯರು ಅವರ ಮೌಲ್ಯ ಬದ್ಧತೆಯ ಕೇಂದ್ರಬಿಂದು. ಸಿ.ಜಿ.ಕೆ. ತಮ್ಮ ಜೀವನದ ಕೊನೆಯ ದಿನಗಳಲ್ಲಿ ಮಡದಿ ವಿಮಲ ಅವರ ಜತೆ ಅನಿಸಿಕೆ, ಆಸೆ ಹಂಚಿಕೊಂಡು 'ನನ್ನ ಮೌಲ್ಯ –ವಿಚಾರಗಳು ಒಬ್ಬ ಯುವಕನಿಗಾದರೂ ಸ್ಫೂರ್ತಿ ನೀಡಿದರೆ ನನ್ನ ಬದುಕು ಸಾರ್ಥಕ' ಎಂದಿದ್ದರು. ರೆಡ್ಡಿಯವರು ಡಿಸಂಬರ್ ೨೫, ೧೯೯೪ರಂದು ತಮ್ಮ ೭೩ನೇ ವಯಸ್ಸಿನಲ್ಲಿ ಶಸ್ತ್ರಚಿಕಿತ್ಸೆಯೊಂದು ಫಲಕಾರಿಯಾಗದೆ ನಿಧನರಾದರು. ಕ್ರಾಂತಿಕಾರಿ, ಸಮಾಜವಾದಿ, ಮನುಷ್ಯಪ್ರೇಮಿ ಸಿ.ಜಿ.ಕೆ. ನಮ್ಮೊಡನಿದ್ದರು ಎಂಬುದೇ ನನ್ನಂಥವರಿಗೆ ಅಭಿಮಾನದ ಸಂಗತಿ.

**(ಲೇಖಕ ಖಾದ್ರಿ ಎಸ್. ಅಚ್ಯುತನ್ ಭಾರತೀಯ ಸಮಾಚಾರ ಸೇವೆಯ ವಿವಿಧ ಹುದ್ದೆಗಳಲ್ಲಿ ಕೆಲಸ ಮಾಡಿ ಬೆಂಗಳೂರು ದೂರದರ್ಶನದ ಪ್ರಧಾನ ಸುದ್ದಿ ಸಂಪಾದಕರಾಗಿ ನಿವೃತ್ತರಾಗಿರುವ ನಮ್ಮ ಮಾಧ್ಯಮ ಪರಿಣಿತರಲ್ಲಿ ಒಬ್ಬರು ಮತ್ತು ಹಿರಿಯ ಸಮಾಜವಾದಿಗಳೊಂದಿಗೆ ಒಡನಾಡಿ ಅನೇಕ ಕೃತಿಗಳನ್ನು ರಚಿಸಿ ಸಂಪಾದಿಸಿದವರು ಕೂಡ.)**



## ಎಸ್. ಕಾರಂತ : ಒಂದು ನುಡಿನಮನ



ದಿನಗಳು ಉರುಳುವುದು ಗೊತ್ತಾಗುವುದಿಲ್ಲ. ಇಂಗ್ಲಿಷ್‌ನಲ್ಲಿ Time and tide wait for none ಎಂಬಂತೆ ಕಾಲನು ಯಾರನ್ನೂ ಕಾಯಲಾರ. ಅದರಂತೆ ನನ್ನ ಸಾರ್ವಜನಿಕ ಬದುಕಿಗೆ ಇಂಬು ಮತ್ತು ಅಗಾಧತೆ ತುಂಬುವುದಕ್ಕೆ ಕಾರಣರಾಗಿದ್ದ ಎರಡು ಚೇತನಗಳು, ಮೊದಲನೆಯವರು ಡಾ. ಅಮ್ಮೆಂಬಳ ಬಾಳಪ್ಪ; ಎರಡನೆಯವರು ಡಾ. ಕೋಣಿ ಸದಾಶಿವ ಕಾರಂತ. ಇವರು ಬಹುಶಃ ತಾವು ಪರಸ್ಪರ "ನೀವು ಹೋಗಿ, ನಾನು ಬರುತ್ತಿದ್ದೇನೆ" ಎಂದು ಆಡಿಕೊಂಡಂತೆ ಬಾಳಪ್ಪ ೨೦೧೪ ಮೇ ೧೫ರಂದು ತಮ್ಮ ಊರಲ್ಲಿ ನಿಧನರಾದರು. ಡಾ. ಕಾರಂತರು ೨೦೧೫ ಜುಲೈ ೪ ರಂದು ಮುಂಬಯಿಯಲ್ಲಿ ನಮ್ಮನ್ನು ಅಗಲಿದರು. ಅವರು ಹುಟ್ಟಿದ್ದು ಕುಂದಾಪುರ ತಾಲೂಕಿನ ಕೋಣಿ ಎಂಬ ಹಳ್ಳಿಯಲ್ಲಿ ೧೯೨೪ ಮೇ ೧೪ರಂದು.

ಕಾರಂತರು ೧೯೪೯ರಲ್ಲಿ ಕರ್ನಾಟಕ ಬಿಟ್ಟು ಮುಂಬಯಿಗೆ ಹೋಗಿ ಅರ್ಥಶಾಸ್ತ್ರದಲ್ಲಿ ಡಾಕ್ಟರೇಟ್ ಪಡೆದು ತಮ್ಮ ಜೊತೆಗೇ ಕಾಲೇಜಿನಲ್ಲಿ ಓದುತ್ತಿದ್ದ ಶ್ರೀಮತಿ ನಿರ್ಮಲಾ ಎಂಬ ಗುಜರಾತಿ ತರುಣಿಯನ್ನು ಆಗಲೇ ಮದುವೆಯಾಗಿದ್ದರು. ಅವರಿಗೆ ಸಂತೋಷ್ ಒಬ್ಬನೇ ಮಗ. ಆತ ಇಂಜಿನಿಯರಿಂಗ್ ಪದವಿ ಪಡೆದು ಜೀವನದಲ್ಲಿ ನೆಲೆ ಕಾಣುವ ಪೂರ್ವದಲ್ಲೇ ಈ ಕಾರಂತ ದಂಪತಿಯನ್ನು ಅಗಲಿದ್ದ – ಎರಡು ದಶಕಗಳ ಹಿಂದೆ. ಅವರ ನೆನಪಿಗಾಗಿ ಕಾರಂತ ದಂಪತಿ ಮುಂಬಯಿ – ಗೋವಾ ಹೆದ್ದಾರಿಯಲ್ಲಿರುವ ರಾಯಗಡ ಜಿಲ್ಲೆ ಪನವೆಲ್ ತಾಲೂಕಿನ ತಾರಾ ಎಂಬ ಊರಲ್ಲಿ ಇರುವ ಯೂಸುಫ್ ಮೆಹರಾಲಿ ಸೆಂಟರ್‌ನ ನೇತೃತ್ವದ ಆರೋಗ್ಯ ಕೇಂದ್ರದಲ್ಲಿ 'ಸಂತೋಷ್ ಕಾರಂತ್ ಪುನರ್‌ವಸತಿ ಮತ್ತು ಆರೋಗ್ಯ ಕೇಂದ್ರ' ವನ್ನು ೨೦೦೯ ರಲ್ಲಿ ಸ್ಥಾಪಿಸಿದ್ದಾರೆ.

ಡಾ. ಕಾರಂತರು ಪಂಜಾಬ್ ನ್ಯಾಷನಲ್ ಬ್ಯಾಂಕಿನಲ್ಲಿ, ಮಡದಿ ನಿರ್ಮಲಾ ರಿಜರ್ವ್ ಬ್ಯಾಂಕಿನಲ್ಲಿ ಅಧಿಕಾರಿಗಳಾಗಿ ನೆಮ್ಮದಿಯ ಬದುಕನ್ನು ಬಾಳಿದವರು. ಕಾರಂತರು ದಿಲ್ಲಿಯಲ್ಲಿದ್ದಾಗ ಡಾ. ರಾಮಮನೋಹರ ಲೋಹಿಯಾ ಸಂಸದರಾಗಿದ್ದರು. ಅವರ ಜೊತೆಗೆ ೩ ವರ್ಷ (೧೯೬೪–೧೯೬೭) ಅವರ ಸಂಸದೀಯ ವ್ಯವಹಾರಗಳನ್ನು ಒಬ್ಬ ಸಹಾಯಕನಾಗಿ ನಿರ್ವಹಿಸಿದ್ದರು.

ಮುಂಬಯಿಗೆ ಮರಳಿದ ಮೇಲೆ ಅವರು 'ಲೋಹಿಯಾ ಗ್ರಂಥಾಲಯ ಪ್ರಕಟಣೆ'ಗಳ ಮುಖ್ಯ ಸಂಪಾದಕರಾಗಿದ್ದರು. ಪ್ರಕಾಶಕರು: ಸಿಂಧು ಪ್ರಕಾಶನ ಸಂಸ್ಥೆ. Mankind, Janata, The Other Side ಇಂಗ್ಲಿಷ್ ನಿಯತಕಾಲಿಕಗಳಿಗೆ ಬರೆಯುತ್ತಿದ್ದರು. ೧೯೪೬–೧೯೪೭ರಲ್ಲಿ ಕರ್ನಾಟಕದ ಸಮಾಜವಾದಿ ಪಕ್ಷದ ಪ್ರಾಂತೀಯ ಕಾರ್ಯದರ್ಶಿಯಾಗಿ ತಾವು ಅನುಭವಿಸಿದ ಕೆಲವು ಸಿಹಿಕಹಿ ಘಟನೆಗಳನ್ನು ತಮ್ಮ ಇಂಗ್ಲಿಷ್ ಗ್ರಂಥ The Aspects of Socialist Mind ಎಂಬ ಪುಸ್ತಕದಲ್ಲಿ ವಿವರಿಸಿದ್ದಾರೆ. ಇದರ ಹೊರತಾಗಿ 'Fascism Dethroned' and 'Whither Modern Civilisation? Whither India?' ಎಂಬ ಎರಡು ಗ್ರಂಥಗಳನ್ನು ಬರೆದಿದ್ದರು.

ಕಾರಂತರಿಗೆ ಅತೀ ಪ್ರಿಯರಾಗಿದ್ದ ನಮ್ಮ ಬಾಳಪ್ಪ ಅವರ ನಿಧನದ ಸುದ್ದಿ ನಾನು ತಿಳಿಸಿದಾಗ ತಾವೇ ಫೋನ್ ಎತ್ತಿಕೊಂಡು ಗದ್ಗದಿತರಾದರು. ೨೦೧೫ ಮೇ ತಿಂಗಳಲ್ಲಿ ಬಂಟ್ವಾಳದಲ್ಲಿ ಬಾಳಪ್ಪ ಅಭಿಮಾನಿಗಳು ಹುಟ್ಟುಹಾಕಿದ ಬಾಳಪ್ಪ ಟ್ರಸ್ಟ್ ಬಗೆಗಿನ ಸಾಹಿತ್ಯವನ್ನು ಅವರು ತಿಳಿಯಲು ಅಪೇಕ್ಷಿಸಿದರು. ಅದರ ಇಂಗ್ಲಿಷ್ ಅನುವಾದವನ್ನು ಕೆಲದಿನಗಳಲ್ಲೆ ಅವರಿಗೆ ಕಳಿಸುವುದಾಗಿ ಹೇಳಿದ್ದೆ. ಕಾರಂತರು ಕಣ್ಣು ಮುಚ್ಚುವ ಮೊದಲು ಈ ಕೆಲಸ ನನ್ನಿಂದ ಆಗಲಿಲ್ಲವಲ್ಲಾ ಎಂಬ ಕೊರಗು ನನ್ನನ್ನು ಕಾಡಹತ್ತಿತು.

ಅಂತೂ ಕರ್ನಾಟಕದ ಸಮಾಜವಾದಿ ಆಂದೋಲನದ ಆದಿ ಪುರುಷ ಹೇಳ ಹೆಸರಿಲ್ಲದೆ ಕಣ್ಮರೆಯಾಗಿ ಬಿಟ್ಟರು!

**–ಅಮ್ಮೆಂಬಳ ಆನಂದ**

## ಪ್ರೊ. ಬಿ.ಕೃಷ್ಣಪ್ಪ ನೆನಪಿನ ಮಾಲೆ–೩೪

–ಇಂದಿರಾ ಬಿ.ಕೃಷ್ಣಪ್ಪ

### ಯಾವ ಜನ್ಮದ ಮೈತ್ರಿ...

**ಆ**ಕಾಶವಾಣಿಯೇ ಪ್ರಧಾನ ಮಾಧ್ಯಮವಾಗಿದ್ದ ಕಾಲವದು. ಬೆಳಗಿನ ೭.೩೫ ಕ್ಕೆ, ದೆಹಲಿಯಿಂದ ಪ್ರಸಾರವಾಗುವ ದಿನ ನಿತ್ಯದ ವಾರ್ತಾ ಪ್ರಸಾರದ ಪ್ರಾರಂಭದಲ್ಲಿ "ವಾರ್ತೆಗಳು ಓದುತ್ತಿರುವವರು, ಡಿ.ಎಸ್. ನಾಗಭೂಷಣ" ಎಂದು ಕೇಳುತ್ತಿದ್ದ ನಮಗೆ, ಆ ವ್ಯಕ್ತಿ, ಮುಂದೆ ನಮ್ಮ ಆಪ್ತ ಬಳಗಕ್ಕೆ ಸೇರಬಹುದೆಂಬ ಕನಸಾಗಲಿ, ಯೋಚನೆಯಾಗಲೀ ಆಗ ಇರಲಿಲ್ಲ. ಸಮಾಜವಾದಿ ಯುವಜನಸಭಾ, ನವನಿರ್ಮಾಣ ಕ್ರಾಂತಿ. ಜೆ.ಪಿ.ಚಳುವಳಿಯ ಸಂದರ್ಭದಲ್ಲಿ. ಡಿ.ಎಸ್. ನಾಗಭೂಷಣರವರ "ಜೆ.ಪಿ. ಸೆರೆಮನೆಯ ದಿನಚರಿ" ಎಂಬ ಅನುವಾದಿತ ಕೃತಿಯು ಜಯಪ್ರಕಾಶ ನಾರಾಯಣ್‌ರನ್ನು ಮತ್ತು ಸಮಾಜವಾದಿ ಸಿದ್ಧಾಂತಗಳನ್ನು ಅರಿಯುವ ಕೈಪಿಡಿಯಾಗಿ ಬಂದಿತ್ತು. ನಂತರ ಒಂದೆರಡು ವರ್ಷಗಳಲ್ಲಿ ನಾಗಭೂಷಣ ಅವರು, ಭದ್ರಾವತಿ ಆಕಾಶವಾಣಿಗೆ ಕಾರ್ಯಕ್ರಮ ಅಧಿಕಾರಿಯಾಗಿ ಬಂದದ್ದು, ಆಕಾಶವಾಣಿಯಲ್ಲಿ ಆದಾಗಲೇ ರೇಡಿಯೋ ನಾಟಕ, ರಶ್ಮಿ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಿದ್ದ ನನಗೆ, ಸಂತೋಷವನ್ನು ತಂದಿತ್ತು

ಈ ಸಂತೋಷಕ್ಕೆ ಮತ್ತೊಂದು ಗರಿ ಮೂಡಲು ಕಾರಣವೆಂದರೆ, ಸಮಾಜವಾದಿ ಯುವಜನ ಸಭಾದ ಕಾರ್ಯದಲ್ಲಿ ಕೃಷ್ಣಪ್ಪ ಮತ್ತು ಗೆಳೆಯರ ಬಳಗದೊಂದಿಗೆ ನಾಗಭೂಷಣ್‌ರವರು ಸೇರಿದ್ದು. ಆಗ ಅವಿವಾಹಿತರಾಗಿದ್ದ ನಾಗಭೂಷಣ್, ಭದ್ರಾವತಿಯ ನ್ಯೂ ಟೌನ್‌ನಲ್ಲಿ (ಜೈಶ್ರೀ ಟಾಕೀಸ್ ಬಳಿ) ಒಂದು ಮನೆ ಮಾಡಿಕೊಂಡಿದ್ದರು. ನಮ್ಮ ಮನೆಯಲ್ಲಿ ರಜಾದಿನಗಳಲ್ಲಿ ಹಾಗೂ ಹಬ್ಬಗಳಲ್ಲಿ ಮಕ್ಕಳಿಗಾಗಿ ವಿಶೇಷ ಊಟ– ತಿಂಡಿಗಳನ್ನು ಮಾಡಿ, ಒಬ್ಬಿಬ್ಬರು ಅತಿಥಿಗಳನ್ನು ಕರೆದು ಒಟ್ಟಿಗೇ ಊಟ ಮಾಡುವ ಅಭ್ಯಾಸ ರೂಢಿಸಿಕೊಂಡಿದ್ದೆವು. ಅಂಥಹ ಒಂದೆರಡು ಸಂದರ್ಭದಲ್ಲಿ ನಾಗಭೂಷಣ್ ಹಾಗೂ ಕೃಷ್ಣಪ್ಪ ನಾವೆಲ್ಲಾ ಸೇರಿ ಒಟ್ಟಾಗಿ ಕೂತು ಊಟ ಮಾಡುತ್ತಾ, ಅನೇಕ ವಿಷಯಗಳನ್ನು ಚರ್ಚಿಸಿದ್ದುಂಟು. ಅಂತಹ ಒಂದು ಸುಮಧುರ ಗಳಿಗೆಯಲ್ಲಿ, ನಾಗಭೂಷಣ್‌ರವರು ತಾವು ಸವಿತಾರವರ ಒಲವಿಗೆ ಸೋತಿರುವುದಾಗಿ ಹೇಳಿಕೊಂಡರು. ಸವಿತಾ ಮಧ್ಯಮ ವರ್ಗದ ಕುಟುಂಬದವರೆಂದೂ, ಕವಯಿತ್ರಿಯಾಗಿ ಸಾಹಿತ್ಯ ಕ್ಷೇತ್ರದಲ್ಲಿ ಹೆಜ್ಜೆ ಇಟ್ಟಿದ್ದಾರೆಂದೂ, ಅಂಚೆ ಕಛೇರಿಯಲ್ಲಿ ಕೆಲಸ ಮಾಡುತ್ತಿದ್ದಾರೆಂದೂ ತಿಳಿಸಿದರು.

ನೂರಾರು ಅಂತರಜಾತೀಯ–ಅಂತರಧರ್ಮಿಯ ವಿವಾಹಗಳನ್ನು ಮಾಡಿಸಿದ್ದ ನಮಗೆ ಜಾತ್ಯಾತೀತ ಸಮುದಾಯಕ್ಕೆ ಮತ್ತಿಬ್ಬರ ಸೇರ್ಪಡೆಯೇ ಬಹಳ ಸಂತಸದ ವಿಚಾರವಾಗಿತ್ತು. ವಿವಾಹ ನೋಂದಣಿಗೆ ದಿನಾಂಕವನ್ನು ನಿಗದಿ ಪಡಿಸಿಕೊಂಡೆವು. ಭದ್ರಾವತಿಯ ವಿವಾಹ ನೋಂದಣಿ ಕಛೇರಿಗೆ ೧೯೮೪ರ ಅಕ್ಟೋಬರ್‌ನ ಒಂದು ದಿನ ಗೆಳೆಯರೊಂದಿಗೆ ನಾಗಭೂಷಣ್, ಸವಿತಾ ಬಂದಿದ್ದರು. ಪ್ರೊ.ಕೃಷ್ಣಪ್ಪ, ಮುನೀರ್ ಬಾಷಾ, ಬಿದರಳ್ಳಿ ನರಸಿಂಹಮೂರ್ತಿ, ಚಂದ್ರಶೇಖರಯ್ಯ–ರೇಣುಕ, ಆಕಾಶವಾಣಿಯ ಅವರ ಒಂದಿಬ್ಬರು ಸಹೋದ್ಯೋಗಿಗಳು, ಅಂಚೆ ಇಲಾಖೆಯ ಸವಿತಾರ ಒಂದಿಬ್ಬರು ಸಹೋದ್ಯೋಗಿಗಳು ಮತ್ತು ಕರ್ನಾಟಕದ ದಲಿತ ಸಂಘರ್ಷ ಸಮಿತಿಯ ಗೆಳೆಯರು ನೋಂದಣಿ ಕಚೇರಿಯಲ್ಲಿ ಸೇರಿದರು. ತಾಲ್ಲೂಕು ಕಚೇರಿಯ ಆವರಣದಲ್ಲೇ ಇದ್ದ ನೋಂದಣಿ ಕಛೇರಿಗೆ, ಅಲ್ಲೇ ತಾಲ್ಲೂಕು ಕಛೇರಿಯಲ್ಲಿ ಕೆಲಸ ಮಡುತ್ತಿದ್ದ ನಾನೂ ಹೋಗಿದ್ದೆ. ವಿವಾಹ ನೋಂದಣಿ ಹಾರ ವಿನಿಯಮದ ಮೂಲಕ ಮದುವೆ ನೆರವೇರಿತು. ನಂತರ ಉಕ್ಕು ಮತ್ತು ಕಬ್ಬಿಣ ಕಾರ್ಖಾನೆಯ ಅತಿಥಿ ಗೃಹದಲ್ಲಿ ಎಲ್ಲರೂ ಸೇರಿ, ನೂತನ ದಂಪತಿಗಳಿಗೆ ಶುಭಕೋರಿ, ಸಿಹಿ ಹಂಚಿ, ಊಟ ಮಾಡಿದೆವು. ನಾಗಭೂಷಣ್‌ರವರ ರಕ್ತ ಸಂಬಂಧಿಗಳು ಆ ವೇಳೆಗೆ ಯಾರೂ ಬಂದಿಲ್ಲದಿದ್ದರೂ ದೊಡ್ಡಮಿತ್ರ ಬಳಗವೇ ಅವರೊಂದಿಗಿದ್ದಿತ್ತು. ನೂತನ ದಂಪತಿಗಳೂ ಸವಿತಾರವರ ತಂದೆ, ತಮ್ಮ ಹಾಗೂ ಗೆಳತಿ ಪದ್ಮಾಕ್ಷಿ ಮತ್ತು ನಾಗಭೂಷಣ್ ಹಾಗೂ ನಮ್ಮ ಭದ್ರಾವತಿಯ ಸ್ನೇಹ ಬಳಗವೇ ನಂತರ ನಮ್ಮ ಮನೆಯಲ್ಲಿ ನೆರೆದಿತ್ತು. ಪರಸ್ಪರ ಪರಿಚಯ ಮಾತುಕತೆ, ಕಾಫಿ – ತಿನಿಸುಗಳ ಸಡಗರ. ಮಧ್ಯಂತರದಲ್ಲಿ ಕೃಷ್ಣಪ್ಪ ಹಲವಾರು ಭಾವಗೀತೆಗಳನ್ನು ಹಾಡಿದ್ದರು. ಅದೊಂದು ಸಂಭ್ರಮದ ಸುಂದರ ಸಂಜೆಯಾಗಿತ್ತು. ಜೀವನದ ಪರಿವರ್ತನೆಯ ಘಟ್ಟದಲ್ಲಿ, ಒಡಹುಟ್ಟಿದವರಿಲ್ಲವೆಂಬ ದು:ಖ ನೋವು ಹೊರತು ಪಡಿಸಿದರೆ,



ಮಂತ್ರ ಮಾಂಗಲ್ಯದ ಪ್ರತಿಜ್ಞಾ ವಿಧಿ ಬೋಧಿಸುತ್ತಿರುವ ರಾಜೇಂದ್ರ ಚೆನ್ನಿ

ಬೇರೆ ಯಾವುದೇ ಆತಂಕಗಳು ಈ ಮದುವೆಯಲ್ಲಿ ಇಲ್ಲದೆ ಇದ್ದುದರಿಂದ ಸಂಭ್ರಮದ ಸಂಜೆಯ ಆ ದಿನ ಒಲ್ಲದ ಮನಸ್ಸಿನಿಂದ ಎಲ್ಲರೂ ನಿರ್ಗಮಿಸಿದರು.

ಇದಾಗಿ ಒಂದು ವಾರದ ನಂತರ ಒಂದು ದಿನ ನನ್ನ ಗೆಳತಿ, ಮನೋರಮಾ ಬೆಳ್ಳಂಬೆಳಗ್ಗೆ ನಮ್ಮ ಮನೆಗೆ ಬಂದಳು. ಭಾನುವಾರದ ಆ ದಿನ ನಾನು ವಿರಾಮವಾಗಿ ಕೆಲಸ ಮಾಡಿಕೊಂಡಿದ್ದೆ. ಕೃಷ್ಣಪ್ಪ ಹಿಂದಿನ ದಿನವೇ ಕದಸಂಸನ ಕಾರ್ಯನಿಮಿತ್ತ ಚಿಕ್ಕಮಗಳೂರಿಗೆ ಹೋಗಿದ್ದರು. ಗೆಳತಿ ಮನು ಬಂದವಳೆ "ಯಾಕೆ ಇನ್ನು ಸಿದ್ಧಳಾಗಿಲ್ಲ? ಮದುವೆಗೆ ಬರಲ್ಲವೇನೇ?" ಎಂದಳು ನಾನು, "ಯಾರ ಮದುವೇನೇ" ಅಂದೆ. "ನಾಗಭೂಷಣ್ ಮದುವೆ; ಚಂದ್ರಶೇಖರಯ್ಯ ಅವರ ಮನೇಲಿ, ಯಾಕೆ ರೆಡಿಯಾಗಿಲ್ಲ?" ಎಂದಳು, ನನಗೆ ಒಮ್ಮೆಗೆ ತಲ್ಲಣ ಉಂಟಾಯಿತು. ಅದುವರೆವಿಗೂ ನಾಗಭೂಷಣ್–ಸವಿತಾರರಿಬ್ಬರ 'ಮಂತ್ರ ಮಾಂಗಲ್ಯ'ದ ಕಾರ್ಯಕ್ರಮ ಏರ್ಪಾಟಾಗಿರುವ ವಿಚಾರ ನನಗೆ ಹೇಳಿರಲಿಲ್ಲ, ಈ ಕಾರ್ಯಕ್ರಮದ ಸಿದ್ಧತೆ ಮಾಡಿದವರಾಗಲೀ, ನಾಗಭೂಷಣ್‌ರವರಾಗಲೀ, ನನಗೆ ಹೇಳದಿರಲು ಯಾವ ಕಾರಣಗಳೂ ನನಗೆ ಕಾಣಿಸಲೇ ಇಲ್ಲ. ಬಹಳ ಬೇಸರವೂ ಆಯ್ತು. ಅವರ ಮದುವೆಯ ರಿಜಿಸ್ಟ್ರೇಶನ್ ಮತ್ತು ತದನಂತರದಲ್ಲಿ ಸಂತೋಷ ಕೂಟದಲ್ಲಿ ಮದುವೆ ಹೇಗೆ? ಎಲ್ಲಿ ಮಾಡಬೇಕೆಂಬ ಬಗ್ಗೆಯೂ ಮಾತುಕತೆ ಮಾಡಿದ್ದೆವು. ದಿನಾಂಕ ನಿಗದಿ ಮಾಡುವುದು ಮಾತ್ರ ಬಾಕಿ ಉಳಿದಿತ್ತು. ಸಂತೋಷ ಕೂಟದ ತಯಾರಿ ಬಗ್ಗೆ ಯೋಚಿಸುತ್ತಿದ್ದವಳಿಗೆ, ಸಂತೋಷ ಕೂಟದ ಸುದ್ದಿಯೇ ತಿಳಿಯದೆ ಇದ್ದ ಬಗ್ಗೆ ಬಹಳ ನೋವಾಯಿತು. ಎಲ್ಲರಿಗೂ ಮಂತ್ರ ಮಾಂಗಲ್ಯದ ಕಾರ್ಡ್ ಕೊಟ್ಟು ಕರೆದು, ನನ್ನನ್ನು ಕರೆಯದೆ ಇರಲು ಹೇಗೆ ಸಾಧ್ಯ? ಎನಿಸಿತ್ತು. ಸಾವರಿಸಿಕೊಂಡು "ನೀನು ಮದುವೆಗೆ ಹೋಗಿ ಬಾ, ನನ್ನನ್ನು ಕರೆದಿಲ್ಲ ನಾನು ಬರಲ್ಲ" ಎಂದೆ. ಅವಳು ಅಲ್ಲಿಗೆ ಹೋದ ನಂತರ, ವಿಷಯ ತಿಳಿದ ಚಂದ್ರಶೇಖರಯ್ಯನವರು ಪೋನ್ ಮಾಡಿ, "ಈಗ ದಯವಿಟ್ಟು ಹೊರಟು ಬನ್ನಿ ನೀವು ಬರಲೇ ಬೇಕು" ಎಂದು ಕರೆದಿದ್ದರು. ಅದರೆ ನನ್ನ ಮನಸ್ಸು ಒಪ್ಪಲಿಲ್ಲ ನಾನು ಹೋಗಲಿಲ್ಲ.

ಇದೊಂದು ಕಹಿ ಘಟನೆಯನ್ನು ಮನದ ಮೂಲೆಗೆ ನೂಕಿ, ಸ್ನೇಹ ವಿಶ್ವಾಸವನ್ನೇ ಮುನ್ನೆಲೆಗೆ ಬರಮಾಡಿಕೊಂಡು, ಜೀವನ ಸಾಗಿಸುತ್ತಿದ್ದೆವು. ಕದಸಂಸದ ತರಬೇತಿ ಶಿಬಿರಗಳಲ್ಲಿ ನಾಗಭೂಷಣ್‌ರವರ ಭಾಗವಹಿಸುವಿಕೆ ಎಂದಿನಂತೆ ಸಾಗಿತ್ತು. ಅವರು ಕನ್ನಡ ಸಾಹಿತ್ಯದಲ್ಲಿ ವಿಮರ್ಶಕರಾಗಿ ಗಮನಾರ್ಹ ಬರಹಗಾರರಾಗಿದ್ದು ಕೃಷ್ಣಪ್ಪನವರಿಗೆ ಹೆಮ್ಮೆಯ ವಿಚಾರವಾಗಿದ್ದರಿಂದ ಅವರು ನಾಗಭೂಷಣರನ್ನು ತಮ್ಮ ಕಾಲೇಜಿಗೆ ಆಹ್ವಾನಿಸಿ ಸಾಹಿತ್ಯ ಚರ್ಚೆಗಳು, ಕಾರ್ಯಕ್ರಮಗಳನ್ನು ನಡೆಯಿಸಿದ್ದಾರೆ. ಆಕಾಶವಾಣಿಯ ಕಾರ್ಯಕ್ರಮಗಳಿಗೆ ಮತ್ತು ನೇಮಕಾತಿ ಪರೀಕ್ಷೆಗಳಿಗೆ ಆಯ್ಕೆ ಸಮಿತಿ ಸದಸ್ಯರಾಗಿ ಕೃಷ್ಣಪ್ಪನವರನ್ನು ನಾಗಭೂಷಣ್‌ರವರು ಕರೆದಿದ್ದಾರೆ. ದಸಂಸದ ರಾಜ್ಯಸಂಚಾಲಕರಾಗಿದ್ದ ಪ್ರೊ.ಬಿ.ಕೃಷ್ಣಪ್ಪನವರನ್ನು ನಾಗಭೂಷಣ್‌ರವರು ಅನೇಕ ಪತ್ರಿಕೆಗಳಿಗಾಗಿ ಸಂದರ್ಶನ

ಮಾಡಿಕೊಟ್ಟಿದ್ದಾರೆ. ನಾಗಭೂಷಣ್‌ರವರು ಮಂಗಳೂರಿಗೆ ವರ್ಗಾವಣೆ ಆಗಿದ್ದ ಸಂದರ್ಭದಲ್ಲಿ ಅಲ್ಲಿನ ಕಾರ್ಮಿಕ ಚಳುವಳಿಯ ಸಮಾವೇಶಕ್ಕೆ ನಾನು–ಕೃಷ್ಣಪ್ಪ ಹೋಗಿದ್ದಾಗ, ಸವಿತಾ ನಾಗಭೂಷಣ್‌ರವರ ಮನೆಯಲ್ಲಿದ್ದು ಬಂದಿದ್ದೆವು. ಸವಿತಾ, 'ಚಂದ್ರನನ್ನು ಕರೆಯಿರಿ ಭೂಮಿಗೆ', 'ಹೊಳೆಮಗಳು' ಇತ್ಯಾದಿ ಕವನ ಸಂಕಲನಗಳೂ ಹಾಗೂ 'ಸ್ತ್ರೀಲೋಕ' ಕಾದಂಬರಿ ಬರೆದು ಅತ್ಯುತ್ತಮ ಲೇಖಕಿಯಾಗಿರುವ ಬಗ್ಗೆ ನಾವಿಬ್ಬರು ದಂಪತಿಗಳು ಹಲವರೊಂದಿಗೆ ಮಾತುಕತೆಯ ಮೂಲಕ ಸಂತೋಷ ಹಂಚಿಕೊಂಡಿದ್ದೇವೆ. ಜೀವನದಲ್ಲಿ ಎದುರಾಗುವ ಸಣ್ಣಪುಟ್ಟ, ಲೋಪದೋಷಗಳನ್ನೇ ದೊಡ್ಡದು ಮಾಡಿ ಶತ್ರುತ್ವ ಬೆಳೆಸುವುದಕ್ಕಿಂತ, ಪ್ರೀತಿ ಸ್ನೇಹಗಳಿಂದ ಬದುಕು ಸುಂದರಗೊಳಿಸಿಕೊಳ್ಳುವುದೇ ಮಿಗಿಲು ಎಂದು ಕಂಡುಕೊಂಡಿದ್ದರಿಂದ, ನಮ್ಮ ನಡುವಿನ ಸ್ನೇಹ ಸೇತು ಅಚಲವಾಗಿದೆ.

ಆದ್ದರಿಂದಲೇ, ೧೯೯೭ರಲ್ಲಿ ಕೃಷ್ಣಪ್ಪ ಕಾಲವಶರಾದಾಗ ದೂರದೂರಿನ ಪ್ರವಾಸದಲ್ಲಿದ್ದ ಸವಿತಾ–ನಾಗಭೂಷಣ್ ಇವರು, ಪ್ರವಾಸ ಮೊಟಕುಗೊಳಿಸಿ ಹರಿಹರಕ್ಕೆ ಧಾವಿಸಿ ಕೃಷ್ಣಪ್ಪನವರ ಪಾರ್ಥಿವ ಶರೀರಕ್ಕೆ ಗೌರವ ಸಲ್ಲಿಸಿದರು. ತದನಂತರ ಬೆಂಗಳೂರಿಗೆ ಬಂದು ನನ್ನ ದು:ಖದ ದಿನಗಳಲ್ಲಿ ನನ್ನೊಂದಿಗಿದ್ದರು. ನಾಗಭೂಷಣ್ ದಂಪತಿಗಳು ಪ್ರೊ. ಕೃಷ್ಣಪ್ಪನವರಿಲ್ಲದ ಮುಂದಿನ ಕರ್ನಾಟಕದ ಪ್ರಗತಿಪರ ಹೋರಾಟಗಳು ಒಮ್ಮೆಲೆ ಸ್ಥಗಿತಗೊಂಡಿತ್ತೇನೋ ಎನ್ನಿಸಿ ಸ್ತಂಭೀಭೂತರಾಗಿದ್ದರು. ಅದರೊಂದಿಗೆ, ಅಂತರ್ಜಾತೀಯ ವಿವಾಹಿತರಾದ ಹೆಣ್ಣು ಮಕ್ಕಳು, ಸಂಗಾತಿಯನ್ನು ಕಳೆದುಕೊಂಡಾಗ, ಅವರ ಮುಂದಿನ ಜೀವನ ಹೇಗೆ? ಎಂದು ನನ್ನನ್ನು ನೋಡಿ ಚಿಂತಿತರಾಗಿದ್ದರು ಎನ್ನಿಸುತ್ತದೆ.

'ಕಣ್ ಕಾಣದು ಕರುಳ್ ಕಂಡಿತು' ಎಂಬಂತೆ ಮಡಿಕೇರಿಯಲ್ಲಿ ನಾಗಭೂಷಣ್‌ರವರಿಗೆ ತೀವ್ರ ಅನಾರೋಗ್ಯ ಉಂಟಾದಾಗ, ನಾನು – ಗಾಯಿತ್ರಿ ರುದ್ರಪ್ಪ ಅಲ್ಲಿಗೆ ತೆರಳಿ ಧೈರ್ಯ ಉತ್ಸಾಹ ಮಾತುಗಳೊಂದಿಗೆ ಸಕಲ ನೆರವು ನೀಡುವುದಾಗಿ ಭರವಸೆಯ ಮಾತುಗಳಾಡಿ ಬಂದಿದ್ದೆವು. ಸಾಮಾಜಿಕ ಪರಿವರ್ತನೆಯ, ಮಾನವೀಯ ಸಮಾಜ ಕಟ್ಟುವ ನಮ್ಮೆಲ್ಲರ ಪಯಣದ ಹಾದಿಯಲ್ಲಿ ಪರಸ್ಪರ ಸ್ಪಂದಿಸುತ್ತಾ, ಸಹಕರಿಸುತ್ತಾ ಇಂದಿಗೂ ಜೊತೆಯಾಗಿ ಸಾಗಿದ್ದೇವೆ. ಅನಾರೋಗ್ಯದ ಅವಧಿಯಲ್ಲಿ ವಿಶ್ವಾಸ ಕಳೆದುಕೊಳ್ಳದೆ, ಬದುಕನ್ನು ಇನ್ನೂ ಕ್ರಿಯಾತ್ಮಕಗೊಳಿಸಿಕೊಂಡು, ಕಂಪ್ಯೂಟರ್ ಕಲಿತು 'ಹೊಸ ಮನುಷ್ಯ' ಪತ್ರಿಕೆ ನಡೆಸುತ್ತ, ಹತ್ತಾರು ಸಮಾಜವಾದಿ ಸಂಕಥನಗಳನ್ನು ಪ್ರಕಟಿಸಿ ಲೋಹಿಯಾ ಜನ್ಮಶತಾಬ್ಧಿ ಪ್ರತಿಷ್ಠಾನವನ್ನು ಸ್ಥಾಪಿಸಿ ಅದರಡಿ ಸಮಾಜವಾದಿ ಚಿಂತನೆಗಳನ್ನು ಬಿತ್ತಿ ಬೆಳೆಸುತ್ತಿರುವ ನಾಗಭೂಷಣ್‌ರವರು, ನಮ್ಮೆಲ್ಲರಿಗೆ ಜೀವನ ಕಲೆಯನ್ನು ತೋರಿಸಿಕೊಟ್ಟ ಆದರ್ಶ ವ್ಯಕ್ತಿಯಾಗಿ ನಿಲ್ಲುವರು. **(ಮುಂದುವರೆಯುವುದು)**

***

**ಸಂಪಾದಕರ ಕೆಲ ಮಾತುಗಳು:**

ಶ್ರೀಮತಿ ಇಂದಿರಾ ಕೃಷ್ಣಪ್ಪ ಈ ಮೇಲೆ ನನ್ನ ಬಗ್ಗೆ ಪ್ರೀತಿ ವಿಶ್ವಾಸಗಳಿಂದ ಬರೆದಿದ್ದಾರೆ. ಅವರಿಗೆ ಧನ್ಯವಾದಗಳನ್ನು ತಿಳಿಸುವ ಹೊತ್ತಿನಲ್ಲೇ ಈ ಬರಹದಲ್ಲಿರುವ ಕೆಲ ದೋಷಗಳ ಬಗ್ಗೆ ಓದುಗರ ಗಮನ ಸೆಳೆಯುವುದು ನನ್ನ ಕರ್ತವ್ಯವೆಂದು ಭಾವಿಸಿದ್ದೇನೆ. ಈ ದೋಷಗಳಿಗೆ ಬಹುಶಃ ಮುವ್ವತ್ತು ವರ್ಷಗಳಿಗೂ ದೀರ್ಘವಾದ ನೆನಪು ಸ್ವಲ್ಪ ಮಸುಕಾಗಿರುವುದೇ ಕಾರಣವಿರಬಹುದು.

ನಾನು ೧೯೮೨ರ ಆರಂಭದಲ್ಲಿ ಭದ್ರಾವತಿ ಆಕಾಶವಾಣಿಗೆ ಬಂದಾಗ, ಅದು ಪೂರಾ ಮರುಪ್ರಸಾರ ಕೇಂದ್ರವಾಗಿತ್ತು. ಚಿತ್ರಗೀತೆಗಳ ಹೊರತಾಗಿ ಆ ಕೇಂದ್ರದಿಂದ ಯಾವುದೇ ಮೂಲ ಕಾರ್ಯಕ್ರಮಗಳೆಂಬುವು ಪ್ರಸಾರವಾಗುತ್ತಿರಲಿಲ್ಲ. ನಾನು ಬಂದ ನಂತರ ಅಲ್ಲಿನ ಸಿಬ್ಬಂದಿಯ ಸಹಕಾರದೊಂದಿಗೆ ಹೊರಗಿನ ಪ್ರತಿಭೆಗಳನ್ನು ನಿಲಯಕ್ಕೆ ಆಹ್ವಾನಿಸಿ ನಾಲ್ಕಾರು ಮೂಲ ಕಾರ್ಯಕ್ರಮಗಳ ಪ್ರಸಾರ ಆರಂಭಿಸಿದೆ. ಹಿರಿಯ ಸಹೋದ್ಯೋಗಿಯಾಗಿ ಎಂ.ಎಸ್.ಕೆ. ಪ್ರಭು ಬಂದ ನಂತರ ಅವರ ಸ್ಫೂರ್ತಿಯಲ್ಲಿ ಒಂದು ನಾಟಕವನ್ನು ತಯಾರು ಮಾಡಿದ್ದೂ ನೆನಪು. ಹಾಗಾಗಿ ಇಂದಿರಾ ಅವರು ಭದ್ರಾವತಿ ಆಕಾಶವಾಣಿಗೆ ಕಾರ್ಯಕ್ರಮ ನೀಡಲು ಕಾಲಿರಿಸಿದ್ದು ೧೯೮೨ರ ನಂತರವೇ.

ಇನ್ನು ನಾನು ಭದ್ರಾವತಿಗೆ ಬರುವ ಹೊತ್ತಿಗೆ ಸಮಾಜವಾದಿ ಯುವಜನ ಸಭಾ ನಿಷ್ಕ್ರಿಯವಾಗಿ, ದಸಂಸ ಸಾಕಷ್ಟು ಕ್ರಿಯಾಶೀಲವಾಗಿದ್ದು ಸಮಾಜವಾದಿ ಗೆಳೆಯರು ದಸಂಸವನ್ನು ಬಲಪಡಿಸಲು ಕೃಷ್ಣಪ್ಪನವರಿಗೆ ಸಾಥ್ ನೀಡುತ್ತಿದ್ದರು. ನಾನೂ ಅವರ ಜೊತೆ ಸೇರಿಕೊಂಡೆ. ಕೃಷ್ಣಪ್ಪನವರು ದಸಂಸದ ಹೊರಗಿದ್ದ



**ಮದುವೆಯ ನಂತರ ನಾವು ಒಂದೆರಡು ಕುಟುಂಬಗಳು ಕೃಷ್ಣಪ್ಪನವರ ಕುಟುಂಬದ ಜೊತೆ ಕೈಗೊಂಡ ದ.ಭಾರತ ಪ್ರವಾಸದ ಸಂದರ್ಭದಲ್ಲಿ ತೆಗೆದ ಚಿತ್ರ (೧೯೮೪)**

ಪ್ರಗತಿಪರ ಗೆಳೆಯರನ್ನು ಸೆಳೆಯಲು ಶಿವಮೊಗ್ಗದಲ್ಲಿ ಸಾಂಸ್ಕೃತಿಕ ವೇದಿಕೆಯೊಂದನ್ನು ರಚಿಸಲು ನನಗೆ ಸೂಚಿಸಿದಾಗ, ನಾನು 'ಮುನ್ನಡೆ' ಎಂಬ ಸಂಘಟನೆಯ ಪ್ರಯತ್ನ ಮಾಡಿದ್ದು ನೆನಪಿದೆ.

ಇನ್ನು ನನ್ನ ಮದುವೆಯ ದಿನಾಂಕ ಮಾತ್ರವಲ್ಲ, ಮದುವೆಯ ಸಕಲ ವಿವರಗಳೂ ಮದುವೆ ನೋಂದಣಿಯ ನಂತರ ಕೃಷ್ಣಪ್ಪನವರ ಮನೆಯಲ್ಲಿ ನಡೆದ ಸಂತೋಷ ಕೂಟದಲ್ಲಿಯೇ ನಿರ್ಧಾರವಾಗಿತ್ತೆಂದು ನೆನಪು. ಉದಾಹರಣೆಗೆ, ಮದುವೆ ಗೆಳೆಯ ಎಂ ಚಂದ್ರಶೇಖರಯ್ಯನವರ ಮನೆಯಂಗಳದಲ್ಲಿ ನಡೆಯುವುದೆಂದೂ, ಕೃಷ್ಣಪ್ಪನವರ ತಮ್ಮ ನಮ್ಮ ಮದುವೆ ಫೋಟೋ ತೆಗೆಯುವುದೆಂದೂ ತೀರ್ಮಾನವಾಗಿತ್ತು!

ನನ್ನ ಮದುವೆ ನಡೆದದ್ದು ೧೯೮೪ರ ಅಕ್ಟೋಬರ್ ೨೧ರಂದು. ಮದುವೆ ನೋಂದಣಿಯಾದ ಒಂದು ವಾರದಲ್ಲಿ. ನನ್ನ ಮದುವೆ. ಆಹ್ವಾನ ಪತ್ರಿಕೆ ಮುದ್ರಿತವಾಗಿ ಬಂಧು–ಮಿತ್ರರಿಗೆ ಅಂಚೆ ಮೂಲಕ ಕಳಿಸಿ ನಿಟ್ಟಿಸಿರು ಬಿಡುವ ಹೊತ್ತಿಗೆ ಮದುವೆ ಇನ್ನೆರಡು ದಿನವಿತ್ತಷ್ಟೇ. ಅಷ್ಟರಲ್ಲಿ ನಾನು ತುರ್ತಾಗಿ ನನ್ನ ಮನೆಯ ಕಡೆಯವರನ್ನು ಕಾಣಲು ಬೆಂಗಳೂರಿಗೆ ಹೋಗಬೇಕಾಯಿತು. ಏಕೆಂದರೆ, ನನ್ನೆಲ್ಲ ಪ್ರಯತ್ನಗಳ ಹೊರತಾಗಿಯೂ ಈ ಮದುವೆಗೆ ನನ್ನ ಮನೆಯ ಕಡೆಯವರೆಲ್ಲರ ವಿರೋಧವಿತ್ತಾದರೂ, ನನ್ನ ತಂದೆ–ತಾಯಿ, ಅಣ್ಣ–ತಂಗಿ ಮತ್ತು ಅಣ್ಣನ ಪುಟ್ಟ ಮಕ್ಕಳು ಮದುವೆಗೆ ಬರಬೇಕೆಂಬುದು ನನ್ನ ತೀವ್ರ ಇಚ್ಛೆಯಾಗಿತ್ತು. ಆದರೆ ಅವರು ಆಗಮಿಸುವ ಸೂಚನೆ ಕಾಣದ್ದರಿಂದ ಗೆಳೆಯ ಎಂ. ಚಂದ್ರಶೇಖರಯ್ಯನವರಿಗೆ ಕೃಷ್ಣಪ್ಪನವರ ಕುಟುಂಬವೂ ಸೇರಿದಂತೆ ಭದ್ರಾವತಿಯ ಎಲ್ಲ ಗೆಳೆಯರಿಗೂ ಆಹ್ವಾನ ಪತ್ರಿಕೆ ಮುಟ್ಟಿಸುವಂತೆ ಕೋರಿ ನಾನು ಬೆಂಗಳೂರಿಗೆ ಹೋದೆ. ಮದುವೆಯ ಹಿಂದಿನ ದಿನ ವಾಪಸಾಗಿ ಮದುವೆಯ ಇತರ ವ್ಯವಸ್ಥೆಗಳಲ್ಲಿ ಚಂದ್ರಶೇಖರಯ್ಯನವರೊಂದಿಗೆ ಮಗ್ನನಾದೆ. ಚಂದ್ರಶೇಖರಯ್ಯನವರ ಪ್ರಕಾರ, ಮದುವೆಯ ಕರೆಯೋಲೆಯನ್ನು ಕೃಷ್ಣಪ್ಪನವರಿಗೆ ಮುಟ್ಟಿಸಲಾಗಿತ್ತು. ಜೊತೆಗೆ, ನಮ್ಮ ಕಡೆಯಿಂದ ಲೋಪವೇ ಆಗಿದ್ದರೂ ಕೃಷ್ಣಪ್ಪನವರ ಕುಟುಂಬ ಸಣ್ಣಪುಟ್ಟ ಔಪಚಾರಿಕೆಗಳನ್ನು ನಿರೀಕ್ಷಿಸುವುದಿಲ್ಲ ಎಂಬ ಧೈರ್ಯವೂ ಇತ್ತು. ಆದರೆ ಕೃಷ್ಣಪ್ಪನವರ ಕುಟುಂಬವೂ ಬರಲಿಲ್ಲ, ಫೋಟೋ ತೆಗೆಯಲು ಅವರ ತಮ್ಮನೂ ಬರಲಿಲ್ಲ. ನನ್ನ ತಂದೆ–ತಾಯಿ ಮುಂತಾದವರು ಬರಲೇ ಇಲ್ಲ ಎಂಬ ಚಿಂತೆ–ತಳಮಳಗಳಲ್ಲಿದ್ದ ನಾನು ಚಂದ್ರಶೇಖರಯ್ಯನವರನ್ನು ಅವರ ಮನೆಗೆ ಕಳಿಸಿದರೂ, ಹಠಕ್ಕೆ ಬಿದ್ದವರಂತೆ ಕೃಷ್ಣಪ್ಪ ದಂಪತಿಗಳು ಮದುವೆ ಸ್ಥಳದೆಡೆಗೆ ಸುಳಿಯಲೇ ಇಲ್ಲ.

ಇದರ ಮರ್ಮ ಈವರೆಗೂ ನನಗೆ ಗೊತ್ತಾಗಿಲ್ಲ!

***



**(ನಿವೃತ್ತ ತಹಶೀಲ್ದಾರರಾದ ಇಂದಿರಾ ಕೃಷ್ಣಪ್ಪನವರು ಬಿ.ಕೃಷ್ಣಪ್ಪ ಟ್ರಸ್ಟ್ ಮತ್ತು ಮಾನವ ಮಂಟಪ ಟ್ರಸ್ಟ್‌ಗಳ ಮ್ಯಾನೇಜಿಂಗ್ ಟ್ರಸ್ಟೀ ಹಾಗೂ ದಸಂಸ(ಅಂಬೇಡ್ಕರ್‌ವಾದ)ದ ಪದಾಧಿಕಾರಿಯೂ ಆಗಿದ್ದು, ಲೇಖಕಿಯಾಗಿ ಅನೇಕ ಕಥೆಗಳನ್ನೂ ಮತ್ತು ಸ್ತ್ರೀ ಹಾಗೂ ಸಾಮಾಜಿಕ ವಿಷಯಗಳನ್ನು ಕುರಿತ ಅನೇಕ ಪುಸ್ತಕಗಳನ್ನು ಬರೆದಿದ್ದಾರೆ ಮತ್ತು ಸಂಪಾದಿಸಿದ್ದಾರೆ.)**

ಯುವ ಸಮಾಜವಾದಿ ಚಿಂತನ ವೇದಿಕೆ

# ಆಡಿ ಬೆಳೆದ ಅಂಗಳದಲ್ಲೀಗ.....

–ಸ್ನೇಹಾ ಎನ್.ಆರ್.

**ಮೊ**ನ್ನೆ ಅಚಾನಕ್ಕಾಗಿ ನಾನು ೧೦ನೇ ತರಗತಿ ವರೆಗೆ ಓದಿದ್ದ ಮೈಸೂರಿನ ಗಂಗೋತ್ರಿ ಶಾಲೆಗೆ ಹೋಗಿದ್ದೆ. ಅದೊಂದು ಕನ್ನಡಶಾಲೆ. ಮೈಸೂರು ವಿಶ್ವವಿದ್ಯಾಲಯವೇ ಮುನ್ನಡೆಸುತ್ತಿದ್ದ, ಸಾಹಿತಿ–ಚಿಂತಕರು, ವಿವಿ ಅಧ್ಯಾಪಕರು, ಸಿಬ್ಬಂದಿ ಮತ್ತು ಸುತ್ತಲಿನ ಕೂಲಿ ಕಾರ್ಮಿಕರ ಮಕ್ಕಳು ಒಟ್ಟಿಗೆ ಯಾವುದೇ ಭೇದವಿಲ್ಲದೆ ಓದುತ್ತಿದ್ದ ಶಾಲೆಯದು. ಶಾಲೆಯ ಶೌಚಾಲಯ ಶುಚಿಗೊಳಿಸಲು ಬರುತ್ತಿದ್ದ ನಂಜಮ್ಮನ ಮಗಳು ಲಕ್ಷ್ಮಿಯೂ ನಮ್ಮ ಸಹಪಾಠಿ. ಒಟ್ಟಿಗೆ ಪಾಠ, ಒಂದೇ ಅಂಗಳದಲ್ಲಿ ಆಟ. ಆ ಶಾಲೆಯಲ್ಲಿ ಕಳೆದ ಸತತ ಹನ್ನೆರಡು ವರ್ಷಗಳಲ್ಲಿ ಒಂದೇ ಒಂದು ದಿನವೂ ಜಾತಿ–ವರ್ಗದ ತಾರತಮ್ಯ ಸಹಿತ ಯಾವುದೇ 'ಅನ್ಯ' ಸಂಗತಿಗಳು ನನ್ನನ್ನು ಸೋಂಕಿರಲಿಲ್ಲ. ಇದನ್ನೇ ಸಮತಾವಾದ, ಸಮಾಜವಾದ ಎಂದೆಲ್ಲ ವ್ಯಾಖ್ಯಾನಿಸಬಹುದಾದರೂ, ಆಗ ನಮಗದು ಅತ್ಯಂತ ಸಹಜವಾದ, ಸಿಹಿಯಾದ ಪ್ರಕ್ರಿಯೆಯಾಗಿತ್ತಷ್ಟೆ.

ಶಾಲೆಯ ದಿನಗಳಲ್ಲಿ ನಾವೊಂದಷ್ಟು ಗೆಳೆಯರು ಮೈಸೂರಿನಲ್ಲಿ ಆಗಾಗ ನಡೆಯುತ್ತಿದ್ದ ಹೋರಾಟ, ಮೆರವಣಿಗೆ, ಮಾನವ ಸರಪಳಿಗಳಲ್ಲಿ ಪೋಷಕರೊಂದಿಗೆ ಉತ್ಸಾಹದಿಂದ ಪಾಲ್ಗೊಳ್ಳುತ್ತಿದ್ದೆವು. ವರದಕ್ಷಿಣೆ ಸಾವು, ಬಾಲಕಾರ್ಮಿಕ ಪದ್ಧತಿ ವಿರೋಧ ಮತ್ತಿತರ ಸಾಮಾಜಿಕ ಅನಿಷ್ಟಗಳ ವಿರುದ್ಧದ ಹೋರಾಟಗಳಿಂದ ಹಿಡಿದು ಕೊಲ್ಲಿಯುದ್ಧದಂತಹ ಸಂಗತಿಗಳವರೆಗೂ ನಮ್ಮ ಸ್ಪಂದನೆ ವ್ಯಕ್ತವಾಗುತ್ತಿತ್ತು. ಒಮ್ಮೆ ನಮ್ಮ ಶಾಲೆಯ ಮೇಷ್ಟ್ರಾಗಿದ್ದ ಸಿದ್ಧೇಗೌಡರ ತಂಗಿ ವರದಕ್ಷಿಣೆ ಕಿರುಕುಳದಿಂದ ಮೃತಪಟ್ಟ ಸಂದರ್ಭ 'ಸಮತಾ ವೇದಿಕೆ' ನೇತೃತ್ವದಲ್ಲಿ ನಡೆದ ಮೆರವಣಿಗೆಯಲ್ಲಿ ಶಾಲೆಯ ವಿದ್ಯಾರ್ಥಿಗಳೆಲ್ಲ ಭಾಗವಹಿಸಿದ್ದೆವು. ಇಂಥೆಲ್ಲ ಸಂಗತಿಗಳು, ಪರರ ನೋವಿಗೆ ಸ್ಪಂದಿಸುವುದನ್ನು ಕಲಿಸುತ್ತಿದ್ದವು.

ಹೀಗೆ, ನಾನಾ ಹೋರಾಟ, ಚಳವಳಿಗಳ ಸಂದರ್ಭಗಳಲ್ಲಿ ಸಮತಾವಾದ, ಸಮಾಜವಾದ ಇತ್ಯಾದಿ ಪದಗಳನ್ನು ಕಿವಿಮೇಲೆ ಹಾಕಿಕೊಂಡಿದ್ದ, ಬದುಕಿನ ಸಂದರ್ಭದಲ್ಲಿ ಅದರದ್ದೇ ಆದ ಅನುಭವಗಳನ್ನು ಹೊಂದಿದ್ದ ನನಗೆ ಈ ವಿಷಯಗಳ ಕುರಿತು ಓದಿನ ಅರಿವು ಅಷ್ಟಕ್ಕಷ್ಟೆ. ಈಚೆಗೆ ಪ್ರಕಟವಾದ 'ನಮ್ಮ ಸಮಾಜವಾದಿಗಳು' ಪುಸ್ತಕ ಓದುತ್ತಿದ್ದಾಗ, ಅಲ್ಲಿ ಅನಾವರಣಗೊಂಡ ಹಲವು ಸಮಾಜವಾದಿಗಳ ಬದುಕು ನನ್ನೊಳಗನ್ನು ಕಲಕಿತು. ವೈಯಕ್ತಿಕ ಬದುಕಿನ ಸಂಕಟ, ಸಂಕಷ್ಟಗಳನ್ನು ಮೀರಿ ಸಮಾಜದ ಸಂಕಟಕ್ಕೆ ಮಿಡಿಯುತ್ತಿದ್ದ, ಸಮಾಜಮುಖಿ ಚಿಂತನೆಗಳನ್ನು ಮಾತಿಗೆ ಸೀಮಿತಗೊಳಿಸಿಕೊಳ್ಳದೆ ಬದುಕಿದ್ದ ಇವರೆಲ್ಲ ನಮ್ಮ ಸುತ್ತಲೇ ಇರುವ ಬರೀ 'ಮಾತುಗಾರ'ರಿಗಿಂತ ಅದೆಷ್ಟೋ ಮೇಲು ಎನ್ನಿಸತೊಡಗಿತು. ನಾನೂ ಕೂಡ, ಬರೀ ಮಾತಿನಲ್ಲೇ ವಾದಗಳ ಸೌಧ ಕಟ್ಟುವವರ ಸಾಲಿನಲ್ಲಿರುವವಳೇನಾ ಎನ್ನುವ ಪ್ರಶ್ನೆ ಆಗಾಗ ನನ್ನನ್ನು ಕಾಡುತ್ತಿರುತ್ತದೆ.

ಬಾಲ್ಯದಲ್ಲಿ ಅಷ್ಟೊಂದು ಸಹಜವಾಗಿ, ಸುಲಭವಾಗಿ ದಕ್ಕಿದ್ದ ಇಂಥೆಲ್ಲ ಅನುಭವಗಳನ್ನು ಈಗ ವೈಯಕ್ತಿಕ ದ್ವೀಪಗಳಂತಾಗಿರುವ ನಮ್ಮ ಬದುಕಿನಲ್ಲಿ ದಕ್ಕಿಸಿಕೊಳ್ಳುವುದು ಕಷ್ಟಸಾಧ್ಯವಾಗುತ್ತಿದೆ. ಸಮತೆ, ಸಮಾನತೆಯ ಆಶಯ ನನ್ನ ದೈನಂದಿನ ಬದುಕಿನಲ್ಲಿ ಉಳಿದಿರಬಹುದಾದ ಒಂದೇ ಸಂಗತಿ ಎಂದರೆ ಅದು ದೂರದ ಹಳ್ಳಿಯ ಮಕ್ಕಳಿಗೆ ಇಂಗ್ಲಿಷ್ ಪಾಠ ಮಾಡುವ ಸರಕಾರಿ ಕರ್ತವ್ಯದಲ್ಲಿ ಮತ್ತು ನಿತ್ಯ ಆ ಹಳ್ಳಿಗೆ ಹೋಗಿ ಬರುವ ಸರಕಾರಿ ಬಸ್ ಪ್ರಯಾಣದಲ್ಲಿ ಮಾತ್ರ.

ಯಾಕೆ ಹೀಗೆ? ಬಹುಶಃ, ಆಗೆಲ್ಲ ಸೈದ್ಧಾಂತಿಕ ಬದ್ಧತೆಯ ಹೋರಾಟಗಳು ಪ್ರಖರವಾಗಿದ್ದ ಕಾರಣ ಮತ್ತು ಅವುಗಳ ಪ್ರೇರಣೆಯಿಂದ ನಡೆ–ನುಡಿಯಲ್ಲಿ ಹೆಚ್ಚಿನ ಫರಕು ಇಲ್ಲದಂತೆ ಬದುಕುವುದು ಆಗಿನವರಿಗೆ ಸಾಧ್ಯವಾಗಿರಬಹುದು. ನಮ್ಮ ಹಿಂದಿನ ತಲೆಮಾರಿನವರ ಆದ್ಯತೆಗಳು ನಮ್ಮ ಆದ್ಯತೆಗಳಾಗಿ ಉಳಿದಿಲ್ಲ. ನಮ್ಮ ಅವಶ್ಯಕತೆಗಳು ಅವರಿಗೆ ಅನಿವಾರ್ಯವಾಗಿರಲಿಲ್ಲವೇನೋ. ಆ ಕಾಲಕ್ಕೂ ಸಿದ್ಧಾಂತವನ್ನು, ಹೋರಾಟಗಳನ್ನು ತಮ್ಮ ರಾಜಕೀಯ ಕನಸಿನ ಅಂಬರಕ್ಕೆ ಮೆಟ್ಟಿಲನ್ನಾಗಿಸಿಕೊಂಡವರು, ಆ ಮೂಲಕವೇ ರಾಜಕಾರಣದಲ್ಲಿ ಮೇಲೇರಿದವರು, ನಂತರ ತಾವು ನಂಬಿದ್ದ ಸಿದ್ಧಾಂತದ ಗೊಡವೆಯೇ ಇಲ್ಲದಂತೆ ಬಾಳಿ–



ಚಿತ್ರ: ರಾಮನಗೌಡ

ಅಳಿದವರಿಗೇನೂ ಕಡಿಮೆ ಇಲ್ಲ. ಆದರೆ, ಇವತ್ತಿಗೂ ಆದರ್ಶವಾಗಿ ಉಳಿದವರು ಕೆಲವರಷ್ಟೆ.

ನಾವೆಲ್ಲ ಬಾಲ್ಯದಲ್ಲಿ ಮನೆಯ ಮತ್ತು ಶಾಲೆಯ ಅಂಗಳದಲ್ಲಿ ಕಂಡು–ಕೇಳಿದ ಆದರ್ಶಮಯ ನಡೆ–ನುಡಿಗಳೆಲ್ಲ ಈಗ ನಮ್ಮನ್ನೇ ಅಣಕಿಸುವಂತೆ ಅರ್ಥಕಳೆದುಕೊಳ್ಳುತ್ತಿವೆ. ನಮ್ಮೆದುರು ಹೆಜ್ಜೆ ಹೆಜ್ಜೆಗೂ ಹೋರಾಟ ಮಾಡಬೇಕಾದ ಸನ್ನಿವೇಶಗಳು ಸೃಷ್ಟಿಯಾಗುತ್ತಿದ್ದರೂ ಎದೆಯೊಡ್ಡುವಂತ ಗಟ್ಟಿ ಹೋರಾಟಗಳು ಮೊಳಗುತ್ತಿಲ್ಲ.

ದಶಕದ ಹಿಂದೆ ಪ್ರಖರವಾಗಿ ಬೆಳಗಿದ ರೈತ, ದಲಿತ, ಪ್ರಗತಿಪರ ಹೋರಾಟಗಳೆಲ್ಲವೂ ವೈಯಕ್ತಿಕ ಅಹಂಕಾರಗಳಿಗೆ ತಲೆ ಕೊಟ್ಟು 'ಆತ್ಮ'ಹತ್ಯೆ ಮಾಡಿಕೊಂಡಿರುವ ವಾಸ್ತವದಲ್ಲಿ, ಹೋರಾಟಗಳಿಗೇನೂ ಕೊರತೆ ಇಲ್ಲ. ಹೋರಾಟಗಾರರೂ ದಂಡಿ ದಂಡಿಯಾಗಿದ್ದಾರೆ. ಆದರೆ, ಕಂಫರ್ಟ್ ಝೋನ್‌ನಲ್ಲಿ ಅಥವಾ ಗಾಜಿನ ಮನೆಯಲ್ಲಿ ನಿಂತು ಕಲ್ಲು ತೂರುವವರೇ ಹೆಚ್ಚು. ಹಲವು 'ಚಳವಳಿ ಕೋರ'ರ ಗಮ್ಯ ಒಂದಿಲ್ಲೊಂದು 'ದಂಧೆ'ಯಲ್ಲಿ ನೆಲೆಗೊಳ್ಳುವುದರಿಂದ ನಿಜ ಹೋರಾಟಗಳು ಕೂಡ 'ಸೊಲ್ಲು' ಕಳೆದುಕೊಂಡಂತೆ; ಪರಿಣಾಮದಲ್ಲಿ 'ಅರ್ಥ ಹೀನ' ಎಂಬಂತೆ ಭಾಸವಾಗುತ್ತಿವೆ.

ಮಾನಾಪಮಾನಗಳ ಗೊಡವೆ ಇಲ್ಲದ, ಹೊಂದಾಣಿಕೆಯೇ ಬದುಕಿನ ಸೂತ್ರದಂತಾಗಿರುವ ಇಂಥ ಕಾಲಮಾನದಲ್ಲಿ ನಿಷ್ಠೂರ ನಡೆ, ನೇರ ನುಡಿ, ಸ್ವಾರ್ಥರಹಿತ ಬದುಕು, ತ್ಯಾಗ ಭಾವಗಳನ್ನು ಬದುಕಿನುದ್ದಕ್ಕೂ ಸ್ಫುರಿಸಿದ್ದ ಒಬ್ಬ ಮಿಣುಕಮ್ಮನನ್ನೋ, ಗೇರುಗಲ್ಲು ಕರಿಬಸಪ್ಪಗೌಡರನ್ನೋ, ಪೊನ್ನಮ್ಮಾಳ್ ಅವರನ್ನೋ ಎಲ್ಲಿ ಹುಡುಕುವುದು?

ನನ್ನ ಗಂಗೋತ್ರಿ ಶಾಲೆಯೂ ಈಗ ಹಿಂದಿನಂತೆ ಉಳಿದಿಲ್ಲ. ಅಲ್ಲಿಗೆ ವಿವಿಯ ಅಧ್ಯಾಪಕರು, ಸಿಬ್ಬಂದಿ ಮಕ್ಕಳು ಬರುವುದು ಯಾವತ್ತೋ ನಿಂತು ಹೋಗಿದೆ. ಸುತ್ತಲಿನ ಕಡುಬಡವರ ಒಂದಷ್ಟು ಮಕ್ಕಳು ಬಂದು ಹೋಗುತ್ತವೆ, ಸರಕಾರದ ಅನುದಾನ ದಕ್ಕಿದ್ದರೂ ಅತ್ಯಂತ ಅವ್ಯವಸ್ಥೆಯ ಸರಕಾರಿ ಶಾಲೆಗಿಂತ ದಯನೀಯ, ನಿಸ್ತೇಜ ಸ್ಥಿತಿಯಲ್ಲಿದೆ.

ಶಾಲೆಯ ಅಂಗಳದಲ್ಲಿ ನಿಂತಿದ್ದಾಗ ಶಿಕ್ಷಕರೊಬ್ಬರು ಡಬ್ಬಿಗಳಲ್ಲಿ ಚಾಕಲೇಟ್, ಚಕ್ಕುಲಿಗಳನ್ನು ತುಂಬಿಟ್ಟುಕೊಂಡು, ಅದನ್ನು ಮಕ್ಕಳಿಗೆ ಮಾರುತ್ತಿದ್ದ ದೃಶ್ಯ ಕಂಡಿತು. 'ತಿಂಡಿಗಾಗಿ ಮಕ್ಕಳು ರಸ್ತೆ ಬದಿ ಅಂಗಡಿಗೆ ಓಡ್ತವೆ. ಅವರಿಗೂ ಸಮಸ್ಯೆ, ನಮಗೂ ತಾಪತ್ರಯ. ಅದಕ್ಕೆ ಈ ಅನುಕೂಲಕರ ವ್ಯವಸ್ಥೆ' ಎಂದು ಮುಗುಳ್ನಕ್ಕರವರು. ಆ ನಗೆಯಲ್ಲಿ ಯಾವ ಅರ್ಥವನ್ನು ಕಲ್ಪಿಸಿಕೊಳ್ಳುವುದೂ ನನಗೆ ಸಾಧ್ಯವಾಗಲಿಲ್ಲ.

ಅಲ್ಲಿಂದ, ವಿಶ್ವವಿದ್ಯಾಲಯದ ಮಾನಸ ಗಂಗೋತ್ರಿ ಅಂಗಳದಲ್ಲಿ ಹಾದು ಹೋಗೋಣವೆಂದು ಹೊರಟೆ. ಆದರೆ, ಒಳಗೆ ಹೋಗಲು ದಾರಿಗಳೇ ತೆರೆದುಕೊಳ್ಳಲಿಲ್ಲ. ನಾಲ್ಕು ದಿಕ್ಕಿನಲ್ಲೂ, ಸಾಮಾನ್ಯವಾಗಿ 'ಮಠ'ಗಳಲ್ಲಿ ಕಾಣುವಂತೆ ಬೃಹತ್ ಗಾತ್ರದ 'ಮಹಾದ್ವಾರ'ಗಳನ್ನು ನಿರ್ಮಿಸುವ ಕಾಮಗಾರಿ ಬಿರುಸಿನಿಂದ ನಡೆಯುತ್ತಿತ್ತು.

ನಾವು ಬಾಲ್ಯದಲ್ಲಿದ್ದಾಗ ಇಡೀ ಆವರಣ ಅತ್ಯಂತ ಆಹ್ಲಾದವನ್ನು, ಸಂಭ್ರವನ್ನು ತುಂಬುತ್ತಿದ್ದ ಸ್ಥಳವಾಗಿತ್ತು. ನಾವಿನ್ನೂ ಒಂದೆರಡನೆ ತರಗತಿಯಲ್ಲಿದ್ದಾಗ ನಮ್ಮ ಶಾಲೆಯಿಂದ ಶಿಕ್ಷಕರೊಂದಿಗೆ ಕಾಲ್ನಡಿಗೆಯಲ್ಲಿ ಗಾಂಧಿ ಭವನಕ್ಕೆ ಸಾಲಾಗಿ ಬಂದು ಅಲ್ಲೊಂದಷ್ಟು ಹೊತ್ತು ಕಳೆದು ಹೋದ ನೆನಪು ಇನ್ನೂ ಹಸಿರು. ಪಿಯುಸಿ, ಡಿಗ್ರಿ ಕಲಿಕೆಯ ಐದು ವರ್ಷಗಳ ನಂತರ ಮತ್ತಲ್ಲಿಗೆ ಅಡಿ ಇಟ್ಟಾಗ, ಸಾಕಷ್ಟು ಬದಲಾವಣೆಗಳು ಗೋಚರಿಸಿದವು. ಶಾಲೆಯಲ್ಲಿ ಕಂಡು-ಕೇಳರಿಯದ ಜಾತಿ ವರ್ಗಗಳ ವಾಸನೆ ದಟ್ಟೈಸಿತ್ತು. ಬೇರೆ ಬೇರೆ ಕಾರಣಕ್ಕೆ ನನ್ನಲ್ಲಿ ಕಡೆದು ನಿಂತಿದ್ದ ಕೆಲವು ಸಂಗತಿಗಳು ಭ್ರಮೆಗಳೆನಿಸತೊಡಗಿದ್ದವು.

ಹಿಂದೆಲ್ಲ, ಸಣ್ಣ ಬೇಲಿ ಎಳೆದರೂ ಪ್ರತಿಭಟನೆಗೆ ಸಾಕ್ಷಿಯಾಗುತ್ತಿದ್ದ ವಿವಿ ಅಂಗಳದಲ್ಲೀಗ ಹಸಿರು ಕಡಿದು, ಕಾಂಕ್ರಿಟ್ ಕಾಡು ನಿರ್ಮಾಣವಾಗುತ್ತಿದ್ದರೂ ವಿರೋಧದ ಸೊಲ್ಲು ಕೇಳಿಸುತ್ತಿಲ್ಲ. ಬೌದ್ಧಿಕ ಚಿಂತನೆಗಳು, ವಿಚಾರ ವಾದ-ವಿವಾದ, ಚಿಂತನ-ಮಂಥನಗಳು ನಡೆಯುತ್ತಿದ್ದ ವಿಭಾಗಗಳಲ್ಲಿಯೂ ಭೌತಿಕ ಪ್ರಗತಿ ಢಾಳಾಗಿ ನಡೆಯುತ್ತಿದೆ. ಜ್ಞಾನ ಎಲ್ಲೆಡೆಯಿಂದ ಮುಕ್ತವಾಗಿ ಹರಿದು ಬಂದು, ಈ ಗಂಗೋತ್ರಿಯನ್ನು ಸೇರಲಿ ಎಂಬ ಕುವೆಂಪು ಅವರ ಆಶಯದಂತೆ ಒಂದು ಕಾಲಕ್ಕೆ ತೆರೆದ ಪುಸ್ತಕದಂತಿದ್ದ ವಿವಿ ಅಂಗಳ ಈಗ ಕದ ಮುಚ್ಚಿದ ಕಾರಾಗೃಹದಂತೆ ಕಾಣಿಸುತ್ತಿದೆ!

ಈಗಲೂ ಈ ವಿಶ್ವವಿದ್ಯಾಲಯದಲ್ಲಿ ಚಿಂತಕ ಅಧ್ಯಾಪಕರಿದ್ದಾರೆ. ಎಲ್ಲಾ ವಾದಗಳನ್ನು ಸಾಹಿತ್ಯದ ಪಾಠಗಳನ್ನಾಗಿ ಬೋಧಿಸುತ್ತಾರೆ. ಆದರೆ, ಕಾಲ ಬುಡದಲ್ಲೇ ಬ್ರಹ್ಮಾಂಡ ಭ್ರಷ್ಟಾಚಾರಕ್ಕೆ ಸಾಕ್ಷಿಗಳು ತಲೆ ಎತ್ತಿ ಹೂಂಕರಿಸುತ್ತಿದ್ದರೂ ಮಾತು ಮರೆತವರಂತೆ ಮೌನಕ್ಕೆ ಶರಣಾಗಿದ್ದಾರೆ.

ಅದೊಂದು ಕಾಲಘಟ್ಟದಲ್ಲಿ ಎಷ್ಟೆಲ್ಲ ಜನಪರ ಚಳುವಳಿಗಳಿಗೆ ನಾಂದಿ ಹಾಡಿದ್ದ, ವೇದಿಕೆಯಾಗಿದ್ದ, ವಿದ್ಯಾರ್ಥಿ ಸಮುದಾಯವನ್ನು ಜನಪರ ಚಳುವಳಿಗಳತ್ತ ತುಡಿಯುವಂತೆ ಮಾಡಿದ್ದ ಮಾನಸ ಗಂಗೋತ್ರಿಯ ಆವರಣದಲ್ಲೀಗ ವಿಷಾಧದ ಛಾಯೆ ಆವರಿಸಿದಂತೆ ನನಗಂತೂ ಭಾಸವಾಯಿತು. ಆದರೆ, ಇಡೀ ವಿಶ್ವವಿದ್ಯಾಲಯ ಶತಮಾನೋತ್ಸವದ ಸಂಭ್ರಮಕ್ಕೆ ಅಣಿಯಾಗುತ್ತಿತ್ತು.

ಲಕ್ಷಾಂತರ ವಿದ್ಯಾರ್ಥಿಗಳಿಗೆ ಬದುಕಿನ ಮಾರ್ಗವನ್ನು ತೆರೆದಿಟ್ಟ ಒಂದೇ ಆವರಣದ ಈ ಎರಡು ಸಂಸ್ಥೆಗಳು; ಅವುಗಳ ಒಡಲಲ್ಲಿ ಸದ್ಯ ಜಾರಿಯಲ್ಲಿರುವ ವೈರುಧ್ಯದ ಸ್ಥಿತಿ-ಗತಿಗಳು ವಾಸ್ತವದ ಒಟ್ಟು ವ್ಯವಸ್ಥೆಯ ಸ್ಥಿತಿಗೆ ಕೈಗನ್ನಡಿಯಂತೆ ಕಂಡಿತು. ನನ್ನಲ್ಲಿನ ಅಳಿದುಳಿದ ಭ್ರಮೆಗಳೂ ಕಳಚಿ ಬಿದ್ದವು. ಯಾವುದೇ ವಾದಗಳ ಕುರಿತು ಮಾತನಾಡುವುದಕ್ಕಿಂತ ಮೌನವಾಗಿದ್ದು ಮಾಡುವುದೇ ಲೇಸೆನಿಸತೊಡಗಿತು.



**(ಒಂದು ದಟ್ಟ ಸಮಾಜವಾದಿ ವೈಚಾರಿಕ ಹಿನ್ನೆಲೆಯಲ್ಲಿ ಬೆಳೆದ ಲೇಖಕಿ ಎನ್.ಆರ್.ಸ್ನೇಹ, ವೃತ್ತಿಯಿಂದ ಹಳ್ಳಿಗಾಡಿನ ಕಾಲೇಜೊಂದರಲ್ಲಿ ಇಂಗ್ಲಿಷ್ ಉಪನ್ಯಾಸಕಿಯಾಗಿದ್ದು, ಭರತನಾಟ್ಯ ಕಲಾವಿದೆ ಕೂಡ; ಸಾಹಿತ್ಯ-ಸಂಸ್ಕೃತಿ ಚಟುವಟಿಕೆಗಳಲ್ಲೂ ಆಸಕ್ತಿ ಹೊಂದಿರುವವರು)**


**'ಹೊಸ ಮನುಷ್ಯ' ಪತ್ರಿಕೆಗೆ**

**ಹುಟ್ಟುಹಬ್ಬದ ಶುಭಾಶಯಗಳು**

ಬಡವರು ಅನ್ನ ಒದಗಿಸದೇ ಹೋದರೆ

ಶ್ರೀಮಂತರು ಹಣವನ್ನೇ ತಿನ್ನಬೇಕಾಗುತ್ತದೆ

– ರಷ್ಯನ್ ಗಾದೆ



ಕೆ.ಜಿ. ಶ್ರೀನಿವಾಸ್
ಸಪ್ತಗೃಹ ಅಪಾರ್ಟ್‌ಮೆಂಟ್ಸ್,
ನಂ. 301, 2ನೇ ಮುಖ್ಯರಸ್ತೆ,
16ನೇ ಕ್ರಾಸ್, ಮಲ್ಲೇಶ್ವರಂ,
ಬೆಂಗಳೂರು-560 003

ಸಮಕಾಲೀನ

# ರೈತರ ಸರಣಿ ಆತ್ಮಹತ್ಯೆ : ಏಕೆ?

**ನಗರೀಕರಣವೇ ನಿಜವಾದ ಅಭಿವೃದ್ಧಿಯೆಂದು ನಂಬಿದ ಈ ಆರ್ಥಿಕತೆ ಹುಟ್ಟಿಸುತ್ತಿರುವ ಜೀವನ ಆಶೋತ್ತರಗಳಿಗೆ, ಜೀವನ ಕ್ರಮಗಳಿಗೆ, ಜೀವನಮೌಲ್ಯಗಳಿಗೆ ರೈತರೂ ತಮ್ಮನ್ನು ಒಪ್ಪಿಸಿಕೊಂಡುಬಿಟ್ಟಿದ್ದಾರೆ. ಹೊರಗಿನ 'ಅಭಿವೃದ್ಧಿ'ಯ ವಾತಾವರಣದ ಒತ್ತಡ ಅಷ್ಟು ದಟ್ಟವಾಗಿದೆ. ಇಲ್ಲದಿದ್ದರೆ ಇಂದಿನ ಹಳ್ಳಿಗಳು ಈಗ ಕಾಣತೊಡಗುತ್ತಿರುವಂತೆ ನಮ್ಮ ನಗರಗಳ ಬಡ ಅಣಕುಗಳಂತೆ ಕಾಣತೊಡಗುತ್ತಿರಲಿಲ್ಲ. ರೈತರ ಮನೆಗಳು, ಆಚರಣೆಗಳು, ಖರ್ಚುಗಳು ಈ ಪರಿ-ಕೃಷಿ ಸಂಸ್ಕೃತಿಯ ಪರಿಧಿಗಳಾಚೆಗೆ- ಬದಲಾಗುತ್ತಿರಲಿಲ್ಲ. ಸರ್ಕಾರ ಕೃಷಿಯನ್ನು ಇನ್ನೂ ಕೈಗಾರಿಕೆಯೆಂದು ಘೋಷಿಸಿಲ್ಲವಾದರೂ ನಮ್ಮ ಹಳ್ಳಿಗಳ ವ್ಯವಹಾರಗಳೆಲ್ಲ ಕೈಗಾರಿಕಾ ಸಮಾಜದ ವ್ಯವಹಾರಗಳಂತಾಗಿ ಅವು ಕುರೂಪಿ ಕೈಗಾರಿಕಾ ಕಾಲೋನಿಗಳಂತೆ ಕಾಣತೊಡಗಿವೆ.**




**ಈ** ಸಾಲುಗಳನ್ನು ಬರೆಯುತ್ತಿರುವ ಹೊತ್ತಿನಲ್ಲಿ(ಜುಲೈ೨೫) ಕಳೆದ ವಾರವೊಂದರಲ್ಲೇ ರಾಜ್ಯದಲ್ಲಿ ನೂರಕ್ಕೂ ಹೆಚ್ಚು ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಒಂದು ತಿಂಗಳ ಹಿಂದೆ ಅಲ್ಲೊಂದು ಇಲ್ಲೊಂದೆಂಬಂತೆ ವರದಿಯಾಗುತ್ತಿದ್ದ ಈ ಆತ್ಮಹತ್ಯೆ ಈಗ ಸಾಂಕ್ರಾಮಿಕ ರೋಗದಂತೆ–ನಮ್ಮ ಸರ್ಕಾರ, ವಿರೋಧ ಪಕ್ಷಗಳು, ವಿವಿಧ ರೈತಸಂಘಗಳು ಕೈಮುಗಿದು ಬೇಡಿಕೊಳ್ಳುತ್ತಿದ್ದರೂ ಲೆಕ್ಕಿಸದೆ–ಹರಡಿದೆ. ಸರ್ಕಾರ ಬ್ಯಾಂಕುಗಳಿಗೆ ಸಾಲ ವಸೂಲಾತಿಗೆ ಒತ್ತಡ ಹೇರದಂತೆ ಸೂಚಿಸುತ್ತಿದೆ, ಮೀಟರ್ ಬಡ್ಡಿ ದಂಧೆಕೋರರನ್ನು ಬಂಧಿಸುತ್ತಿದೆ, ವಿರೋಧ ಪಕ್ಷವೊಂದು ಸಹಾಯವಾಣಿ ತೆರೆದಿದೆ, ರೈತಸಂಘಗಳು ಸಾಂತ್ವನ ಮತ್ತು ಶಿಕ್ಷಣ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿವೆ. ಆದರೆ ಇವಾವುವೂ ರೈತರ ಆತ್ಮಹತ್ಯೆ ಸರಣಿಯನ್ನು ಸದ್ಯಕ್ಕಂತೂ ತುಂಡರಿಸಲು ಸಾಧ್ಯವಾಗುತ್ತಿಲ್ಲ. ಇಡೀ ನಾಡು ಏನೂ ತೋಚದಂತೆ ಅಸಹಾಯಕವಾಗಿ, ಗಾಬರಿಯಾಗಿ ಕೂತುಬಿಟ್ಟಿದೆ. ರೈತ ಬಂಧುಗಳಿಗೆ ಆತ್ಮಹತ್ಯೆಯೇ ತಮ್ಮ ಕಷ್ಟ ಪರಂಪರೆಯನ್ನು ಕೊನೆಗಾಣಿಸುವ ಏಕೈಕ ಮಾರ್ಗವೆನ್ನಿಸಿಬಿಟ್ಟಿದೆಯಲ್ಲಾ, ಏಕೆ?

ಈ ಆತ್ಮಹತ್ಯೆ ಒಂದು ದಿನ ನಿಲ್ಲುವುದು; ನಿಲ್ಲಲೇಬೇಕು. ಏಕೆಂದರೆ ಅದು ಯಾವುದಕ್ಕೂ ಸಹಜ ಮಾರ್ಗವಲ್ಲ. ಜೊತೆಗೆ ಅದೇನೂ ಸುಲಭ, ನಿರಾಳ ಮಾರ್ಗವೇನೂ ಅಲ್ಲ. ಏಕೆಂದರೆ ತನ್ನ ಮತ್ತು ತನ್ನ ಕುಟುಂಬದ ಸುಖ–ನೆಮ್ಮದಿಗಾಗಿ ಬದುಕು ಕಟ್ಟಿಕೊಂಡವರು ಅದನ್ನೇ ಇಷ್ಟು ಸುಲಭವಾಗಿ ಮುಗಿಸಿ ಹೊರಡಲಾರರು. ಯಾರಿಗೂ ಅದು ಬದುಕುವ ಎಲ್ಲ ಮಾರ್ಗಗಳೂ ಮುಚ್ಚಿಹೋದ ನಂತರದ ಕೊಟ್ಟಕೊನೆಯ ಆಯ್ಕೆ. ಆದರೂ ನಮ್ಮ ರೈತರೇಕೆ ಈ ಮಾರ್ಗ ಹಿಡಿದಿದ್ದಾರೆ? ಇದು ಮೊದಲಬಾರಿಗೆ ಏನೂ ಅಲ್ಲ, ಇದ್ದಕ್ಕಿದ್ದಂತೆ ಆಗುತ್ತಿರುವುದೂ ಅಲ್ಲ. ಆದರೆ ರಾಜ್ಯದ ರೈತರೆಂದೂ ಈ ಪರಿಯಲ್ಲಿ ಹೀಗೆ ಇದ್ದಕ್ಕಿದ್ದಂತೆ ಇಷ್ಟು ನಿಷ್ಠುರವಾಗಿ ಈ ಕೊಟ್ಟಕೊನೆಯ ಆಯ್ಕೆಗೆ ಮುಗಿಬೀಳುತ್ತಿದ್ದಾರೆ? ಇದಕ್ಕೆ ಏನು ಕಾರಣ? ನಿಜವಾಗಿ ಅವರಿಗೆ ಬದುಕುವ ಎಲ್ಲ ಮಾರ್ಗಗಳೂ ಮುಚ್ಚಿಹೋಗುತ್ತಿವೆಯೇ?

ಒಬ್ಬೊಬ್ಬರು ಒಂದೊಂದು ಕಾರಣ ಹೇಳುತ್ತಿದ್ದಾರೆ. ಒಬ್ಬರು ಬೆಳೆನಾಶ ಅವನನ್ನು ಕಂಗಾಲಾಗಿಸಿದೆ ಎಂದರೆ, ಇನ್ನೊಬ್ಬರು ಸಾಲಬಾಧೆಯಿಂದ ಸುಸ್ತಾಗಿದ್ದಾನೆ ಎನ್ನುತ್ತಾರೆ. ಮತ್ತೊಬ್ಬರು ರೈತರು ಬದುಕುವ ಕಲೆಯನ್ನೇ ಮರೆತಿದ್ದಾರೆ ಎನ್ನುತ್ತಿದ್ದಾರೆ. ಆದರೆ ಪ್ರಶ್ನೆ ಇವು ಇಂದಿನ ಹೊಸ ಸಂಗತಿಗಳೇ ಎಂಬುದು. ಈ ಬುಡದ ಪ್ರಶ್ನೆಯನ್ನು ಹಾಕಿಕೊಳ್ಳಲು ನಿರಾಕರಿಸುತ್ತಿರುವ ನಮ್ಮ ಸರ್ಕಾರಗಳು, ವಿರೋಧ ಪಕ್ಷಗಳು, ರೈತಸಂಘಗಳು ಮತ್ತೆ ಅದೇ ತತ್‌ಕಾಲೀನ ಪರಿಹಾರಗಳ ಮಾತುಗಳನ್ನಾಡುತ್ತಿವೆ: ಬೆಳೆ ಪರಿಹಾರದ, ಕುಟುಂಬ ಸಹಾಯದ, ಸಾಲ ಮನ್ನಾದ, ವೈಜ್ಞಾನಿಕ ಬೆಲೆಗಳ ಮಾತು. ಇದಕ್ಕೆ ಕಾರಣ ಎಲ್ಲರೂ ಇಂದಿನ ಆರ್ಥಿಕತೆಯ ಸ್ವರೂಪವನ್ನು ಒಪ್ಪಿಕೊಂಡುಬಿಟ್ಟಿದ್ದಾರೆ. ಈ ಉದಾರ, ಮುಕ್ತ ಮಾರುಕಟ್ಟೆ ನೀತಿ ನಮ್ಮ ಕೃಷಿ ಚಟುವಟಿಕೆಗಳ ಕೇಂದ್ರಗಳಾದ ಹಳ್ಳಿಗಾಡನ್ನು, ಅದರ ಆರ್ಥಿಕತೆಯನ್ನು ಹೇಗೆ ವಾರೆಗಣ್ಣಲ್ಲಷ್ಟೇ ನೋಡುತ್ತಿದೆ ಎಂಬುದನ್ನು ಇವರಾರೂ ಗಂಭೀರವಾಗಿ ಪರಿಶೀಲಿಸುತ್ತಿಲ್ಲ. ನಗರೀಕರಣವೇ ನಿಜವಾದ ಅಭಿವೃದ್ಧಿಯೆಂದು ನಂಬಿದ ಈ ಆರ್ಥಿಕತೆ ಹುಟ್ಟಿಸುತ್ತಿರುವ ಜೀವನ ಆಶೋತ್ತರಗಳಿಗೆ, ಜೀವನ ಕ್ರಮಗಳಿಗೆ, ಜೀವನಮೌಲ್ಯಗಳಿಗೆ ರೈತರೂ ಒಪ್ಪಿಕೊಂಡುಬಿಟ್ಟಿದ್ದಾರೆ. ಹೊರಗಿನ 'ಅಭಿವೃದ್ಧಿ'ಯ ವಾತಾವರಣದ ಒತ್ತಡ ಅಷ್ಟು ದಟ್ಟವಾಗಿದೆ. ಇಲ್ಲದಿದ್ದರೆ ಇಂದಿನ ಹಳ್ಳಿಗಳು ಈಗ ಕಾಣತೊಡಗುತ್ತಿರುವಂತೆ ನಮ್ಮ ನಗರಗಳ ಬಡ ಅಣಕುಗಳಂತೆ ಕಾಣತೊಡಗುತ್ತಿರಲಿಲ್ಲ. ರೈತರ ಮನೆಗಳು, ಆಚರಣೆಗಳು, ಖರ್ಚುಗಳು ಈ ಪರಿ–ಕೃಷಿ ಸಂಸ್ಕೃತಿಯ ಪರಿಧಿಗಳಾಚೆಗೆ–ಬದಲಾಗುತ್ತಿರಲಿಲ್ಲ. ಸರ್ಕಾರ ಕೃಷಿಯನ್ನು ಇನ್ನೂ ಕೈಗಾರಿಕೆಯೆಂದು ಘೋಷಿಸಿಲ್ಲವಾದರೂ ನಮ್ಮ ಹಳ್ಳಿಗಳ ವ್ಯವಹಾರಗಳೆಲ್ಲ ಕೈಗಾರಿಕಾ ಸಮಾಜದ ವ್ಯವಹಾರಗಳಂತಾಗಿ ಅವು ಕುರೂಪಿ ಕೈಗಾರಿಕಾ ಕಾಲೋನಿಗಳಂತೆ ಕಾಣತೊಡಗಿವೆ. ಸಾಲ ಮನ್ನಾಗಳನ್ನು ಆಗ್ರಹಿಸುವ ಜನ ಈ ಸಾಲಗಳ ನಿಜವಾದ ಸ್ವರೂಪದ–ಪಡೆದದ್ದು ಯಾಕೆ, ಖರ್ಚು ಮಾಡಿದ್ದು ಯಾವುದಕ್ಕೆ, ಹೇಗೆ–ಅಧ್ಯಯನ ಮಾಡಿದಂತಿಲ್ಲ. ಸಾಲದ ದುರುಪಯೋಗದ ಬಗ್ಗೆ ನಾನು ಮಾತನಾಡುತ್ತಿಲ್ಲ.(ಅದು ಎಲ್ಲ ವಲಯಗಳ ಸಾಮಾನ್ಯ ಲಕ್ಷಣ) ಆದರೆ ಆ ಸೌಲಭ್ಯವನ್ನು ಬಳಸುವಲ್ಲಿನ ವಿವೇಕ ಯಾವ ತೆರನದ್ದು ಎಂಬುದನ್ನು ಪರಿಶೀಲಿಸಬೇಕಿದೆ. ಈ ದಿಸೆಯಲ್ಲಿ ಮಾರ್ಗದರ್ಶನ ಮಾಡಬಹುದಾಗಿದ್ದ ಕೃಷಿ ಇಲಾಖೆ ಮತ್ತು ನಮ್ಮ ವಿಶ್ವವಿದ್ಯಾಲಯಗಳೂ ರೈತರಿಗಿಂತ ಬಹು ಮುನ್ನವೇ ಹೊಸ ಆರ್ಥಿಕತೆಯ ಏಜೆಂಟರುಗಳಾಗಿ ಪರಿವರ್ತಿತವಾಗಿಬಿಟ್ಟಿವೆ.

ಹೊಸ ಆರ್ಥಿಕತೆಯಿಂದ ಆಕರ್ಷಿತನಾಗಿರುವ ರೈತ ಅದು ಹುಟ್ಟು ಹಾಕಿರುವ ಜೀವನಕ್ರಮ ಮತ್ತು ಗುರಿಗಳೊಳಕ್ಕೆ ಪ್ರವೇಶಿಸುವ ಯತ್ನ ಮಾಡುತ್ತಾ ಅದರೊಳಗೆ ಸಿಕ್ಕಿಹಾಕಿಕೊಂಡು ಈಚೆಗೆ ಬರದವನಾಗುತ್ತಿದ್ದಾನೆ. ಕಾರಣ ಈ ಆರ್ಥಿಕತೆಯೇ ಹಳ್ಳಿಯ ನಾಶಕ್ಕೆ ಬದ್ಧವಾಗಿದೆ. ಹಾಗಾಗಿ ರೈತ ಪರೋಕ್ಷವಾಗಿ–ದೂರದ ಪರಿಣಾಮವಾಗಿ–ತಾನು ನಿಂತ ನೆಲವನ್ನೇ–ಅಕ್ಷರಶಃ–ಬುಡಮೇಲು ಮಾಡುವ ಕೆಲಸದಲ್ಲಿ ತೊಡಗಿದ್ದಾನೆ. ಇದನ್ನು ಹೇಳಿದರೆ ನಮ್ಮ ಕೆಲ ರೈತನಾಯಕರು–ನಮ್ಮ ಕೆಲ ದಲಿತ ನಾಯಕರಂತೆಯೇ–ಏಕೆ, ರೈತರು ಮುಂದುವರೆಯಬಾರದೇ? ಒಳ್ಳೆಯ ಬದುಕು ನಡೆಸಬಾರದೇ? ಅವರ ಮಕ್ಕಳು ವಿದೇಶಗಳಿಗೆ ಹೋಗಬಾರದೆ? ಎಂದೆಲ್ಲ ಪ್ರಶ್ನೆಗಳನ್ನು ಹಾರಿಸುತ್ತಾರೆ. ಆದರೆ ಒಳ್ಳೆಯ ಬದುಕು ಎಂದರೇನು ಎಂಬ ಪ್ರಜ್ಞೆಯನ್ನೇ



ರೈತರಿಂದಲೇ ಕಬ್ಬಿನ ಗದ್ದೆಗೆ ಬೆಂಕಿ



ಆತ್ಮಹತ್ಯೆ ಮಾಡಿಕೊಂಡ ರೈತನೊಬ್ಬ ಕುಟುಂಬದ ರೋದನ

ನಾಶ ಮಾಡಲಾಗುತ್ತಿರುವ ಕಾರ್ಯಕ್ರಮದೊಳಕ್ಕೆ ಅವರೂ ಪ್ರವೇಶಿಸಿಬಿಟ್ಟಿದ್ದಾರೆ. ಇದೇ ಮತ್ತೆ ಮರುಕಳಿಸುತ್ತಿರುವ ಮತ್ತು ಮರುಕಳಿಸಲಿರುವ ರೈತರ ಸರಣಿ ಆತ್ಮಹತ್ಯೆಯ ಹಿಂದಿನ ನಿಜವಾದ ದುರಂತ. ಇದನ್ನು ನಮ್ಮ ರೈತ ಸಂಘಗಳೂ ಅರ್ಥ ಮಾಡಿಕೊಳ್ಳದಿರುವುದು ಇನ್ನೂ ದೊಡ್ಡ ದುರಂತ. ಅವು ಮೊದಲಿಂದಲೂ ಹೋರಾಟದ ಹೆಸರಿನಲ್ಲಿ ಬರೀ ಘೋಷಣೆ, ಆಗ್ರಹ, ಆರೋಪ, ಬೇಡಿಕೆಗಳ ರಾಜಕಾರಣವನ್ನೇ ಮಾಡುತ್ತಾ ಬಂದಿವೆ. ಹಾಗಾಗಿಯೇ ಇಂದು ಕೂಡ ಅವುಗಳ ಸಾಂತ್ವನದ, ಶಿಕ್ಷಣದ ಮಾತುಗಳು ರೈತರ ಮನಕ್ಕೆ ಬೀಳುತ್ತಿಲ್ಲ. ಹಾಗೆ ನೋಡಿದರೆ, ಇಂದು ಶಿಕ್ಷಣ ಬೇಕಾಗಿರುವುದು ಈ ರೈತಸಂಘಗಳಿಗೇ, ಈ ರೈತ ನಾಯಕರಿಗೇ. ಅವರ ಒಡಕು, ದುಡುಕು, ದ್ವೇಷ, ಪುಢಾರಿತನಗಳನ್ನು ನೋಡಿದರೇ ಇದು ಸಾಬೀತಾಗುವಂತಿದೆ.

ಈ ಎಲ್ಲ ಹಿನ್ನೆಲೆಯಲ್ಲಿ, ಸದ್ಯದ ರೈತರ ಆತ್ಮಹತ್ಯೆ ಬಗ್ಗೆ ಪತ್ರಿಕೆ ಹಿರಿಯ ಸಮಾಜವಾದಿಯೂ, ಸ್ವತಃ ರೈತರೂ ಮತ್ತು ಸ್ವಲ್ಪ ಸ್ವತಂತ್ರವಾಗಿ ಯೋಚಿಸುವ ರೈತ ಮುಖಂಡರೂ ಆದ ಕಡಿದಾಳು ಶಾಮಣ್ಣನವರನ್ನು ಮಾತನಾಡಿಸಿತು. ಆರಂಭದಲ್ಲಿ ಇವರೂ ಆ ಹಳೆಯ ವರಸೆಯಲ್ಲೇ– ಹವಾಮಾನ ವೈಪರೀತ್ಯ, ಬೆಳೆ ನಾಶ, ಕಾರ್ಖಾನೆಗಳಿಂದ ಕಬ್ಬು ಹಣ ಪಾವತಿಯ ವಿಳಂಬ, ಸಕ್ಕರೆ ಹರಾಜೆಂಬ ಸರ್ಕಾರದ ನಾಟಕ, ವೈಜ್ಞಾನಿಕ ಬೆಲೆ, ಸಾಲಬಾಧೆ–ಮಾತನಾಡತೊಡಗಿದರು. ಪತ್ರಿಕೆಗೆ ತಲೆ ಕೆಟ್ಟಂತಾಗಿ, ಸರ್ಕಾರವನ್ನೇ ಬೈದುಕೊಂಡು ಎಷ್ಟು ವರ್ಷ ಕೂತಿರುತ್ತೀರಿ. ಹಾಗಾದರೆ ಬೇಸಾಯವನ್ನು ಸರ್ಕಾರಕ್ಕೆ ಒತ್ತೆ ಇಟ್ಟುಬಿಟ್ಟಿದ್ದೀರಾ? ಹಾಗಾದರೆ ನೀವೇಕೆ ಆತ್ಮಹತ್ಯೆ ಮಾಡಿಕೊಂಡಿಲ್ಲ?' ಎಂದು ಕೇಳಿದೊಡನೆ ಶಾಮಣ್ಣ ಸ್ವಲ್ಪ ತಬ್ಬಿಬ್ಬಾಗಿ ಎಚ್ಚೆತ್ತುಕೊಂಡವರಂತೆ, ಆಲೋಚಿಸಿ ಮಾತನಾಡತೊಡಗಿದರು:

'ನಾನೇಕೆ ಆತ್ಮಹತ್ಯೆಯ ಆಲೋಚನೆ ಎಂದೂ ಮಾಡಿಲ್ಲ ಅಂದ್ರೆ, ನಾನೆಂದೂ ಸಾಲ ಮಾಡಲು ಹೋಗಿಲ್ಲ. ಕಾರಣ, ನಾನೆಂದೂ ನನ್ನ ಮಿತಿ ಅರಿತೇ ಬೇಸಾಯ ಮಾಡಿದ್ದೇನೆ, ಬದುಕು ನಡೆಸಿದ್ದೇನೆ. ನಾನು ರೈತನೆಂಬ, ಹಳ್ಳಿಗನೆಂಬ ಹೆಮ್ಮೆ ಇದೆ.'

'ಹಾಗೆಂದರೆ?' ಪತ್ರಿಕೆ ಪ್ರಶ್ನೆ.

'ನಾನು ಗೊಬ್ಬರ, ಕೀಟನಾಶಕ, ಟಿಲ್ಲರ್, ಟ್ರ್ಯಾಕ್ಟರ್ ಎಂದು ಹೋಗಲಿಲ್ಲ. ಅಧಿಕ ಇಳುವರಿಯ ಬೆನ್ನು ಹತ್ತಲಿಲ್ಲ. ನನಗೆ ಬೇಕಾದುದನ್ನೆಲ್ಲ ನಾನೇ ಬೆಳೆದುಕೊಂಡು, ಮಿಕ್ಕದ್ದನ್ನು ಮಾರಿ ಬದುಕುತ್ತಿದ್ದೇನೆ. ನನ್ನದು ಅಡಕೆ ಬೆಳೆಯೂ ಸೇರಿ ಸಾವಯವ ಕೃಷಿ. ಎರಡು ಕುಟುಂಬಗಳ ಸಹಾಯ ಪಡೆದು ನಾವೂ ಅವರೊಂದಿಗೆ ದುಡಿಯುತ್ತಾ ಅವರ ಕುಟುಂಬಗಳನ್ನೂ ಸಾಕುತ್ತಾ, ಪ್ರಕೃತಿಯ ಮಧ್ಯೆ ಯಾವ ತರಲೆ–ತಾಪತ್ರಯಗಳೂ ಇಲ್ಲದೆ ಆರಾಮವಾಗಿ, ನೆಮ್ಮದಿಯಿಂದ ಬದುಕುತ್ತಿದ್ದೇವೆ. ನಗರದ ಯಾವ ಆಕರ್ಷಣೆಯೂ ನಮಗಿಲ್ಲ'

'ತರಲೆ ತಾಪತ್ರಯಗಳು ಅಂದರೆ?'

ಅದೇ ಮದುವೆ–ಮುಂಜಿ–ಹಬ್ಬ– ಹರಿದಿನ–ದೇವರು–ದಿಂಡಿರು–ಜಾತ್ರೆ–ವಾಸ್ತು–ಹರಕೆ ಇತ್ಯಾದಿಗಳ ಹೆಸರಿನಲ್ಲಿ ಹುಡಿ ಹಾರಿಸಿ ಸಾಲಕ್ಕೆ ಸಿಕ್ಕಿ ಹಾಕಿಕೊಳ್ಳುವುದು'

'ಈ ಬಗ್ಗೆಯೆಲ್ಲಾ ನಿಮ್ಮ ರೈತ ಸಂಘ ಶಿಕ್ಷಣ ನೀಡಲಿಲ್ವಾ? ಬಹಳ ಅಧ್ಯಯನ ಶಿಬಿರಗಳು ನಡೆದವಲ್ಲಾ ಆಗ?'

'ಸಾಕಷ್ಟು ನಾವು ಕೆಲವರು ಹೇಳಿದ್ದೇವೆ. ಕೇಳುವವರು ಕೇಳಿದ್ದಾರೆ. ಅಳವಡಿಸಿಕೊಂಡವರು ಕಡಿಮೆ. ಬೆಳೆ ಬೆಲೆಯದ್ದೇ ಗಲಾಟೆ ಹೆಚ್ಚಾಯಿತೇನೋ!'

'ಹೋಗಲಿ ಅದನ್ನಾದರೂ ಸರಿಯಾಗಿ ಮಾಡಿದಿರಾ? ಇಷ್ಟು ಹೊತ್ತಿಗೆ ನೀವು ಹೋಬಳಿ, ತಾಲ್ಲೂಕು ಜಿಲ್ಲಾ ಮಟ್ಟಗಳ ರೈತರ ಸಹಕಾರಿ ಜಾಲ ಮಾಡಿಕೊಂಡು, ಕೃಷಿಯನ್ನು ನೀವೇ ಸಾಕಷ್ಟು –ಯಾವುದನ್ನು ಯಾರು ಎಲ್ಲಿ ಎಷ್ಟು ಬೆಳೆಯಬೇಕೆಂದು ತೀರ್ಮಾನಿಸಿಕೊಂಡು– ಒಂದು ಯೋಜಿತ ವ್ಯವಸ್ಥೆ ಮಾಡಿಕೊಂಡು, ಮಧ್ಯವರ್ತಿಗಳ ಕಾಟವಿಲ್ಲದೆ ನೇರವಾಗಿ ನಿಮ್ಮ ಬೆಳೆಯನ್ನು ಗ್ರಾಹಕರಿಗೆ ಒದಗಿಸುವ ಮೂಲಕ ಸರ್ಕಾರಕ್ಕೇ ಸೆಡ್ಡು ಹೊಡೆಯಬಹುದಿತ್ತು. ಅಂತಹ ಸಂಘಟನೆ ಇತ್ತು ನಿಮ್ಮ ಹತ್ರ. ರಾಷ್ಟ್ರದಲ್ಲೇ ಬಲಿಷ್ಠವಾದ ಚಳುವಳಿ ಎಂಬ ಹೆಗ್ಗಳಿಕೆಗೆ ಪಾತ್ರವಾಗಿತ್ತು ನಿಮ್ಮ ರೈತಸಂಘ...'

ಶಾಮಣ್ಣ ಏನೋ ತಮಗೆ ತಾವೇ ಗೊಣಗಿಕೊಂಡರು. ಅವರು ರೈತ ಸಂಘದ ವರ್ತನೆ ಬಗ್ಗೆ ಹಿಂದೊಮ್ಮೆ ಇದೇ ಸಂದರ್ಶಕನ ಬಳಿ ಮುಕ್ತವಾಗಿ ಮಾತನಾಡಿ ರೈತಸಂಘದಿಂದಲೇ ಹೊರಹಾಕಲ್ಪಟ್ಟಿದ್ದರು. ಅದನ್ನು ನೆನೆದು ಪತ್ರಿಕೆ ಮಾತು ಮುಂದುವರೆಸಲಿಲ್ಲ. ಬದಲಿಗೆ ಕೆಲವು ಪ್ರಶ್ನೆಗಳನ್ನು ಬರೆದು ಉತ್ತರಿಸಲು ಹೇಳಿತು. ಆ ಪ್ರಶ್ನೋತ್ತರದ ಸಂಕ್ಷಿಪ್ತ ರೂಪ ಇಲ್ಲಿದೆ.–**ಸಂಪಾದಕ**

# ಕಡಿದಾಳು ಶಾಮಣ್ಣನವರೊಂದಿಗೆ ಒಂದು ಪ್ರಶ್ನೋತ್ತರ

**೧. ರಾಜ್ಯದಲ್ಲಿ ಹಿಂದೆಂದೂ ಇಲ್ಲದಷ್ಟು ನಿರಂತರತೆಯಿಂದ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ, ಇದನ್ನು ಗಮನಿಸಿದಾಗ ನಿಮಗೆ ಏನನ್ನಿಸುತ್ತದೆ? ಈ ಆತ್ಮಹತ್ಯೆಗಳಿಗೆ ನಿಜವಾದ ಕಾರಣಗಳೇನಿರಬಹುದು?**

ಸರಳವಾಗಿ ಹೇಳಬೇಕೆಂದರೆ ಇವತ್ತಿನ ಜೀವನಶೈಲಿಯೇ ಅದಕ್ಕೆ ಕಾರಣವಾಗಿರಬಹುದು. ಅಂದರೆ ಸಾವಯವ ಕೃಷಿ ಪದ್ಧತಿಯಿಂದ ವ್ಯವಸಾಯ ಮಾಡಿ ಸೀಮೆಗೊಬ್ಬರ, ಕಳೆನಾಶಕವನ್ನು ಬಳಸದೆ ಖರ್ಚು ಕಡಿಮೆಯಿಂದ ಸಾಲ ಇಲ್ಲದಂತೆ ಸರಳ ಜೀವನ ನಡೆಸುತ್ತಿದ್ದ ರೈತರು ಕೃಷಿ ಇಲಾಖೆಯವರು ಹೇಳಿದರೆಂದು ಅಧಿಕ ಇಳುವರಿ ತೆಗೆದು ಪ್ರಗತಿಪರ ರೈತನಾಗುವ ಉಮೇದುಗಾರಿಕೆಯಿಂದ ತನಗಿರುವ ಜಮೀನನ್ನು ಸಾಗುವಳಿ ಮಾಡಲು ಟಿಲ್ಲರ್, ಟ್ರ್ಯಾಕ್ಟರ್ ಬೇಕೋ ಬೇಡವೋ ಎಂದು ಪರಿಶೀಲಿಸದೆ, ಪಕ್ಕದ ಮನೆಯವರೆಲ್ಲ ಬಳಸಿದಂತೆ ದುಬಾರಿ ವಾಹನಗಳನ್ನು ಕೊಳ್ಳುವುದು. ಪ್ರತೀ ವಾರದ ಸಂತೆಯಿಂದ ತರಕಾರಿ, ಹಣ್ಣು ಹಂಪಲು ಮುಂತಾದ ಆಹಾರ ಪದಾರ್ಥ ಕೊಂಡು ತಂದು ದುಂದುವೆಚ್ಚ ಮಾಡಿ ಸಾಲಗಾರರಾಗಿದ್ದವರು ಆ ಸಾಲ ತೀರಿಸಲಿಕ್ಕಾಗದೆ ಮಾನ,



ರೈತ ಮುಖಂಡ ಕಡಿದಾಳು ಶಾಮಣ್ಣವರೊಡನೆ ಸಂಪಾದಕರ ಮಾತುಕತೆ

ಮರ್ಯಾದೆಗೆ ಅಂಜಿ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವವರ ಸಂಖ್ಯೆಯೇ ಜಾಸ್ತಿಯಾಗಿದೆ ಎಂದೆನ್ನಿಸುತ್ತದೆ. ರೈತರಿಗೆ ಸಾಲ ಸಿಗುವ ವ್ಯವಸ್ಥೆ ಜಾಸ್ತಿಯಾಗಿದ್ದೂ ಒಂದು ಕಾರಣ. ಅನಾವಶ್ಯಕವಾಗಿ ದುಬಾರಿ ಮನೆ ಕಟ್ಟಿಸುವುದು, ದುಬಾರಿ ಮದುವೆ ಮಾಡುವುದೂ ರೈತರ ಸಾಲಕ್ಕೆ ಕಾರಣವಾಗುತ್ತಿದೆ. ಈ ವಿಚಾರಗಳನ್ನು ರೈತರು ಅರಿತುಕೊಂಡರೆ ಉತ್ತಮ.

ರೈತರ ಅನುಮತಿಯಿಲ್ಲದೆ ರೈತರ ಜಮೀನನ್ನು ಸರ್ಕಾರ ಯಾವಾಗ ಬೇಕಾದರೂ ವಶಪಡಿಸಿಕೊಳ್ಳಬಹುದೆಂಬ ಮೋದಿ ಸರ್ಕಾರದ ಭೂಸ್ವಾಧೀನ ಮಸೂದೆಯೂ ಸಹ ರೈತರ ಆತ್ಮಹತ್ಯೆಗೆ ಕಾರಣವಾಗಿದೆ.

ಗೋಮಾಳಗಳು ಕಾಣೆಯಾಗುತ್ತಿರುವುದೂ ಮತ್ತೊಂದು ಕಾರಣ. ಏಕೆಂದ್ರೆ ಹಿಂದಿನಂತೆ ತಾನೇ ಜಾನುವಾರು ಸಾಕಿ ಕೊಟ್ಟಿಗೆ ಗೊಬ್ಬರವನ್ನು ತನ್ನ ಜಮೀನಿಗೆ ಹಾಕಿ ಬೆಳೆ ಬೆಳೆಯಲು ಸಾಧ್ಯವಾಗುತ್ತಿಲ್ಲವಾದ್ದರಿಂದ.

**೨. ಸಾಲ ಬಾಧೆಯ ವಿಷಯಕ್ಕೆ ಬಂದರೆ ರೈತ ಸರ್ಕಾರವನ್ನು ನಂಬಿಯೇ ವ್ಯವಸಾಯವನ್ನು ಮಾಡುತ್ತಾನೆಯೇ?**

ಈಗ ರೈತರು ಸರ್ಕಾರದ ಅಥವಾ ಬೇರಾವುದೋ ಮೂಲದ ಸಾಲವನ್ನೇ ನಂಬಿ ವ್ಯವಸಾಯ ಮಾಡಲು ಪ್ರಾರಂಭಿಸಿದ್ದಾರೆ. ಉದಾಹರಣೆಗೆ, ಹೂವಿನ ಕೃಷಿ, ಹಣ್ಣುಗಳ ಕೃಷಿ, ಕೋಳಿ, ಹಂದಿ ಫಾರಂಗಳು, ಪಾಲಿ ಹೌಸ್ ಮುಂತಾದವು.. ಈ ಗ್ರೀನ್ ಹೌಸ್, ಪಾಲಿ ಹೌಸ್‌ಗಳು ಲಕ್ಷಗಟ್ಟಲೆ ಬಂಡವಾಳವನ್ನು ರೈತನಿಂದ ಖರ್ಚು ಮಾಡಿಸುತ್ತದೆ. ಇಂತವುಗಳನ್ನು ಸಣ್ಣ ಸಣ್ಣ ರೈತರುಗಳೂ ಮಾಡುತ್ತಿದ್ದಾರೆ. ಇದರಿಂದ ಬರುವ ಹೂವು, ಹಣ್ಣು, ಸೀಗಡಿ ಮುಂತಾದವನ್ನು ಖರೀದಿಸಿ ಮಾರುಕಟ್ಟೆಗೆ ತರುವವರು ತಮ್ಮ ಲಾಭಕ್ಕೆ ಅನುಗುಣವಾಗಿ ಉತ್ಪಾದಿಸುವ ರೈತನಿಗೆ ಸಾಲವನ್ನು ಕೊಡುತ್ತಾರೆ ಅಥವಾ ತಾವು ಜಾಮೀನಾಗಿ ನಿಂತು ಸಾಲ ಕೊಡಿಸುತ್ತಾರೆ. ಈ ರೀತಿಯ ಕೃಷಿ ಮಾಡುವವರಲ್ಲಿ ಶೇಕಡಾ ೯೦% ರೈತರು ಸಾಲ ಕೊಡಿಸಿದ ಜವಾಬ್ದಾರಕರ ಮುಷ್ಠಿಯಲ್ಲಿ ಸಿಕ್ಕಿಕೊಂಡಿರುತ್ತಾರೆ. ಇಂತಹ ರೈತರು ನನಗೆ ತುಂಬಾ ಜನ ಪರಿಚಿತರಿದ್ದಾರೆ. ಮಧ್ಯವರ್ತಿಗಳ ಅಂಗೈಯಲ್ಲೇ ರೈತರ ಭವಿಷ್ಯ ನಿಂತಿರುತ್ತದೆ. ವಸೂಲಿಗೆ ಗೂಂಡಾಗಳನ್ನಿಟ್ಟು ರೈತನಿಂದ ವಸೂಲು ಮಾಡಿಸುವುದರಿಂದ ಮಾನ ಮರ್ಯಾದೆಗೆ ಅಂಜಿ ರೈತ ನೇಣಿಗೆ ಒಳಗಾಗುತ್ತಿದ್ದಾನೆ. ಉತ್ಪಾದನಾ ವೆಚ್ಚಗಳಿಗನುಗುಣವಾಗಿ ಬೆಲೆ ನಿಗದಿಯಾಗುವ ಪದ್ಧತಿ ಬರುವವರೆಗೂ ರೈತರ ಆತ್ಮಹತ್ಯೆ ನಿಲ್ಲುವುದಿಲ್ಲ.

ಇನ್ನು ಹಳ್ಳಿಗಳಲ್ಲಿ ಸ್ತ್ರೀಶಕ್ತಿ ಸಂಘದ ಅವ್ಯವಹಾರದಿಂದಲೂ ಸಾವುಗಳು ಸಂಭವಿಸಲು ಪ್ರಾರಂಭವಾಗಿದೆ. ವಾರದ ಹಿಂದೆ ದಾವಣಗೆರೆಯಲ್ಲಿ ರಾಜ್ಯ ರೈತ ಸಂಘದ ಸ್ಟೇಟ್ ಕಮಿಟಿ ಸದಸ್ಯರುಗಳ ಸಮಾವೇಶ ನಡೆಯುತ್ತಿದ್ದಾಗ ಆಗತಾನೆ ಸ್ತ್ರೀಶಕ್ತಿ ಸಂಘದಲ್ಲಿ ಆತ್ಮಹತ್ಯೆ ನಡೆದ ಸುದ್ದಿಗಳು ಬಂದಿದ್ದವು.

**೪. ಕರ್ನಾಟಕದ ರೈತ ಚಳುವಳಿ ನಮ್ಮ ರಾಷ್ಟ್ರದಲ್ಲೇ ಹೆಸರು ಮಾಡಿದ ಚಳುವಳಿ. ಆದರೂ ಕರ್ನಾಟಕದ ರೈತ ಅತ್ಯಂತ ಅಸಹಾಯಕನಾಗಿ ಕಾಣುತ್ತಿದ್ದಾನೆ. ಇದು ರೈತ ಸಂಘದ ವೈಫಲ್ಯ ಅಲ್ಲವೇ?**

ನೀವು ಹೇಳುತ್ತಿರುವುದು ನಿಜ. ರೈತ ಸಂಘ ಎರಡು ಮೂರು ಹೋಳುಗಳಾದ ನಂತರದಲ್ಲಿ ತನ್ನ ಮೊದಲಿನ ಶಕ್ತಿ ಕಳೆದುಕೊಂಡಿದೆ. ಈಗಲೂ ರೈತ ಸಂಘಗಳು ಒಂದಾಗಿ ಕೆಲ್ಸ ಮಾಡಿದರೆ ಮೊದಲಿನ ಶಕ್ತಿ ಪಡೆಯುವುದು ಕಷ್ಟವೇನಲ್ಲ.

**೩. ಈಗ ನಡೆಯುತ್ತಿರುವ ರೈತರ ಆತ್ಮಹತ್ಯೆಗಳಾದರೂ ಒಡೆದು ಹೋದ ರೈತ ಸಂಘಟನೆಗಳ ಪುನರ್ ಸಂಘಟನೆಗೆ ಕಾರಣವಾಗಬೇಕಲ್ಲವೇ?**

ಈ ಪ್ರಶ್ನೆ ಸರಿಯಾಗಿದೆ. ಆತ್ಮಹತ್ಯೆ ಮಾಡಿಕೊಳ್ಳುವ ರೈತರು, ಯಾವಾಗ ಕರ್ನಾಟಕದಲ್ಲಿ ರೈತಸಂಘಟನೆಗಳು ಒಗ್ಗಟ್ಟು ಕಳೆದುಕೊಳ್ಳುತ್ತಿದ್ದಾರೋ ಅದನ್ನು ನೋಡಿ, ಆತ್ಮವಿಶ್ವಾಸವನ್ನೇ ಕಳೆದುಕೊಂಡು ಯಾರೂ ತಮ್ಮ ಕಷ್ಟಕ್ಕೆ ಬರುವವರಿಲ್ಲ ಎಂದು ಭಾವಿಸಿ ಈ ಲೋಕವನ್ನೇ ಬಿಡುವುದೊಂದೇ ದಾರಿ ಎಂದು ತೀರ್ಮಾನಿಸುತ್ತಿದ್ದಾರೆ. ಈಗಲೂ ರೈತರೆಲ್ಲರೂ ನಾವು ಒಂದೇ ಕುಲದವರೆಂದು ಭಾವಿಸಿ ಈಗ ಅವರಿಗೆ, ನಾಳೆ ನಮಗೂ ಈ ಸ್ಥಿತಿ ಕಾದಿದೆ ಎಂದು ಅರಿತುಕೊಂಡು ಒಡೆದು ಹೋಗಿರುವ ರೈತರೆಲ್ಲ ಒಂದೇ ಸಂಘಟನೆಯಡಿ ಬರುವ ದೃಢವಾದ ತೀರ್ಮಾನ ಮಾಡಿದರೆ ರೈತ ಸಂಘಕ್ಕೂ ಶಕ್ತಿ ಬರುತ್ತದೆ. ರೈತ ಸಂಘಟನೆಗಳು ಇದೇ ರೀತಿ ನಾವು ಬೇರೆ ನಾವು ಬೇರೆ ಎಂದು ಭಾವಿಸಿಕೊಂಡರೆ ಸಾವಿಗೆ ಆಹುತಿಯಾಗುವವರ ಸಂಖ್ಯೆಯೂ ಜಾಸ್ತಿಯಾಗುತ್ತದೆ. ಇದನ್ನು ರೈತ ಮುಖಂಡರುಗಳು ಅರ್ಥಮಾಡಿಕೊಳ್ಳಲೇಬೇಕಾಗಿದೆ.




# ವಿಶೇಷ ಸಂಚಿಕೆಗೆ ಹಾರ್ದಿಕ ಶುಭಾಶಯಗಳು

**ಭೂತಕಾಲದ ಸರಿಯಾದ ತಿಳುವಳಿಕೆ, ಭವಿಷತ್ತನ್ನು ರೂಪಿಸುವ**
**ಸಾಹಸ ಮತ್ತು ಸ್ವಂತ ಸಂಸ್ಕೃತಿ ಮೇಲೆ ರಾಷ್ಟ್ರೀಯತೆಯನ್ನು ಕಟ್ಟಬೇಕಾಗಿದೆ.**
**ನಾನಾ ಜಾತಿ ಕುಲಗಳಿಗಿಂತ ಮಾನವ ಧರ್ಮ ದೊಡ್ಡದು.**

**ಪ್ರೊ. ಬಿ. ಕೃಷ್ಣಪ್ಪ ಟ್ರಸ್ಟ್**

ಸಂ. 25, 3ನೇ ತಿರುವು, 3ನೇ ವಾರ್ಡ್, ಸಂತೋಷ್ ನಗರ, 2ನೇ ಹಂತ, ಅಟ್ಟೂರು, ಯಲಹಂಕ, ಬೆಂಗಳೂರು - 560064
ದೂರವಾಣಿ : 9739032600, 9845501477, 9845027463, 9972191055

**ಐದನೇ ವರ್ಷಕ್ಕೆ ಕಾಲಿಡುತ್ತಿರುವ ಶುಭ ಸಂದರ್ಭದಲ್ಲಿ**

**'ಹೊಸ ಮನುಷ್ಯ' ಪತ್ರಿಕೆಗೆ**

**ಹುಟ್ಟುಹಬ್ಬದ ಹಾರ್ದಿಕ ಶುಭಾಶಯಗಳು**

ಧರ್ಮ ಮತ್ತು ನೀತಿಯ ನಡುವೆ ಆಯ್ಕೆಯ ಪ್ರಶ್ನೆ ಬಂದಾಗ ನಾನು ನೀತಿಯನ್ನೇ ಆಯ್ದುಕೊಳ್ಳುವೆ

**-ಮಹಾತ್ಮ ಗಾಂಧಿ**

ಜಾತೀಯತೆ ಸಂಪೂರ್ಣ ನಾಶವಾಗುವವರೆಗೂ ಅಸ್ಪೃಶ್ಯತೆ ನಾಶವಾಗದು; ಅಲ್ಲಿಯವರೆಗೂ ರಾಷ್ಟ್ರೀಯತೆ ಬೆಳೆಯದು

**-ಡಾ. ಬಿ.ಆರ್. ಅಂಬೇಡ್ಕರ್**

ಅನ್ಯಾಯ ಕಂಡು ಸುಮ್ಮನಿರುವುದೂ ಅನ್ಯಾಯದಲ್ಲಿ ಪಾಲುಗೊಂಡಂತೆಯೇ.

**-ಡಾ. ರಾಮಮನೋಹರ ಲೋಹಿಯಾ**



**–ಡಾ. ಎಚ್.ಎಸ್. ಅನುಪಮ**

**ಜಲಜ ಜನರಲ್ ಮತ್ತು ಹೆರಿಗೆ ಆಸ್ಪತ್ರೆ**

**ಕವಲಕ್ಕಿ–ಹೊನ್ನಾವರ**

**(ಉತ್ತರ ಕನ್ನಡ)**

ವಿಶೇಷ ಲೇಖನ

# ಜೋಡಿಸಬಹುದೇ ಹರಿದ ಎಳೆಯನ್ನು?

–ಎಸ್ ಮಂಜುನಾಥ್

**ಊ**ರಿನಲ್ಲಿರುವ ಏಕಮಾತ್ರ ಗೇರು ಹಣ್ಣಿನ ಮರದ ಬಳಿ ನಿಂತಿದ್ದೆ. ಮರದ ಮೇಲೆ ಕೆಲ ಬಾಲಕರು ಹೀಚು ಕಾಯೆನ್ನದೆ ಎಲ್ಲವನ್ನೂ ಕೀಳುತ್ತಿದ್ದರು. ಬುಡದಲ್ಲಿ ಒಂದು ಹೆಣ್ಣು ಮಗು ಪ್ಲಾಸ್ಟಿಕ್ ಚೀಲವನ್ನು ತುಂಬಿಸಿಕೊಂಡಿದ್ದಳು. ಹಾಗೇ ಒಂದು ಹಳದೀ ಗೇರು ಹಣ್ಣನ್ನು ಕಚ್ಚಿ ತಿನ್ನುತ್ತಿದ್ದಳು. ನನಗೆ ಆಶ್ಚರ್ಯವಾಯಿತು. ಇವಳಿಗೆಲ್ಲಿ ಈ ಹಣ್ಣು ಸಿಕ್ಕಿತಪ್ಪಾ ಅಂತ. ಕೇಳಿದೆ. ಕವರ್ ತೋರಿಸುತ್ತ 'ಇದೆ, ಬೇಕಾ ನಿಮಗೆ' ಕೇಳಿದಳು. ಖುಷಿಯಿಂದ 'ಕೊಡು' ಅಂದೆ. ಒಂದು ಹಣ್ಣನ್ನಿತ್ತಳು.

ಅಪರೂಪದ ಆ ಗೇರು ಹಣ್ಣನ್ನು ಒಂದು ಚಿಕ್ಕ ಮಗು ಕೊಡುವುದೆಂದರೆ! ಆ ಸಂತೋಷಕ್ಕೆ ಹಲವು ದಿನಗಳಿಂದ ನನ್ನನ್ನು ಮುತ್ತುತ್ತಿದ್ದ ಒಂದು ಸಿನಿಕತೆಯ ಕಾವಳ ಹರಿದಂತಾಯಿತು.

ನಾನು ಅಗದೀ ಸಣ್ಣ ಸಂಗತಿಗಳ ಬಗ್ಗೆ ಬರೆಯುತ್ತಿದ್ದೇನೆ. ದೊಡ್ಡ ತಾತ್ವಿಕ ಜಿಜ್ಞಾಸೆಗಳನ್ನಲ್ಲ. ಸಿನಿಕತನ ಯಾಕೆ? ಅದು ನಿಜಕ್ಕೂ ನನ್ನ ನ್ಯೂರಾಸಿಸ್‌ನಿಂದ ಬಂದುದೋ ಅಥವಾ ಊರಿನ ನನ್ನ ಸುತ್ತಲಿನ ಜನ–ಹಲವರು ನನ್ನ ಗೆಳೆಯರೇ–ಅವರಿಂದ ಬಂದುದೋ ನನಗೆ ಗೊತ್ತಿಲ್ಲ. ಬಹಳ ಮುಖ್ಯವಾಗಿ, ಮಾತಿಗೂ ಅರ್ಥಕ್ಕೂ ಸಂಬಂಧವಿಲ್ಲದಂತೆ ಅವರು ನಡೆದುಕೊಳ್ಳುವುದನ್ನು ನಾನು ನೋಡುತ್ತಿದ್ದೇನೆ. (ಪಾರ್ವತೀ ಪರಮೇಶ್ವರರಿಗೆ ವಿಚ್ಛೇದನವಾಗಿದೆ!). ಎಲ್ಲರೂ ಹೊಯ್ದಾಡುವ ಬಿಂಬಗಳಂತೆ, ಭಾರವಿಲ್ಲದ ನೆರಳುಗಳಂತೆ ಭಾಸವಾಗತೊಡಗಿದ್ದಾರೆ. ಅದು ನಡೆಯಲ್ಲಿ ಮಾತ್ರ. ನುಡಿಯಲ್ಲಿ ಅತ್ಯಂತ ದಿಟ್ಟವಾಗಿ ಪುಣ್ಯಕೋಟಿಯ ಖಾಸಾ ನಾಡಿನವರಂತೆ!

ಅದರಿಂದ ನಿಜ ಯಾವುದು ಸುಳ್ಳು ಯಾವುದು ತಿಳಿಯದಾಗುತ್ತದೆ. ನೂರು ಕನ್ನಡಿಯ ಮುಂದೆ ನಿಂತು ನೋಡಿಕೊಂಡಂತೆ. ಆ ಪ್ರತಿಬಿಂಬಗಳು ನಮ್ಮಿಂದ ಮೂಡುತ್ತಿದೆಯೋ ಪ್ರತಿಬಿಂಬಗಳ ಪ್ರತಿಬಿಂಬವೇ ನಾವಿರಬಹುದೋ ಹೇಳಲಾಗದು.

ಇದನ್ನೆಲ್ಲ ಅತ್ಯಾಧುನಿಕ ದಾರ್ಶನಿಕತೆಯಾಗಿ ನಾನು ಗಮನಿಸುತ್ತಿಲ್ಲ, ಅಂತಃಕರಣವಿಲ್ಲದ ಕಪಟದ ಬಗ್ಗೆ ಯೋಚಿಸುತ್ತಿದ್ದೇನೆ. ಇದರ ಬೇರು ಎಲ್ಲಿರಬಹುದು? ಯಂತ್ರ ತಂತ್ರಗಳ ಸಾಮರ್ಥ್ಯವನ್ನೇ ತನ್ನ ಅಸಲೀ ಶಕ್ತಿ ಎಂದು ಮನುಷ್ಯ ಮದಿಸಿ ಭಾವಿಸುವುದರಲ್ಲಿ ಇರಬಹುದೆ? ಬೀಜ ಬಿತ್ತಿ ಅದು ಮೊಳಕೆಯೊಡೆಯಲು ಮಳೆಗಾಗಿ ಕಾಯ್ದು ತೆನೆಗೂಡುವವರೆಗೂ ಆರೈಕೆ ಮಾಡಬೇಕಾದ ನಿಧಾನ ಗತಿಯ ಬದುಕಿನ ವಿಧಾನದಲ್ಲಿ ನಿಜ ಸುಳ್ಳು ಹೀಗೆ ಪದೇ ಪದೇ ವೇಷ ಬದಲಿಸುತ್ತ ಕಲಸು ಮೇಲೋಗರವಾಗದು. ಮನುಷ್ಯನ ಸುಖದ ಕಲ್ಪನೆ–ಕನಸು, ಅದನ್ನು ಅನುಸರಿಸಿದ ರಾಜಕೀಯ, ಆರ್ಥಿಕತೆ, ಇದೆಲ್ಲ ಪರಸ್ಪರಾವಲಂಬಿಯಾಗಿ ಸುತ್ತುತ್ತವೆ.

ಮಾತಿಗೂ ಅರ್ಥಕ್ಕೂ ನಂಟು ಕಡಿದಿರುವುದು ನಮ್ಮ ದೇಶದ ದೊಡ್ಡ ದುರಂತ ಎಂದು ತಾತ್ವೀಕರಿಸುವುದೂ ಹಾಸ್ಯಾಸ್ಪದವೆನಿಸಬಲ್ಲದು. ಹಾಗೆ ಹೇಳುವಾಗ ನಾನು ನನ್ನನ್ನು ಹೊರತುಪಡಿಸಿಕೊಳ್ಳುವುದು ಅನುಮಾನಾಸ್ಪದವಾಗಬಹುದು. ಆದರೆ, ನಾವು ನಮ್ಮನ್ನು ಹೊರತುಪಡಿಸಿಕೊಂಡು ಮಾತಾಡುವುದು ಈ ಕಾಲದ ಟ್ರೆಂಡ್. ನಮ್ಮನ್ನು ಒಳಗೊಂಡು ಮಾತಾಡುವುದನ್ನು ಬಹಳ ಸರಳವಾಗಿ ಪ್ರಾಮಾಣಿಕತೆ ಎಂದು ಕರೆಯುತ್ತಿದ್ದರು. ಈಗ ಯಾವುದೂ ಅಷ್ಟು ಸುಲಭವಾಗಿ 'ನಿರ್ವಚಿಸ'ಬರದು (ಆಹಾ! ಎಂಥ ಶಬ್ದ). ಎಲ್ಲವನ್ನೂ 'ಪ್ರಾಬ್ಲಮ್ಯಾಟಿಕ್' ಆಗಿ ಗ್ರಹಿಸಬೇಕು. ಅಪ್ರಮಾಣಿಕತೆ ಬರೀ ನನ್ನದಲ್ಲವೇ ಅಲ್ಲ. ಅದು ಪ್ರಪಂಚ ಇರುವ ಬಗೆಯಿಂದ ನನ್ನಲ್ಲಿ ಉಂಟಾಗಿರುವಂಥದು. ಎಷ್ಟು ಕ್ರೌರ್ಯ, ಅಸಮಾನತೆ, ದಮನ ಇದೆ ಶಕ್ತರಿಂದ ಅಶಕ್ತರ ಮೇಲೆ! ಅದನ್ನೆಲ್ಲ ಗಮನಿಸದೆ ವ್ಯಕ್ತಿಯನ್ನಷ್ಟೇ ದೂಷಿಸಬಹುದೇ?

ಸಾಧ್ಯವೇ ಇಲ್ಲ ಎಂದು ಘಂಟಾಘೋಷವಾಗಿ ಹೇಳುತ್ತಿರುವವನು ಸ್ವತಃ ಅಶಕ್ತನಲ್ಲ, ಅವನ ಪರವಾಗಿ ಕೆಂಡಗಣ್ಣಾಗಿ ಭುಜ ಕುಣಿಸುತ್ತಿರುವವನು. ಈ ಕಾರಣಕ್ಕೆ ಅವನಿಗೆ ಸಮಾಜದಿಂದ ಸರ್ಕಾರದಿಂದ ಹಲವು ಲಾಭಗಳಾಗುತ್ತಿದ್ದರೆ ಅವನ್ನು ಅವನು ಬರೀ ಅಶಕ್ತರ ಪ್ರತಿನಿಧಿಯಾಗಿ ಮಾತ್ರ ಸ್ವೀಕರಿಸುತ್ತಿರುವುದು.

ಎಲ್ಲರೂ ಸತ್ಯದ ಹಿಂದಲ್ಲ; ಶಬ್ದಗಳ ಹಿಂದೆ ಬಿದ್ದಿರುವಂತೆ ಕಾಣುತ್ತದೆ. Name a dog and kill it ಎನ್ನುವುದು ಒಂದು ಮಾತು. ಶಬ್ದಗಳು ವಿಷ



ಜೀರುಂಡೆಗಳ ಹಾಗೆ ಜೀಯ್‌ಗುಡುತ್ತ ನಮ್ಮ ಸುತ್ತೆಲ್ಲ ಹಾರಾಡುತ್ತಿವೆ. ನೂರಾರು ರೂಪ ತಾಳಬಲ್ಲವು ಅವು. ನೂರಾರು ದೃಷ್ಟಿ, ನೂರಾರು 'ಸತ್ಯ' ತೋರಿಸಬಲ್ಲವು. ಅವು ಕಚ್ಚಿದರೆ ಮೊದಲು ತರುವುದು–ತನ್ನನ್ನು ತಾನು ನೋಡಿಕೊಳ್ಳುವ ಗುಣದ ಮರೆವು, ಮಂಪರು. ಆ ಬಳಿಕ ಇನ್ನೆಲ್ಲವೂ ಸಲೀಸು. ತನ್ನದು ಸತ್ಯ, ತನ್ನದು ವಿಚಾರ–ವಿರೋಧಿಸುವನದು ಅಸತ್ಯ, ಅವಿಚಾರ, ಹೀಗೆ. ಈ ಮಾಯಾಜಾಲ ಬುದ್ಧಿವಂತರೇ ಆದ ನಮ್ಮಲ್ಲನೇಕರನ್ನು ಕಟ್ಟಿ ಕೆಡಹಿರುವುದು ಹೇಗೆ?

ವೈಯಕ್ತಿಕ ಪ್ರಾಮಾಣಿಕತೆಯಿಂದಷ್ಟೇ ಏನನ್ನು ಸಾಧಿಸಲು ಆಗುತ್ತದೆ? ಗೊತ್ತಿಲ್ಲ. ಆದರೆ, ಅದನ್ನು ತೊರೆಯುವುದರಿಂದ? ಅಥವಾ ಅದಕ್ಕೆ ಮೆಳ್ಳೆಗಣ್ಣಾಗಿರುದರಿಂದ...?

ಹಾಗಲ್ಲದಿದ್ದರೆ ನಾವು 'ಅತೀ ಶಕ್ತ'ರಲ್ಲದವರು ಕೂಡ ಅಶಕ್ತರಿಗಾಗಿ ಏನೆಲ್ಲ ಮಾಡಬಹುದಿತ್ತು? ಹಾಗೆ ಹೊಣೆಗಾರಿಕೆಯನ್ನು ನಮ್ಮ ಬುಡಕ್ಕೇ ತರುವುದೂ ಸದಭಿರುಚಿಯಲ್ಲವೇನೋ. ದಯೆ, ಕರುಣೆ, ಪ್ರಾಮಾಣಿಕತೆ ಇತ್ಯಾದಿ ಅನುಮಾನಾಸ್ಪದ ವೈಯಕ್ತಿಕ ಗುಣಗಳು ಮೂಲದಲ್ಲಿ ಯಥಾಸ್ಥಿತಿಯನ್ನು ಮುಂದುವರೆಸುವ ಹುನ್ನಾರವೇ ಎಂದೂ ಅವರು ಅಂದಾರು.

ಇರಲಿ. ಮನಸ್ಸನ್ನು ಕಹಿಗೊಳಿಸುವ ಇಂಥ ಅನೇಕ ವಿಷಯಗಳು ಎಲ್ಲರಿಗೂ ಗೊತ್ತು. ಕುಟುಂಬದಿಂದ ಹಿಡಿದು ನಮ್ಮ ಆಪ್ತ ಸ್ನೇಹ ವಲಯ ಮತ್ತು ಸರ್ಕಾರ, ಇಡೀ ದೇಶ ಇಂಥ ಅನೇಕ ಅನುಭವಗಳನ್ನು ಎಲ್ಲರಿಗೂ ನೀಡಿರಲು ಸಾಕು. ಕನ್ನಡದ ಒಬ್ಬ ಕವಿ, ಹಿರಿಜೀವ ಹೇಳಿದ್ದು ನೆನಪಾಗುತ್ತಿದೆ: 'ಲೋಕವನ್ನು ಬೈಯಬಾರದು; ಹಾಗೆ ಮಾಡುವುದರ ಅರ್ಥ ನಾವು ಲೋಕಕ್ಕಿಂತ ದೊಡ್ಡವರು ಎಂದು'. ಲೋಕದ ನಮ್ಮ ಅನುಭವ ಹೀಗೆ ಕಹಿಯಾಗುತ್ತ ಆಗುತ್ತ ನಾವು ಹೆಚ್ಚೆಚ್ಚು ಅಹಂಕಾರಿಗಳಾಗಿಬಿಡಬಹುದಾದ್ದು ಭಯಂಕರ. ಬಹುಪಾಲು ನಾವು ಭಾವಿಸುವ ಕ್ರಮವಷ್ಟೇ ಎಂದುಕೊಳ್ಳುವುದು ಕ್ಷೇಮ. ಹೊರಗೆ ನಾವು ಕೆಡುಕು ಕಾಣುತ್ತ ಕಾಣುತ್ತ ನಾವು ಕೇಡಿಗರಾಗುತ್ತೇವೋ ಹೇಗೆ?

ಸತ್ಯಜಿತ್ ರೇಯವರ ಒಂದು ಸಣ್ಣ ಕಥೆಯಲ್ಲಿ, ಒಂದು ಊರಿನ ಜಾತ್ರೆಯಲ್ಲಿ ರಥವನ್ನೆಳೆಯುವ ವೇಳೆಗಾದರೂ ಒಬ್ಬನಿಗೆ ಹುಚ್ಚು ಹಿಡಿದಿರುತ್ತದೆ ಎಂದು ಪ್ರತೀತಿಯಿರುತ್ತ, ಒಬ್ಬ ವಿಚಾರವಾದಿ ನೋಡೇ ಬಿಡೋಣ ಎಂದು ಅಲ್ಲಿಗೆ ಹೋಗುತ್ತಾನೆ. ಸಿಕ್ಕ ಸಿಕ್ಕವರನ್ನೆಲ್ಲ ವಿಚಾರಿಸುತ್ತಾನೆ–ಈ ಸರಿ ಯಾರಿಗೆ ಹುಚ್ಚು ಹಿಡಿಯಿತು, ಯಾರಿಗೆ? ಎಂದು. ಅವನ ಪರೀಕ್ಷೆಯ ಪ್ರಕಾರ ಯಾರಿಗೂ ಹಿಡಿದಿಲ್ಲ ಎಂದು ತಿಳಿಯುತ್ತದೆ, ಆದರೂ ಅವನು ಕೊನೆತನಕ ವಿಚಾರಿಸುತ್ತಿರುತ್ತಾನೆ. ಇನ್ನೇನು ರಥ ಎಳೆದು ಮಗೀತು ಅನ್ನುವಾಗ ಇವನನ್ನು ನೋಡನೋಡುತ್ತ ಜನರಿಗೆ ಈ ಸರಿ ಯಾರಿಗೆ ಹುಚ್ಚು ಹಿಡಿದಿದೆ ಎಂದು ತಿಳಿದುಬಿಡುತ್ತದೆ....

ನಾವು ಯಾವುದನ್ನು ಅತಿ ತೀವ್ರವಾಗಿ ವಿರೋಧಿಸುತ್ತೇವೋ ಪರೋಕ್ಷವಾಗಿ ಅದರ ಇರುವಿಕೆಯನ್ನು ಗಟ್ಟಿಗೊಳಿಸುತ್ತಲೂ ಇರಬಹುದೆಂಬ ಅನುಮಾನ ನನಗೆ. ನಮ್ಮ ವಿರೋಧಕ್ಕೊಂದು ಆಸರೆಯಾದ ಅದರ ಬಗ್ಗೆ ನಮಗೆ ಪ್ರೀತಿಯೇ

ಇರಬಹುದು. ಅದು ನಮ್ಮ ಅಸ್ತಿತ್ವದ ಅಗತ್ಯವೇ ಆಗಿರಬಹುದು. ಹಾಗಾಗಿ ತೀವ್ರತೆಗೂ ಒಂದು ಮಿತಿ ಬೇಕು. ಅದು 'ತೀವ್ರವಾದ' ಆಗಬಾರದು. ಯಾವುದೋ ಒಂದರ ನಿರ್ಮೂಲನೆಯಲ್ಲಿ ನಮಗೆ ಆಸ್ಥೆಯಿದ್ದರೆ ಅದರ ಕುರಿತಾಗಿ ಪ್ರೀತಿಯಂತೆಯೇ ದ್ವೇಷವೂ ಇರಬಾರದು. ಹಾಗಿರುವುದನ್ನು ಮನಸ್ಸಿನ ಹದ ಅಥವಾ ಔಚಿತ್ಯ ಎಂದು ಕರೆಯಬಹುದೇನೋ. ಈ ಔಚಿತ್ಯದಲ್ಲಿ ಮಾತ್ರ ಮನಸ್ಸು ಸಜೀವ, ಸಂವೇದನಾಶೀಲ ಮತ್ತು ವಿವೇಕಯುತವಾಗಿ ಉಳಿಯಬಲ್ಲದು. ಇಲ್ಲದಿದ್ದರೆ ಅವನಲ್ಲ ನಾನು ಆ ಅಧಿಕಾರಯುತ ಜಾಗದಲ್ಲಿರಬೇಕಿತ್ತು, ಅವನ ಬದಲು ನಾನು ತುಳಿಯಬೇಕಿತ್ತು ಎನ್ನುವ ಸುಪ್ತಾಕಾಂಕ್ಷೆಗೆಡೆಯಾಗಿರಲು ಸಾಧ್ಯ.

ನಮ್ಮ ಈ ಕಾಲದ ಅನೇಕ ಪ್ರತಿ–ವಿಚಾರ ಪ್ರತಿಕ್ರಿಯೆಗಳಲ್ಲಿ ಇದೇ ವ್ಯಕ್ತವಾಗುತ್ತಿದೆ. ರಾಜಕೀಯ ಪಕ್ಷ ಪ್ರತಿಪಕ್ಷಗಳಲ್ಲಿ ಎದ್ದು ಕಾಣುವ ಇದು ಬುದ್ಧಿವಂತರಲ್ಲಿ ಸೂಕ್ಷ್ಮವಾಗಿ ತೋರುತ್ತದೆ.

ಯಾವುದೂ ಅತಿಯಾಗಿಲ್ಲದಿರುವಲ್ಲಿ ಮನುಷ್ಯನ ಸರಳ ಸಂತೋಷ ಮತ್ತು ಒಳಿತು ಇರುವಂತೆ ಕಾಣುತ್ತದೆ. ಇದರ ಮುಂದೆ ಮತ್ತೊಂದಿಲ್ಲ ಎನಿಸುತ್ತದೆ.

ನಾನು ಅಕಸ್ಮಾತ್ ನೋಡಿದ ಒಂದು ಸಾಧಾರಣ ಸಿನಿಮಾದಲ್ಲಿ ಹೀಗೆ ನಡೆಯುತ್ತದೆ: ಮಹಾನಗರದ ಒಂದು ಕುಟುಂಬ–ಕೆರಿಯರ್‌ಗಾಗಿ ಹೆಣಗುತ್ತಿರುವ ಗಂಡ, ಹೆಂಡತಿ ಮಗು. ಆ ಮಗು ಯಾಕೋ ಅಪ್ಪಾ ನಮ್ಮ ಮನೆಗೆ ಯಾರಾದರೂ ಅತಿಥಿ ಬರುವುದು ಯಾವಾಗ ಎಂದು ಕೇಳುತ್ತಿರುತ್ತದೆ. ಬರುತ್ತಾರೆ ತಾಳು ಎಂದು ಅಪ್ಪ ಅದನ್ನು ಸಮಾಧಾನಪಡಿಸುತ್ತಿರುತ್ತಾನೆ. ಅದಕ್ಕೆ ತಕ್ಕಂತೆ ಹಳ್ಳಿಯಿಂದ ಒಬ್ಬ ವಯಸ್ಸಾದ ವ್ಯಕ್ತಿ ತನ್ನ ಮೊಮ್ಮಗನನ್ನು ಹುಡುಕಿಕೊಂಡು ಮಹಾನಗರದಲ್ಲಿ ವಿಳಾಸ ಸ್ವಲ್ಪ ತಪ್ಪಿ ಇವರ ಮನೆಗೆ ಬಂದು ಊರಿಕೊಳ್ಳುತ್ತಾನೆ. ಕಾಲಕ್ರಮೇಣ ಅವನ ಹಳ್ಳಿಗತನದಿಂದ ಅನೇಕ ಗೊಂದಲಗಳಾಗುತ್ತವೆ. ಅವನನ್ನು ಸಾಗಹಾಕುವುದೆಂತು ಎಂದು ಗಂಡ ಹೆಂಡತಿ ಪರಿತಪಿಸುವಂತಾಗುತ್ತದೆ. ಆ ವೇಳೆಗಾಗಲೇ ಅವನ ಹಳ್ಳಿಯ ಕಡೆಯ ಕೆಲವರು ಅವನನ್ನು ಭೆಟ್ಟಿಯಾಗುತ್ತಿರುತ್ತಾರೆ. ಬೇಡದ ನೆಂಟ ಮುದುಕನನ್ನು ಸಾಗಹಾಕಲೆಂದು ಪೇಟೆ ದಂಪತಿ ಒಂದೆರಡು ದಿನ ಮನೆ ತೊರೆದು ಗುಟ್ಟಾಗಿ ಹೋಟೆಲ್‌ನಲ್ಲಿರುವಾಗ, ಈ ಹಳ್ಳಿಯ ಮಿತ್ರರು ಮನೆಯಲ್ಲಿ ಸೇರಿ ಹಾರ್ಮೋನಿಯಂ ಡೋಲಕ್ ಬಾರಿಸುತ್ತ ಕಬೀರನ ಭಜನೆ ಹಾಡುತ್ತಿರುವುದನ್ನು ಕಾಣುತ್ತೇವೆ.

ಆ ಭಜನೆಯನ್ನು ನಾನು ಇಷ್ಟಪಟ್ಟು ಈವರೆಗೆ ಸುಮಾರು ನೂರು ಸರಿ ಕೇಳಿ ತಪ್ಪು ತಪ್ಪಾಗಿ ಹಾಡಿಕೊಂಡಿರಬಹುದು. ಐದು ಜನರ ಆ ಮಂಡಳಿಯನ್ನು ಮನಸ್ಸಲ್ಲೇ ಮೂಡಿಸಿಕೊಳ್ಳುತ್ತ ಅವರು ಅಷ್ಟು ಜನಕ್ಕೂ ಸಾಮಾನ್ಯವಾದ ಗುಣಲಕ್ಷಣವೇನು ಎಂದು ಯೋಚಿಸಿದ್ದೇನೆ. ಅವರಲ್ಲಿ ಯಾರೂ ಬಹಳ ಬುದ್ಧಿವಂತರೂ ಸುಂದರರೂ ಆಕರ್ಷಕರೂ ಅಲ್ಲ. ಆದರೆ ಪರಸ್ಪರ ಒಳಿತನ್ನು ಬಯಸುವವರೂ ಎಲ್ಲರ ಒಳಿತಲ್ಲೇ ತಮ್ಮ ಒಳಿತು ಕಾಣುವವರೂ ಹೌದು. ಎಲ್ಲರ ಒಳಿತಿಗಾಗಿ ತಮ್ಮದೇನನ್ನೋ ಅರ್ಪಿಸಬೇಕೆಂಬ ಭಾವದವರೂ ಕೂಡ. ಹಾಗಾಗಿ ಅವರ ಒಳಗಿನ ಮತ್ತು ಅವರಿಂದ ಹೊರಸೂಸುವ ಸಂತೋಷಕ್ಕೆ ಚ್ಯುತಿಯಿದ್ದಂತಿಲ್ಲ.

ನನ್ನ ಸಮಾಜವೇ! ಇಂಥ ಒಂದು ಬದುಕನ್ನು ನನಗೆ ಒದಗಿಸಿಕೊಡುತ್ತೀಯಾ? ನನ್ನ ಕಿರುವಲಯದಲ್ಲಾದರೂ. ಅದಕ್ಕಾಗಿ ನನ್ನನ್ನು ಸಿದ್ಧಪಡಿಸುತ್ತೀಯಾ? ಬೈದು ಝಂಕಿಸಿ ಬಡಿದಾದರೂ.

**ಕಬೀರನ ಹಾಡಿನ ಸಾಲುಗಳು**

ಕರುಣಾಳುವಿನ ಪ್ರೇಮದ ಎಳೆಯ
ಹರಿದರೆ ಸೇರಿಸಲಾಗದು
ಗಂಟುಹಾಕಿದರೂ ಗಂಟೊಂದು
ಉಳಿದೇಬಿಡುವುದು

ಮನವನಮಲಗೊಳಿಸುವ ನುಡಿಗಳನೇ ಆಡು
ತಣಿಸುತ ಅನ್ಯರನು; ತಂಪಾಗಿರಿಸುತ ನಿನ್ನನೂ

ದೇವಾ ಇಷ್ಟೇ ಕೊಡು ಸಾಕೆನಗೆ–ನನ್ನ ಕುಟುಂಬವ ಸಾಕುವಷ್ಟೇ
ಹಸಿವಿಂದುಳಿಯದೆ ನಾನು; ಸಾಧುವೂ ಹಾಗೇ ಹೋಗದಷ್ಟೇ
ಕೆಡುಕನರಸುತ ನಾ ಹೋದೆ ಅದು ಎಲ್ಲೆಲ್ಲೂ ಸಿಗಲಿಲ್ಲ
ಮನದೊಳಗಿಣುಕಿ ನೋಡಿದೆ; ನನಗಿಂತ
ಕೆಟ್ಟವರಿರಲಿಲ್ಲ



**(ಕನ್ನಡದ ಮುಖ್ಯ ಕವಿಗಳಲ್ಲೊಬ್ಬರಾದ ಎಸ್. ಮಂಜುನಾಥ್, ನಮ್ಮ ನಡುವಿನ ಅನನ್ಯ ಚಿಂತಕರೂ ಹೌದು. ಅವರೀಗ ಕೆ.ಆರ್. ನಗರದ ದೂರವಾಣಿ ವಿನಿಮಯ ಕೇಂದ್ರದಲ್ಲಿ ಉದ್ಯೋಗಿಯಾಗಿದ್ದಾರೆ)**


# ಚರಕ ಆಸ್ಪತ್ರೆ

(ಮೆಟರ್ನಿಟಿ ಮತ್ತು ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ)

**ಶ್ರೀ ಶ್ರೀ ಡಾ. ಶಿವಕುಮಾರ ಸ್ವಾಮಿ ಸರ್ಕಲ್, ಸ್ಟೇಡಿಯಂ ಕ್ರಾಸ್ ಎದುರು, ಬಿ.ಹೆಚ್. ರಸ್ತೆ, ತುಮಕೂರು**

ದೂರವಾಣಿ ಸಂಖ್ಯೆ :9845588925

5ನೇ ವರ್ಷಕ್ಕೆ ಕಾಲಿಡುತ್ತಿರುವ **ಹೊಸ ಮನುಷ್ಯ** ಮಾಸಿಕ
ಪತ್ರಿಕೆಗೆ ಹಾರ್ದಿಕ ಶುಭಾಶಯಗಳು

**ಜಿ. ಮಲ್ಲಿಕಾ ಬಸವರಾಜು,** ಎಂ.ಎ.,
ಆಡಳಿತಾಧಿಕಾರಿ
ಎಂ.ಬಿ.ಬಿ.ಎಸ್.,ಡಿ.ಜಿ.ಒ.,ಪಿ.ಜಿ.ಡಿ.ಹೆಚ್.ಹೆಚ್.ಎಂ.
ಚರಕ ಆಸ್ಪತ್ರೆ, ತುಮಕೂರು

**ಡಾ. ಬಸವರಾಜು**
ಸ್ತ್ರೀರೋಗ ಮತ್ತು ಪ್ರಸೂತಿ ತಜ್ಞರು,
ಚರಕ ಆಸ್ಪತ್ರೆ ತುಮಕೂರು

ಒಂದು ವಿಶೇಷ ಮಾತುಕತೆ

# ಪಶ್ಚಿಮದ ಅವನತಿ, ಪೂರ್ವದ ಉನ್ನತಿಯ ಪರ್ವ ಆರಂಭವಾಗಿದೆಯೆ?

ಜಗತ್ತನ್ನು ರಾಜಕೀಯವಾಗಿ ಪೂರ್ವ-ಪಶ್ಚಿಮಗಳೆಂಬ ಎರಡು ಭಾಗಗಳಾಗಿ ನೋಡುವುದು ಜಾಗತಿಕ ರಾಜಕೀಯ ವಿಶ್ಲೇಷಕರ ಒಂದು ರೂಢಿಯಾಗಿದೆ.. ಪೂರ್ವ-ಪಶ್ಚಿಮಗಳೆಂಬ ದಿಕ್ಸೂಚಿ ಶಬ್ದಗಳು ಎರಡು ರಾಜಕೀಯ ವಿಂಗಡಣೆಯ ಸೂಚಕಗಳಾದದ್ದು ಜಗತ್ತು ಆಧುನಿಕ ಎನ್ನಿಸಿಕೊಂಡ ಸಂದರ್ಭದಲ್ಲಿ. ಇದರ ಜೊತೆಗೇ ನಾವು ಗಮನಿಸಬೇಕಾದದ್ದು ಈ ಆಧುನಿಕ ಎಂಬ ಸಂದರ್ಭವನ್ನು ಸೃಷ್ಟಿಸಿದ್ದು ಪಶ್ಚಿಮ. ಅಂದರೆ ಮುಖ್ಯವಾಗಿ ಯೂರೋಪು ಮತ್ತು ಅಮೇರಿಕಾ ದೇಶಗಳು. ಹಾಗಾಗಿ, ಈ ಆಧುನಿಕ ಜಗತ್ತಿನಲ್ಲಿ ಪೂರ್ವ ಎಂಬುದು ಬಹುತೇಕ ತನ್ನ ಮೂಲ ಚಹರೆ ಮತ್ತು ರೂಹುಗಳನ್ನು ಕಳೆದುಕೊಂಡು ಪಶ್ಚಿಮಕ್ಕೆ ಸಾಪೇಕ್ಷವಾದ ಒಂದು ರೂಪವಾಗಿ, ಒಂದರ್ಥದಲ್ಲಿ ಪಶ್ಚಿಮದ ಅವಿಕಸಿತ ರೂಪವಾಗಿ(ಅಥವಾ ಭವಿಷ್ಯದಲ್ಲಿ ಸಂಭವಿಸಬೇಕಾದ ಪಶ್ಚಿಮದ ಪ್ರತಿಬಿಂಬವಾಗಿ), ಅದರ ಸ್ಥಳೀಯ ಬಡಕಲು ಅನುವಾದ ಮಾತ್ರವಾಗಿ(ನಮ್ಮ ಬುದ್ಧಿಜೀವಿಗಳನ್ನು ನೋಡಿ!) ಪ್ರಸ್ತುತಗೊಳ್ಳುತ್ತಿದೆ.

ಇದಕ್ಕೆಲ್ಲ ಮುಖ್ಯ ಕಾರಣವಾಗಿರುವಂತೆ ತೋರುವ ಈ ಆಧುನಿಕತೆ ಎಂದರೇನು? ಎಂಬ ಪ್ರಶ್ನೆ ಇಲ್ಲಿ ಮುಖ್ಯವಾಗುತ್ತದೆ. ಈ ಪ್ರಶ್ನೆಗೆ ಹಲವು ರೀತಿಯ ಉತ್ತರಗಳು ಇರುವವಾದರೂ, ಈ ಪೂರ್ವ-ಪಶ್ಚಿಮದ ದ್ವಂದ್ವವನ್ನು ವಿವರಿಸುವ ಸಂದರ್ಭದಲ್ಲಿ ನಮಗೆ ಅರ್ಥಪೂರ್ಣವಾಗಿ ಕಾಣುವ ಉತ್ತರವೆಂದರೆ, ಗಾಂಧಿ ನಿರೂಪಿಸಿದ ಆಧುನಿಕತೆಯು ಮತ್ತೇನೂ ಅಲ್ಲ; ಅದು ವಸಾಹತುಶಾಹಿಯ ಉಪಕರಣ ಎಂಬುದು. ಆದರೆ ವಿಪರ್ಯಾಸವೆಂದರೆ, ವಸಾಹತುಶಾಹಿ ಉಪಕರಣಕ್ಕೆ, ಅದರ ಬಲಿಯಾದ ಪೂರ್ವವೇ ಎಷ್ಟು ಮತ್ತು ಹೇಗೆ ಮಾರುಹೋಗಿದೆ ಎಂದರೆ, ತನ್ನ ವಸಾಹತೋತ್ತರ ಸಂದರ್ಭದಲ್ಲೂ ಅದು ತನ್ನ ಉನ್ನತಿಯ ಕನಸನ್ನು ಸಾಕಾರ ಗೊಳಿಸಿಕೊಳ್ಳಲು(ಅಂದರೆ ಪಶ್ಚಿಮದ ಎರಕದಲ್ಲಿ ಮೂಡಲು) ಅದನ್ನೇ ನಂಬಿಹೊರಟಂತಿದೆ! ಅಷ್ಟೇ ಅಲ್ಲ, ಅದನ್ನೀಗ ಮುಕ್ತವಾಗಿ ಬಳಸಿಕೊಂಡು ಅದು ತನ್ನ 'ಉನ್ನತಿ'ಯಲ್ಲಿ ಪಶ್ಚಿಮವನ್ನೇ ಹಿಂದಿಕ್ಕೆ ನಡೆಯುವ ಸೂಚನೆಗಳು ಕಾಣುತ್ತಿವೆ ಎಂಬ ಮುನ್ನೋಟದ ಮಾತುಗಳೂ ಕೇಳಿಬರುತ್ತಿವೆ. ಅದೇನೇ ಇರಲಿ, ಇದರ ಪರಿಣಾಮಗಳಾದರೂ ಏನು? ಪೂರ್ವವೂ ತನ್ನೊಳಗೇ ಹೊಸ ರೂಪದ ವಸಾಹತುಶಾಹಿಯನ್ನು ನಿರ್ಮಿಸಿಕೊಳ್ಳುತ್ತಿದೆ ಎಂಬ ಮಾತು ಕೇಳಿಬರುತ್ತಿದೆ. ಇದೇ ಪೂರ್ವವು ಪಶ್ಚಿಮವಾಗುವುದರಲ್ಲಿನ ದುರಂತವೆಂದು ಈ ಮಾತುಕತೆಯಲ್ಲಿ ಪಂಕಜಮಿಶ್ರ ಸೂಚಿಸುತ್ತಾರೆ. ಜೊತೆಗೆ, ಈ ವಿಪರ್ಯಾಸಕರ ಪ್ರಯೋಗ ತನ್ನ ಕೇವಲ ಅರ್ಧ ಶತಮಾನದ ಇತಿಹಾಸದ ಹಾದಿಯಲ್ಲಿ ಅನೇಕ ಅನಾಹುತಗಳ ಕಡೆ ಬೊಟ್ಟು ಮಾಡುತ್ತಾರೆ. ಮುಖ್ಯವಾಗಿ ಇಸ್ಲಾಮಿ ಎಂದು ಕರೆಯಲಾಗುವ ಭಯೋತ್ಪಾದನೆಯ ಕಡೆಗೆ.

ನಿಜ, ಈ ಮಾತುಕತೆ ಸ್ವಲ್ಪ ಜಟಿಲವಾಗಿದೆ. ಅದು ಸಾಕಷ್ಟು ಪೂರ್ವ ಸಿದ್ಧತೆಗಳನ್ನು ಬೇಡುತ್ತದೆ. ಇತಿಹಾಸ ಮತ್ತು ವರ್ತಮಾನ ರಾಜಕಾರಣದ ಮುಖ್ಯ ಘಟನಾವಳಿಗಳ ಪರಿಪ್ರೇಕ್ಷ್ಯದಲ್ಲಿ ಈ ಮಾತುಕತೆ ತನ್ನ ಅರ್ಥವನ್ನು ಕಟ್ಟಿಕೊಳ್ಳುತ್ತಾ ಹೋಗುತ್ತದೆ. ಆದರೆ ಸಾಮಾನ್ಯ ಓದುಗರೂ ಸಹ ಇದನ್ನು-ಸ್ವಲ್ಪ ಕಷ್ಟಪಟ್ಟಾದರೂ ಓದಿ-ಜಗತ್ತು ಇಂದು ಪಡೆಯುತ್ತಿರುವ ಅನಾಹುತಕಾರಿ ರೂಪದ ಹಿಂದಿನ ರಾಜಕಾರಣದ ಸ್ಥೂಲ ಚಿತ್ರವನ್ನಾದರೂ ಪಡೆಯಬೇಕೆಂಬುದು ನಮ್ಮ ಅಪೇಕ್ಷೆ.



ಪಂಕಜ್ ಮಿಶ್ರ ಅಂತಹ ಪರಿಚಿತ ಹೆಸರೇನೂ ಅಲ್ಲ. ವಿದ್ಯಾರ್ಥಿ ದೆಸೆಯ ದಿನಗಳಲ್ಲಿ ಲೋಹಿಯಾ ವಿಚಾರಗಳಿಂದ ಪ್ರಭಾವಿತರಾದ ಅವರು ಮಾರ್ಕ್ಸ್‌ವಾದವೂ ಸೇರಿದಂತೆ ಪಶ್ಚಿಮದ ಆಧುನಿಕ ಜ್ಞಾನಮೀಮೀಮಾಂಸೆಯ ಪರಿಭಾಷೆಯಲ್ಲಿ ಯೋಚಿಸುವವರಲ್ಲ. ಹಾಗಾಗಿಯೇ ಅವರು ನಮ್ಮ ಮುಖ್ಯ ಧಾರೆಯ ಬುದ್ಧಿಜೀವಿಗಳ ನಡುವೆ ಅಪರಿಚಿತರು. ಅವರು ಎಪ್ಪತ್ತು-ಎಂಬತ್ತರ ದಶಕದಲ್ಲಿ ಅಲಹಾಬಾದ್ ಮತ್ತು ಜವಹರಲಾಲ್ ವಿಶ್ವವಿದ್ಯಾಲಯಗಳಲ್ಲಿ ರಾಜಕೀಯ ವಿಜ್ಞಾನ ಮತ್ತು ಇಂಗ್ಲಿಷ್ ಸಾಹಿತ್ಯವನ್ನು ಓದಿ ಸಾಮ್ರಾಜ್ಯಶಾಹಿ ರಾಜಕಾರಣವನ್ನು ಕುರಿತು ವಿಶೇಷ ಅಧ್ಯಯನ ಮಾಡಿದವರು.

ಲಂಡನ್ ವಿಶ್ವವಿದ್ಯಾಲಯದ ಕಾಲೇಜಿನ ಇಂಗ್ಲಿಷ್ ವಿಭಾಗದ ಮತ್ತು ರಾಯಲ್ ಸೊಸೈಟಿ ಆಫ್ ಲಿಟರೇಚರ್‌ನ ಫೆಲೋ ಆಗಿರುವ ಪಂಕಜ್ ಮಿಶ್ರ *ನ್ಯೂಯಾರ್ಕರ್, ನ್ಯೂಯಾರ್ಕ್ ಟೈಮ್ಸ್, ಗಾರ್ಡಿಯನ್* ಮುಂತಾದ ಜಾಗತಿಕ ಪತ್ರಿಕೆಗಳಿಗೆ ರಾಜಕೀಯ ಪ್ರಬಂಧಗಳನ್ನು ಬರೆಯುತ್ತಾರೆ. *ಫಾರಿನ್ ಪಾಲಿಸಿ* ಪತ್ರಿಕೆಯು ಇವರನ್ನು ಸಮಕಾಲೀನ ಜಗತ್ತಿನ ನೂರು ಮುಖ್ಯ ಚಿಂತಕರಲ್ಲಿ ಒಬ್ಬರು ಎಂದು ಮಾನ್ಯ ಮಾಡಿದೆ. ಅವರ ಮುಖ್ಯ ಪುಸ್ತಕಗಳೆಂದರೆ, India in Mind , An end to suffering: Buddha in the World,Temptations of the West: How to be modern in India, Pakistan and beyond, From the ruins of Empire : The revolt against the West and remaking. ಇವುಗಳಲ್ಲಿ ಕೊನೆಯ ಪುಸ್ತಕದಲ್ಲಿನ ಪಂಕಜ್ ಮಿಶ್ರರ ಕೆಲವು ವಾದಗಳನ್ನು ಕುರಿತು ಇಂಗ್ಲಂಡ್‌ನ ಮಧ್ಯಪ್ರಾಚ್ಯ ಪರಿಣತ ಮತ್ತು ಪತ್ರಕರ್ತ ವಿಲಿಯಂ ಐಶ್ಲರ್ Open democracy ಎಂಬ ಮುಕ್ತ ಚಿಂತನೆಯ ಅಂತರ್ಜಾಲ ವೇದಿಕೆಗಾಗಿ ನಡೆಸಿದ ಮಾತುಕತೆಯ ಆಯ್ದ ಭಾಗಗಳನ್ನು ಇಲ್ಲಿ ನೀಡುತ್ತಿದ್ದೇವೆ.

-ಸಂಪಾದಕ

**ವಿಲಿಯಂ ಐಶ್ಲರ್**: ನೀವು ಇತ್ತೀಚೆಗೆ ಗಾರ್ಡಿಯನ್ ಪತ್ರಿಕೆಯಲ್ಲಿ ಬರೆಯುತ್ತಾ 'ಎಕನಾಮಿಸ್ಟ್'ನ ಇಬ್ಬರು ಸಂಪಾದಕರು ಬಳಸಿದ ನುಡಿಗಟ್ಟನ್ನು ಬಳಸಿ ಪಶ್ಚಿಮದ ಮಾದರಿಯು ಮುರಿದು ಬಿದ್ದಿದೆ ಎಂದಿದ್ದೀರಿ. ನಿಮ್ಮ ಪ್ರಕಾರ ಪಶ್ಚಿಮದ ಮಾದರಿ ಎಂಬುದು ಏನು? ತುಸು ವಿವರಿಸುತ್ತೀರಾ ?

**ಪಂಕಜ್ ಮಿಶ್ರ** : ಕೆಲವು ಕಲ್ಪನೆಗಳ ಸಾಂಕೇತಿಕ ರೂಪ(Shorthand) ಅದು, ಇಪ್ಪತ್ತನೇಯ ಶತಮಾನದ ಆದಿಯಿಂದ ಪಶ್ಚಿಮ ಯೂರೋಪಿನ ಮತ್ತು ಅಮೇರಿಕದ ಪ್ರತಿಷ್ಠಿತ ವರ್ಗದ ಜನ ತಮ್ಮ ರಾಷ್ಟ್ರ ಪ್ರಭುತ್ವಗಳ ವಿಕಾಸವನ್ನು ನಿರೂಪಿಸುವುದಕ್ಕಾಗಿ ಬಳಕೆ ಮಾಡಿದ ಸಂಕ್ಷಿಪ್ತ ರೂಪ ಅದು. ತಮ್ಮ ಇತಿಹಾಸದ ಈ ಪಾಠಗಳನ್ನು ತಾನೇ ಆಕ್ರಮಿಸಿದ ದೇಶಗಳನ್ನೂ ಒಳಗೊಂಡಂತೆ ಮಿಕ್ಕ ಪ್ರಪಂಚಕ್ಕೆ ಅನ್ವಯಿಸಲು ಅವರು ಪ್ರಯತ್ನಿಸುತ್ತಾರೆ. ನಾನಿಲ್ಲಿ ವಿಶೇಷವಾಗಿ ಪಶ್ಚಿಮ ಯೂರೋಪ್, ಬ್ರಿಟನ್ ಮತ್ತು ಫ್ರಾನ್ಸ್‌ಗಳಂತಹ ದೇಶಗಳಲ್ಲಿನ ಚಿಂತಕರು, ಬುದ್ಧಿಜೀವಿಗಳು ಮತ್ತು ರಾಜಕೀಯ ಮುತ್ಸದ್ದಿಗಳು ತಮ್ಮ ದೇಶಗಳ ಇತಿಹಾಸಗಳಲ್ಲಿ ಕಂಡದ್ದನ್ನು ಪ್ರಪಂಚದ ಇತರ ಭಾಗಗಳ ಇತರ ದೇಶಗಳಿಗೆ ಅನ್ವಯಿಸಲು ಪ್ರಯತ್ನಿಸಿದ ವಿಶಿಷ್ಟ ಟೆಲಿಯಾಲಜಿಯ (ಪೂರ್ವನಿಯೋಜಿತ್ವವಾದ?) ಬಗ್ಗೆ ಮಾತನಾಡುತ್ತಿದ್ದೇನೆ. (ಟೆಲಿಯಾಲಜಿ: ಯಾವುದೇ ಸಂಗತಿ ಅಥವಾ ವಿಚಾರವೂ ಒಂದು ಪೂರ್ವ ನಿರ್ಧಾರಿತ ಉದ್ದೇಶ ಸಾಧನೆಗಾಗಿ ಯೋಜಿಸಲ್ಪಟ್ಟಿರುತ್ತದೆ ಎಂಬ ನಂಬಿಕೆ) ಈ ಇತರ ದೇಶಗಳೂ ಸಹ ತಾವು ಬಳಸಿದ ತಂತ್ರಗಳನ್ನು ಬಳಸಿ, ತಾವು ಹಾದು ಬಂದ ಅದೇ ಹಂತಗಳ ಮೂಲಕ ತಮ್ಮ (ಪಾಶ್ಚಿಮಾತ್ಯ) ಮಾದರಿಯ ಉದಾರ ಬಂಡವಾಳಶಾಹಿ ಸ್ಥಿತಿಯನ್ನು ತಲುಪಬಹುದು ಎಂಬುದು ಮೂಲ ಕಲ್ಪನೆ.

ಇದು ಕೆಲವು ಪ್ರಾಂತ್ಯಗಳಿಗೆ ಸಂಬಂಧಿಸಿದ ಇತಿಹಾಸಗಳ ಸಾಮಾನ್ಯೀಕರಣಗಳನ್ನು, ಕೆಲವು ಐತಿಹಾಸಿಕ ಊಹೆಗಳನ್ನು ಪ್ರಪಂಚದ ಮಿಕ್ಕ ಭಾಗಗಳಿಗೆ ಅನ್ವಯಿಸುವುದನ್ನು ಅವಲಂಬಿಸಿದ ಒಂದು ಮಾದರಿ. ಪ್ರಪಂಚದ ಬಹು ಚಿಕ್ಕ ಭಾಗವಾದ ಪಶ್ಚಿಮ ಯೂರೋಪ್ ಮತ್ತು ಅಮೇರಿಕದಂತಹ ದೇಶಗಳ ಇತಿಹಾಸಗಳನ್ನು ಉದಾಹರಣೆಯಾಗಿ ತೆಗೆದುಕೊಂಡಿದ್ದರೂ ಸಹ ಇದಕ್ಕೆ ಇತರೆ ಹಲವಾರು ಅವತಾರಗಳುಂಟು. ಗಾರ್ಡಿಯನ್‌ನಲ್ಲಿ ನಾನು

ಹೇಳಿದ ಹಾಗೆ ಹತ್ತೊಂಭತ್ತನೆಯ ಶತಮಾನದ ಮಧ್ಯಭಾಗದಿಂದ ಅರ್ಥಶಾಸ್ತ್ರಜ್ಞರು ಮುಕ್ತ ವ್ಯಾಪಾರದ ಪ್ರಾಮುಖ್ಯತೆಯ ಬಗ್ಗೆ ವಾದಿಸತೊಡಗಿದ್ದರಿಂದ ಹಿಡಿದು 'ಅಮೆರಿಕದ ಶತಮಾನದ ಬಗ್ಗೆ ಹೆನ್ರಿ ಲ್ಯೂಸ್ ಮಾತನಾಡುವವರೆಗೆ; ನಂತರದಲ್ಲಿ ರಾಸ್ಟೋವ್ ಆಧುನೀಕರಣದ ಸಿದ್ಧಾಂತವನ್ನು ವಾಷಿಂಗ್ಟನ್ ಒಡಂಬಡಿಕೆಯವರೆಗೂ ಪ್ರತಿಪಾದನೆ ಮಾಡುವವರೆಗೆ ಈ ಅವತಾರಗಳು ಹಲವು. ಪ್ರಪಂಚದ ಒಂದು ಸಣ್ಣ ಭಾಗದಲ್ಲಿ ಯಶಸ್ವಿಯಾದದ್ದೆಲ್ಲ ಜಗತ್ತಿನ ಇತರೆಲ್ಲ ಕಡೆಗಳಲ್ಲೂ ನಡೆಯುತ್ತದೆ ಎಂಬ ಕಲ್ಪನೆ–ಒಂದು ರೀತಿಯ ಸೈದ್ಧಾಂತಿಕ ಖಚಿತತೆ– ಶೀತಲ ಸಮರದ ನಂತರವೂ ಹೊಸ ಸ್ಫೂರ್ತಿಯೊಂದಿಗೆ ಚಾಲ್ತಿಗೆ ಬಂತು.

**ವಿ. ಐ :** ಈ ಪಾಶ್ಚಿಮಾತ್ಯ ಮಾದರಿಯು ಸಾಮ್ರಾಜ್ಯಶಾಹಿಯ ಕಾರಣದಿಂದಾಗಿ ವಿಶ್ವವ್ಯಾಪಿಯಾಗಿದೆ ಎಂಬುದು ನಿಮ್ಮ ವಾದ. ಪಾಶ್ಚಿಮಾತ್ಯ ಮತ್ತು ಪಾಶ್ಚಿಮಾತ್ಯೇತರ ಸಾಮ್ರಾಜ್ಯಶಾಹಿಗಳ ನಡುವಿನ ವ್ಯತ್ಯಾಸಗಳೇನು?

**ಪಂ.ಮಿ :** ಕೈಗಾರಿಕಾವಾದದ (Industrialism) ಮೂಲಕ ಬಂಡವಾಳ ವಿಸ್ತರಣೆಯೇ ಪ್ರಮುಖ ವ್ಯತ್ಯಾಸ. ಕಳೆದ ೨೦೦ ವರ್ಷಗಳ ಇತಿಹಾಸವನ್ನು ಇದು ನಿರೂಪಿಸುತ್ತದೆ ಮತ್ತು ಸಂಪನ್ಮೂಲಗಳ, ಮಾರುಕಟ್ಟೆಗಳ ಹುಡುಕಾಟ ಹಾಗೂ ಭೂಪ್ರದೇಶಗಳ ಆಕ್ರಮಣಶೀಲತೆಯಿಂದ ಚಾಲಿತವಾಗಿದೆ. ಆದರೆ ನೀವು ಆಟ್ಟೋಮನ್ ಸಾಮ್ರಾಜ್ಯದ ಇತಿಹಾಸವನ್ನು ಅಥವಾ ಕ್ವಿಂಗ್ ಸಾಮ್ರಾಜ್ಯದ ಇತಿಹಾಸವನ್ನು ಗಮನಿಸಿದರೆ ವಿವಿಧ ರೂಪದ ಬಂಡವಾಳಶಾಹಿ ವ್ಯವಸ್ಥೆಗಳ, ಮಾರುಕಟ್ಟೆ ಅರ್ಥಶಾಸ್ತ್ರಗಳ ಪುರಾವೆಗಳನ್ನು ನೀವು ಕಾಣುತ್ತೀರಿ. ಆದರೆ ವಿಸ್ತರಣೆ ಮಾಡಬೇಕೆಂಬ, ಪ್ರಪಂಚದ ವಿವಿಧ ಭಾಗಗಳಲ್ಲಿ ಹೊಸ ಸಂಪನ್ಮೂಲಗಳನ್ನು ಸತತವಾಗಿ ಹುಡುಕಬೇಕೆಂಬ ಹುಚ್ಚು ಒತ್ತಡವನ್ನು ನೀವಲ್ಲಿ ಕಾಣಲಾರಿರಿ. ಅವರ ಹುಡುಕಾಟ ಕೇವಲ ತಮ್ಮ ಅಕ್ಕಪಕ್ಕದಲ್ಲಿ ಮಾತ್ರವಲ್ಲ, ಭೂಮಿಯ ಮತ್ತೊಂದು ಭಾಗದಲ್ಲೂ ಕೂಡ. ಉದಾಹರಣೆಗೆ ಬ್ರಿಟಿಷ್ ಸಾಮ್ರಾಜ್ಯವು ಫಿಜಿ ದ್ವೀಪಗಳಲ್ಲಿ, ಕ್ಯಾರಿಬಿಯನ್ ದ್ವೀಪಗಳಲ್ಲಿ ಹಾಗೇ ಭಾರತದಲ್ಲೂ ಸಹ ಕ್ರಿಯಾಶೀಲವಾಗಿತ್ತು. ಇನ್ನು ಆಸ್ಟ್ರೇಲಿಯದ ವಿಚಾರವನ್ನಂತು ಹೇಳುವುದೇ ಬೇಡ. ಹಿಂದಿನ ಯಾವ ಸಾಮ್ರಾಜ್ಯಗಳಿಗೂ ಆ ಮಟ್ಟದ ನಿಲುಕು ಇರಲಿಲ್ಲ ಅಥವಾ  ಆ ಮಟ್ಟದ ಹಸಿವು ಇರಲಿಲ್ಲ. ಅವರಿಗೆ ಆ ಸ್ಫೂರ್ತಿ. ಮಹತ್ವಾಕಾಂಕ್ಷೆ ಇತ್ತು ಎಂಬುದನ್ನು ನೀವು ಕಷ್ಟದಿಂದ ನಿರೂಪಿಸಿದರೂ ಅವರಿಗೆ ಆ ಮಟ್ಟದ ಸಾಧನಗಳ ಅನುಕೂಲವಿತ್ತು ಎಂಬುದನ್ನು ಸಾಧಿಸ ತೋರಿಸಬೇಕಾಗುತ್ತದೆ. ಆದರೆ ಅವರ ಬಳಿ ಖಂಡಿತ ಆ ಸಾಧನಗಳಿರಲಿಲ್ಲ.

**ವಿ.ಐ :** ಸಾಮ್ರಾಜ್ಯಶಾಹಿಯ ವಿಚಾರವನ್ನು ಚರ್ಚಿಸುವಾಗ ಅದು ಎಷ್ಟು ಆಳಕ್ಕೆ ಇಳಿದುಬಿಟ್ಟಿದೆ ಎಂಬುದು ಮುಖ್ಯ ಎನ್ನಿಸುತ್ತೆ. ಪಾಶ್ಚಿಮಾತ್ಯೇತರ ಸಮಾಜಗಳನ್ನು ಸಾಮ್ರಾಜ್ಯಶಾಹಿಯು ತಟ್ಟಿರುವ ತೀವ್ರತೆ ಎಷ್ಟು ?

**ಪಂ.ಮಿ :** ಈ ಸಮಾಜಗಳನ್ನು ಅದು ಮೂಲಭೂತವಾಗಿ ಬದಲಾಯಿಸಿಬಿಟ್ಟಿದೆ. ವಿನಾಶವನ್ನು ತಂದೊಡ್ಡಿದೆ ಎಂದೂ ಸಹ ಕೆಲವರು ಹೇಳುತ್ತಾರೆ. ಚೀನಾದಂತಹ ಹಲವು ಸಮಾಜಗಳು ಯೂರೋಪಿಯನ್ನರು ಬರುವ ಮೊದಲು ಆರ್ಥಿಕ ಪ್ರಗತಿ ಮತ್ತು ಸಾಪೇಕ್ಷವಾದ ರಾಜಕೀಯ ಸ್ಥಿರತೆಯನ್ನು ಸಾಕಷ್ಟು ದೀರ್ಘಕಾಲ ಅನುಭವಿಸಿದವು. ನಂತರದಲ್ಲಷ್ಟೇ ಅವು ಅಸ್ತವ್ಯಸ್ಥವಾಗಿ ಜನಾಂಗೀಯ ಯುದ್ಧ ಮತ್ತು ರಾಜಕೀಯ ಅಸ್ಥಿರತೆಗಳಿಗೆ ಈಡಾದವು. ಐರೋಪ್ಯ ಆಕ್ರಮಣವನ್ನು ಎದುರಿಸುವಲ್ಲಾದ ಈ ವಿಶಿಷ್ಟವಾದ ಅಘಾತದಿಂದ ಹಲವಾರು ಸಮಾಜಗಳು ಸುಧಾರಿಸಿಕೊಳ್ಳಲೇ ಇಲ್ಲ ಎಂದೂ ಹೇಳಬಹುದು.

ಅದೊಂದು ಸೇನಾ ಆಕ್ರಮಣ ಮಾತ್ರವಲ್ಲ. ಅದು ಸಾಂಸ್ಕೃತಿಕ, ನೈತಿಕ ಮತ್ತು ಬೌದ್ಧಿಕ ಆಕ್ರಮಣ ಕೂಡ ಹೌದು. ಹಾಗೆಯೇ ಅದು ಯೂರೋಪಿಯನ್ ಶಕ್ತಿಗೆ, ಯೂರೋಪಿಯನ್ ಶಕ್ತಿಯು ನಿರ್ಮಿಸಿದ ಈ ಆಧುನಿಕ ಪ್ರಪಂಚಕ್ಕೆ ಹೊಂದಿಕೊಳ್ಳಬೇಕಾದ ಅನಿವಾರ್ಯತೆಯ ಅಘಾತ ಕೂಡ ಹೌದು. ಮಾನವ ಇತಿಹಾಸದಲ್ಲಿ ಹಿಂದೆಂದೂ ಈ ರೀತಿಯ ತೀವ್ರತರವಾದ ಸಾಮಾಜಿಕ ಮತ್ತು ಆರ್ಥಿಕ ತಂತ್ರಗಾರಿಕೆಯನ್ನು ನಾವು ಕಂಡ ಹಾಗಿಲ್ಲ. 'ಆಕ್ರಮಣದ ಆಳ' ಎಂಬ ನಿಮ್ಮ ಪರಿಭಾಷೆಯಲ್ಲಿ ಹೇಳುವುದಾದರೆ, ಅದು ಹಿಂದೆಂದೂ ಕಂಡಿರದ ರೀತಿಯಲ್ಲಿ ಪ್ರಪಂಚವನ್ನು ಮರು ನಿರ್ಮಾಣ ಮಾಡುವ ಯೋಜನೆಯಾಗಿ ಮಾರ್ಪಟ್ಟಿದ್ದು.

**ವಿ.ಐ :** ನಿಮ್ಮ 'ಸಾಮ್ರಾಜ್ಯದ ಅವಶೇಷಗಳಿಂದ...' (From the ruins of Empire ...) ಎಂಬ ಪುಸ್ತಕದಲ್ಲಿ ಏಷ್ಯಾದ ಬುದ್ಧಿಜೀವಿಗಳು ಈ ಪ್ರಕ್ರಿಯೆಗೆ ಹೇಗೆ ಪ್ರತಿಕ್ರಿಯಿಸಿದರು ಎಂಬುದರ ಬಗ್ಗೆ ಮಾತನಾಡುತ್ತೀರಿ. ಅವರ ಮುಖ್ಯವಾದ ಪ್ರತಿಕ್ರಿಯೆಗಳು ಹೇಗಿದ್ದವು?


**ಪಂ.ಮಿ :** ಸ್ಥಳೀಯ ಸಂಪ್ರದಾಯ ಅಥವಾ ಸ್ಥಳೀಯ ವಿಚಾರಗಳನ್ನು ಎತ್ತಿ ಹಿಡಿಯುವ ಮೂಲಕ ಆ (ಹೊರಗಿನ)ಶಕ್ತಿಯನ್ನು ತಡೆಯುವ ಪ್ರಯತ್ನ ಮಾಡಿದವರಿದ್ದರು. ನಾವು ಯೂರೋಪ್‌ನಿಂದ ಕೆಲವು ಆಯ್ದ ವಿಚಾರಗಳನ್ನು ತೆಗೆದುಕೊಳ್ಳೋಣ. ನಮ್ಮಲ್ಲಿ ಈಗಾಗಲೇ ಇರುವುದರ ಜೊತೆಗೆ ಅದನ್ನು ಬೆಸೆಯೋಣ ಎನ್ನುವವರೂ ಇದ್ದರು. ನಮ್ಮ ಸಮಾಜವನ್ನು ಸಂಪೂರ್ಣ ದುರಸ್ತಿ ಮಾಡಬೇಕು, ಯಾವ ಹಳೆಯದನ್ನು ಉಳಿಯಗೊಡಬಾರದು ಎನ್ನುವವರೂ ಇದ್ದರು, ಇವರು ತೀವ್ರಗಾಮಿಗಳು, ಚೀನಾದ ಕಮ್ಯೂನಿಸ್ಟರಲ್ಲಿ ಟರ್ಕಿಯ ಅಟಾಟರ್ಕ್‌ಗಳಲ್ಲಿ ಮತ್ತು ಜಗತ್ತಿನ ಇತರ ಕೆಲವೆಡೆಗಳಲ್ಲಿ ಇಪ್ಪತ್ತನೆಯ ಶತಮಾನದುದ್ದಕ್ಕೂ ನಾವದನ್ನು ಕಂಡಿದ್ದೇವೆ.

ಅದು ಹತ್ತೊಂಭತ್ತನೆಯ ಶತಮಾನದ ಉತ್ತರಾರ್ಧ ಮತ್ತು ಇಪ್ಪತ್ತನೆಯ ಶತಮಾನದ ಆದಿಭಾಗದ ವಿಚಾರ. ಅಲ್ಲಿಂದ ನೂರು ವರ್ಷಗಳ ನಂತರ ನಾವೀಗ ಬೇರೆಯದೇ ಆದ ಒಂದು ಪ್ರಪಂಚದಲ್ಲಿದ್ದೇವೆ. ಹತ್ತೊಂಭತ್ತನೆಯ ಶತಮಾನದಲ್ಲಿ ಜನ ಬಹಳ ಹಳಹಳಿಸಿ ನೆನಪು ಮಾಡಿಕೊಳ್ಳಬಹುದಾದ್ದೆಲ್ಲ ಈಗ ಕಳೆದು ಹೋಗಿದೆ. ಆ ಆಧುನಿಕ ಪೂರ್ವ ಯುಗದಲ್ಲಿ ಎಂದೂ ಜೀವಿಸಿರದ ಮತ್ತು ಅದರ ಬಗೆಗೆ ಯಾವ ರೀತಿಯ ಅನುಭವವೂ ಇರದ ವಿವಿಧ ತೆರನ ಅತಿವಾದಿಗಳು ಮತ್ತು ಮೂಲಭೂತವಾದಿಗಳು ಇಂದು ಅದನ್ನು ಆವಾಹನೆ ಮಾಡಿಕೊಳ್ಳುತ್ತಿದ್ದಾರೆ. ಇವರು ರಾಜಕೀಯವಾಗಿ ಮತ್ತು ತಾತ್ವಿಕವಾಗಿ ಆಧುನಿಕವಾದಿತ್ವದಲ್ಲಿ ತರಬೇತಿ ಪಡೆದವರಾಗಿದ್ದಾರೆ. ಇವರು ಗತವನ್ನು ಆವಾಹನೆ ಮಾಡಿದಾಗ ಅದು ಬಹಳಸಲ ಪಾಶ್ಚಿಮಾತ್ಯ ಪಾಂಡಿತ್ಯದ ಅಜೀರ್ಣದಿಂದಾಗಿ ಉಂಟಾದ ಅವರದೇ ಕಲ್ಪನೆಯ ತುಣುಕು ಮಾತ್ರ ಆಗಿರುತ್ತದೆ. ನಾನು ಪುಸ್ತಕದಲ್ಲಿ ಬರೆದಿರುವ ಜನರಿಗಿದ್ದಂತೆ ಇವರಿಗೆ ಅದರ ನಿಜವಾದ ಅನುಭವ ಇಲ್ಲ. ಆ ಜನ ಪ್ರತಿಕ್ರಿಯಿಸಿದ ರೀತಿಗೂ ಅಥವಾ ಪ್ರತಿಕ್ರಿಯಿಸಲು ಪ್ರಯತ್ನಿಸಿದ ರೀತಿಗೂ ಮತ್ತು ಇಂದು ಈ ಜನ ಪ್ರತಿಕ್ರಿಯಿಸುತ್ತಿರುವ ರೀತಿಗೂ ಇರುವ ಭಿನ್ನತೆಯನ್ನು ನಾವು ವಿಶೇಷವಾಗಿ ಗಮನಿಸಬೇಕು.

**ವಿ.ಐ :** ಪಾಶ್ಚಿಮಾತ್ಯ ಶಕ್ತಿಗಳು ಉಂಟು ಮಾಡಿದ ಬೌದ್ಧಿಕ ಸವಾಲುಗಳು ವಸಾಹತೋತ್ತರ ಸಮಾಜಗಳನ್ನು ಯಾವ ರೀತಿ ಪ್ರಭಾವಿಸಿವೆ ?

**ಪಂ.ಮಿ :** ನಾವು ಇಲ್ಲಿ ಗಮನಿಸಬೇಕಾದ ಮುಖ್ಯ ವಿಚಾರವೆಂದರೆ ನಿರ್ವಸಾಹತೀಕರಣವನ್ನು (Decolonisation) ಶೀತಲ ಸಮರದ ಸಂದರ್ಭದ ಹಿನ್ನಲೆಯಲ್ಲಿ ಅರ್ಥಮಾಡಿಕೊಳ್ಳಬೇಕಾಗಿದೆ ಎಂಬುದು. ಈ ಹಿನ್ನಲೆಯಲ್ಲಿಯೇ ಈ ರಾಷ್ಟ್ರಗಳು ನಿರ್ವಸಾಹತೀಕರಣಗೊಂಡು ಆಧುನಿಕ ಆರ್ಥಿಕತೆಗಳನ್ನು ಮತ್ತು ಹೊಸ ರಾಷ್ಟ್ರಪ್ರಭುತ್ವಗಳನ್ನು ಕಟ್ಟಿಕೊಳ್ಳತೊಡಗಿದ್ದು. ಈ ಬಹುರೂಪಿ ಸಮಾಜಗಳನ್ನು ರಾಷ್ಟ್ರ–ಪ್ರಭುತ್ವಗಳನ್ನಾಗಿ ರೂಪಿಸುವ ಪ್ರಯತ್ನಗಳು ನಡೆದದ್ದು ೧೯೪೦–೫೦ರ ದಶಕಗಳಲ್ಲಿ. ಈ ಅಗಾಧವಾದ ಕಾರ್ಯವನ್ನು ಅವು ಕೈಗೊಂಡಿದ್ದು, ಕಮ್ಯೂನಿಸಂ ಮತ್ತು ಮುಕ್ತ ಪ್ರಪಂಚದೊಡನೆ ಒಂದಾಗುವ ಎರಡು ಆಯ್ಕೆಗಳಲ್ಲಿ ಒಂದನ್ನು ಆಯ್ದುಕೊಳ್ಳಲೇಬೇಕಾದ ಭೌಗೋಳಿಕ ರಾಜಕೀಯ ಒತ್ತಡಗಳ ನಡುವೆ.

ಅಷ್ಟು ಮಾತ್ರವಲ್ಲ, ಈ ರಾಷ್ಟ್ರಗಳ ಆಂತರಿಕ ಸವಾಲುಗಳ ವಿಸ್ತಾರ ದಿಗ್ಭ್ರಮೆಗೊಳಿಸುವಂತಿದ್ದು, ಹತ್ತೊಂಬತ್ತನೆಯ ಶತಮಾನದ ಉತ್ತರಾರ್ಧ ಮತ್ತು ಇಪ್ಪತ್ತನೆಯ ಶತಮಾನದ ಆದಿಭಾಗದ ಆ ಸಂದರ್ಭದಲ್ಲಿ ಏನನ್ನೇ ಹೇಳಿದರೂ ಅಥವಾ ಯೋಚಿಸಿದರೂ ಅದಕ್ಕೆ ಕಿವಿಗೊಡುವಿಕೆ ಬಹು ಕಡಿಮೆ ಇತ್ತು. ಹಾಗಾಗಿ ಹೆಚ್ಚು ಪ್ರಭಾವಶಾಲಿಗಳಾಗಿದ್ದ ಚಿಂತಕರಲ್ಲೂ ಕೆಲವರು ವ್ಯವಸ್ಥಿತವಾದ ಕಡೆಗಣನೆಗೆ ಒಳಗಾದರು. ಇದಕ್ಕೆ ಪ್ರಮುಖ ಉದಾಹರಣೆಯೆಂದರೆ ಗಾಂಧಿ. ವಸಾಹತೋತ್ತರ ಭಾರತವನ್ನು ನೋಡಿದರೆ ಅಲ್ಲಿ ಎಲ್ಲಿಯಾದರೂ ಗಾಂಧಿಯ ರಾಜಕೀಯ ಅಥವಾ ಸಾಮಾಜಿಕ ಕಾರ್ಯಕ್ರಮಗಳ ಸುಳಿವು ಕಾಣುವುದೇ? ಗಾಂಧೀಜಿಯ ಯಾವುದೇ ಆದರ್ಶ ಉಳಿದುಕೊಂಡಿರುವುದನ್ನು ನೀವು ಕಾಣಲಾರಿರಿ. ಗಾಂಧೀಜಿಯ ಯಾವುದೇ ವಿಚಾರವೂ ಒಂದು





ಜರ್ಮನಿಯಲ್ಲಿ ಜನಾಂಗೀಯ ಶುದ್ಧೀಕರಣ

ತಾಳಿಕೆಯ ಗುಣವುಳ್ಳ ಸಂಸ್ಥೆಯಾಗಿ ರೂಪುಗೊಂಡಿದ್ದನ್ನು ನೀವು ಕಾಣಲಾರಿರಿ. ಇಂತಹ ಒಬ್ಬ ಪ್ರಭಾವಶಾಲಿ ಪುರುಷನ ಬಗೆಗೆ ಹೀಗೆ ಹೇಳಬಹುದಾದರೆ ಅಷ್ಟು ಪ್ರಭಾವಶಾಲಿಗಳಲ್ಲದ ಇತರರ ಬಗ್ಗೆ ಹೇಳಲೇನಿದೆ?

**ವಿ.ಐ :** ಪಶ್ಚಿಮದ ಸಮಕ್ಕೆ ಬರಬೇಕೆಂಬ ಈ ರಾಷ್ಟ್ರ ಪ್ರಭುತ್ವಗಳು ಮುಖ್ಯವಾಗಿ ಯಾವ ಯಾವ ಅಂತರಿಕ ಸವಾಲುಗಳನ್ನೆದುರಿಸಲು ಯಾವ ಯಾವ ಕ್ರಮಗಳನ್ನು ಕೈಗೊಳ್ಳಬೇಕಾಗಿತ್ತು?

**ಪಂ.ಮಿ :** ರಾಷ್ಟ್ರ ಪ್ರಭುತ್ವವೊಂದರ ನಿರ್ಮಿತಿಗೆ ಅನಿವಾರ್ಯವಾದ ರಾಷ್ಟ್ರೀಯ ಅಸ್ಮಿತೆಯೊಂದನ್ನು ಭಾರತದಂತಹ ದೇಶದಲ್ಲಿ ಸೃಷ್ಟಿಸಲು ಪ್ರಯತ್ನಿಸಿದರೆ ಸಕಲ ರೀತಿಯಲ್ಲೂ ನೀವು ತೊಂದರೆಗೆ ಸಿಲುಕಿಕೊಳ್ಳುತ್ತೀರಿ. ಏಕೆಂದರೆ ಇದು ನಂಬಲು ಸಾಧ್ಯವಿಲ್ಲದಷ್ಟು ಮಟ್ಟದ ವೈವಿಧ್ಯತೆಯನ್ನು ಹೊಂದಿರುವ ದೇಶ. ಯೂರೋಪನ್ನು ನೋಡಿ, ಅಲ್ಲಿನ ಸಮಾಜಗಳು ಸರಿಸುಮಾರಾಗಿ ಏಕರೂಪಿ ಎಂದು ಹೇಳಬಹುದಾದ ಮಟ್ಟವನ್ನು ತಲುಪಲು ಅವು ಯಾವ ಪ್ರಮಾಣದ ಹಿಂಸೆ ಮತ್ತು ಜನಾಂಗೀಯ ಶುದ್ಧೀಕರಣಕ್ಕೆ ಒಳಗಾಗಬೇಕಾಯಿತು! ಒಂದು ಹಂತದಲ್ಲಿ ಅವು ಎಷ್ಟೋ ಚೂರುಗಳಾಗಿ, ಹಲವಾರು ಸಣ್ಣಪುಟ್ಟ ರಾಜಕೀಯ ಘಟಕಗಳಾಗಿ ಒಡೆದುಹೋಗಿದ್ದವು. ಆದ್ದರಿಂದ ಅವು ಇಂದಿನ ರೂಪಕ್ಕೆ ಬರುವ ಮೊದಲು ಅಪಾರವಾದ ಹಿಂಸೆಯನ್ನು ಅನುಭವಿಸಬೇಕಾಯಿತು. ಆಗೀಗ ಅರಬರಿಂದ ಅಲ್ಲಿ ಇಲ್ಲಿ ಉಂಟಾಗುತ್ತಿದ್ದ ಬೆದರಿಕೆಯನ್ನು ಹೊರತುಪಡಿಸಿ, ಅವೇನೂ ಅಲ್ಲಿನ ಜೀವನ ಕ್ರಮಕ್ಕಾಗಲೀ, ರಾಜಕೀಯ ವ್ಯವಸ್ಥೆಗಳಿಗಾಗಲೀ ತೊಂದರೆಯಾಗುತ್ತಿರಲಿಲ್ಲ–ಹೊರಗಿನಿಂದ ಯಾವ ರೀತಿಯ ಬೆದರಿಕೆಗಳು ಇಲ್ಲದಿದ್ದ ಸ್ಥಿತಿಯಲ್ಲೂ ಸಹ ಯೂರೋಪ್‌ನಲ್ಲಿ ಇದೆಲ್ಲ ಆಗಲು ಶತಮಾನಗಳು ಬೇಕಾಯಿತು.

ಈಗ ವಸಾಹತೋತ್ತರ ಜಗತ್ತಿನಲ್ಲಿ ನೀವು ಒಂದು ಮಟ್ಟದ ರಾಷ್ಟ್ರೀಯ ಸುಸಂಬದ್ಧತೆಯನ್ನು ನಿರ್ಮಿಸಿಕೊಳ್ಳಬೇಕಾಗಿತ್ತು. ತುರ್ತಾಗಿ ಕೈಗಾರಿಕಾ ಆರ್ಥಿಕತೆಯನ್ನು ನಿರ್ಮಿಸಿಕೊಳ್ಳಬೇಕಾಗಿತ್ತು. ಏಕೆಂದರೆ ಆ ಮೂಲಕ ಮಾತ್ರ ನೀವು ಉಳಿಯಲು ಸಾಧ್ಯವಿತ್ತು. ಇಲ್ಲದಿದ್ದಲ್ಲಿ ಪ್ರಬಲವಾದ ಕೈಗಾರಿಕೀಕೃತ ಬಂಡವಾಳಶಾಹಿ ದೇಶಗಳು ನಿಮ್ಮಲ್ಲಿರುವ ಸಂಪನ್ಮೂಲಗಳಿಗಾಗಿ ನಿಮ್ಮನ್ನು ಕೊಳ್ಳೆ ಹೊಡೆಯುವ ಅಪಾಯಕ್ಕೆ ಸಿಲುಕಿಕೊಳ್ಳುವ ಮಟ್ಟದ ದೇಶವಾಗಿ ಉಳಿಯುತ್ತಿದ್ದಿರಿ. ಹಾಗಾಗಿ ಕೈಗಾರಿಕೀಕರಣವೆಂಬುದು ಈ ಹಲವಾರು ದೇಶಗಳಿಗೆ ತಮ್ಮ ಯಾವುದೇ ರೀತಿಯ ಸಾರ್ವಭೌಮತ್ವಕ್ಕೆ ಅತಿಮುಖ್ಯ ಅಂಶವೆಂಬಂತೆ ತೋರಿತು. ಅದರ ಜೊತೆಗೆ ಒಂದು ಸರಿಯಾದ ಸೇನೆ ಅಥವಾ ಸರಿಯಾದ ಒಂದು ಪೋಲೀಸ್ ವ್ಯವಸ್ಥೆಯನ್ನು ನಿರ್ಮಿಸಿಕೊಳ್ಳುವುದು ಮುಂತಾದ ಹಲವು ಸಂಬಂಧಿತ ಜವಾಬ್ದಾರಿಗಳೂ ಸೇರಿಕೊಂಡವು.

ಕೆಲವು ದೇಶಗಳು, ಹಳೆಯ ವಸಾಹತುಶಾಹಿ ರಚನೆಯಿಂದ ರಕ್ಷಣಾ ವ್ಯವಸ್ಥೆಯನ್ನು ಹೋಲುವ ವ್ಯವಸ್ಥೆಯನ್ನು ಪಡೆಯುವ ಮಟ್ಟಕ್ಕೆ ಅದೃಷ್ಟಶಾಲಿಗಳಾಗಿದ್ದರೂ ಅದಕ್ಕೆ ಅದರದೇ ಆದ ತೊಂದರೆಗಳೂ ಸಹ ಇದ್ದವು. ಉದಾಹರಣೆಗೆ ಭಾರತದ ಪೋಲೀಸ್ ವ್ಯವಸ್ಥೆ ಎಂದೂ ಪ್ರಜಾತಾಂತ್ರಿಕ ಭಾರತದ ಭಾಗವಾಗದೆ ಈ ವಸಾಹತುವಿನ ಮೃಗೀಯ ಸಂಸ್ಥೆಯಾಗಿಯೇ ಉಳಿದುಕೊಂಡಿತು. ಇಂದಿಗೂ ಸಹ ಪೋಲೀಸರು ಭಾರತದಲ್ಲಿ ಅತಿಹೆಚ್ಚು ದ್ವೇಷಿಸಲ್ಪಡುವ ಸಾರ್ವಜನಿಕ ವ್ಯಕ್ತಿಗಳಾಗಿ ಉಳಿದಿದ್ದಾರೆ. ಈ ದೇಶಗಳು ಇಂತಹ ಸಮಸ್ಯೆಗಳನ್ನೆಲ್ಲ ನಿಭಾಯಿಸಬೇಕಾಗಿದ್ದು, ಅವಕ್ಕೆ ಸಾಕಷ್ಟು ಸಮಯವಿಲ್ಲದೆ ತಕ್ಷಣದಲ್ಲಿ ಇವೆಲ್ಲವೂ ಆಗಬೇಕಾಗಿತ್ತು.

**ವಿ.ಐ :** ಪಾಶ್ಚಿಮಾತ್ಯ ರಾಷ್ಟ್ರಗಳ ಅವನತಿ ಮತ್ತು ಮಿಕ್ಕವುಗಳ ಉನ್ನತಿ ಬಗ್ಗೆ ಸಾಕಷ್ಟು ಚರ್ಚೆ ನಡೆಯುತ್ತಿದೆ. ಆದರೆ ಈ ಇಡೀ ಪ್ರಕ್ರಿಯೆಯ ಬಗ್ಗೆ ನೀವು ಸಂದೇಹವಾದಿಗಳಾಗಿದ್ದೀರಿ. ನಿಮ್ಮ 'ಸಾಮ್ರಾಜ್ಯದ ಅವಶೇಷಗಳಿಂದ' ಕೃತಿಯಲ್ಲಿ ನೀವು ಅದನ್ನು 'ಕರಾಳ ಅಸ್ಪಷ್ಟತೆಯಿಂದ ಕೂಡಿದ ಒಂದು ವಿಚಾರ' ಎಂದು ಬಣ್ಣಿಸಿದ್ದೀರಿ. ಹಾಗೆಯೇ ಇನ್ನೊಂದೆಡೆಯಲ್ಲಿ ಈಗ ಸಾಮಾನ್ಯವಾಗಿ ಉದಯೋನ್ಮುಖ ರಾಷ್ಟ್ರಗಳೆಂದು ಗುರುತಿಸಲಾಗುತ್ತಿರುವ ಬ್ರೆಜಿಲ್, ರಷ್ಯಾ, ಇಂಡಿಯಾ, ಚೈನಾ, ದಕ್ಷಿಣ ಆಫ್ರಿಕಾಗಳ 'BRICS' ರಾಷ್ಟ್ರಗಳ ಕೂಟ ಕೂಡ ಪಶ್ಚಿಮದ ಯಜಮಾನಿಕೆಗೆ ಪ್ರತಿಯಾಗಿ ಒಂದು ವಿಶ್ವಾಸಾರ್ಹ ನೈತಿಕ ಮತ್ತು ರಾಜಕೀಯ ಪರ್ಯಾಯವನ್ನು ಒದಗಿಸಲಾರದು ಎಂದು ನೀವು ಬರೆದಿದ್ದೀರಿ. ಇದನ್ನು ತುಸು ವಿವರಿಸುತ್ತೀರಾ?




ಇತ್ತೀಚಿನ ಬ್ರಿಕ್ಸ್ ಸಮ್ಮೇಳನ

**ಪಂ.ಮಿ :** ಈ ಎರಡೂ ಕಲ್ಪನೆಗಳು – ಪಶ್ಚಿಮದ ಅವರೋಹಣದ್ದಾಗಲೀ ಅಥವಾ ಮಿಕ್ಕವುಗಳ ಆರೋಹಣದ್ದಾಗಲೀ–ನಂಬಲಾಗದಷ್ಟು ಪೊಳ್ಳಾದವು. ಇದನ್ನು ಹಲವು ಸ್ತರಗಳಲ್ಲಿ ಸಾಬೀತು ಮಾಡಬಹುದು. ಆರ್ಥಿಕವಾಗಿ ನೀವು ಅಮೆರಿಕದ ಆರ್ಥಿಕತೆಯ ಗಾತ್ರವನ್ನೋ ಅಥವಾ ಚೀನಾದ ಆರ್ಥಿಕತೆಯ ಗಾತ್ರವನ್ನೋ ನೋಡಿ. ಅಧಿಕಾರ ಮತ್ತು ಜೀವನಮಟ್ಟಗಳ ವಿಚಾರದಲ್ಲಿ ಅವುಗಳ ನಡುವೆ ಭಾರೀ ಅಂತರವಿದೆ. ಈ ಅಂತರವನ್ನು ಕಡಿಮೆ ಮಾಡುವ ಯಾವ ಭರವಸೆಯೂ ಕಾಣುತ್ತಿಲ್ಲ. ಇನ್ನು ನಾನು. ಚೀನಾಕ್ಕಿಂತ ೨೦ ವರ್ಷಗಳಷ್ಟು ಹಿಂದುಳಿದಿರುವ ಭಾರತದ ಬಗ್ಗೆ ಮಾತೇ ಆಡುತ್ತಿಲ್ಲ. ಚೀನಾದಂತಹ ದೇಶಗಳು ಇನ್ನೂ ಎದುರಿಸಬೇಕಾಗಿರುವ ಹಲವು ರೀತಿಯ ಸಾಮಾಜಿಕ ಮತ್ತು ರಾಜಕೀಯ ಸಮಸ್ಯೆಗಳು ಇವೆ. ಈ ಅವನತಿ ಮತ್ತು ಉನ್ನತಿಗಳ ಅಥವಾ ಚೀನಾದ ಆರೋಹಣದ ಕಲ್ಪನೆಗಳನ್ನು ಇಂತಹ ಬಹಳ ಸರಳ ಸ್ಪಷ್ಟ ವಾಸ್ತವ ಸಂಗತಿಗಳ ಆಧಾರದ ಮೇಲೆ ಅಣಕಿಗೆ ಈಡುಮಾಡಬಹುದು.

ಆದರೆ ನಾನು ಮಂಡಿಸಿದ ವಾದ ಬೇರೆಯದೇ ಎನ್ನಿಸುತ್ತದೆ. ಅದೆಂದರೆ, ಪ್ರಪಂಚದಲ್ಲಿ ಇಷ್ಟೊಂದು ಪ್ರಮಾಣದ ವಿನಾಶ ಮತ್ತು ಹಿಂಸೆಯನ್ನು ಉಂಟು ಮಾಡಿರುವ ರಾಜಕೀಯ ಮತ್ತು ಅಭಿವೃದ್ಧಿ ಮಾದರಿಗೆ ಒಂದು ಪರ್ಯಾಯವನ್ನು ನಾವು ಕಂಡುಕೊಳ್ಳದಿದ್ದಲ್ಲಿ, ನಾವು ಪೂರ್ವದಲ್ಲೇ ಇರಲಿ, ಪಶ್ಚಿಮದಲ್ಲೇ ಇರಲಿ, ಜಗತ್ತಿನ ಇತರೆಡೆಗಳಲ್ಲಿ ಈಗಾಗಲೇ ಕಂಡಿರುವ ರೀತಿಯದೇ ಹಿಂಸೆಯನ್ನು ನಾವು ಕಾಣಬೇಕಾದ ಶಿಕ್ಷೆಗೆ ಒಳಗಾಗುತ್ತೇವೆ. ಈ ಅರ್ಥದಲ್ಲಿ ಪೂರ್ವದ ಉನ್ನತಿ ಅಥವಾ ಆರೋಹಣ ಎಂಬ ಮಾತೇ ಅಸಂಬದ್ಧ.

ಈಗ ಕೆಲವರು ಶ್ರೀಮಂತ ಬದುಕನ್ನು ನಡೆಸಲಾರಂಭಿಸಿರುವುದರತ್ತ ನೀವು ಬೊಟ್ಟು ಮಾಡಬಹುದು. ಅವರು ಪ್ರಪಂಚದಾದ್ಯಂತ ಭೋರಾಡುತ್ತಾ ವಿಶ್ವಸಂಸ್ಥೆಯ ಭದ್ರತಾ ಮಂಡಳಿಯಲ್ಲಿ ನಮಗೂ ಸಮಾನತೆ ಬೇಕೆಂದು ಒತ್ತಾಯಿಸಬಹುದು. ವಿಶ್ವಬ್ಯಾಂಕ್‌ನಲ್ಲಿ ಮತ್ತು ಐಎಂಎಫ್‌ನಲ್ಲಿ ನಮಗೂ ಸ್ಥಾನ ಬೇಕೆಂದು ವಾದಿಸಬಹುದು. ಅದು ದೊರೆಯದೇ ಹೋದಲ್ಲಿ ಚೀನಾ ಮಾಡಿದ ಹಾಗೆ ಇತರೆ ದೇಶಗಳ ಜೊತೆ ಸೇರಿ ತನ್ನದೇ ಒಂದು ವಿಶ್ವಬ್ಯಾಂಕ್ ಸ್ಥಾಪಿಸಿಕೊಳ್ಳುವ ಯತ್ನ ಮಾಡಬಹುದು. ಈ ಪಶ್ಚಿಮದ ಅವನತಿ ಮತ್ತು ಪೂರ್ವದ ಉನ್ನತಿ ಎಂಬ ತಥಾಕಥಿತ ಮಾತು, ಬಹುಸಂಖ್ಯಾತ ಜನ ಅನಿಶ್ಚಿತತೆಯ ಅತ್ಯಂತ ಕರಾಳ ಭವಿಷ್ಯವನ್ನು ಎದುರಿಸುತ್ತಿರುವ ದೇಶಗಳ, ಜಾಗತೀಕರಣಗೊಂಡ ಪ್ರತಿಷ್ಠಿತ ವರ್ಗಗಳಿಗೆ ಉನ್ನತ ವೇದಿಕೆಗಳಲ್ಲಿ ಸ್ಥಾನ ಪಡೆದುಕೊಳ್ಳಲು ಒಂದು ವರದಾನದಂತೆ ಪರಿಣಮಿಸಿದೆ.

ತಮ್ಮ ಸಾರ್ವಭೌಮತ್ವ ಕಳೆದ ನೂರು ವರ್ಷಗಳಲ್ಲಿ, ಲೆಕ್ಕವಿಲ್ಲದಷ್ಟು ಬಾರಿ ಅತಿಕ್ರಮಣಕ್ಕೊಳಗಾದ ರಾಷ್ಟ್ರಗಳು, ಇಡೀ ಮನುಕುಲದ ಘನತೆ ಮತ್ತು ಸ್ವಾತಂತ್ರ್ಯವನ್ನು ಎತ್ತಿಹಿಡಿಯುವ ವಿಧಾನಗಳನ್ನು ಕಂಡುಕೊಂಡಲ್ಲಿ, ತುಳಿತಕ್ಕೊಳಗಾದವರೆಂದು ಹೇಳಲಾಗುವ ಈ ಜನಸಮುದಾಯಗಳ ಧೀರತೆಯನ್ನು ನಾನು ಹೆಚ್ಚು ಮೆಚ್ಚಬಲ್ಲೆ. ಆದರೆ ಅಂಥದೇನೂ ಆಗಿಲ್ಲ ಎಂಬುದು ವಾಸ್ತವ. ತಮ್ಮದೇ ಆದ ಉದ್ದೇಶಕ್ಕಾಗಿ ಅವರು ಬಂಡವಾಳಸ್ಥ ಸಾಮ್ರಾಜ್ಯಶಾಹಿಯ ಆಧುನಿಕ ವಿಧಾನಗಳೂ ಸೇರಿದಂತೆ, ಸಂಪತ್ತು ಮತ್ತು ಅಧಿಕಾರವನ್ನು ಸಾಧಿಸಿಕೊಳ್ಳುವ ಕೆಲ ತಂತ್ರಗಳನ್ನು ಅಳವಡಿಸಿಕೊಳ್ಳುತ್ತಿದ್ದಾರಷ್ಟೆ. ಹೊರಗಿನ ಸಾಮ್ರಾಜ್ಯಶಾಹಿಗಳಲ್ಲದಿದ್ದಲ್ಲಿ ಇವರು ಆಂತರಿಕ ಸಾಮ್ರಾಜ್ಯಶಾಹಿಗಳಂತೂ ಹೌದು. ಪ್ರಪಂಚದ ಇತರೆ ಭಾಗಗಳ ಸಾಮ್ರಾಜ್ಯಶಾಹಿಗಳು ಏನನ್ನು ಮಾಡುತ್ತಾರೋ ಅದನ್ನೇ ಇವರು ತಂತಮ್ಮ ದೇಶಗಳೊಳಗೇ ಮಾಡುತ್ತಾರೆ. ಇದಕ್ಕೆ ಮಧ್ಯಭಾರತದಲ್ಲಿ ಆದಿವಾಸಿಗಳ ಭೂಮಿಯನ್ನು ಕಿತ್ತುಕೊಂಡು ಅವರನ್ನು ಹೊರದೂಡುತ್ತಿರುವುದು



ಚತ್ತೀಸಘಢದಲ್ಲಿ ಪೋಸ್ಕೋ ವಿರುದ್ಧ ಆದಿವಾಸಿಗಳ ಪ್ರತಿಭಟನೆ

ಅಥವಾ ಟಿಬೆಟ್‌ನ 'ಅಭಿವೃದ್ಧಿ' ಮುಂತಾದುವನ್ನು ಉದಾಹರಣೆಯಾಗಿ ನೀಡಬಹುದು.

ಪಶ್ಚಿಮದ ಅವನತಿ ಎಂಬುದು ಪಶ್ಚಿಮದ ವಿಕ್ಷಿಪ್ತ *ಸ್ವಯಂಶ್ರೇಷ್ಠತಾವಾದಿಗಳು* ಅವಾಹನೆ ಮಾಡಿರುವ ಕಥನ. ಅದೇ ರೀತಿ ಪೂರ್ವದ ಉನ್ನತಿ ಎಂಬುದೂ ಕೂಡ ಸ್ವಪ್ರತಿಷ್ಠೆಯ ಹುಚ್ಚಿನ ಪೌರ್ವಾತ್ಯ ಬಯಕೆಯ ಕಥನ. ಈ ಎರಡೂ ಬಗೆಯ ಕಥನಗಳ ನಡುವೆ ಒಂದು ಪರಿಪೂರ್ಣವಾದ ಹೊಂದಾಣಿಕೆ ಇದೆ. ನಾವು ಇದರ ಬಗ್ಗೆ ಬೇಕಾದಷ್ಟು ಕೇಳಿದ್ದೇವೆ. ಅವುಗಳ ಪೈಕಿ ಈ ಪಶ್ಚಿಮದ ಅವನತಿ ಪೂರ್ವದ ಉನ್ನತಿ ಎಂಬುದು ಅತಿವ್ಯಾಪಕವಾದ ಕಥನ. ಆದರೆ ಒಮ್ಮೆ ನೀವು ಈ ಏಳು ಮತ್ತು ಬೀಳುಗಳು ಅಂದರೆ ಏನು ಮತ್ತು ಈ ಹಿನ್ನೆಲೆಯಲ್ಲಿ ಯಶಸ್ಸು ಅಂದರೆ ನಿಜವಾಗಿ ಏನು ಎಂಬುದನ್ನು ಅರ್ಥ ಮಾಡಿಕೊಳ್ಳಲಾರಂಭಿಸಿದರೆ ನಿಮ್ಮ ಪರಿಪ್ರೇಕ್ಷ್ಯವೇ ಬದಲಾಗುವುದು.

**ವಿ.ಐ :** "ಸಮರಸ ರಾಷ್ಟ್ರರಾಜ್ಯಗಳ ವಿಶ್ವವು ನಾವು ಕಲ್ಪಿಸಿಕೊಳ್ಳಬಹುದಾದ್ದಕ್ಕಿಂತಲೂ ವೇಗವಾಗಿ ಮರೆಯಾಗುತ್ತಿದೆ" ಎಂಬುದಾಗಿ ನೀವು ವಾದಿಸಿದ್ದೀರಿ. "ಇಪ್ಪತ್ತನೆಯ ಶತಮಾನದ ಆದಿಯಲ್ಲಿದ್ದಂತೆ ಜಾಗತೀಕರಣದ ಮೂಲ ಶಕ್ತಿಗಳು, ವಿಶಾಲ ಐಕ್ಯತೆಗಳು ಮತ್ತು ನಿಷ್ಠೆಗಳನ್ನು ಅನಾವರಣಗೊಳಿಸಿವೆ" ಎಂದು ನೀವು ವಾದಿಸಿದ್ದೀರಿ. *ಗಾರ್ಡಿಯನ್* ಪತ್ರಿಕೆಯಲ್ಲಿ *ಚಾರ್ಲಿ ಹೆಬ್ಡೊ* ಹತ್ಯಾಕಾಂಡಕ್ಕೆ ಪ್ರತಿಕ್ರಿಯಿಸುತ್ತಾ, ಜಾಗತೀಕರಣವು 'ಮನುಕುಲದ ಋಣಾತ್ಮಕ ಒಗ್ಗೂಡುವಿಕೆ'ಯನ್ನು ಉಂಟುಮಾಡಿದೆ ಎಂದಿದ್ದೀರಿ. ಅದರರ್ಥ ಏನು ಎಂಬುದನ್ನು ವಿವರಿಸುತ್ತೀರಾ? ಹಾಗೇ 'ವಿಶಾಲ ಐಕ್ಯತೆಗಳು ಮತ್ತು ನಿಷ್ಠೆಗಳು' ಅನಾವರಣವಾದದ್ದರಿಂದ ಉಂಟಾದ ಋಣಾತ್ಮಕ ಐಕಮತ್ಯದ ಪರಿಣಾಮಗಳೇನು ಎಂಬುದನ್ನು ತಿಳಿಸುತ್ತೀರಾ?

**ಪ.ಮಿ :** ರಾಷ್ಟ್ರ ಪ್ರಭುತ್ವದ ಹಳೆಯ ಕಲ್ಪನೆಯು ಹಲವು ರೀತಿಯಲ್ಲಿ, ಜನರು ಮಾತನಾಡುತ್ತಿದ್ದ, ಒಂದು ಆದರ್ಶಮಯ ಅಥವಾ ಪ್ರಮಾಣಕ (Normative) ಪ್ರಭುತ್ವ. ೧೯೭೦–೧೯೮೦ರ ಅವಧಿಯಲ್ಲಿ ಬೆಳೆದ ನಾವು ಇಂದು ಒಂದು ರೀತಿಯಲ್ಲಿ 'ರಾಷ್ಟ್ರೀಯ ಸಂಸ್ಕೃತಿ' ಎಂದು ಕರೆಯಲಾಗುವ ವಿದ್ಯಮಾನದ ಅನುಭವಕ್ಕೆ ಒಳಗಾಗಿದ್ದೆವು. ಅದು ವಿಶಾಲಾರ್ಥದಲ್ಲಿ ಹೇಳುವುದಾದರೆ ನಾವೆಲ್ಲ ಒಟ್ಟಿಗೆ ಅದರೊಳಗಿದ್ದೇವೆ ಎಂಬ ಭಾವನೆ ಬರುತ್ತಿತ್ತು. ದೇಶದ ಏಳು ಬೀಳುಗಳು ನಮ್ಮನ್ನು ಪ್ರಭಾವಿಸುತ್ತಿದ್ದವು. ಮತ್ತೂ ಮುಖ್ಯವಾಗಿ ಅದು ನಮ್ಮನ್ನೆಲ್ಲ ಸಮಾನವಾಗಿ ಪ್ರಭಾವಿಸುತ್ತಿತ್ತು. ಏಕೆಂದರೆ ನಾವೆಲ್ಲ ಹೆಚ್ಚು ಕಡಿಮೆ ಒಂದೇ ಮಟ್ಟದ ಸಮಾಜೋ–ಆರ್ಥಿಕ ಮಟ್ಟದಲ್ಲಿದ್ದೆವು. ಕೆಲವರೇನೋ ಬಹಳ ಬಡವರಾಗಿದ್ದರು. ಆದರೆ ದೇಶದ ಪರಿಸ್ಥಿತಿ ಉತ್ತಮವಾದರೆ ನಮಗೆಲ್ಲರಿಗೂ ಅದರಿಂದ ಸಹಾಯವಾಗುವ ಸಾಧ್ಯತೆಗಳಿದ್ದವು.

ಇದೆಲ್ಲವೂ ಕೇವಲ ಮನಸ್ಸಿನ ಭ್ರಮೆಯೋ ಅಥವಾ ನಿಜವಾಗಿ ಆಗುತ್ತಿತ್ತೋ ಎನ್ನುವುದು ಬೇರೆ ಮಾತು. ಅದೊಂದು ಭಾವನೆ ಮತ್ತು ರಾಷ್ಟ್ರಗಳು ಸೃಷ್ಟಿಯಾಗುವುದು, ಸುಸ್ಥಿರಗೊಳ್ಳುವುದು ಈ ರೀತಿಯಲ್ಲೇ. ಅವು ಮೂಲತಃ ತಮ್ಮ ಬಗ್ಗೆ ಯಶಸ್ವಿಯಾಗಿ ಸುಳ್ಳುಗಳನ್ನು ಹೇಳುವ ಆವಿಷ್ಕೃತ ಸಮುದಾಯಗಳು. ನಾವೂ ಸಹ ಇದನ್ನೇ ಮಾಡಿದ್ದೇವೆ. ಬಹಳ ಕಾಲದಿಂದ ಇದನ್ನೇ ಮಾಡುತ್ತಲೇ ಬಂದಿದ್ದೇವೆ.


ಆದರೂ ಈಗ ಆ ಭ್ರಮೆಗಳೂ ಭಗ್ನವಾಗಿವೆ ಎನ್ನಿಸುತ್ತದೆ. ನಮ್ಮ ಸಮಾಜಗಳು ಅಸಂಖ್ಯ ಚೂರುಗಳಾಗಿ ಒಡೆದುಹೋಗಿವೆ. ಪ್ರತಿಯೊಬ್ಬರೂ ಸ್ವತಂತ್ರರಾಗಿದ್ದಾರೆ. ಪ್ರತಿಯೊಬ್ಬರೂ ತಮಗಾಗಿಯೇ ಬದುಕುತ್ತಾರೆ. ಅದೇ ಸಮಯಕ್ಕೆ ಇಂದಿನ ಪ್ರಪಂಚದಲ್ಲಿ ಅಗಾಧ ಅಸಮಾನತೆಯಿರುವುದೂ ಸಹ ನಮಗೆ ಚೆನ್ನಾಗಿಯೇ ತಿಳಿದಿದೆ ಮತ್ತು ರಾಷ್ಟ್ರೀಯ ಆರ್ಥಿಕತೆಗಳು ಜಾಗತೀಕರಣಗೊಂಡು ಬಹುಜನರ ವಿರುದ್ಧವಾಗಿಯೇ ಅವು ಅಣಿಗೊಳ್ಳುತ್ತಿವೆ. ನಾವು ಇನ್ನೂ ರಾಷ್ಟ್ರಪ್ರಭುತ್ವಗಳ ಗಡಿಗಳ ಒಳಗೇ ಕಾರ್ಯನಿರ್ವಹಿಸುತ್ತಿದ್ದೇವೆ ಎಂಬ ರೀತಿಯಲ್ಲೇ ನಡೆದುಕೊಳ್ಳುತ್ತಿದ್ದೇವೆ. ಆದರೆ ಉನ್ನತ ವರ್ಗದ ಜನ ಇದರಿಂದ ತಪ್ಪಿಸಿಕೊಂಡಿದ್ದಾರೆ. ಅವರು ಗಡಿಗಳನ್ನು ಮೀರಿದ ಸಂಸ್ಕೃತಿಗೆ ಸೇರಿದವರಾಗಿದ್ದಾರೆ. ಇವತ್ತಿನ *ನ್ಯೂಯಾರ್ಕ್ ಟೈಮ್ಸ್* ಪತ್ರಿಕೆಯಲ್ಲಿ ಒಂದು ಮುಖಪುಟ ವರದಿಯಿದೆ. ಅದು ನ್ಯೂಯಾರ್ಕ್‌ನಲ್ಲಿನ ಸ್ಥಿರಾಸ್ತಿಗಳ ಬಗೆಗಿನ ತನಿಖಾ ವರದಿಯ ಸರಣಿಯ ಒಂದು ಭಾಗ. ನ್ಯೂಯಾರ್ಕ್ ನಗರದ ಆಸ್ತಿಗಳು ಅಗಾಧ ಬೆಲೆಗೆ ಮಾರಾಟವಾಗುತ್ತಿದ್ದು, ಆ ಹಣ ಯಾವ ದೇಶಗಳಿಂದ ಬರುತ್ತಿದೆ ಎಂಬುದನ್ನು ತನಿಖೆ ಮಾಡಲಾಗುತ್ತಿದೆ. ಇತ್ತೀಚಿನ ಒಂದು ಕಂತು ಭಾರತದ ರಿಯಲ್ ಎಸ್ಟೇಟ್ ಸಾಮ್ರಾಟನೊಬ್ಬನ ಬಗ್ಗೆ ಇದೆ. ಆತ ಭಾರತದಲ್ಲಿ ಅಪಾರ್ಟ್‌ಮೆಂಟ್ ಸಮುಚ್ಚಯಗಳನ್ನು ನಿರ್ಮಿಸುವುದಾಗಿ ಜನರನ್ನು ವಂಚಿಸಿ ನ್ಯೂಯಾರ್ಕ್‌ನಲ್ಲಿ ಮಿಲಿಯಾಂತರ ಬೆಲೆ ಬಾಳುವ ಅಪಾರ್ಟ್‌ಮೆಂಟ್ ಒಂದನ್ನು ತನ್ನ ಸ್ವಂತಕ್ಕಾಗಿ ಖರೀದಿಸಿದ್ದಾನೆ.

ಮೇಲ್ವರ್ಗದ ಜನ ಹೇಗೆ ಉಡಾಳರಾಗಿರಬಹುದು ಎಂಬುದಕ್ಕೆ ಇದೊಂದು ಉದಾಹರಣೆ. ೧೯೭೦–೮೦ರಲ್ಲಿ ನಾವು ಬೆಳೆದ ಭಾರತದಲ್ಲಿ ಇದು ಸಾಧ್ಯವಾಗುತ್ತಿರಲಿಲ್ಲ. ಏಕೆಂದರೆ ನಿಮಗೆ ಉನ್ನತ ಸ್ತರದ ಸಂಪರ್ಕವಿಲ್ಲದ ಹೊರತು ಹಣವನ್ನು ದೇಶದಿಂದ ಹೊರಕ್ಕೆ ಸಾಗಿಸುವುದು ಸಾಧ್ಯವೇ ಇರಲಿಲ್ಲ. ಬಹಳ ಪ್ರಬಲ ಸಂಪರ್ಕವಿದ್ದರೂ ಅದು ಕಷ್ಟದ ಕೆಲಸವೇ ಆಗಿತ್ತು. ಈಗ ಅದು ಸಾಧ್ಯ. ಬಂಡವಾಳವು ಈಗ ಬಹಳ ಚಲನಶೀಲವಾಗಿದೆ. ಶ್ರಮಕ್ಕಿಂತಲೂ ಈಗ ಬಂಡವಾಳವು ಹೆಚ್ಚು ಚಲನಶೀಲ. ಹಾಗಾಗಿ ನಮಗೆ ತಿಳಿದಿರುವಂತೆ ಉನ್ನತ ರಾಜಕಾರಣಿಗಳು ಬಹಳಮಟ್ಟಿಗೆ ತಮ್ಮ ಚುನಾವಣೆಗೆ ಹಣ ನೀಡುವ ವ್ಯಾಪಾರಿಗಳಿಗೆ ನಿಷ್ಠರಾಗಿರಬೇಕಾಗುತ್ತದೆ. ನಾವು ಮಾತನಾಡುತ್ತಿರುವುದು ಪ್ರಜಾಪ್ರಭುತ್ವದ ದೇಶಗಳ ಬಗೆಗೆ ಚೋರಪ್ರಭುತ್ವಗಳ ಬಗೆಗಲ್ಲ.

೧೯೭೦–೮೦ರ ಕಾಲದ ನಮಗೆ ಪರಿಚಯವಿರುವ ಆ ಐಕಮತ್ಯ, ನಾವೆಲ್ಲ ಒಂದು ರಾಷ್ಟ್ರೀಯ ಸಂಸ್ಕೃತಿಯ ಒಳಗೆ ಮಹಿಳೆಯರು ತಮ್ಮ ಕೆಲಸದ ಸ್ಥಳಗಳಲ್ಲಿ ಎದುರಿಸುವ ಸಮಸ್ಯೆಗಳನ್ನು ಕೆಳಮಧ್ಯಮ ವರ್ಗದ, ಕಾರ್ಮಿಕ ವರ್ಗದ, ಕೆಳಜಾತಿಗಳ ಸಮಸ್ಯೆಗಳನ್ನು ಪರಿಹರಿಸುವ ದಿಕ್ಕಿನಲ್ಲಿ ಕೆಲಸ ಮಾಡುತ್ತಿದ್ದೇವೆ ಎಂಬ ಭಾವನೆಯೇ ಇಂದು ಶಿಥಿಲವಾಗಿದೆ. ಅದು ಹೊರಟು ಹೋಗಿಲ್ಲ, ನಾವೆಲ್ಲರೂ ಮೂಲಭೂತವಾಗಿ ವ್ಯಕ್ತಿಗತವಾಗಿ ಉದ್ಯಮಿಗಳೇ ಎಂಬ ನವ ಮುಕ್ತ ವ್ಯಾಪಾರ ಮತ್ತು ಜಾಗತೀಕರಣದ ಕಲ್ಪನೆಯಿಂದಾಗಿ ಸಾರ್ವಜನಿಕ ವಲಯದಲ್ಲಿ ಇವುಗಳ ಪ್ರಾಮುಖ್ಯತೆ ಕಡಿಮೆಯಾಗಿದೆ. ಇದು ನಮ್ಮ ಮನಸ್ಸುಗಳನ್ನು ಆಕ್ರಮಿಸಿ ಹಲವಾರು ಜನರನ್ನು ಭ್ರಮಾಧೀನಗೊಳಿಸಿ ನಮ್ಮ ಸಂಸ್ಕೃತಿಯನ್ನು ಅ–ಅರಾಜಕೀಯಗೊಳಿಸಿರುವ ಅಸಾಮಾನ್ಯ ಕಲ್ಪನೆ. ಇದರಲ್ಲಿ ಕೆಲವೇ ಕೆಲವು ಜನ ಶ್ರೀಮಂತರೂ ಅಧಿಕಾರಸ್ಥರೂ ಆಗುತ್ತಾರೆಂಬುದು ನಿಜವೆ. ಹಾಗಾದರೆ ಈ ದೇಶಗಳ ರಾಜಕೀಯದ ಮೇಲೆ ಇದರ ಪರಿಣಾಮವೇನು? ಸ್ಕಾಟ್ಲೆಂಡ್ ಇದಕ್ಕೊಂದು ನಿದರ್ಶನ. ಕ್ಯಾಟಲೋನಿಯ ಮತ್ತೊಂದು. ಪ್ರಪಂಚದಾದ್ಯಂತ ಈ ರೀತಿಯ ಇನ್ನೆಷ್ಟೋ ಉದಾಹರಣೆಗಳಿವೆ. ಈ ಪ್ರಕ್ರಿಯೆ ಏಕೋ ಬಹಳ ಕಾಲದಿಂದ ಮುಂದುವರೆದಿದೆ ಮತ್ತು ನಾವು ಎಲ್ಲೇ ಇರಲಿ, ನಮ್ಮ ಪ್ರಾಂತ್ಯವು ಎಷ್ಟೇ ಚಿಕ್ಕದಾಗಿರಲಿ ನಾವು ಒಟ್ಟಾಗಬೇಕು, ನಮ್ಮ ನಿರ್ದಿಷ್ಟ ಭವಿಷ್ಯಗಳನ್ನು ನಮ್ಮ ಕೈಗೆ ತೆಗೆದುಕೊಳ್ಳಬೇಕು ಎಂಬುದಾಗಿ ಹೇಳುವ ಮರುರಾಜಕೀಯಗೊಂಡ ಸಾಕಷ್ಟು ಜನರಿದ್ದಾರೆ.

ಈ ವಿದ್ಯಮಾನಗಳಿಗೆ ಮತ್ತೊಂದು ಮುಖವಿದೆ. ನಾವೆಲ್ಲರೂ ನೆರೆಹೊರೆಯವರು ಎಂಬ ಭ್ರಮೆಯನ್ನು ಅಂತರ್ಜಾಲವು ಸೃಷ್ಟಿಸಿರುವುದು ಈ ಮತ್ತೊಂದು ಮುಖ. ಈ ವಿಸ್ತೃತ ಬೃಹತ್ ಸಾರ್ವತ್ರಿಕ ವಲಯದಲ್ಲಿ ನಮ್ಮ ನಮ್ಮ ರಾಷ್ಟ್ರೀಯ, ಜನಾಂಗೀಯ ಅಥವಾ ಧಾರ್ಮಿಕ ಹಿನ್ನೆಲೆಗಳೊಂದಿಗೇ ಸದಾಕಾಲವೂ ಪರಸ್ಪರ ಸಂವಾದ ನಡೆಸಬಹುದೆಂದೆ ನಮ್ಮನ್ನೆಲ್ಲ ಆಹ್ವಾನಿಸಲಾಗುತ್ತಿದೆ. ಇಲ್ಲಿ ಜನ ಪರಸ್ಪರ ಸಂಭಾಷಿಸುವುದು ಮಾತ್ರವಲ್ಲದೆ ಅವರು ಪರಸ್ಪರ ಎದುರುಬದುರೂ ಆಗುತ್ತಾರೆ. ಬಂಡವಾಳಶಾಹಿ ಕೆಲಸ ಮಾಡುವ ರೀತಿಯೇ ಇದು. ಅದು ಜನರನ್ನು ನಿಕಟವಾಗಿ ಹೆಣೆಯುತ್ತಾ ಮತ್ತು ಆ ಪ್ರಕ್ರಿಯೆಯಲ್ಲೇ ಅವರನ್ನು ಎದುರುಬದುರಾಗಿಸುತ್ತಾ ಅಸಮಾನ ಸಂಬಂಧಗಳನ್ನು ಸೃಷ್ಟಿಸುತ್ತಿರುತ್ತದೆ. ಪುನಃ ಅದು ನಾವೆಲ್ಲ ಈ ಭೂಮಿಯ


ಎರ್ಡೋಗನ್


ಪುಟಿನ್

ಮೇಲೆ ಒಂದು ಸಮಾನವಾದ ವರ್ತಮಾನವನ್ನು ಹಂಚಿಕೊಳ್ಳುತ್ತಾ ಬದುಕುತ್ತಿದ್ದೇವೆ ಎಂಬ ಭಾವವನ್ನು ಸೃಷ್ಟಿಸಿದೆ. ಆದರೆ ನಮ್ಮ ಆಸಕ್ತಿಗಳು, ಆದ್ಯತೆಗಳು ತೀವ್ರವಾಗಿ ಭಿನ್ನವಾಗಿವೆ ಮತ್ತು ನಮ್ಮ ಮೌಲ್ಯಗಳು ಪರಸ್ಪರ ಸಂಘರ್ಷದಲ್ಲಿರುತ್ತವೆ. ಭಿನ್ನವಾಗುತ್ತವೆ.

ನಾನು ಋಣಾತ್ಮಕ ಐಕ್ಯತೆ ಎನ್ನುವುದು ಇದನ್ನೇ. ಯಾರೊಬ್ಬರೂ ಒಪ್ಪಿಕೊಂಡಿರುವ ಐಕ್ಯತೆ ಇದಲ್ಲ. ಒಂದು ರಾಷ್ಟ್ರಪ್ರಭುತ್ವದಲ್ಲಿ ಸಂವಿಧಾನಕ್ಕೆ ಬದ್ಧರಾಗಿರುವುದಾಗಿ ನಿಮ್ಮ ಬದುಕಿನ ಹಲವು ಹಂತಗಳಲ್ಲಿ ಪ್ರಮಾಣ ಮಾಡಿರುತ್ತೀರಿ ಮತ್ತು ನೀವೊಬ್ಬ ಪ್ರಜೆಯಾಗಿರುತ್ತೀರಿ. ಆದರೆ ಈಗ ನಾವೆಲ್ಲ ಯಾವುದರ ಭಾಗವಾಗಿದ್ದೇವೋ ಆ ಜಾಗತೀಕರಣಗೊಂಡ ಪ್ರಪಂಚದ ಈ ವಿಶಿಷ್ಟ ಸದಸ್ಯತ್ವದ ಐಕಮತ್ಯ ಇದೆಯಲ್ಲ, ಅದು ನಾವು ಬಯಸಿ ಪಡೆದದ್ದಲ್ಲ... ಅದು ಹೊರಗಿನಿಂದ ನಮ್ಮ ಮೇಲೆ ಹೇರಲ್ಪಟ್ಟದ್ದು.

**ವಿ.ಐ :** ಪ್ರಪಂಚದಾದ್ಯಂತ ಸಂಪ್ರದಾಯವಾದಿ ಚಳುವಳಿಗಳು ಹೆಚ್ಚುತ್ತಿರುವುದರ ಹಿಂದಿರುವ ಕಾರಣ ಇದುವೇ ಏನು? ವ್ಲಾದಿಮಿರ್ ಪುಟಿನ್ ಮತ್ತು ರಿಸೆಪ್ ತೆಯ್ಯಿಪ್ ಎರ್ಡೋಗನ್‌ರವರಂತಹ ವ್ಯಕ್ತಿಗಳು ಈ ಹಳೆಯ ಐಕಮತ್ಯವನ್ನು ಪುನರ್‌ನಿರ್ಮಿಸಲು ಪ್ರಯತ್ನಿಸುತ್ತಿದ್ದಾರೆಯೇ?

**ಪಂ.ಮಿ :** ಒಂದರ್ಥದಲ್ಲಿ ನಿಜವಾಗಿ ಅದು ಸಂಪ್ರದಾಯವಾದವೇ ಅಲ್ಲ ಏಕೆಂದರೆ ಈ ಹಲವಾರು ಕಡೆ ಸಂರಕ್ಷಿಸುವಂತಹದ್ದು ಹೆಚ್ಚೇನೂ ಉಳಿದಿಲ್ಲ. ಇವು ಮೂಲದಲ್ಲಿ ಪ್ರಗತಿಪರವಾದಿ ಆದರ್ಶಗಳ ಅವಶೇಷಗಳೊಳಗೆ ಧಾರ್ಮಿಕ ಮತ್ತು ಜನಾಂಗೀಯ ನುಡಿಗಟ್ಟುಗಳನ್ನು ಬೆಸೆಯುವ ಮೂಲಕ ಅವನ್ನು ತಮ್ಮ ಹಿತಾಸಕ್ತಿಗೆ ಬೇಕಾದಂತೆ ತಿರುಚುವ ರಾಜಕೀಯ ಚಳುವಳಿಗಳು ಮಾತ್ರ. ಅವರು ಭೂತಕಾಲವನ್ನು ನೆನಪು ಮಾಡುವಾಗ,ಪುಟಿನ್ ಸಂಪ್ರದಾಯವಾದಿ ಕ್ರಿಶ್ಚಿಯಾನಿಟಿಯ ಬಗ್ಗೆ ಮಾತನಾಡುವಾಗ, ಅಥವಾ ಟರ್ಕಿಯ ಎರ್ಡೋಗನ್ ಪುರಾಣಗಳ ಬಗ್ಗೆ ಉಮ್ಮಳಿಸಿ ಮಾತಾಡುವಾಗ ಅಥವಾ ಹಿಂದೂ ರಾಷ್ಟ್ರೀಯವಾದಿಗಳು ವೇದ ವಿಜ್ಞಾನದ ಬಗ್ಗೆ ಮನದುಂಬಿ ಮಾತನಾಡುವಾಗ ಕೂಡ ಅವೆಲ್ಲವೂ ಆಧುನಿಕ ಚಳುವಳಿಗಳೇ ಆಗಿರುತ್ತವೆ. ಇವರೆಲ್ಲ ಉನ್ನತ ವರ್ಗದವರಾಗಿದ್ದು ತಮ್ಮ ತಮ್ಮ ಸಮಾಜಗಳಲ್ಲಿ ಸಾರ್ವಜನಿಕ ಅಭಿಪ್ರಾಯಗಳನ್ನು ತಮ್ಮ ಹಿತಾಸಕ್ತಿಗನುಗುಣವಾಗಿ ತಿರುಚಲು ಪ್ರಯತ್ನಿಸುವವರು ಮತ್ತು ಅದಕ್ಕಾಗಿ ಹಲವಾರು ತಾತ್ವಿಕ ಹಾಗೂ ಭಾಷಾ ಚಾತುರ್ಯದ ಸಾಧನಗಳನ್ನು ಬಳಸುವವರು ಎಂಬುದು ವಾಸ್ತವ.

ಹೊರಗಡೆಯಿಂದ ಅವರ ನಿಲುವುಗಳಲ್ಲಿ ಕೆಲವು ವಿರೋಧಾಭಾಸಗಳನ್ನು ನೀವು ಗಮನಿಸಬಹುದು. ಟರ್ಕಿಯ ರೂಪವನ್ನೇ ಬದಲಾಯಿಸುತ್ತಿರುವ ಇಸ್ಲಾಮಿಕ್ ಮೌಲ್ಯಗಳ ಬಗ್ಗೆ ಮಾತನಾಡುತ್ತಲೇ ನಿರ್ದಯಿ ಬಂಡವಾಳಶಾಹಿಗಳಾಗಿರುವ ಹಲವಾರು ವ್ಯಾಪಾರಿಗಳನ್ನು ಎರ್ಡೋಗನ್ ಬೆಂಬಲಿಸುವ ರೀತಿಯ ವಿರೋಧಾಭಾಸಗಳಿವು. ಬಹಳ ಸಲ ವಿಚಿತ್ರ ಸ್ತರಗಳಲ್ಲಿ ಈ ವಿರೋಧಾಭಾಸಗಳು ಕೆಲಸಮಾಡುತ್ತವೆ– ಆಧುನಿಕ ಜಗತ್ತಿನಿಂದ ತಮ್ಮನ್ನು ಸಂಪೂರ್ಣ ಬುಡಮೇಲು ಮಾಡುತ್ತಿಲ್ಲ ಎಂಬ ಭಾವನೆ ಜನರಲ್ಲಿ ಮೂಡುವಂತೆ ಅವು ಮಾಡುತ್ತವೆ. ಅಂದರೆ ತಾವು ನಿಷ್ಠಾವಂತ ಮುಸ್ಲಿಮರಾಗಿದ್ದುಕೊಂಡೇ ಬಂಡವಾಳಶಾಹಿಗಳೂ ಆಗಿರಬಹುದು ಎಂಬ ಆಶ್ವಾಸನೆಯನ್ನವು ನೀಡುತ್ತವೆ. ಈ ಬಗೆಯ ಸಂಪ್ರದಾಯವಾದಿ ಮುಖವಾಡದ ಚಳುವಳಿಗಳು ನಿರ್ದಿಷ್ಟವಾಗಿ ಯಶಸ್ವಿಯಾಗುತ್ತಿರಲು ಕಾರಣವೆಂದರೆ, ಅವು ತಮ್ಮ ಅನುಯಾಯಿಗಳ ಬದುಕಿನ ಹಲವು ಬಿಗುವು ಮತ್ತು ಸಂದಿಗ್ಧಗಳನ್ನು ಪರಿಹರಿಸುವ ಭರವಸೆಯನ್ನು ನೀಡುತ್ತವೆ. ಬಲಪಂಥೀಯ ಅರ್ಥಶಾಸ್ತ್ರ ಅಥವಾ ಎಡಪಂಥೀಯ ಅರ್ಥಶಾಸ್ತ್ರದ ಬಗ್ಗೆ ಮಾತ್ರ ಮಾತನಾಡುವ ಹಳೆಯ ಪಕ್ಷಗಳು ಪ್ರಪಂಚದ ಬಹುತೇಕ ಭಾಗಗಳಲ್ಲಿ ಕಷ್ಟಗಳನ್ನೆದುರಿಸುತ್ತವೆ. ಏಕೆಂದರೆ ಈಗ ಈ ಸಮಾಜಗಳಲ್ಲಿ ಆಧುನಿಕ ಪ್ರಪಂಚದ ಕಡೆಗೆ ಚಲಿಸುತ್ತಿರುವ ಅಸ್ತಿತ್ವವಾದಿ ಸವಾಲುಗಳನ್ನು ನಿರ್ವಹಿಸಲು ಇವರ ಬಳಿ ಪರಿಣಾಮಕಾರಿಯಾದ ನುಡಿಗಟ್ಟುಗಳಿಲ್ಲ.

**ವಿ.ಐ :** *ಅಟ್ಲಾಂಟಿಕ್*‌ನಲ್ಲಿನ ತಮ್ಮ ಇತ್ತೀಚಿನ ಪ್ರಬಂಧದಲ್ಲಿ ಗ್ರೇಮ್‌ವುಡ್ ಅವರು, ISIS ಎಂಬುದು ಮೂಲದಲ್ಲಿ ಒಂದು ಮಧ್ಯಯುಗೀನ ಸಂಘಟನೆ


ಇರಾಕ್ ಯುದ್ಧ


ಐಎಸ್‌ಐಎಸ್

ಎಂಬುದಾಗಿ ವಾದಿಸುತ್ತಾರೆ. "ಜಿಹಾದಿಗಳು ಮಧ್ಯಯುಗೀನ ಧಾರ್ಮಿಕ ವೇಷದಲ್ಲಿರುವ, ಆಧುನಿಕ ರಾಜಕೀಯ ಕಾಳಜಿಗಳುಳ್ಳ ಆಧುನಿಕ ಜಾತ್ಯತೀತ ಜನ ಎಂಬ ಹೇಳಿಕೆಗಳ ತಾಲೀಮು ನಡೆಸುವ ಮತ್ತು ಅದನ್ನು ಇಸ್ಲಾಮಿಕ್ ರಾಷ್ಟ್ರಕ್ಕೆ ಹೊಂದಿಸುವ ಒಂದು ಕೆಟ್ಟ ತುಡಿತವಿದೆ. ನಾಗರೀಕತೆಯನ್ನು ಏಳನೆಯ ಶತಮಾನದ ನ್ಯಾಯಾಂಗ ಪರಿಸರಕ್ಕೆ ಕೊಂಡೊಯ್ಯಬೇಕು ಮತ್ತು ಅಂತಿಮ ಪ್ರಳಯ ದಿನದ ಭವಿಷ್ಯದ್ದರ್ಶನಕ್ಕೆ(apocalypse) ಎಡೆ ಮಾಡಬೇಕು ಎಂಬ ಪ್ರಾಮಾಣಿಕ ಎಚ್ಚರದಿಂದ ರೂಪಿಸಲ್ಪಟ್ಟ ಬದ್ಧತೆಯ ಹಿನ್ನಲೆಯಲ್ಲಿ ನೋಡದಿದ್ದಲ್ಲಿ, ಈ ಗುಂಪುಗಳು ನಡೆಸುತ್ತಿರುವ ಚಟುವಟಿಕೆಗಳು ಅಸಂಬದ್ಧವೆಂಬಂತೆ ಕಾಣಬರುತ್ತವೆ." ಎಂದು ಬರೆದಿದ್ದಾರೆ. ಇದು ISIS ಬಗೆಗಿನ ನಂಬಲರ್ಹ ವಿಶ್ಲೇಷಣೆಯೆ?

**ಪಂ.ಮಿ :** 'ಧರ್ಮನಿರಪೇಕ್ಷ–ಆಧುನಿಕ' ಮತ್ತು 'ಧಾರ್ಮಿಕ–ಮಧ್ಯಯುಗೀನ' ಎಂಬ ನಮ್ಮ ವರ್ಗೀಕರಣಗಳು ಹಾಗೂ ಅವುಗಳ ವೈದೃಶ್ಯಗಳು ಅಷ್ಟೊಂದು ಬಿಗಿಯಾದವುಗಳೇ ಎಂಬ ಬಗ್ಗೆ ನಮ್ಮ ಪಂಡಿತವಲಯದಲ್ಲಿ ರೋಚಕ ಚರ್ಚೆಗಳು ನಡೆಯುತ್ತಿವೆ. ಈ ಚರ್ಚೆಯಲ್ಲಿ ಪಾಲ್ಗೊಳ್ಳುವುದು ನನಗೆ ಬೇಕಿಲ್ಲ. ಆದರೆ ೯/೧೧ರ ನಂತರದಲ್ಲಿ, ಮುಸ್ಲಿಂ ಜಗತ್ತಿನ ಎಷ್ಟು ಜನರು, ಅಮೆರಿಕದ ಮುತ್ಸದ್ದಿಗಳ–ವಿಶೇಷವಾಗಿ ಕ್ರಿಶ್ಚಿಯನ್ ಮೂಲಭೂತವಾದಿಗಳ–ಹೇಳಿಕೆಗಳು ಮತ್ತು ವರ್ತನೆಗಳನ್ನು ವಿಶ್ಲೇಷಿಸಿದ್ದಾರೆ; ಇಸ್ಲಾಂ ವಿರುದ್ಧ ಒಂದು ಹೊಸ ಧರ್ಮಯುದ್ಧವನ್ನು ಸಾರಲಾಗಿದೆ ಎಂಬ ತೀರ್ಮಾನಕ್ಕೆ ಹೇಗೆ ಬಂದಿದ್ದಾರೆ ಎಂಬುದನ್ನು ಗಮನಿಸುವುದು ಬೋಧಪ್ರದವಾದುದು. ಹಾಗಾಗಿ ಅಂತ್ಯವಿಲ್ಲದ ಯುದ್ಧಗಳನ್ನು, ಚಿತ್ರಹಿಂಸೆಯನ್ನು ನಿರಂತರಗೊಳಿಸುವ ಅತ್ಯಾಧುನಿಕರಂತೆ ಕಾಣಿಸುವವರ ಇವರ ವಿರುದ್ಧವೂ ಮಧ್ಯಯುಗೀನ ನ್ಯಾಯವ್ಯವಸ್ಥೆಯ ಮತ್ತು ಅಂತಿಮ ಪ್ರಳಯಕಾಲದ ಭವಿಷ್ಯದ್ದರ್ಶನದ ಮಾನಸಿಕತೆಯನ್ನು ಹೆಚ್ಚು ದೃಢವಾಗಿ ಆರೋಪಿಸಬಹುದು. ಮೃದುಮಧುರ ವಿವೇಚನೆಯ ಜನ ಇವರೆಂದು ನಾವು ಭಾವಿಸಕೂಡದು. ನಿಜವಾಗಿ ಹಾಗಿದ್ದಲ್ಲಿ ಕುಪ್ರಸಿದ್ಧ ಚಿತ್ರಹಿಂಸೆಯ ಗುಪ್ತ ಕೇಂದ್ರ 'ಗ್ವಾಟನೆಮೋ'ವನ್ನು ಬಹಳ ಹಿಂದೆಯೇ ಮುಚ್ಚಿ ಬಿಡಬೇಕಾಗಿತ್ತು. 'ಚಿತ್ರಹಿಂಸೆಯ ಮೆಮೊ' ಎಂಬುದನ್ನು ಅವರು ಬರೆಯುತ್ತಲೇ ಇರಲಿಲ್ಲ.. ನಾವು ನಿರ್ದಿಷ್ಟವಾಗಿ ಯಾವ ಪ್ರದೇಶಕ್ಕೆ ಸೇರಿದವರು ಎಂಬುದನ್ನು ನಮ್ಮ ವಿಶ್ಲೇಷಣೆಯು ಅವಲಂಬಿಸಿರುತ್ತದೆ.

ಇಲ್ಲಿ ನಮಗೆ ಮುಖ್ಯವಾಗುವ ಪ್ರಶ್ನೆಯೆಂದರೆ ಇದರಿಂದೆಲ್ಲ ಏನಾದರೂ ಪ್ರಯೋಜನವಿದೆಯೇ? ಎಂಬುದು. ISISಯನ್ನು ಅಥವಾ ಅದರ ವಿರುದ್ಧ ಹೋರಾಡುತ್ತಿರುವ ಶಿಯಾ ಪ್ರಜಾಸೇನೆಯನ್ನು ಕತ್ತಲ ಯುಗದ ಉತ್ಪನ್ನಗಳೆಂದು ನಿರ್ಣಾಯಕವಾಗಿ ಗುರುತಿಸುವುದರಿಂದ ಅಥವಾ ಧರ್ಮಶಾಸ್ತ್ರೀಯವಾಗಿ ಅವುಗಳ ವಿಂಗಡಣೆ ಮಾಡುವುದರಿಂದ ನಾವು ನೈತಿಕವಾಗಿ ಶ್ರೇಷ್ಠರು ಎಂದು ಬೀಗಿಕೊಳ್ಳುವ ಮತ್ತು ಪ್ರಪಂಚದಾದ್ಯಂತ ನಾವು ಹಿಂಸೆಯನ್ನು ಹರಡುತ್ತಿರುವುದಕ್ಕೆ ಸಮರ್ಥನೆ ಒದಗಿಸುವುದರ ಹೊರತಾಗಿ ಬೇರೇನಾದರೂ ಅನುಕೂಲವಿದೆಯೇ? ಅಥವಾ ತೈಪಿಂಗ್, ಮೆಹದಿ, ಬಾಕ್ಸರ್, ದಂಗೆಗಳಿಂದ ಇತ್ತೀಚಿನ ದಶಕಗಳ ಹಿಂದೂ ಸಿಖ್, ಯಹೂದಿ ಮತ್ತು ಬೌದ್ಧಧರ್ಮದ *ಮಿಲಿನೇರಿಯಸಂ* (ಒಂದು ಮಹತ್ತರ ಘಟನೆಯ ನಂತರ ಎಲ್ಲವೂ ಬದಲಾಗುವುದು ಎಂಬ ನಂಬಿಕೆ)ವರೆಗಿನ ಧಾರ್ಮಿಕ ರಾಜಕೀಯ ಕ್ರೋಧದ ಸ್ಫೋಟಕ್ಕೆ ಅದನ್ನು ಸಮೀಕರಿಸುವುದರಲ್ಲಿ ಏನಾದರೂ ಅರ್ಥವಿದೆಯೇ? ಹಾಗೆ ಮಾಡಬಲ್ಲೆವಾದರೆ, ಐಎಸ್‌ಐಸ್‌ನ್ನು ಧರ್ಮಗ್ರಂಥಗಳ ಮತ್ತು ಹುಚ್ಚು ಯುಟೋಪಿಯನಿಸಂನ DIY (Do it yourself)ನಂತಹ ವ್ಯಾಖ್ಯಾನಗಳನ್ನು ಅನಿವಾರ್ಯವೆಂಬಂತೆ ಹುಟ್ಟುಹಾಕುವ, ಆ ಪ್ರದೇಶದಲ್ಲಿನ ಒಂದು ವ್ಯಾಪಕ ಸಾರ್ವಜನಿಕ ಮತ್ತು ರಾಜಕೀಯ ಬಿಕ್ಕಟ್ಟಿನ ಲಕ್ಷಣವೇ ಎಂದು ಗುರುತಿಸತೊಡಗಬಹುದು. ಒಂದು ಹೊಸ ವ್ಯವಸ್ಥೆಯ ಕಡೆಗಿನ ಬದಲಾವಣೆ

ಈ ರೀತಿಯ ಚಳುವಳಿಗಳನ್ನು ಉಂಟು ಮಾಡತೊಡಗುತ್ತವೆ ಎಂಬುದಾಗಿ ಭವಿಷ್ಯ ನುಡಿಯಬಹುದು. ಕೊನೇ ಪಕ್ಷ ನಮ್ಮ ಪ್ರತಿಕ್ರಿಯೆಗಳನ್ನು ಪರೀಕ್ಷಿಸಿಕೊಂಡು ಸರಿಮಾಡಿಕೊಳ್ಳಲು ನೆರವಾಗಬಹುದು. ಬದಲಿಗೆ, ಧರ್ಮಶಾಸ್ತ್ರೀಯ ವ್ಯಾಖ್ಯಾನಗಳು, ಇಸ್ಲಾಂ ಬಗೆಗಿನ ವಿಕೃತ ಗೀಳು ಧರ್ಮಯುದ್ಧದ ಎಲ್ಲ ರೀತಿಯ ಪ್ರತಿಪಾದಕರಿಗೆ ಪ್ರಯೋಜನವೊದಗಿಸುತ್ತದೆ ಎಂದೆನಿಸುತ್ತದೆ.

**ವಿ.ಐ :** ಗಾರ್ಡಿಯನ್‌ನಲ್ಲಿ 'ಪಶ್ಚಿಮದ ಮಾದರಿ'ಯ ಬಗೆಗಿನ ನಿಮ್ಮ ಪ್ರಬಂಧದಲ್ಲಿ ನೀವು "ನಮ್ಮ ಸಂಕೀರ್ಣ ಅವ್ಯವಸ್ಥೆಯನ್ನು ನೋಡಿದಾಗ ಇದು ಈವರೆಗೆ ಪ್ರತಿಷ್ಠಿತ ವರ್ಗಕ್ಕೆ ಮಾತ್ರ ಗೋಚರವಾಗುತ್ತಿರುವ ಮತ್ತು ಮುಂಬರುವ ದಿನಗಳಲ್ಲಿ ಎಲ್ಲರಿಗೂ ಗೋಚರವಾಗುವ ಒಂದು ನೈತಿಕ ಹಾಗೂ ವೈಚಾರಿಕ ವ್ಯವಸ್ಥೆಯ ಪೂರ್ವಾವತಾರ ಎಂಬ ಮಾತನ್ನು ಇನ್ನು ಒಪ್ಪಲಾಗುವುದಿಲ್ಲ" ಎಂದಿದ್ದೀರಿ, ಆದರೆ ಒಂದು ನೈತಿಕ ಮತ್ತು ವೈಚಾರಿಕ ಪೂರ್ವಾವತಾರದ ದರ್ಶನ ಇಲ್ಲದೇ ಹೋದಲ್ಲಿ ಸಾಂಸ್ಕೃತಿಕ ಬಹುಮುಖತ್ವ ಎನ್ನುವುದು ಸಾಪೇಕ್ಷ ನೈತಿಕವಾದ ಮತ್ತು ಸಾಂಸ್ಕೃತಿಕ ಸ್ಥಳೀಯವಾದಗಳಾಗಿ ಮಾರ್ಪಾಡಾಗುವ ಅಪಾಯವಿದೆಯಲ್ಲವೇ?

**ಪಂ.ಮಿ :** ಹಲವು ರೀತಿಯ ವಿಜಯೋತ್ಸಾಹೀ ಮೂಲಭೂತವಾದಿಗಳ ನಡುವೆ ನಮಗಾಗಿ ಒಂದು ಜಾಗ ಕಂಡುಕೊಳ್ಳಲು ನಾವು ಎಚ್ಚರದಿಂದ ಪ್ರಯತ್ನಿಸಬೇಕು ಎಂದು ನನಗನ್ನಿಸುತ್ತದೆ. ಬಹುತೇಕ ತಂತ್ರಜ್ಞಶಾಹಿ ಉದ್ಯಮ-ವ್ಯವಹಾರ ವರ್ಗ(Technocrats) ಮತ್ತು ಪ್ರತಿಷ್ಠಿತ ರಾಜಕೀಯ ವರ್ಗ ಹಾಗೂ ಮುಖ್ಯವಾಹಿನಿ ಮಾಧ್ಯಮಗಳ ಮೂಲಕ ವ್ಯಕ್ತವಾಗುವ ಬಲಪಂಥೀಯ ಮೂಲಭೂತವಾದವು ಈ ಭೂಮಿಯ ಮೇಲೆ ನಮ್ಮ ಕಾಲವನ್ನು ಕಳೆಯಲು ಒಂದೇ ಒಂದು ಮಾರ್ಗವಿದೆ. ಅದುವೇ, ಬೇಕಾದಷ್ಟು ಹಣಮಾಡುವುದು, ಸಕಲ ರೀತಿಯ ಹೊಸ ಹೊಸ ಉತ್ಪನ್ನಗಳ ಬಳಕೆ ಮಾಡುವುದು, ಒಂದು ಕಾರ್ಖಾನೆ ಅಥವಾ ಕಛೇರಿಯಲ್ಲಿ ಕೆಲಸ ಮಾಡುವುದು ಎನ್ನುತ್ತದೆ. ಕಾರುಗಳ ವ್ಯಾಪಾರ ಹೆಚ್ಚಿದಾಗ ಹತ್ತಾರು ಕೋಟಿ ಜನ ಬಡತನದಿಂದ ಮೇಲಕ್ಕೆ ಬರುತ್ತಾರೆ ಎಂಬುದು ಅವರ ವಾದ. ಮತ್ತೊಂದು ಬಗೆಯ ಮೂಲಭೂತವಾದವಿದೆ. ಪುಟಿನ್‌ವಾದದಲ್ಲಿ, ಎರ್ಡೋಗನಿಸಂನಲ್ಲಿ ಅಥವಾ ಹಿಂದೂ ರಾಷ್ಟ್ರೀಯತೆಯಲ್ಲಿ ನೀವು ಕಾಣುವ ಸಾಂಸ್ಕೃತಿಕ ರಾಷ್ಟ್ರೀಯತೆಯೇ ಈ ಮೂಲಭೂತವಾದ. ಅವೆರಡೂ ತಮ್ಮ ತಲೆಯಲ್ಲಿ ಒಂದು ನಿರ್ದಿಷ್ಟ 'ಕಾಲಜ್ಞಾನ'ವನ್ನು(ಟೆಲಿಯಾಲಜಿ) ಹೊಂದಿರುವುದನ್ನು ನೀವು ಕಾಣಬಹುದು.

ಮೂಲದಲ್ಲಿ ಈ ಮೂಲಭೂತವಾದಗಳೆಲ್ಲವೂ ನಮ್ಮ ವಿಮೋಚನೆಯನ್ನು ಭವಿಷ್ಯದಲ್ಲೆಲ್ಲೋ ಇರಿಸಿ ನಮ್ಮ ವರ್ತಮಾನಗಳನ್ನು ಅದಕ್ಕಾಗಿ ತ್ಯಾಗ ಮಾಡಬೇಕೆಂದು ಒತ್ತಾಯಿಸುತ್ತವೆ. ಈ ಕಾಲಜ್ಞಾನ ವಿದ್ಯೆಯ ಊಹೆಗಳನ್ನೆಲ್ಲ ನಿರ್ಲಕ್ಷಿಸಿ ನಾವೀಗ ಎಲ್ಲಿದ್ದೇವೆಯೋ ಅದೇ ನಿಜ ಎಂದು ಹೇಳುವುದೇ ನನ್ನ ಪ್ರಯತ್ನ ಎಂಬುದು ನನ್ನ ಭಾವಿಸಿದ್ದೇನೆ. ನಾವು ವರ್ತಮಾನದಲ್ಲಿ ಬದುಕಬೇಕು. ಎಂದೆಂದೂ ನಿಜವಾಗಲಾರದ ಯಾವುದೋ ಭವಿಷ್ಯಕ್ಕಾಗಿ ನಾವು ಅಪರಾಧಗಳನ್ನು ಮಾಡಲಾಗದು, ಜನರನ್ನು ಕೊಲ್ಲಲಾಗದು, ಸುಲಿಗೆ ಮಾಡಲಾಗದು. ಬಡತನದ ಅಂಕಿ ಅಂಶಗಳಿಂದ ನಿರೂಪಿಸಲಾರದಷ್ಟು ಸಂಕೀರ್ಣವಾದದ್ದು ಮನುಷ್ಯನ ಜೀವನ. ಮನುಷ್ಯನ ಬಯಕೆಗಳು ದ್ವಂದ್ವಮಯವಾದಂತವು. ಸದಾ ಬದಲಾಗುತ್ತಿರುವಂತಹವು. ಸುಲಭವಾಗಿ ನೆರವೇರಲಾರದಂತಹವು. ನಮ್ಮಲ್ಲಿ ಈಗ ಕೆಲವರು ಮಾತ್ರ ಕಾಣಬಲ್ಲಂತಹ, ಆದರೆ ಮುಂದೆ ಅದನ್ನು ನೋಡಲು ಎಲ್ಲರೂ ಇಷ್ಟಪಡುವಂತಹ ತರ್ಕಸಮ್ಮತ ವ್ಯವಸ್ಥೆಯನ್ನು ನಾನು ಖಂಡಿಸುತ್ತೇನೆ. ಆಧುನಿಕ ಯುಗದ ಉದ್ದಕ್ಕೂ ಪ್ರಜಾಪೀಡಕರು ಇದನ್ನೇ ಹೇಳುತ್ತಾ ಬಂದಿದ್ದಾರೆ. ಅದು ಮಾವೋ ಇರಬಹುದು, ಸ್ಟಾಲಿನ್ ಅಥವಾ ಹಿಟ್ಲರ್ ಇರಬಹುದು. ಇನ್ನು ಹತ್ತೊಂಭತ್ತನೆಯ ಶತಮಾನದ ಉದ್ಧಾರಕರು ಎಂಬುದಾಗಿ ತಮ್ಮನ್ನು ಕರೆದುಕೊಳ್ಳುವ ಪುಡಿನಾಯಕರ ವಿಚಾರವನ್ನಂತೂ ಹೇಳುವುದೇ ಬೇಡ. ಇವರೆಲ್ಲರೂ ಇದನ್ನೇ ಹೇಳುತ್ತಾ ಬಂದಿದ್ದಾರೆ. ಇರಾಕ್ ಯುದ್ಧವು ಈ ರೀತಿಯ ಮಹಾದುರಂತ ಚಿಂತನೆಯ ಇತ್ತೀಚಿನ ಉದಾಹರಣೆ. ೨೦೧೫ರ ಈ ಕಾಲದಲ್ಲಿ ನಾವು ಈ ಬಗೆಯ ಕಾಲ್ಪನಿಕ ಹೇಳಿಕೆಗಳನ್ನು ನಂಬಲು ಸಾಧ್ಯವಿಲ್ಲ. ನಾವು ಅಂತರ್ಗತಗೊಳಿಸಿಕೊಂಡ ಈ ಬಗೆಯ ಕಲ್ಪನೆಗಳ ಬಗ್ಗೆ ನಾವು ಇನ್ನೂ ಹೆಚ್ಚು ಸಂದೇಹವಾದಿಗಳಾಗಬೇಕು.

(ಕನ್ನಡಕ್ಕೆ: ಎಂ. ರಾಜು ಮತ್ತು ಡಿಎಸ್ಸೆನ್)


**'ಹೊಸ ಮನುಷ್ಯ' ಪತ್ರಿಕೆಗೆ**
**ಐದನೇ ವರ್ಷಕ್ಕೆ ಕಾಲಿಡುತ್ತಿರುವ ಶುಭ ಸಂದರ್ಭದಲ್ಲಿ**
**ಹುಟ್ಟುಹಬ್ಬದ ಶುಭಾಶಯಗಳು**

**ಹುಲ್ಲುಕಡ್ಡಿ ನೀರ ಮೇಲೆ ಮುತ್ತು ರತ್ನ ನೀರ ತಳಗೆ**
**ಲೋಕದಲ್ಲಿನ ಜನ ಮೇಲೂ ಕೀಳೂ ಆಗಿರುವುದು**
**ಅವರು ಎಲ್ಲಿದ್ದಾರೆ ಎಂಬುದರಿಂದಲ್ಲ, ಏನಾಗಿದ್ದಾರೆಂಬುದರಿಂದ**
**-ರಮಣ ಮಹರ್ಷಿ**




-ಸಿ. ಪ್ರಶಾಂತ್
ದೀಪಾ
ಮತ್ತು ಕು. ಅನಘ
ಬೆಂಗಳೂರು

# ಗಾಂಧಿ ಮತ್ತು ಲೋಹಿಯಾರೆಂಬ ನಿರಂತರ ಆಶಾವಾದಿಗಳು

ಇಂಗ್ಲಿಷ್ ಮೂಲ: **ಎಸ್.ಆರ್.ನೆನೆ**
ಕನ್ನಡಕ್ಕೆ: **ಟಿ.ಎಲ್.ರೇಖಾಂಬ**

**ಲೋಹಿಯಾ ಅವರು ಭಾರತದ ಆತ್ಮ ಮತ್ತು ಭಾರತದ ಪ್ರಜಾತಂತ್ರದ ಭವಿಷ್ಯದ ದೃಷ್ಟಿಯಿಂದ ಅವರ ಉಪಸ್ಥಿತಿ ಅನಿವಾರ್ಯ ಅಗತ್ಯ ಎಂದು ಗಾಂಧಿ ತಿಳಿದಿದ್ದರು. ಅರ್ಥವಾಗುವ ಹಾಗೆಯೇ, ಭಾರತದ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಗೌರವಿಸುವಂತೆ ಮತ್ತು ಸಂರಕ್ಷಿಸಿಕೊಳ್ಳುವಂತೆ ಜನತೆಯ ಆತ್ಮಾಭಿಮಾನವನ್ನು ಪುನಶ್ಚೇತನಗೊಳಿಸುವುದು ಅವರ ಆಶಯವಾಗಿತ್ತು. ಬ್ರಿಟಿಷ್ ಆಳ್ವಿಕೆಯಡಿಯಲ್ಲಿ ತಮ್ಮ ಸ್ಥೈರ್ಯ, ಭರವಸೆ ಮತ್ತು ಆತ್ಮ ವಿಶ್ವಾಸಗಳನ್ನು ಕಳೆದುಕೊಂಡಿದ್ದ ಭಾರತದ ಜನತೆಯ ಮನೋಭೂಮಿಕೆಯನ್ನು ಬೆಳಗಬಲ್ಲಂತಹ ಭವಿಷ್ಯದ ನಾಯಕ ಲೋಹಿಯಾ ಎಂಬುದು ಗಾಂಧಿಯವರಿಗೆ ಚೆನ್ನಾಗಿ ಗೊತ್ತಿತ್ತು. ಬಹುಶಃ ಇಷ್ಟು ಹೊತ್ತಿಗೆ, ಗಾಂಧಿ, ತನ್ನ ನಂತರ ತನ್ನ ಸ್ಥಾನವನ್ನು ತುಂಬಬಲ್ಲ, ಪ್ರಜಾಪ್ರಭುತ್ವದ ಆತ್ಮಸಾಕ್ಷಿಯಾಗಬಲ್ಲ ಮತ್ತು ಪ್ರಜಾತಂತ್ರದ ಕಾವಲುಗಾರನಾಗಬಲ್ಲ ಶಕ್ತಿ ಡಾ.ಲೋಹಿಯಾರಿಗಿದೆ ಎಂದು ಗುರುತಿಸಿದ್ದರು....**



**ಗಾಂಧೀಜಿಯ ಕೊನೆಯ ದಿನಗಳಲ್ಲಿ ಅವರೊಂದಿಗೆ ಲೋಹಿಯಾ**

ಇಡೀ ಇಪ್ಪತ್ತನೇ ಶತಮಾನದ ರಾಜಕೀಯ, ಕೇವಲ ಒಬ್ಬ ವ್ಯಕ್ತಿಯ ಸಾಹಸ–ಪ್ರಯತ್ನಗಳ ಮೊತ್ತ: ಆ ಮಹಾನ್ ವ್ಯಕ್ತಿಯೇ ಮಹಾತ್ಮ ಗಾಂಧಿ. ಬ್ರಿಟಿಷರ ಆಳ್ವಿಕೆಯಿಂದ ಭಾರತವು ಸ್ವಾತಂತ್ರ್ಯವನ್ನು ಪಡೆಯಬೇಕಿದ್ದ ತುರ್ತಿನ ಸಂದರ್ಭದಲ್ಲಿ, ತಮ್ಮ ಬದುಕನ್ನು ಸಾರ್ವಜನಿಕ ಸೇವೆಗಳಿಗೆ ಮೀಸಲಿರಿಸಲು ಗಾಂಧಿಯವರಿಂದ ಪ್ರೇರಿತರಾದ ಸಾವಿರಾರು ಭಾರತೀಯರಲ್ಲಿ ಲೋಹಿಯಾ ಕೂಡ ಒಬ್ಬರು. ಡಾ. ಲೋಹಿಯಾ, ತಾವೇ ಹೇಳಿಕೊಂಡಂತೆ, ಇಬ್ಬರು ಮಹನೀಯರಿಂದ ಪ್ರೇರಿತರಾಗಿದ್ದರು; ಸಂಪೂರ್ಣವಾಗಿ ಗಾಂಧಿಯವರಿಂದ ಮತ್ತು ತಕ್ಕಮಟ್ಟಿಗೆ ನೆಹರೂ ಅವರಿಂದ.

ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ ಮುನ್ನಡೆಸುತ್ತಿದ್ದ ರಾಜಕೀಯ ಪಕ್ಷವನ್ನು ಸೇರಬಯಸಿದ್ದ ಡಾ.ಲೋಹಿಯಾರನ್ನು ಗಾಂಧಿಯವರಿಗೆ ಪರಿಚಯಿಸಿದ್ದು ಗಾಂಧಿಯವರ ಆಪ್ತರಾಗಿದ್ದ ಜಮ್ನಾಲಾಲ್ ಬಜಾಜ್ ಅವರು. ಡಾ.ಲೋಹಿಯಾ ಅವರು ಗಾಂಧೀ ರಾಜಕೀಯ ಸಿದ್ಧಾಂತಗಳ ಬಗ್ಗೆ ಹೆಚ್ಚಿನ ತಿಳುವಳಿಕೆಯುಳ್ಳವರಾಗಿದ್ದರು ಮತ್ತು 'ಉಪ್ಪಿನ ತೆರಿಗೆ ಮತ್ತು ಸತ್ಯಾಗ್ರಹ' ಎಂಬ ವಿಷಯದ ಮೇಲೆ ಸಂಶೋಧನಾ ಪ್ರಬಂಧವನ್ನು ಪ್ರಕಟಿಸಿದ್ದರು ಎಂಬುದನ್ನು ಮೊದಲೇ ಗಾಂಧಿಯವರಿಗೆ ತಿಳಿಸಲಾಗಿತ್ತು. ಹಾಗಾಗಿ ಡಾ. ಲೋಹಿಯಾ ಅವರು ಕಾಂಗ್ರೆಸ್‌ನ ಕಾರ್ಯಕಾರಿ ಸಮಿತಿಯ ಸದಸ್ಯತ್ವ ಪಡೆಯುವಲ್ಲಿ ಗಾಂಧಿ ಪ್ರಮುಖ ಪಾತ್ರ ವಹಿಸಿದರು. ೧೯೩೬ರಲ್ಲಿ ನೆಹರೂ, ಕಾಂಗ್ರೆಸ್‌ನ ಅಧ್ಯಕ್ಷರಾಗಿದ್ದರು. ಅವರು ಡಾ. ಲೋಹಿಯಾರನ್ನು ಕಾಂಗ್ರೆಸ್‌ನ ವಿದೇಶಾಂಗ ವ್ಯವಹಾರಗಳ ಕಾರ್ಯದರ್ಶಿಯನ್ನಾಗಿ ನೇಮಿಸಿದರು.

ಹೀಗೆ ನೇಮಕಗೊಂಡ ಸ್ವಲ್ಪ ಸಮಯದಲ್ಲೇ, ಪಕ್ಷಕ್ಕಿಂತ ಗಾಂಧಿ ಹೆಚ್ಚು ಪ್ರಭಾವಶಾಲಿ ಆಗಿದ್ದರು ಎಂಬುದನ್ನು ಲೋಹಿಯಾ ಕಂಡುಕೊಂಡರು. ಇದನ್ನರಿತ ಮೇಲೂ ಅನೇಕ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ವಿಚಾರಗಳ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ಕಾಲಕಾಲಕ್ಕೆ ಗಾಂಧಿಯವರೊಂದಿಗೆ ಧೈರ್ಯವಾಗಿ ಚರ್ಚಿಸಲು ಅವರು ಹಿಂಜರಿಯಲಿಲ್ಲ. ೧೯೩೪–೧೯೩೯ರ ನಡುವಿನ ಐದು ವರ್ಷಗಳ ಅವಧಿಯಲ್ಲಿ ಗಾಂಧಿಯವರಿಗೆ ಲೋಹಿಯಾರ ಬೌದ್ಧಿಕ ಪ್ರಾಮಾಣಿಕತೆ, ರಾಜಕೀಯ ದೃಷ್ಟಿಕೋನ ಮತ್ತು ತಮ್ಮ ನಾಯಕತ್ವದ ಬಗೆಗಿನ ನಿಷ್ಠೆಯನ್ನು ಪರೀಕ್ಷಿಸುವ ಅನೇಕ ಸಂದರ್ಭಗಳು ಎದುರಾಗಿದ್ದವು. ಲೋಹಿಯಾರ ತಾರುಣ್ಯ ಮತ್ತು ವ್ಯಕ್ತಿತ್ವದ ಸಮಗ್ರತೆ ಗಾಂಧಿಯವರ ಮೇಲೆ ಹೆಚ್ಚು ಪ್ರಭಾವವನ್ನು ಬೀರಿದ್ದವು. ಹಾಗೆಯೇ ಹಲವಾರು ಸಂದರ್ಭಗಳಲ್ಲಿ ಗಾಂಧಿ, ತಮ್ಮನ್ನು ತರಾಟೆಗೆ ತೆಗೆದುಕೊಳ್ಳುತ್ತಿದ್ದುದನ್ನು ಲೋಹಿಯಾ ನಗುಮುಖದಿಂದಲೇ ಸ್ವೀಕರಿಸುತ್ತಿದ್ದರು. ಒಂದಲ್ಲಾ ಒಂದು ದಿನ ತಮ್ಮ ಕನಸುಗಳನ್ನು ಸಾಕಾರಗೊಳಿಸುವರೆಂಬ ಆಸೆ ಹೊತ್ತು, ಎಲ್ಲ ಮಹಾಪುರುಷರೂ, ಭರವಸೆ ಮೂಡಿಸುವ ಯುವಜನರ ಮೇಲೆ ಹೆಚ್ಚಿನ ಪ್ರೀತಿಯುಳ್ಳವರಾಗಿರುತ್ತಾರಷ್ಟೆ. ಗಾಂಧಿ ಕೂಡ ಇದರಿಂದ ಹೊರತಾಗಿರಲಿಲ್ಲ. ನಿಧಾನವಾಗಿ ಲೋಹಿಯಾ ಗಾಂಧಿಯವರ ಗೌರವಕ್ಕೆ ಹೆಚ್ಚೆಚ್ಚು ಪಾತ್ರರಾಗುತ್ತಾ ಹೋದರು. ೧೯೩೬–೩೮ರ ಅವಧಿಯಲ್ಲಿ ಹೊಸದಾಗಿ ಸ್ಥಾಪನೆಯಾಗಿದ್ದ ಕಾಂಗ್ರೆಸ್ ಸೋಷಲಿಸ್ಟ್ ಪಾರ್ಟಿಯಿಂದ ಆರಂಭವಾದ ಪತ್ರಿಕೆಗೆ ಲೋಹಿಯಾ ಸಂಪಾದಕರಾದರು. ಆ ಪತ್ರಿಕೆಗೆ ಗಾಂಧಿ ನಿಯಮಿತವಾಗಿ ಬರೆಯುತ್ತಿದ್ದರು ಮತ್ತು ತಮ್ಮದೇ 'ಹರಿಜನ' ಪತ್ರಿಕೆಯಲ್ಲಿ ಲೋಹಿಯಾರ ಲೇಖನಗಳನ್ನೂ ಪ್ರಕಟಿಸುತ್ತಿದ್ದರು.

ಯುದ್ಧವಿರೋಧೀ ಭಾಷಣವನ್ನು ಮಾಡಿದ ಆರೋಪದ ಮೇಲೆ ಮೊದಲ ಬಾರಿಗೆ ಡಾ.ಲೋಹಿಯಾ ಸೆರೆಮನೆ ಸೇರಿದ ವಿಷಯ ತಿಳಿದ ಗಾಂಧಿ ಹೀಗೆ ಹೇಳಿದ್ದರು: "ಡಾ.ಲೋಹಿಯಾ ಸೆರೆಮನೆಯಲ್ಲಿರುವವರೆಗೂ ನಾನು ಸುಮ್ಮನೆ ಕುಳಿತಿರಲಾಗುವುದಿಲ್ಲ. ಅವರಿಗಿಂತ ಧೈರ್ಯಶಾಲಿ ಮತ್ತು ಸರಳ ವ್ಯಕ್ತಿಯನ್ನು ನಾನಿದುವರೆಗೂ ಕಂಡಿಲ್ಲ. ಹಿಂಸೆಯನ್ನು ಅವರು ಎಂದೂ ಪ್ರತಿಪಾದಿಸಿಲ್ಲ. ಅವರೇನು ಮಾಡಿದ್ದಾರೋ ಅದು ಅವರ ಗೌರವ ಮತ್ತು ಘನತೆಯನ್ನು ಹೆಚ್ಚಿಸಿದೆ". ಡಾ.ಲೋಹಿಯಾ ಅವರು ಮುಂಬೈನಲ್ಲಿ ಭೂಗತರಾಗಿದ್ದ ತಾಣದಿಂದ ಬಂಧಿತರಾದ ಸಂದರ್ಭದಲ್ಲಿ ಮತ್ತೊಮ್ಮೆ ಇದೇ ರೀತಿಯ ಗೌರವ ಕಾಳಜಿಗಳನ್ನು ವ್ಯಕ್ತಪಡಿಸಿದ್ದರು ಗಾಂಧಿ. ಲೋಹಿಯಾರನ್ನು ಎರಡು ವರ್ಷ(೧೯೪೪–೪೬) ಲಾಹೋರಿನ ಜೈಲಿನಲ್ಲಿಟ್ಟು ತೀವ್ರವಾಗಿ ಹಿಂಸಿಸಿದ್ದರು. ಗಾಂಧಿಯ ಒತ್ತಡಕ್ಕೆ ಮಣಿದ ಬ್ರಿಟಿಷ್ ಸರ್ಕಾರ ಲೋಹಿಯಾರನ್ನು ಲಾಹೋರಿನ ಸೆರೆಮನೆಯಿಂದ ಬಿಡುಗಡೆ ಮಾಡಿತು.

ಗಾಂಧೀ ಮತ್ತು ಲೋಹಿಯಾರ ಒಗ್ಗೂಡುವಿಕೆಯೆಂದರೆ; ಒಬ್ಬ ಗುರು ಮತ್ತವನ ನೆಚ್ಚಿನ ಶಿಷ್ಯ, ಸುದೀರ್ಘವಾದ, ನಿಗೂಢವಾದ ಸಂಬಂಧವೊಂದಕ್ಕೆ ಒಳಪಡುವ ಒಂದು ಸಾಹಸಗಾಥೆ. ಇಲ್ಲಿ ಶಿಷ್ಯನ ಬೌದ್ಧಿಕ ಪ್ರಾಮಾಣಿಕತೆ, ಲೋಕದೃಷ್ಟಿ ಮತ್ತು ಶೀಲಗಳ ಬಗ್ಗೆ ಗುರುವಿಗೆ ಅರಿವಿದ್ದೇ ತನ್ನ ಶಿಷ್ಯನನ್ನು ತಿದ್ದುತ್ತಿರುತ್ತಾನೆ, ವಿವೇಚನೆಯಿಲ್ಲದೆ ನಡೆದುಕೊಂಡಾಗ ಗದರಿಸುತ್ತಿರುತ್ತಾನೆ ಮತ್ತು ಸಣ್ಣ ಸಣ್ಣ ಹುಚ್ಚುತನಗಳನ್ನು ಆಗಾಗ್ಗೆ ಕ್ಷಮಿಸುತ್ತಿರುತ್ತಾನೆ. ಪರಸ್ಪರರಿಂದ ಪಡೆದುಕೊಳ್ಳಲು ಹಿಂಜರಿಯದೇ ಜೊತೆಜೊತೆಗೇ ಬೌದ್ಧಿಕವಾಗಿ ಮತ್ತು ಭಾವನಾತ್ಮಕವಾಗಿ ಉತ್ಕೃಷ್ಟಗೊಳ್ಳುತ್ತಾ ಸಾಗುತ್ತಾರೆ. ಗಾಂಧಿಯವರಿಗೆ ಅಂತಹ ಅನೇಕ ಶಿಷ್ಯಂದಿರಿದ್ದರು. ವಿನೋಬಾ ಭಾವೆ, ಮಹದೇವ ದೇಸಾಯಿ, ಜವಾಹರ್ ಲಾಲ್ ನೆಹರೂ, ಚಿತ್ತರಂಜನ್ ದಾಸ್, ವಲ್ಲಭಭಾಯಿ ಪಟೇಲ್ ಇವರುಗಳು ಅವರ ಹೆಸರಾಂತ ಶಿಷ್ಯರುಗಳಲ್ಲಿ ಕೆಲವರು. ಆದರೆ ಡಾ.ಲೋಹಿಯಾ ನಿಜವಾಗಿ ಗಾಂಧಿಯವರ ಹೃದಯವನ್ನು ಗೆದ್ದಿದ್ದರು ಎಂಬುದಕ್ಕೆ ಗಾಂಧಿಯವರು ಆಡಿರುವ "ಡಾ.ಲೋಹಿಯಾರ ಬೌದ್ಧಿಕ ಸಾಮರ್ಥ್ಯಕ್ಕಿಂತಲೂ ಹೆಚ್ಚಾಗಿ ಅವರ 'ಶೀಲ'ವನ್ನು–


ಅಂದರೆ ಅವರ ನಡತೆ ಮತ್ತು ದೃಢತೆಯನ್ನು–ತುಂಬಾ ಗೌರವಿಸುತ್ತೇನೆ" ಎಂಬ ಮಾತುಗಳೇ ಸಾಕ್ಷಿ. ಲೋಹಿಯಾ ಕೂಡ ತನ್ನಂತೆಯೇ ಒಬ್ಬ ನಿಷ್ಠಾವಂತ ಆದರ್ಶವಾದಿ ಹಾಗೂ ಅಪರೂಪದ ದಾರ್ಶನಿಕ ಮತ್ತು ಅವರಿಗೆ ಅಧಿಕಾರ ಮತ್ತು ಅದು ತಂದುಕೊಡುವ ಸುಖ–ಸೌಲಭ್ಯಗಳಲ್ಲಿ ಆಸಕ್ತಿ ಇರಲಿಲ್ಲ ಎಂಬುದು ಗಾಂಧಿಯವರಿಗೆ ಗೊತ್ತಿತ್ತು. ನೆಹರೂ ಸ್ವತಂತ್ರ ಭಾರತದ ಆಡಳಿತದ ಚುಕ್ಕಾಣಿ ಹಿಡಿಯಲು ಅದಾಗಲೇ ಸಿದ್ಧವಿದ್ದಾಗ, ಆಗಿನ್ನೂ ನಲವತ್ತರೊಳಗಿನ ಯುವಕನಾಗಿದ್ದ ಡಾ.ಲೋಹಿಯಾ, ಗಾಂಧಿಯವರ ಸಿದ್ಧಾಂತಗಳನ್ನು ಆಧುನೀಕರಿಸುವ ಮತ್ತು ಭಾರತದ ಜನರ ಆರ್ಥಿಕ ಮತ್ತು ಆಧ್ಯಾತ್ಮಿಕ ಕಾಳಜಿಗಳನ್ನು ಬದಲಾದ ಕಾಲಕ್ಕೆ ತಕ್ಕಂತೆ ರೂಪಿಸುವ ಕಾರ್ಯದಲ್ಲಿ ಮಗ್ನರಾಗಿದ್ದರು. ಅಲ್ಲದೇ ಚುರುಕು ಬುದ್ಧಿಯ ರಾಜಕಾರಣಿಯಾಗಿದ್ದ ಗಾಂಧಿಯವರು ಆಗಲೇ ಡಾ.ಲೋಹಿಯಾರನ್ನು ನೆಹರೂ ಅವರಿಗೆ ಸಮರ್ಥ ಪ್ರತಿಶಕ್ತಿಯಾಗಿಯೂ, ಭಾರತೀಯರನ್ನು ಮುನ್ನಡೆಸಬಹುದಾದ ಬದಲೀ ಶಕ್ತಿಯಾಗಿಯೂ ಪರಿಗಣಿಸಿದ್ದಿರಬಹುದು. ಗಾಂಧಿಯವರು ತಮ್ಮ ಎರಡನೇ ಉತ್ತರಾಧಿಕಾರಿಯಾಗಿ ಡಾ.ಲೋಹಿಯಾರನ್ನು ಹೆಸರಿಸಿದ್ದರೂ ಹೆಚ್ಚಿನವರು ಯಾರೂ ಆಶ್ಚರ್ಯಪಡುತ್ತಿರಲಿಲ್ಲ.

೧೯೪೬ರ ಮಧ್ಯದಿಂದೀಚೆಗೆ ಬೆಳವಣಿಗೆಯಾದ ಒಂದು ಹೃದಯಸ್ಪರ್ಶಿಯಾದ ಸಂದರ್ಭ, ಗಾಂಧಿ ಮತ್ತು ಡಾ.ಲೋಹಿಯಾರನ್ನು ಇನ್ನೂ ಹತ್ತಿರ ತಂದಿತು. ಭಾರತ ಇಬ್ಭಾಗವಾಗುವುದಾದರೆ ಮಾತ್ರ ಸ್ವಾತಂತ್ರ್ಯ ಎಂಬ ಬ್ರಿಟಿಷರ ಷರತ್ತಿಗೆ ನೆಹರೂ ಮತ್ತು ಪಟೇಲ್ ಇಬ್ಬರೂ ಒಪ್ಪಿಗೆಯನ್ನು ಸೂಚಿಸಿದ್ದರು ಎಂಬುದು ಎಲ್ಲರಿಗೂ ತಿಳಿದ ಸಂಗತಿಯೇ. ಗಾಂಧಿ, ಮತ್ತು ಕಾಂಗ್ರೆಸ್‌ನ ಇನ್ನಿತರ ಹಲವಾರು ಪ್ರಮುಖ ನಾಯಕರು ಮತ್ತು ಸಮಾಜವಾದಿ ಪಕ್ಷದ ಎಲ್ಲ ನಾಯಕರೂ ಸಂಪೂರ್ಣವಾಗಿ ಈ ವಿಭಜನೆಯ ಪ್ರಸ್ತಾಪವನ್ನು ವಿರೋಧಿಸಿದ್ದರು. ಆದರೂ ನೆಹರೂ ಮತ್ತು ಪಟೇಲ್, ಗಾಂಧಿ ಈ ವಿಭಜನೆಯನ್ನು ಒಪ್ಪಿಕೊಳ್ಳದೆ ಬೇರೆ ನಿಜವಾದ ದಾರಿ ಇಲ್ಲದಂತಹ ಪರಿಸ್ಥಿತಿಯನ್ನು ನಿರ್ಮಿಸಿದ್ದರು. ಇನ್ನು ಗಾಂಧಿಯ ಅವಶ್ಯಕತೆ ಹೆಚ್ಚಿಲ್ಲ ಮತ್ತು ಭಾರತದ ಸ್ವಾತಂತ್ರ್ಯಕ್ಕಾಗಿ ನಡೆದ ಚೌಕಾಶಿಯಲ್ಲಿ ಈ ವಿಭಜನೆಯನ್ನು ಒಪ್ಪುವ ಮೂಲಕ ತಮ್ಮ ಜೀವಮಾನದ ಮುಖ್ಯವಾದ ಕೆಲಸವನ್ನವರು ಮಾಡಿದರು ಎಂಬುದನ್ನು ಇದು ಸೂಚಿಸುತ್ತದೆಯೇ? ಸಿದ್ಧಾಂತದ ಎದುರು ಅನುಕೂಲಸಿಂಧುತ್ವವೇ ಗೆದ್ದು, ಸೋತವನು ತನ್ನ ಗಾಯವನ್ನು ತಾನೇ ವಾಸಿಮಾಡಿಕೊಳ್ಳಲೆಂದು ಬಿಟ್ಟು ಮುನ್ನಡೆಯುವಂಥ ಸಾರ್ವಕಾಲಿಕ ಸಂದಿಗ್ಧತೆಯೇ? ಭಾರತದ ಸ್ವಾತಂತ್ರ್ಯ ಮತ್ತು ವಿಭಜನೆಯ ದಿನಾಂಕವನ್ನು ಪ್ರಕಟಿಸಿದ ಕೂಡಲೇ ಹಿಂದೂ ಮುಸ್ಲಿಂ ಸಮುದಾಯಗಳ ನಡುವೆ ರಕ್ತಪಾತದ ಗಲಭೆಗಳು ಭುಗಿಲೆದ್ದವು. ಅದರಲ್ಲೂ ವಿಶೇಷವಾಗಿ ಪೂರ್ವ ಮತ್ತು ಪಶ್ಚಿಮ ಬಂಗಾಳ ಪ್ರಾಂತಗಳು, ಪಂಜಾಬ್ ಮತ್ತು ಭಾರತದ ಇತರ ಪ್ರಮುಖ ನಗರಗಳಲ್ಲಿ ನಡೆದ ಗಲಭೆಯು ತೀವ್ರ ಸ್ವರೂಪಪದ್ದಾಗಿತ್ತು.

'ರಾಷ್ಟ್ರ ವಿಭಜನೆಯ ಅಪರಾಧಿಗಳು' ಎಂಬ ತಮ್ಮ ಗಮನಾರ್ಹ ಪುಸ್ತಕದಲ್ಲಿ ಲೋಹಿಯಾ ತಾವು ೧೯೪೬ರ ಮಧ್ಯಭಾಗದವರೆಗೆ ಆರಾಧನಾ ಭಾವದಿಂದ ಕಂಡ ನೆಹರೂರನ್ನು ವಿಭಜನೆಯ ಮುಖ್ಯ ಅಪರಾಧಿ ಎಂದು ದೂಷಿಸಿದರು. ದೇಶ ವಿಭಜನೆಗೆ ನೆಹರೂ ಸಮ್ಮತಿಸಿದ ಸಂಗತಿ, ಮನಸ್ಸಿನಲ್ಲಿ ಕಹಿಯನ್ನುಳಿಸುವುದರೊಂದಿಗೆ ಲೋಹಿಯಾರನ್ನು ನೆಹರೂ ಅವರಿಂದ ತುಂಬಾ ದೂರಮಾಡಿಬಿಟ್ಟಿತು. ಇರಲಿ, ಈ ವಿಷಯಕ್ಕೆ ಆಮೇಲೆ ಮತ್ತೆ ಬರೋಣ.

೧೯೪೬ರ ಜೂನ್ ತಿಂಗಳಲ್ಲಿ ಡಾ. ಲೋಹಿಯಾ, ಗೋವಾದಲ್ಲಿ, ಪೋರ್ಚುಗೀಸರ ಗುಲಾಮಗಿರಿಯಿಂದ ವಿಮೋಚನೆಗೊಳ್ಳಲು ಸ್ವತಂತ್ರ ಜ್ಯೋತಿಯನ್ನು ಬೆಳಗಿದಾಗ, ನೆಹರೂ ಮತ್ತು ಪಟೇಲ್‌ರ ನಿಲುವಿಗೆ ವಿರುದ್ಧವಾಗಿ ಗಾಂಧಿ, ಲೋಹಿಯಾರಿಗೆ ಹೃತ್ಪೂರ್ವಕ ಬೆಂಬಲವನ್ನು ಸೂಚಿಸಿದ್ದರು. ಮುಂದಿನ ಸ್ವತಂತ್ರ ಭಾರತದ ಪ್ರಧಾನಿ ಮತ್ತು ಉಪಪ್ರಧಾನಿಯಾದ ಈ ಇಬ್ಬರು ಕಾಂಗ್ರೆಸ್ ಮುಂದಾಳುಗಳು ಒಳಗೊಂಡಿರುವುದರಿಂದ ಈ ವಿಷಯದ ಕುರಿತು ಹೆಚ್ಚು ವಿವರವಾಗಿ ತನಿಖೆ ಮಾಡಬೇಕು, ಹಾಗೆಯೇ ಮಹಾತ್ಮಾ ಗಾಂಧಿಯವರ ಬದುಕಿನ ಕೊನೆ ದಿನಗಳನ್ನು ಇಲ್ಲಿ ಸ್ಮರಿಸಿಕೊಳ್ಳಬೇಕು ಎಂದು ಸೂಚಿಸುತ್ತೇನೆ. ದೇಶ ವಿಭಜನೆಯ ದುರಂತಮಯ ನಿರ್ಧಾರದಿಂದಾಗಿ ಹತಾಶೆ, ದುಃಖ ಮತ್ತು ಶೋಕಾಚರಣೆಯ ಸಂಕಷ್ಟಗಳಿಗೊಳಗಾದ ಕಾಲಘಟ್ಟವದು. ಅಂತಹ ಸಂಕಷ್ಟದ ದಿನಗಳಲ್ಲಿ ಗಾಂಧಿ, ತಮ್ಮೆಲ್ಲ ಶಿಷ್ಯಂದಿರನ್ನು ಬಿಟ್ಟು ಡಾ.ಲೋಹಿಯಾರನ್ನು ತಮ್ಮ ಬಳಿ ಇರಲು ಆಯ್ಕೆ ಮಾಡಿಕೊಂಡಿದ್ದರು.

ಲಾಹೋರಿನ ಜೈಲಿನಲ್ಲಿ ಚಿತ್ರಹಿಂಸೆಗಳ ಶಿಕ್ಷೆಗೊಳಗಾಗಿ ಬಿಡುಗಡೆಗೊಂಡಿದ್ದ ಲೋಹಿಯಾ ತಮ್ಮ ಸ್ನೇಹಿತ ಜೂಲಿಯಸ್ ಮೆನೆಝಸ್‌ರನ್ನು ಕಾಣಲು ಮತ್ತು ಹಸಿರಿನಿಂದ ತುಂಬಿದ್ದ ಗೋವಾದಲ್ಲಿ ಸ್ವಲ್ಪ ಕಾಲ ವಿಶ್ರಾಂತಿ ಪಡೆಯಲು ಬಂದಿಳಿದಿದ್ದರು. ಹಾಗೆ ಅವರು ಅಲ್ಲಿಗೆ ಬಂದಿದ್ದ ಸುದ್ದಿ ಹೇಗೋ ಹರಡಿ ಅವರನ್ನು ಭೇಟಿ ಮಾಡಲು ತಂಡೋಪ ತಂಡವಾಗಿ ಜನರು ಬರ ತೊಡಗಿದರು. ಗೋವಾದ ಜನರು, ತಾವು ಹೇಗೆ ಪೋರ್ಚುಗೀಸರ ಸಾಮ್ರಾಜ್ಯ ಶಾಹಿ ಮತ್ತು ಮಧ್ಯಯುಗೀನ ಕ್ರೌರ್ಯಕ್ಕೆ ಒಳಪಟ್ಟಿದ್ದೇವೆ ಎಂಬುದನ್ನು ಮತ್ತು ಅದಕ್ಕಾಗಿಯೇ ಆಗ್ನೇಯ ಆಫ್ರಿಕಾದ ಮೊಜಾಂಬಿಕ್‌ನಿಂದ ಕರೆಸಿಕೊಂಡಿರುವ ವಿಶೇಷ ಪೋಲೀಸರನ್ನು ನೇಮಕ ಮಾಡಲಾಗಿದೆ ಎಂಬ ವಿಷಣ್ಣ ವರದಿಗಳನ್ನು ಲೋಹಿಯಾರಿಗೆ ಕೊಡತೊಡಗಿದರು. ನಾಗರಿಕ ಸ್ವಾತಂತ್ರ್ಯವಂತೂ ಅಲ್ಲಿ ಇರಲೇ ಇಲ್ಲ. ಪೋಲೀಸರ ಪೂರ್ವಾನುಮತಿಯಿಲ್ಲದೇ ಮದುವೆಯ ಕರೆಯೋಲೆಯನ್ನೂ ಸಹ ಮುದ್ರಿಸುವುದು ಸಾಧ್ಯವಿರಲಿಲ್ಲ. ಆ ಪರಿಸ್ಥಿತಿಯಲ್ಲಿ ಅವರು ಗೋವಾ ವಿಮೋಚನಾ ಚಳುವಳಿಯನ್ನು ಮುನ್ನಡೆಸಲು ಲೋಹಿಯಾರನ್ನು ಕೇಳಿಕೊಂಡರು. ಭೌಗೋಳಿಕವಾಗಿ ಭಾರತದಿಂದ ಬೇರ್ಪಡಿಸಲಾಗದಂತಹ ಗೋವಾ ಪ್ರಾಂತ್ಯದ ಸ್ವಾತಂತ್ರ್ಯ ಚಳುವಳಿಯನ್ನು ಪಕ್ಕಕ್ಕೆ ಸರಿಸಿ ಅಲಕ್ಷಿಸುವ ಮೂಲಕ ಕಾಂಗ್ರೆಸ್ ಪಕ್ಷ ದೊಡ್ಡ ಪ್ರಮಾದವೊಂದನ್ನು ಮಾಡಿದೆ ಎಂಬುದನ್ನು ಡಾ.ಲೋಹಿಯಾ ತಕ್ಷಣವೇ ಅರ್ಥ ಮಾಡಿಕೊಂಡರು. ೧೪೯೮ರಲ್ಲೇ, ಅಂದರೆ ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪೆನಿ ಭಾರತಕ್ಕೆ ಕಾಲಿಡುವ ಸುಮಾರು ೧೫೦ ವರ್ಷಗಳ ಹಿಂದೆಯೇ ಗೋವಾ ಗುಲಾಮಗಿರಿಗೊಳಪಟ್ಟಿತ್ತು. ಹಿಂದೂ ದೇವಾಲಯಗಳನ್ನು ಅಪವಿತ್ರಗೊಳಿಸುವಂತಹ, ಬಲಾತ್ಕಾರದ ಮತಾಂತರದಂತಹ, ಧಾರ್ಮಿಕ ನಂಬಿಕೆಗಳನ್ನು ಕೆದಕಿ ಕೊಲ್ಲುವಂತಹ, ಸಂಪೂರ್ಣವಾಗಿ ನಾಗರಿಕ ಸ್ವಾತಂತ್ರ್ಯವನ್ನು ಹತ್ತಿಕ್ಕುವಂತಹ ಪೋರ್ಚುಗೀಸರ ಅನೇಕ ದೌರ್ಜನ್ಯಗಳಿಂದ ಗೋವಾದ ಜನರು ಬಹಳವಾಗಿ ನೊಂದಿದ್ದರು. ಆದ್ದರಿಂದ ಭಾರತದ ಜನತೆಯಂತೆಯೇ, ಗೋವಾದ ಜನರೂ ಸ್ವಾತಂತ್ರ್ಯಕ್ಕೆ ಅರ್ಹರಾಗಿದ್ದರೆಂಬುದಕ್ಕೆ ಅನುಮಾನವೇ ಇಲ್ಲ ಮತ್ತು ಭಾರತದ ಸ್ವಾತಂತ್ರ್ಯ ದಿನಕ್ಕಿಂತ ಒಂದು ದಿನವೂ ತಡಮಾಡುವಂತಹದ್ದಾಗಿರಲಿಲ್ಲ. ಭಾರತದ ಜನರೆಲ್ಲರೂ ಸೇರಿ ಗೋವಾ ವಿಮೋಚನಾ ಚಳುವಳಿಗೆ ಸಹಕಾರ ನೀಡಲೇಬೇಕಾಗಿತ್ತು.



ಜೆಪಿ ದಂಪತಿ ಮತ್ತು ಯೂಸುಫ್ ಮೆಹ್ರೋಲಿಯವರ ಜೊತೆ ಡಾ.ಲೋಹಿಯಾ

ಗೋವಾ ಜನರ ಕರೆಯನ್ನು ಮನ್ನಿಸಿ ಡಾ.ಲೋಹಿಯಾ, ಪೋರ್ಚುಗೀಸ್ ಪ್ರಾಂತ್ಯದ ರಾಜಧಾನಿಯಾಗಿದ್ದ ಪಣಜಿಯಲ್ಲಿ ಸೇರಿದ್ದ ಸಭೆಯನ್ನುದ್ದೇಶಿಸಿ, ಜೂನ್ ೧೬ರಂದು ಮಾಡಿದ ಭಾಷಣ ಅದ್ಭುತ ಯಶಸ್ಸು ಗಳಿಸಿತು. ಸರ್ಕಾರದ ಪೂರ್ವಾನುಮತಿಯಿಲ್ಲದೇ ಯಾವುದೇ ಸಭೆ ಸಮಾರಂಭಗಳು ನಡೆಯುವಂತಿರಲಿಲ್ಲವಾದ ಕಾರಣ, ಈ ಸಭೆ ನಡೆದದ್ದನ್ನು ಕೇಳಿ ಪೋರ್ಚುಗೀಸ್ ಗವರ್ನರ್‌ಗೆ ಆಘಾತವಾಯಿತು. ಈ ಸಭೆಯ ಯಶಸ್ಸಿನಿಂದ ಉತ್ತೇಜಿತರಾದ ಗೋವಾದ ಜನರು ತಮ್ಮ ಸ್ವಾಭಿಮಾನವನ್ನು ಪುನಃ ಕಂಡುಕೊಂಡದ್ದಲ್ಲದೇ ತಮ್ಮ ಮೇಲೆ ಹೂಡಿದ್ದ ಸರ್ವಾಧಿಕಾರಶಾಹಿಯ ನೊಗವನ್ನು ಕಿತ್ತೊಗೆಯಲು ನಿರ್ಧರಿಸಿದರು. ಜೂನ್ 18ರಂದು ಮಡಗಾಂವ್‌ನಲ್ಲಿ ಮತ್ತೊಂದು ಸಭೆ ಏರ್ಪಾಡಾಗಿತ್ತು. ಇಡೀ ಪ್ರಾಂತ್ಯದ ಜನರು ಸಾವಿರಾರು ಸಂಖ್ಯೆಯಲ್ಲಿ ಮಡಗಾಂವ್‌ನತ್ತ ಚಲಿಸಿದರು. ಸಭೆಯನ್ನುದ್ದೇಶಿಸಿ ಮಾತನಾಡುವ ಮೊದಲೇ ಪೋಲೀಸರು ಲೋಹಿಯಾರನ್ನು ಬಂಧಿಸಿದರು ಮತ್ತು ಮರುದಿನವೇ ಗೋವಾದ ಗಡಿಯಲ್ಲಿ ಅವರನ್ನು ಬಿಡುಗಡೆ ಮಾಡಿದರು. ಮುಂದಿನ ಮೂರು ದಿನಗಳಲ್ಲಿ ಗೋವಾದೆಲ್ಲೆಡೆ ಬೃಹತ್ ಪ್ರತಿಭಟನಾ ಪ್ರದರ್ಶನಗಳು ನಡೆದವು. ಬಹಳಷ್ಟು ಜನರನ್ನು ಬಂಧಿಸಿದರು. ಜನಸಂದಣಿಯನ್ನು ಚದುರಿಸಲು ಪೋಲೀಸರು ಲಾಠೀಚಾರ್ಜ್ ಮಾಡಬೇಕಾಯಿತು. ಪೋಲೀಸರ ಈ ಸ್ವೇಚ್ಛಾಚಾರದ ಲಾಠೀಚಾರ್ಜನ್ನು ಪ್ರತಿಭಟಿಸಿ ಪಣಜಿ ಮತ್ತಿತರ ನಗರಗಳಲ್ಲಿ ಸಂಪೂರ್ಣ ಬಂದ್ ಆಚರಿಸಲಾಯಿತು.



ಗೋವಾ ಚಳುವಳಿಯಲ್ಲಿ ಲೋಹಿಯಾ

ಡಾ. ಲೋಹಿಯಾರ ಈ ಕಾರ್ಯವನ್ನು ಸಂಪೂರ್ಣವಾಗಿ ಅನುಮೋದಿಸಿದ್ದು ಗಾಂಧಿ ಮಾತ್ರ. ಅಲ್ಲದೇ ಜೂನ್ ೨೬ರಂದು ತಮ್ಮ 'ಹರಿಜನ'ದಲ್ಲಿ ಹೀಗೆ ಬರೆದರು: "ಗೋವಾ ಜನರ ನಾಗರಿಕ ಸ್ವಾತಂತ್ರ್ಯಕ್ಕಾಗಿ ಡಾ.ಲೋಹಿಯಾ ತಮ್ಮ ಸೇವೆಯನ್ನು ಸಲ್ಲಿಸಿದ್ದಾರೆ. ಕೇವಲ ಬ್ರಿಟಿಷ್ ಸರ್ಕಾರದ ಮೌನ ಸಮ್ಮತಿಯಿಂದಾಗಿ ಅಸ್ತಿತ್ವದಲ್ಲಿರುವ ಈ ಪುಟ್ಟ ಪೋರ್ಚುಗೀಸ್ ವಸಾಹತುವು ಬ್ರಿಟಿಷ್ ಸರ್ಕಾರದ ಕೆಟ್ಟ ನಡಾವಳಿಕೆಗಳನ್ನು ಅನುಕರಿಸಿ ನಿಭಾಯಿಸಿಕೊಂಡು ಹೋಗುವುದು ಸಾಧ್ಯವಿಲ್ಲ. ಬ್ರಿಟಿಷರೊಂದಿಗೆ ಇರಬಹುದಾದ ಯಾವುದೇ ಒಪ್ಪಂದದ ಮಾರ್ಗವನ್ನವಲಂಬಿಸದೇ ಪೋರ್ಚುಗೀಸ್ ಸರ್ಕಾರವು ಈ ಕಾಲಘಟ್ಟದ ಲಕ್ಷಣಗಳನ್ನು ಅರಿತು ಗೋವಾ ನಿವಾಸಿಗಳೊಂದಿಗೆ ಗೌರವಯುತವಾಗಿ ಚರ್ಚಿಸಬೇಕೆಂದು ಸಲಹೆ ನೀಡುತ್ತಿದ್ದೇನೆ. ಭಾರತದ ಜನತೆ, ಬಲಿಷ್ಠ ಬ್ರಿಟಿಷ್ ಪ್ರಭುತ್ವದ ಮೇಲಿನ ಭಯವನ್ನು ತೊರೆದಂತೆಯೇ ಗೋವಾ ನಿವಾಸಿಗಳೂ ಕೂಡ ಪೋರ್ಚುಗೀಸ್ ಪ್ರಭುತ್ವದ ಮೇಲಿನ ಭಯವನ್ನು ತೊರೆಯಬೇಕು".

ಭಾರತಕ್ಕೆ ಹಿಂತಿರುಗಿದ ನಂತರ ಲೋಹಿಯಾ, ಗೋವಾ ಸ್ವಾತಂತ್ರ್ಯ ಹೋರಾಟವನ್ನು ಬೆಂಬಲಿಸಿ ಬಿರುಸಿನ ಪ್ರಚಾರವನ್ನು ಕೈಗೊಂಡರು. ೧೯೪೬ರ ಜುಲೈ ೬ರಂದು ಎಐಸಿಸಿ ಸಭೆ ಸೇರಿತು. ಜುಲೈ ೧೦ರಂದು ನೆಹರೂ ಪತ್ರಿಕಾಗೋಷ್ಠಿಯನ್ನು ಕರೆದು ಹೇಳಿಕೆ ಕೊಟ್ಟರು: "ಕಾಂಗ್ರೆಸ್ ತನ್ನ ಗಮನವನ್ನೆಲ್ಲ ಭಾರತದ ಸ್ವಾತಂತ್ರ್ಯ ಹೋರಾಟದ ಮೇಲೆ ಕೇಂದ್ರೀಕರಿಸಿದ್ದರಿಂದ, ಸಣ್ಣ ಸಣ್ಣ ವಿಷಯಗಳ ಕಡೆಗೆ ಗಮನ ಕೊಡಲು ಸಮಯವಿರಲಿಲ್ಲ. ಭಾರತಕ್ಕೆ ಸ್ವಾತಂತ್ರ್ಯ ದೊರಕಿದ ಮೇಲೆ, ಅದು ತನ್ನ ಮುಖದ ಮೇಲಿನ ಈ 'ಸಣ್ಣ ಮೊಡವೆ'ಯೊಂದನ್ನು ಒಂದೇ ಬೆರಳಿನಿಂದ ಹೊಸಕಿಹಾಕಬಹುದು. ಗೋವಾದಲ್ಲಿ ಯಾವುದೇ ಚಳುವಳಿಯನ್ನು ಮಾಡುವ ಅಗತ್ಯವಿರಲಿಲ್ಲ. ಬ್ರಿಟಿಷರು ಭಾರತದಿಂದ ಕಾಲ್ತೆಗೆದರೆ, ಗೋವಾದ ಮೇಲಿನ ಪೋರ್ಚುಗೀಸ್ ಪ್ರಾಬಲ್ಯವು ತಾನಾಗಿಯೇ ಮಾಯವಾಗುತ್ತದೆ".

ನೆಹರೂ ಅವರ ನಿಲುವಿನಿಂದ ತೃಪ್ತರಾಗದ ಲೋಹಿಯಾ, ಗೋವಾ ಜನತೆಯನ್ನು ತುರ್ತಾಗಿ ಬೆಂಬಲಿಸಲೇಬೇಕಾದುದು ಅಗತ್ಯ ಎಂಬ ವಿಷಯವನ್ನೆತ್ತಿದರು. ಅದಕ್ಕೆ ಪೂರಕವಾಗಿ ಗೋವಾದ ಸ್ವಾತಂತ್ರ್ಯ ಹೋರಾಟಕ್ಕೆ ಗಾಂಧಿಯವರು ಕೊಟ್ಟ ಬೆಂಬಲದ ಕುರಿತು ಪ್ರಸ್ತಾಪಿಸಿದರು. ಹಾಗೆಯೇ ವಲ್ಲಭಭಾಯಿ ಪಟೇಲರ "ನನಗೂ ಗೋವಾ ಚಳುವಳಿಗೂ ಸಂಬಂಧವಿಲ್ಲ" ಎಂಬ ಹೇಳಿಕೆಗೆ ತಮ್ಮ ಅಸಮಾಧಾನವನ್ನು ಸೂಚಿಸಿದರು. ಗೋವಾ ಜನತೆಯ ಆಶೋತ್ತರಗಳನ್ನು ಗೌರವಿಸಬೇಕು ಮತ್ತು ಈಗಲಾದರೂ ಅವರ ರಕ್ಷಣೆಗೆ ಮುಂದಾಗಬೇಕು ಎಂಬುದನ್ನು ನೆಹರೂ ಮತ್ತು ಪಟೇಲರಿಗೆ ನೆನಪಿಸಿದರು.

ಪೋರ್ಚುಗೀಸ್ ಗೌರ್ನರ್ ಜನರಲ್, ಜೂನ್ ೨೬ರ ಗಾಂಧಿಯ ಹೇಳಿಕೆಗೆ ಪ್ರತಿಕ್ರಿಯಿಸುತ್ತಾ ಹೀಗೆ ಬರೆದರು: "ಗೋವಾದ ಆಂತರಿಕ ವ್ಯವಹಾರಗಳಲ್ಲಿ ಗಾಂಧಿ ಅನಗತ್ಯವಾಗಿ ಹಸ್ತಕ್ಷೇಪ ಮಾಡಿದ್ದಾರೆ. ಪೋರ್ಚುಗೀಸ್ ವಸಾಹತುಗಳಲ್ಲಿ ನಾಗರಿಕ ಹಕ್ಕುಗಳಿಗೆ ಯಾವುದೇ ಅಪಾಯವಿಲ್ಲ. ಕೆಲವು ಅತೃಪ್ತ ಜನರು ಗೋವಾದಲ್ಲಿ ಶಾಂತಿಭಂಗ ಮಾಡುತ್ತಿದ್ದಾರೆ. ಪೋರ್ಚುಗೀಸರು ಗೋವಾಕ್ಕೆ ಬಂದದ್ದೇ ಸಮಾನತೆ ಮತ್ತು ಭ್ರಾತೃತ್ವ ಎಂಬ ದೈವವಾಣಿಗಳನ್ನು ಪಸರಿಸುವ ಏಕೈಕ ಉದ್ದೇಶದಿಂದ."

ಅದಕ್ಕೆ ೧೯೪೬ರ ಆಗಸ್ಟ್ ೨ರ 'ಹರಿಜನ'ದಲ್ಲಿ ಗಾಂಧಿ ಹೀಗೆ ಉತ್ತರಿಸುತ್ತಾರೆ: "....ನಾನು ನೋಡಿರುವಂತೆ ಮತ್ತು ತಿಳಿದಿರುವಂತೆ ಗೋವಾದಲ್ಲಿನ ಪರಿಸ್ಥಿತಿ ಅಷ್ಟೇನೂ ಬೋಧನಾತ್ಮಕವಾಗಿಲ್ಲ. ಸಂಪೂರ್ಣವಾದ ನಾಗರಿಕ ಸ್ವಾತಂತ್ರ್ಯವಿದೆ ಮತ್ತು ಅಲ್ಲಿನ ದಂಗೆಯು ಕೆಲ ಅತೃಪ್ತರಿಗೆ ಮಾತ್ರ ಸೀಮಿತವಾದದ್ದು ಎಂಬ ನಿಮ್ಮ ಹೇಳಿಕೆಯನ್ನು ನಾನು ಪುರಸ್ಕರಿಸದೇ ಇರುವುದಕ್ಕೆ ಕ್ಷಮೆ ಇರಲಿ. ಆ ಭಾಗದ ಜನರಿಂದ ವೈಯಕ್ತಿಕವಾಗಿ ಮತ್ತು ಪತ್ರಿಕೆಗಳ ಮೂಲಕ ನನಗೆ ಸಿಕ್ಕಿರುವ ಮಾಹಿತಿಯು ನಿಮ್ಮ ಹೇಳಿಕೆಗೆ ವಿರುದ್ಧವಾದದ್ದನ್ನೇ ಖಚಿತಪಡಿಸುತ್ತದೆ. ಡಾ.ಲೋಹಿಯಾರ ರಾಜಕೀಯ ದೃಷ್ಟಿಕೋನಗಳು ನನ್ನದಕ್ಕಿಂತ ಭಿನ್ನವಾಗಿದ್ದರೂ ಅವರು ಗೋವಾಕ್ಕೆ ಹೋಗಿ ನೇರವಾಗಿ ಅದರ ಮುಖದ ಮೇಲಿನ ಕಪ್ಪುಚುಕ್ಕೆಯನ್ನು ಅಳಿಸುವ ಪ್ರಯತ್ನ ಮಾಡಿ ನನ್ನ ಅಪಾರವಾದ ಮೆಚ್ಚುಗೆಯನ್ನು ಗಳಿಸಿದ್ದಾರೆ.... ಯಾವುದೇ ಗುಂಪು ಅಥವಾ ಮನುಷ್ಯ, ನಾಗರಿಕ ಸ್ವಾತಂತ್ರ್ಯ ಮತ್ತು ಆತ್ಮಗೌರವವನ್ನು ಕಳೆದುಕೊಂಡು ಬದುಕಲು ಸಾಧ್ಯವಿಲ್ಲ. ಡಾ.ಲೋಹಿಯಾ ಈಗ ಅಂತಹ ಆತ್ಮಗೌರವದ ಜ್ಯೋತಿಯನ್ನು ಬೆಳಗಿಸಿದ್ದಾರೆ. ಗೋವಾದ ಜನತೆ ಅದನ್ನು ಆರಿಸಲು ಬಿಡುವುದಿಲ್ಲ. ನೀವು ಮತ್ತು ಗೋವಾ ನಿವಾಸಿಗಳಿಬ್ಬರೂ ಜ್ಯೋತಿಯನ್ನು ಬೆಳಗಿಸಿದ ಡಾಕ್ಟರ್‌ಗೆ ಕೃತಜ್ಞರಾಗಿರಬೇಕು. ಪರೋಪಕಾರ ಮತ್ತು ನಾಗರಿಕ ಸ್ವಾತಂತ್ರ್ಯಗಳ ಬಗೆಗಿನ ನಿಮ್ಮ ದೃಷ್ಟಿಕೋನವನ್ನು ಪುನರ್ವಿಮರ್ಶಿಸಿಕೊಳ್ಳುವಿರೆಂದು ಮತ್ತು ಆಫ್ರಿಕಾದ ಪೋಲೀಸರನ್ನು ಹಿಂದಕ್ಕೆ ಕಳುಹಿಸಿ, ಸ್ವ ಇಚ್ಛೆಯಿಂದ ನಾಗರಿಕ ಸ್ವಾತಂತ್ರ್ಯದ ಬಗೆಗೆನ ಬದ್ಧತೆಯನ್ನು ಘೋಷಿಸಿಕೊಂಡು, ಗೋವಾದ ಜನತೆ ತಮ್ಮ ಸರ್ಕಾರವನ್ನು ತಾವೇ ರಚಿಸಿಕೊಳ್ಳಲು ಅನುವು ಮಾಡಿಕೊಡುವಿರೆಂದು ಆಶಿಸುತ್ತೇನೆ. ಹಾಗೆಯೇ, ಹೊಸ ಸರ್ಕಾರ ರಚನೆಗೆ ಮತ್ತು ಅಲ್ಲಿನ ನಿವಾಸಿಗಳಿಗೆ ಸಹಾಯ ಮಾಡಲು ಅನುಭವಸ್ಥ ಭಾರತೀಯರನ್ನು ಆಹ್ವಾನಿಸುತ್ತೀರೆಂದು ಭಾವಿಸುತ್ತೇನೆ.".

ಸೆಪ್ಟೆಂಬರ್ ೨೮ರಂದು ಡಾ.ಲೋಹಿಯಾ, ಗಾಂಧಿಯವರನ್ನು ಭೇಟಿಯಾಗಿ ಗೋವಾದ ಸ್ವಾತಂತ್ರ್ಯ ಚಳುವಳಿಯ ಪ್ರಗತಿಯ ಬಗೆಗೆ ವಿವರ ಕೊಟ್ಟರು. ಆನಂತರ ಅವರು ಗೋವಾದ ಜನತೆಗೆ ಕೊಟ್ಟ ಭರವಸೆಯನ್ನು ಈಡೇರಿಸಲು ಅಲ್ಲಿಗೆ ಮತ್ತೆ ಹಿಂದಿರುಗುವ ನಿರ್ಧಾರವನ್ನು ಪ್ರಕಟಿಸಿದರು. ಅವರು ಕೋಲಂ ರೈಲ್ವೇ ಸ್ಟೇಷನ್‌ಗೆ ಬಂದಿಳಿಯುತ್ತಿದ್ದಂತೆ ಪೋರ್ಚುಗೀಸ್ ಪೋಲೀಸರು ಅವರನ್ನು ಬಂಧಿಸಿ, ರಹಸ್ಯವಾಗಿ ಅವರನ್ನು ಎಗ್ವಾಡ ಕೋಟೆಗೆ ಕರೆದೊಯ್ದರು. ಸೆಪ್ಟೆಂಬರ್ ೨೯ ರಿಂದ ಅಕ್ಟೋಬರ್ ೮, ೧೯೪೬ ರವರೆಗೆ ಅವರನ್ನು ಅಲ್ಲಿಯೇ ಇರಿಸಲಾಗಿತ್ತು. ನಾಗರಿಕ ದೇಶಗಳಲ್ಲಿ ರಾಜಕೀಯ ಕೈದಿಗಳಿಗೆ ನೀಡಬೇಕಿದ್ದ ಕನಿಷ್ಠ ಸೌಲಭ್ಯಗಳನ್ನೂ ಅವರಿಗೆ ನಿರಾಕರಿಸಿ ಚಿತ್ರಹಿಂಸೆ ಕೊಡಲಾಯಿತು. ಬದುಕುಳಿಯಲು ಬೇಕಾಗುವಷ್ಟು ಮಾತ್ರದ ಸಣ್ಣ ಕಿಂಡಿಯಿರುವ, ಕತ್ತಲೆಯ ಏಕಾಂತ ಸೆರೆಮನೆಯಲ್ಲಿ ಅವರನ್ನು ಕೂಡಿಹಾಕಿದ್ದರು. ನಂತರದಲ್ಲಿ ಅವರನ್ನು ಗೋವಾದ ಗಡಿಯಲ್ಲಿ ಬಿಡುಗಡೆ ಮಾಡಲಾಯಿತು. ಆ ಸಂದರ್ಭದಲ್ಲಿ ಅವರನ್ನು ಹಾಗೆ ಬಿಡುಗಡೆ ಮಾಡಿದ್ದು ಕೂಡ ಒಂದು ಪವಾಡವೇ. ಆಗ ದೆಹಲಿಯಲ್ಲಿ ನೆಹರೂ ನೇತೃತ್ವದ ಮಧ್ಯಂತರ ಸರ್ಕಾರವಿತ್ತು. ಡಾ.ಲೋಹಿಯಾರನ್ನು ಹೇಗಾದರೂ ಬಿಡುಗಡೆಗೊಳಿಸಬೇಕೆಂದು ಗಾಂಧಿ ನೆಹರೂರನ್ನು ಕೇಳಿಕೊಂಡರು. ಆದರೆ ಪೋರ್ಚುಗೀಸ್ ಸರ್ಕಾರದೊಂದಿಗೆ ಶಿಷ್ಟಾಚಾರದ ಒಪ್ಪಂದಗಳೇನೂ ಇಲ್ಲದ್ದರಿಂದಲೋ ಏನೋ ನೆಹರೂ ಈ ವಿಷಯದಲ್ಲಿ ಮಧ್ಯಸ್ಥಿಕೆ ವಹಿಸಲು ನಿರಾಕರಿಸಿದರು. ಆಗ ಗಾಂಧಿ ಘೋಷಿಸಿದರು: "ಡಾ.ಲೋಹಿಯಾ ಸಾಮಾನ್ಯ ವ್ಯಕ್ತಿಯಲ್ಲ. ಡಾ.ಲೋಹಿಯಾ ಮಾತ್ರವಲ್ಲ, ಭಾರತದ ಆತ್ಮವೇ ಸೆರೆಮನೆಯಲ್ಲಿದೆ". ಹಾಗೆಯೇ ಡಾ.ಲೋಹಿಯಾರ ಬಿಡುಗಡೆಗೆ ಪೋರ್ಚುಗೀಸ್ ಸರ್ಕಾರದ ಮೇಲೆ ಒತ್ತಡ ತರುವಂತೆ ಭಾರತದ ಆಗಿನ ವೈಸ್‌ರಾಯ್ ಲಾರ್ಡ್ ವೇವೆಲ್‌ಗೆ ಗಾಂಧಿ ಪತ್ರ ಬರೆದರು. ಗಾಂಧಿಯ ಈ ಪ್ರಯತ್ನಗಳ ಫಲವಾಗಿ ಡಾ.ಲೋಹಿಯಾರನ್ನು ೧೯೪೬ ರ ಅಕ್ಟೋಬರ್ ೯ ರಂದು ಬಿಡುಗಡೆ ಮಾಡಲಾಯಿತು. ಬಿಡುಗಡೆಯಾದ ತಕ್ಷಣವೇ ಡಾ.ಲೋಹಿಯಾ, ಗೋವಾ ಹೈಕೋರ್ಟ್‌ನ ಮುಖ್ಯ ನ್ಯಾಯಾಧೀಶರಿಗೆ ಪತ್ರ ಬರೆದರು: "ನಾನು ಗೋವಾದ ಯಾವ ಕಾನೂನನ್ನೂ ಉಲ್ಲಂಘಿಸಿಲ್ಲ. ಪೋಲೀಸರು ಯಾವುದೇ ಕಾರಣವನ್ನು ಕೊಡದೇ ನನ್ನನ್ನು ಬಂಧಿಸಿದರು. ಸರಿಯಾಗಿ ಗಾಳಿಯೂ ಆಡದಂತಹ ಕತ್ತಲ ಕೋಣೆಯೊಳಗೆ ನನ್ನನ್ನು ಅಕ್ರಮವಾಗಿ ಕೂಡಿಟ್ಟಿದ್ದರು. ಆದ್ದರಿಂದ ಅವರು ಕ್ಷಮೆ ಯಾಚಿಸಬೇಕು ಮತ್ತು ಅಕ್ರಮವಾಗಿ ಬಂಧಿಸಿಟ್ಟಿದ್ದರಿಂದಾದ ಹಾನಿಯನ್ನು ತುಂಬಿಕೊಡಬೇಕು."



ಗೋವಾ ಚಳುವಳಿಯಲ್ಲಿ ಕಾರ್ಯಕರ್ತರೊಂದಿಗೆ ಸಮಾಲೋಚನೆ

ಗಾಂಧಿ, ತಮ್ಮ 'ಹರಿಜನ' ಪತ್ರಿಕೆಯಲ್ಲಿ, 'ಮತ್ತೆ ಡಾ.ಲೋಹಿಯಾ' ಎಂಬ ಶೀರ್ಷಿಕೆಯಡಿ ಈ ಪತ್ರವನ್ನು ಪ್ರಕಟಿಸಿ, ಅಡಿಟಿಪ್ಪಣಿಯಲ್ಲಿ ಹೀಗೆ ಬರೆದರು: "ಡಾ. ಲೋಹಿಯಾರ ಕಲ್ಪನೆಯನ್ನು ನೋಡಿ ನನಗೆ ನಗು ಬರುತ್ತದೆ. ಅವರ ಹಿಂದೆ ಏನಾದರೂ ಪ್ರಭುತ್ವದ ಬಲವಿದ್ದಿದ್ದರೆ, ಬಹುಶಃ ಗೋವಾದ ಅಧಿಕಾರಿಗಳು ತಕ್ಷಣ ಕ್ಷಮೆ ಯಾಚಿಸಿ, ನಷ್ಟವನ್ನು ತುಂಬಿಕೊಡುವ ಭರವಸೆ ಕೊಡುತ್ತಿದ್ದರೇನೋ. ಅವಮಾನಿತನಾದ, ಗಾಯಗೊಂಡ ಯಾವುದೇ ಸಾಮಾನ್ಯ ವ್ಯಕ್ತಿಯಾದರೂ ಸರಿಯೇ, ಹೀಗೆ ಆದ ನಷ್ಟಗಳಿಗೆ ಕೇಳಿ ಪಡೆದುಕೊಳ್ಳುವುದು ಸಾಮಾನ್ಯವೇ. ಡಾ. ಲೋಹಿಯಾ ಸಾಮಾನ್ಯ ಮನುಷ್ಯರೇನಲ್ಲ. ಆಗಲಿ, ಭಾರತದಲ್ಲಿ ರಾಷ್ಟ್ರೀಯ ಸರ್ಕಾರವಿದೆ. ಖಂಡಿತವಾಗಿಯೂ ಅವರೂ ಕೂಡ ಎಲ್ಲರಂತೆಯೇ ಸೂಕ್ಷ್ಮ ಮನಸ್ಸಿನವರಾಗಿದ್ದಾರೆ. ಅವರು ಈಗಾಗಲೇ ತಮ್ಮ ಪ್ರತಿಭಟನೆಯನ್ನು ಸಲ್ಲಿಸಿ, ತನ್ನ ರೀತಿನೀತಿಗಳನ್ನು ತಿದ್ದಿಕೊಳ್ಳಲು ಪೋರ್ಚುಗೀಸ್ ಸರ್ಕಾರಕ್ಕೆ ಎಚ್ಚರಿಕೆ ನೀಡಿದ್ದರೆ ನಾನು ಆಶ್ಚರ್ಯ ಪಡಬೇಕಾಗಿಲ್ಲ. ಏನೇ ಆಗಲಿ, ರಾಷ್ಟ್ರೀಯ ಸರ್ಕಾರಕ್ಕೆ ಮತ್ತು ಘಾಸಿಗೊಳಗಾಗಿರುವ ಡಾ.ಲೋಹಿಯಾರಿಗೆ ಸಾರ್ವಜನಿಕ ಅಭಿಪ್ರಾಯದ ಬೆಂಬಲವಿರಲಿ."

೧೯೪೬ರ ಅಕ್ಟೋಬರ್ ಕೊನೆಯ ಹೊತ್ತಿಗೆ ಡಾ.ಲೋಹಿಯಾ, ಗೋವಾ ವಿಮೋಚನೆಗಾಗಿ ಸತ್ಯಾಗ್ರಹ ಹೂಡಲು ತಯಾರಿ ಮಾಡಿಕೊಳ್ಳುವುದಕ್ಕಾಗಿ ಬೆಳಗಾಂಗೆ ಬಂದು ಗಡಿ ಪ್ರದೇಶಗಳಲ್ಲಿ ಸಂಚಾರ ಮಾಡಿದರು. ಬಹಳಷ್ಟು ಸ್ವಯಂಸೇವಕರು ಸತ್ಯಾಗ್ರಹದಲ್ಲಿ ಪಾಲ್ಗೊಳ್ಳಲು ಮುಂದೆ ಬಂದರು. ಆದರೆ ೧೯೪೬ ರ ನವೆಂಬರ್ ಮೊದಲ ವಾರದಲ್ಲೇ ಡಾ.ಲೋಹಿಯಾ, ಗಾಂಧಿಯಿಂದ, 'ತಕ್ಷಣ ಬಂದು ಕಾಣಬೇಕೆಂಬ' ಟೆಲಿಗ್ರಾಂ ಸ್ವೀಕರಿಸಿದರು. ಈ ಮಧ್ಯೆ, ಅಂದರೆ ೧೯೪೬ ರ ನವೆಂಬರ್ ಕೊನೆಯ ಹೊತ್ತಿಗೆ, ಗಾಂಧಿ ನೌಖಾಲಿಯನ್ನು ತಲುಪಿದ್ದರು.

ಲೋಹಿಯಾ ಕೂಡ ೧೯೪೬ ರ ಕೊನೆಯ ಹೊತ್ತಿಗೆ ನೌಖಾಲಿಗೆ ಬಂದರು. ಅವರು ಮತ್ತೆ ಗೋವಾ ಪ್ರವೇಶಿಸದಂತೆ; ಅದರ ಬದಲಿಗೆ ನೆಹರೂ ತನ್ನ ರಾಜತಾಂತ್ರಿಕ ಪ್ರಯತ್ನಗಳಿಂದ ಈ ವಿಚಾರದಲ್ಲಿ ಮುಂದುವರಿಯಲು ಬಿಡುವಂತೆ ಗಾಂಧಿ, ಲೋಹಿಯಾರ ಮನವೊಲಿಸಿದರು. ಡಾ.ಲೋಹಿಯಾ ಮತ್ತೆ ಗೋವಾ ಪ್ರವೇಶಿಸಿದರೆ ಬಂಧನವಾಗುತ್ತಿದ್ದುದು ಖಚಿತವಿತ್ತು. ಏನೇ ಆಗಲಿ, ಅವರು ಅನಿರ್ದಿಷ್ಟವಾಗಿ ಪೋರ್ಚುಗೀಸ್ ಸೆರೆಮನೆಯಲ್ಲಿ ಕಾಲಕಳೆಯುವುದು ಗಾಂಧಿಗೆ ಇಷ್ಟವಿರಲಿಲ್ಲ. ಆ ಪರಿಸ್ಥಿತಿಯಲ್ಲಿ ಡಾ.ಲೋಹಿಯಾ ಮೌನವಾಗಿ ಇದೆಲ್ಲವನ್ನೂ ಒಪ್ಪಿಕೊಂಡರು. ಗಾಂಧಿಯ ಆಗ್ರಹದ ಮೇರೆಗೆ ಕಲ್ಕತ್ತಾದಲ್ಲಿ, ತದನಂತರ ದೆಹಲಿಯಲ್ಲಿನ ಅವರ ಶಾಂತಿ ಕಾಪಾಡುವ ಕೆಲಸಗಳಲ್ಲಿ ಸಹಕರಿಸುತ್ತಾ ಕೊನೆಯವರೆಗೂ ಅಂದರೆ ೧೯೪೮ರ ಜನವರಿ ೩೦ ರಂದು ಅವರ ಹತ್ಯೆಯಾಗುವವರೆಗೂ ಅವರೊಡನೆ ಉಳಿದರು.

ಇತ್ತಕಡೆ ಗೋವಾದಲ್ಲಿ ಬಹಳಷ್ಟು ಬೆಳವಣಿಗೆಗಳಾಗಿದ್ದವು. ಒಂದು ಮಾತನ್ನು ಹೇಳಿ ಈ ವಿಷಯವನ್ನು ಇಲ್ಲಿಗೆ ನಿಲ್ಲಿಸಬೇಕು. ಅದೆಂದರೆ ನೆಹರೂ ಮತ್ತು ಪಟೇಲ್ ಇಬ್ಬರೂ ಅಷ್ಟು ಹೊತ್ತಿಗೆ ಅನುಕೂಲಸಿಂಧು ರಾಜಕಾರಣವನ್ನು ಆಶ್ರಯಿಸಿದ್ದರು ಎಂಬುದು. ಪಟೇಲ್, ಗೋವಾದ ವಿಮೋಚನೆ ಭಾರತದ್ದಷ್ಟೇ ಮುಖ್ಯವೆಂದು ಒಪ್ಪಿಕೊಂಡರೂ ಆ ಚಳುವಳಿಯು ಕಾಂಗ್ರೆಸ್ ಮುಂದಾಳತ್ವದಲ್ಲಿ ನಡೆಯಬೇಕೇ ಹೊರತು ಲೋಹಿಯಾ ನಾಯಕತ್ವದಲ್ಲಿ ಅಲ್ಲ ಎಂಬ ನಿಲುವು ತಳೆದಿದ್ದರು. ಇತ್ತ ನೆಹರೂ, ಭಾರತ ಸರ್ಕಾರವು ಪೋರ್ಚುಗಲ್ ಮೇಲೆ, ಗೋವಾ ಬಿಟ್ಟು ಹೋಗಲು ಅಂತಾರಾಷ್ಟ್ರೀಯ ಒತ್ತಡವನ್ನು ತರಬಹುದು ಮತ್ತು ಹೇಗಾದರೂ ಫ್ರಾನ್ಸ್ ಮತ್ತು ಪೋಪ್ ಈ ಪರಿಸ್ಥಿತಿಯಲ್ಲಿ ನಮ್ಮನ್ನು ಬೆಂಬಲಿಸುತ್ತಾರೆ ಎಂಬ ನಿಲುವು ತಳೆದರು. ಭಾರತದ ವಿದೇಶಾಂಗ ವ್ಯವಹಾರಗಳ ಸಚಿವರಾಗಿದ್ದ ವಿ.ಕೆ.ಕೃಷ್ಣ ಮೆನನ್ ಅವರಿಗೆ ನೆಹರೂ ಪತ್ರವನ್ನೂ ಬರೆದರು. ಆದರೆ ಅವರು ನಿಜ ಜೀವನದಲ್ಲಿ ಏನನ್ನೂ ಮಾಡಲಿಲ್ಲ. ೧೯೬೧ ರ ಡಿಸೆಂಬರ್ ನಲ್ಲಿ ಸಾರ್ವತ್ರಿಕ ಚುನಾವಣೆ ನಡೆಯುವ ಹಿಂದಿನ ದಿನ ಸಾಯಂಕಾಲದವರೆಗೂ ಏನೆಂದರೆ ಏನೂ ಮಾಡಲಿಲ್ಲ. ಅಂತೂ ಕೊನೆಗೆ ಗೋವಾ ವಿಮೋಚನೆಗಾಗಿ ಮಿಲಿಟರಿ ಕಾರ್ಯಾಚರಣೆ ನಡೆಸುವ ನಿರ್ಧಾರ ತೆಗೆದುಕೊಂಡರು. ೧೯೬೧, ಡಿಸೆಂಬರ್ ೧೯ ರಂದು ಭಾರತೀಯ ಸಶಸ್ತ್ರ ಪಡೆಗೆ ಗೋವಾ ಪ್ರಭುತ್ವವು ಶರಣಾಯಿತು. ಅದರ ಮುಂದಿನ ವರ್ಷವೇ ಅಂದರೆ ಚೀನಾ ಆಕ್ರಮಣದಿಂದ ಘೋರವಾಗಿ ಆಘಾತಗೊಳ್ಳುವ ಸ್ವಲ್ಪ ಮೊದಲೇ ನೆಹರೂ ಅವರ ಈ ದ್ವಿಮುಖ ನೀತಿ ಬಯಲಾಗಿ ಅವರಿಗೆ ಬೇಸರವನ್ನು ತಂದಿತ್ತು. ಆನಂತರ ಆದ ಆಘಾತದಿಂದ ನೆಹರೂ, ೧೯೬೪ರಲ್ಲಿ ಸಾಯುವವರೆಗೂ ಚೇತರಿಸಿಕೊಳ್ಳಲೇ ಇಲ್ಲ.

ಪೋರ್ಚುಗೀಸ್ ಸೆರೆಮನೆಯಿಂದ ಪವಾಡವೆನಿಸುವ ಹಾಗೆ ಲೋಹಿಯಾರನ್ನು ಬಿಡುಗಡೆಗೊಳಿಸಲು ಗಾಂಧಿ ಶತಪ್ರಯತ್ನವನ್ನು ಏಕೆ ಮಾಡಿದರು? ೧೯೪೬ ರ ಅಕ್ಟೋಬರ್‌ನಲ್ಲಿ ಡಾ.ಲೋಹಿಯಾ ಮತ್ತೆ ಗೋವಾ ಪ್ರವೇಶಿಸುವುದನ್ನು ಏಕೆ ತಡೆದರು? ಉತ್ತರ ಸರಳ ಮತ್ತು ಸ್ಪಷ್ಟ. ಡಾ.ಲೋಹಿಯಾ ಅವರು ಭಾರತದ ಆತ್ಮ ಮತ್ತು ಭಾರತದ ಪ್ರಜಾತಂತ್ರದ ಭವಿಷ್ಯದ ದೃಷ್ಟಿಯಿಂದ ಅವರ ಉಪಸ್ಥಿತಿ ಅನಿವಾರ್ಯ ಅಗತ್ಯ ಎಂದು ಗಾಂಧಿ ತಿಳಿದಿದ್ದರು. ಅರ್ಥವಾಗುವ ಹಾಗೆಯೇ, ಭಾರತದ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಗೌರವಿಸುವಂತೆ ಮತ್ತು ಸಂರಕ್ಷಿಸಿಕೊಳ್ಳುವಂತೆ ಜನತೆಯು ಆತ್ಮಾಭಿಮಾನವನ್ನು ಪುನಶ್ಚೇತನಗೊಳಿಸುವುದು ಅವರ ಆಶಯವಾಗಿತ್ತು. ಬ್ರಿಟಿಷ್ ಆಳ್ವಿಕೆಯಡಿಯಲ್ಲಿ ತಮ್ಮ ಸ್ಥೈರ್ಯ, ಭರವಸೆ ಮತ್ತು ಆತ್ಮ ವಿಶ್ವಾಸಗಳನ್ನು ಕಳೆದುಕೊಂಡಿದ್ದ ಭಾರತದ ಜನತೆಯ ಮನೋಭೂಮಿಕೆಯನ್ನು ಬೆಳಗಬಲ್ಲಂತಹ ಭವಿಷ್ಯದ ನಾಯಕ ಲೋಹಿಯಾ ಎಂಬುದು ಗಾಂಧಿಯವರಿಗೆ ಚೆನ್ನಾಗಿ ಗೊತ್ತಿತ್ತು. ಬಹುಶಃ ಇಷ್ಟು ಹೊತ್ತಿಗೆ, ಗಾಂಧಿ, ತನ್ನ ನಂತರ ತನ್ನ ಸ್ಥಾನವನ್ನು ತುಂಬಬಲ್ಲ, ಪ್ರಜಾಪ್ರಭುತ್ವದ ಆತ್ಮಸಾಕ್ಷಿಯಾಗಬಲ್ಲ ಮತ್ತು ಪ್ರಜಾತಂತ್ರದ ಕಾವಲುಗಾರನಾಗಬಲ್ಲ ಶಕ್ತಿ ಡಾ.ಲೋಹಿಯಾರಿಗಿದೆ ಎಂದು ಗುರುತಿಸಿದ್ದರು.

ಆಗಲೇ ಹೇಳಿದಂತೆ, ೧೯೪೬ರ ನವೆಂಬರ್‌ನಿಂದ ಗಾಂಧಿ ಮತ್ತು ಲೋಹಿಯಾ ಒಟ್ಟಿಗಿದ್ದರು. ಕಲ್ಕತ್ತಾದಲ್ಲಿರುವಾಗ, ಮುಸ್ಲಿಮರ ಪ್ರದೇಶಗಳಿಗೆ ಹೋಗಿ, ದ್ವೇಷದಿಂದ ಒಳಗೊಳಗೇ ಕುದಿಯುತ್ತಿರುವ, ಹೆಚ್ಚಿನ ಹಾನಿಗೊಳಗಾಗಿ ಕುಗ್ಗಿಹೋಗಿರುವ ಸಮುದಾಯಗಳನ್ನು ಸಂತೈಸುವಂತೆ ಗಾಂಧಿ ಲೋಹಿಯಾರನ್ನು ಕೇಳಿಕೊಂಡರು. ಇಲ್ಲಿ, ತಾಂಡವವಾಡುತ್ತಿದ್ದ ಎಗ್ಗಿಲ್ಲದ ದ್ವೇಷ ಮತ್ತು ಸೇಡಿನ ಭಾವನೆಗಳನ್ನು ಹೇಗೆ ತಹಬಂದಿಗೆ ತರಬೇಕೆಂಬುದನ್ನು ಡಾ.ಲೋಹಿಯಾ, ಗಾಂಧಿಯೊಡನೆಯ ದಿನನಿತ್ಯದ ಮೇಲ್ವಿಚಾರಣೆಗಳಲ್ಲಿ ಕಲಿತರು. ಆಗಿದ್ದ ಕಷ್ಟಕರ ಪರಿಸ್ಥಿತಿಗಳಲ್ಲಿ ಮುಂದೇನು ಮಾಡಬೇಕೆಂಬುದರ ಬಗ್ಗೆ ಸರಿಯಾದ ನಿರ್ಧಾರ ಕೈಗೊಳ್ಳುವ ಶಕ್ತಿ ಮತ್ತು ಅಗತ್ಯ ಧೈರ್ಯ, ಎರಡೂ ಡಾ.ಲೋಹಿಯಾರಿಗಿತ್ತೆಂಬುದು ಗಾಂಧಿಯವರಿಗೆ ಗೊತ್ತಿತ್ತು. ದೆಹಲಿಯಲ್ಲಿ ತೀವ್ರ ಗಲಭೆಗಳು ಭುಗಿಲೆದ್ದಾಗ, ಗಾಂಧಿ, ತಮ್ಮ ಜೊತೆಯಲ್ಲೇ ಇದ್ದು ಶಾಂತಿ ಕೆಲಸಗಳಲ್ಲಿ ಸಹಕರಿಸಬೇಕೆಂದು ಡಾ.ಲೋಹಿಯಾರನ್ನು ಆಗ್ರಹಿಸಿದರು. ಆಗ ಪಂಜಾಬ್‌ನಿಂದ ಸಾವಿರಾರು ನಿರಾಶ್ರಿತರು ಬಂದಿದ್ದು, ಪರಿಸ್ಥಿತಿ ತುಂಬಾ ಹದಗೆಟ್ಟಿತ್ತು. ಡಾ.ಲೋಹಿಯಾ, ತಮ್ಮ ' ಮಹಾತ್ಮ ಗಾಂಧಿ ಕುರಿತ ಉಪಕಥೆಗಳು' ಎಂಬ ಅದ್ಭುತ ಲೇಖನದಲ್ಲಿ ಗಾಂಧಿ, ತಮಗೆ ದೆಹಲಿಯಲ್ಲಿ ಹತಾಶೆಯ ಸಂದರ್ಭದ ಕರ್ತವ್ಯವೇನೆಂಬುದರ ಸಮಗ್ರ ಅರ್ಥವನ್ನು ಕಲಿಸಿದ ಬಗೆಯನ್ನು ವಿವರಿಸಿದ್ದಾರೆ: ಪುಂಡರು, ದಂಗೆಕೋರರು ಮತ್ತು ಕಿಚ್ಚು ಹಚ್ಚುವವರ ವಿರುದ್ಧದ ನಾಗರಿಕ ಪ್ರತಿರೋಧ, ಅಗತ್ಯವಿರುವವರಿಗೆ ಸಕಾಲದಲ್ಲಿ ಸಹಾಯ, ಮತ್ತು ದಂಗೆಯಿಂದ ಜರ್ಝರಿತರಾದ ಸಮುದಾಯಗಳಿಗೆ ಭರವಸೆ.... ಇತ್ಯಾದಿ. ದೆಹಲಿಯಲ್ಲಿ ಡಾ.ಲೋಹಿಯಾರ ಶಾಂತಿ ಪ್ರಯತ್ನಗಳು ಸಾರ್ಥಕವಾಗದೇ ಇರಲಿಲ್ಲ. ಆಗಸ್ಟ್ ೧೫, ೧೯೪೭ ಭಾರತ ಸ್ವತಂತ್ರಗೊಂಡ ದಿನ, ದೆಹಲಿಯಲ್ಲಿ ಹಿಂದೂಗಳು ಮತ್ತು ಮುಸ್ಲಿಮರು ಪರಸ್ಪರ ಅಪ್ಪಿಕೊಂಡು ಸಂಭ್ರಮಿಸಿದರು. ಆ ಕ್ಷಣ, ಒಂದು ವರ್ಷದಿಂದ



ಲೂಯಿ ಫಿಶರ್‌ರ ನಿರೀಕ್ಷೆಯಲ್ಲಿ ಲೋಹಿಯಾ, ಮತ್ತಿತರ ಮಿತ್ರರು

ಸಂಚಯುವಾಗಿದ್ದ ಕಹಿ ಮತ್ತು ಮತಾಂಧತೆಯ ಭಾವನೆಗಳು ಮಾಯವಾಗಿದ್ದವು. ಡಾ.ಲೋಹಿಯಾ ಇಡೀ ರಾತ್ರಿ ಮೆರವಣಿಗೆಯನ್ನು ಏರ್ಪಡಿಸಿದ್ದು ಭಾರೀ ಯಶಸ್ಸು ಗಳಿಸಿತು. ಅದು ಹಿಂದೂ ಮುಸ್ಲಿಂ ಐಕ್ಯತೆಗೆ ಇದ್ದ ಅಡೆತಡೆಗಳನ್ನು ತೊಡೆದುಹಾಕಿತ್ತು. ಆದರೆ ಅದು ಹೆಚ್ಚು ಕಾಲ ಉಳಿಯಲಿಲ್ಲ. ಮತ್ತೆ ದೆಹಲಿಯಲ್ಲಿ ದಂಗೆಗಳು ಸ್ಫೋಟಿಸಿ, ಲೋಹಿಯಾ, ಗಾಂಧಿಯವರೊಂದಿಗೆ ಶಾಂತಿ ಕಾರ್ಯಾಚರಣೆಗಳಲ್ಲಿ ಸಹಕರಿಸುತ್ತಾ ಅಲ್ಲಿಯೇ ಇರಬೇಕಾಯ್ತು.

ಗಾಂಧಿಯವರು ಡಾ.ಲೋಹಿಯಾರ ಟೀ, ಕಾಫಿ ಕುಡಿಯುವ ಮತ್ತು ಸಿಗರೇಟ್ ಸೇದುವ ಚಟಗಳ ಸಹಿತ ಅವರ ಅವ್ಯವಸ್ಥಿತ ಅಲೆಮಾರಿ ಜೀವನ ಶೈಲಿಯನ್ನು ತಿದ್ದಲು ಪ್ರಯತ್ನಿಸಿದ್ದರೆಂಬುದಕ್ಕೆ ಸಾಕಷ್ಟು ಪುರಾವೆಗಳಿವೆ. ಸಹೋದ್ಯೋಗಿಗಳು ಮತ್ತು ತಮ್ಮ ಹಿತೈಷಿಗಳೊಡನೆಯ ಲೋಹಿಯಾ ಸಂಬಂಧಗಳಲ್ಲಿ ಬೆಚ್ಚನೆಯ ಸ್ನೇಹಶೀಲತೆ ಮತ್ತು ಸಹಾನುಭೂತಿಯನ್ನು ತುಂಬಲೆತ್ನಿಸಿದರು ಗಾಂಧಿ. 'ಇವರೊಂದಿಗೆ ಏಗುವುದು ಕಷ್ಟ' ಎನ್ನುವಂತಹ ವ್ಯಕ್ತಿತ್ವವಾಗಿದ್ದ ಡಾ.ಲೋಹಿಯಾರನ್ನು, ಒಪ್ಪುವಂತಹ ಮತ್ತು ಸ್ನೇಹಪರ ವ್ಯಕ್ತಿಯನ್ನಾಗಿ ಬದಲಾಯಿಸಲು ನೆಹರೂ ಕೂಡ ಪ್ರಯತ್ನಿಸಿದ್ದಂತೆ ಕಾಣುತ್ತದೆ. ಒಂದು ದಿನ ಗಾಂಧಿ, ಡಾ.ಲೋಹಿಯಾರಿಗೆ, ತಾವು ಕಠಿಣ, ಬಹು ನಿರೀಕ್ಷೆಗಳ, ನಿಗಾ ಇಟ್ಟಿರುವ; ಆದರೂ ಕರುಣೆ ಮತ್ತು ಸಹಾನುಭೂತಿಯಿಂದ ಸಲಹುವ ತಂದೆಯಾಗಬಯಸುವುದಾಗಿ ಹೇಳಿದರು. ಮತ್ತೊಂದು ಸಂದರ್ಭದಲ್ಲಿ, ಯಾವುದಕ್ಕೂ ಜಗ್ಗದ ಹಠಮಾರಿ ಧೋರಣೆಯನ್ನು ಕೈಬಿಟ್ಟು, ನೆಹರೂ ಮತ್ತು ಪಟೇಲರೊಂದಿಗೆ ವ್ಯವಹಾರ ಮಾಡುವಂತೆ ಲೋಹಿಯಾರ ಮನವೊಲಿಸಲು, ಸುಮಾರು 45 ನಿಮಿಷಗಳ ಕಾಲ ಗಾಂಧಿ ಪ್ರಯತ್ನ ಪಟ್ಟಿದ್ದರು. ಲೋಹಿಯಾರನ್ನು ಕುರಿತ ಗಾಂಧಿಯವರ ಕೆಲ ಆಗ್ರಹಗಳು ಅವರು ಸರ್ಕಾರವನ್ನು ಸೇರಿ ಮುಂದೆ ನಿಂತು ಭಾರತದ ಸಮಸ್ಯೆಗಳನ್ನು ಬಗೆಹರಿಸುವಂತೆ ಪ್ರೇರೇಪಿಸುವ ಪರೋಕ್ಷ ಉದ್ದೇಶಗಳನ್ನೇನಾದರೂ ಹೊಂದಿದ್ದವೆ? ಅದೇನೇ ಇರಲಿ, ಸರ್ಕಾರದೊಳಗಿನ ಯಾವ ಅಧಿಕಾರ ಸ್ಥಾನವೂ ಬೇಡವೆಂದು ನಿರಾಕರಿಸುವ ಲೋಹಿಯಾರ ಕಮ್ಯುನಿಸ್ಟ್ ಮಾದರಿ ಚಿಂತನೆಯು ಪ್ರಶ್ನಾರ್ಹವೇ ಹೌದು. ಬ್ರಿಟಿಷರ ವಿರುದ್ಧದ ಹೋರಾಟದ ಆಕ್ರಮಣಕಾರೀ ಶೈಲಿ ಮತ್ತು ಅದಕ್ಕೆ ವ್ಯತಿರಿಕ್ತವಾಗಿ ನಮ್ಮದೇ ಚುನಾಯಿತ ಸರ್ಕಾರದ ವಿರುದ್ಧದ ಹೋರಾಟ ವಿಧಾನಗಳ ನಡುವೆ ವ್ಯತ್ಯಾಸವಿರಬೇಕೆಂಬುದನ್ನು ಗಾಂಧಿ ಲೋಹಿಯಾಗೆ ರಾಜಕೀಯ ಶಿಸ್ತಿನ ಪಾಠವಾಗಿ ಹೇಳಿರುವ ಸಾಧ್ಯತೆಯೂ ಇದೆ.

ಗಾಂಧಿ ಭಾರತೀಯರ ಚಾರಿತ್ರ್ಯದ ಮೇಲೆ ಗಮನವಿಟ್ಟಿರುವ 'ಭಾರತದ ಕಾವಲುಗಾರ' ಎಂದು ಡಾ.ಲೋಹಿಯಾ ಪರಿಗಣಿಸಿದ್ದರಿಂದ, ಅವರ ಆಗ್ರಹಗಳೆಲ್ಲವನ್ನೂ ಅವರು ಸರಿಯಾದ ಅರ್ಥದಲ್ಲೇ ಸ್ವೀಕರಿಸಿದರು. ವಾಸ್ತವವಾಗಿ, ಪ್ರತಿ ದೇಶದಲ್ಲೂ ಒಬ್ಬ ಗಾಂಧಿಯಂಥ ನೈತಿಕ 'ಕಾವಲುಗಾರ' ಇರಬೇಕೆಂದು ಲೋಹಿಯಾ ಬಯಸಿದ್ದರು. ಜೀವನದ ರಹಸ್ಯಗಳನ್ನು ತಿಳಿದುಕೊಳ್ಳುವುದೇ ನಮ್ಮ ಬದುಕಿನ ಮುಖ್ಯ ಗುರಿಯಾಗಿದ್ದು, ಅದಕ್ಕೆ ಅಡೆ ತಡೆಗಳಾಗುವಂತಹ ದೋಷಗಳಿಂದ ಲೋಹಿಯಾ ಮುಕ್ತವಾಗಬೇಕೆಂಬುದು ಗಾಂಧಿಯವರ ಬಯಕೆಯಾಗಿತ್ತು. ಈ ನೀತಿ ಸಂಹಿತೆಯ ತಿಳುವಳಿಕೆ ಮತ್ತು ವ್ಯಕ್ತಿ ಚಾರಿತ್ರ್ಯ ಜೊತೆಯಾಗಿ ಹೋಗುತ್ತವೆಂದು ಲೋಹಿಯಾ ತಮ್ಮ 'ಮಹಾತ್ಮ ಗಾಂಧಿ ಕುರಿತ ಉಪಕಥೆಗಳು' ಎಂಬ ತಮ್ಮ ಲೇಖನದಲ್ಲಿ ಸಾಕ್ಷೀಕರಿಸುತ್ತಾರೆ.

ಗಾಂಧಿ, ಭವಿಷ್ಯದಲ್ಲಿ ಡಾ.ಲೋಹಿಯಾರಿಗಾಗಿ ಯಾವ ಪಾತ್ರವನ್ನು ಕಡೆದಿದ್ದರೋ ನಮಗೆ ಗೊತ್ತಿಲ್ಲ. ನಮಗೆ ಗೊತ್ತಿರುವುದೇನೆಂದರೆ, ಈ ದೇಶದ ಸೇವೆಯಲ್ಲಿ ಯಾವುದೋ ಸವಾಲಿನ ಪಾತ್ರವೊಂದನ್ನು ನಿರ್ವಹಿಸುವುದಕ್ಕಾಗಿ ಗಾಂಧಿ ಲೋಹಿಯಾರನ್ನು ಅಣಿಮಾಡುತ್ತಿದ್ದರು ಎಂಬುದು. ಆದರೆ, ವಿಧಿ ನಿಯಾಮಕವೇ ಬೇರೆಯಾಗಿದ್ದಿತು. ಲೋಹಿಯಾ ಅವರು ಯಾವ ಪಾತ್ರವನ್ನು ನಿರ್ವಹಿಸಬೇಕೆಂದು ಗಾಂಧಿ ಬಯಸಿದ್ದರೋ ಆ ಕೊನೆಯ ಬಯಕೆಯನ್ನು ಅವರು ಬಹಿರಂಗಪಡಿಸುವ ಮುನ್ನವೇ ಅವರು ಹತ್ಯೆಯಾಗಿ ಹೋದರು. ಇತಿಹಾಸದ ದೃಷ್ಟಿಯಿಂದ ಇದು ತುಂಬಾ ಮುಖ್ಯವಾದ ವಿಷಯ. ಏಕೆಂದರೆ, ಕಾಂಗ್ರೆಸ್ ಪಕ್ಷದ (ಆಗ ಆಡಳಿತ ಪಕ್ಷವೂ ಆಗಿದ್ದ) ಎಲ್ಲರೂ ಗಾಂಧಿಯ ಆಶಯಗಳನ್ನು ಗೌರವಿಸಲೇಬೇಕಿತ್ತು.

ಗಾಂಧಿಯ ಸಾವಿನಿಂದ ಡಾ.ಲೋಹಿಯಾ, ಒಬ್ಬ ತಂದೆಯನ್ನು ಕಳೆದುಕೊಂಡಂತಾಯಿತು. ಅವರು ಅನಾಥರಾದರು. ಅವರ ಬಗೆಗೆ ಕಾಳಜಿ ಮಾಡುವವರು ಯಾರೂ ಇರಲಿಲ್ಲ. ಅಲ್ಲಿಂದ ಮುಂದೆ, ಅವರು ಅಪ್ಪಟ ಅಲೆಮಾರಿಯಂತೆ ಬದುಕಿದರು. ಹಲವು ಮನೋಲಹರಿಗಳ ವ್ಯಕ್ತಿಯಾದರು. ಒಮ್ಮೆ ಹಠವಾರಿ ವಿದ್ವಾಂಸನಂತೆ, ಮತ್ತೊಮ್ಮೆ ಬಿರುಗಾಳಿಯಂತಹ ಸಮಾಜವಾದಿಯಂತೆ, ಮಗದೊಮ್ಮೆ ಕಟ್ಟನಿಟ್ಟಿನ ನೈತಿಕ ನಿಲುವಿನ ವ್ಯಕ್ತಿಯಂತೆ ಮತ್ತು ಮೂರ್ತಿಭಂಜಕನಂತೆ, ಕಲೆ, ಭಾಷೆ ಮತ್ತು ಸಾಹಿತ್ಯ ರಸಿಕನಂತೆ, ಮಹಿಳೆಯರ ಸೌಂದರ್ಯ ಮತ್ತು ಅವರ ಸಾಮಾಜಿಕ ಉನ್ನತಿಯ ಪ್ರಾಮುಖ್ಯತೆಯ ಅಭಿಮಾನಿಯಂತೆ,....... ಒಟ್ಟಿನಲ್ಲಿ ಅವರು ನಿಗೂಢ ವ್ಯಕ್ತಿಯಾದರು. ಅವರು ಯಾರಿಗೂ ಉತ್ತರದಾಯಿಯಾಗಿರದ, ಯಾವುದಕ್ಕೂ ಲಕ್ಷ್ಯಕೊಡದ ವ್ಯಕ್ತಿಯಾದರು. ಆದರೂ.... ಮುಂದಿನ ಅವರ ಬದುಕಿನ ಇಪ್ಪತ್ತು ವರ್ಷಗಳ ಬದುಕಿನಲ್ಲಿ ಸಾರತಃ ಒಂದು ಸದುದ್ದೇಶದ ಆದರ್ಶವಾದಿಯಾಗಿ, ಗಾಂಧಿಯಂತೆ, ನಿರಂತರ ಆಶಾವಾದಿಯಾಗಿ ಉಳಿದರು. ಈ ನಿರಂತರ ಆಶಾವಾದಿತ್ವವೇ ಅವರಿಬ್ಬರ ಅನೂಹ್ಯ ಸಂಬಂಧವನ್ನು ಬಲಗೊಳಿಸಿದ್ದೆಂದು ಕಾಣುತ್ತದೆ. ಅನಿರೀಕ್ಷಿತವಾಗಿ ಸಿಡಿಲೆರಗಿದಂತೆ ಆದ ಗಾಂಧಿ ಹತ್ಯೆಯಿಂದ ಡಾ.ಲೋಹಿಯಾ ಅನಾಥರಾದದ್ದರಿಂದ ಭಾರತದ ರಾಜಕೀಯ ಘಾಸಿಗೊಂಡಿತು.. ಬಹುಶಃ ಲೋಹಿಯಾ, ತನಗಾಗಿ ನಿಗದಿಪಡಿಸಿದ್ದ ಪಾತ್ರವನ್ನು ಗಾಂಧಿ ಬಹಿರಂಗಪಡಿಸುವರೆಂಬ ಭರವಸೆಯಿಂದ ಕಾಯುತ್ತಿದ್ದರೆಂದು ಕಾಣುತ್ತದೆ. ಗಾಂಧಿ ಹಾಗೆ ಬಯಸಿದ್ದೇ ಆಗಿದ್ದರೆ, ಅವರಿಗೆ ಮಾತ್ರ, ಹೆಚ್ಚು ಸೌಮ್ಯವಾದ ಲೋಹಿಯಾರನ್ನು ನೆಹರೂ ಜಾಗದಲ್ಲಿ ಅನುಸ್ಥಾಪಿಸಲು ಸಾಧ್ಯವಿತ್ತು.

ಆದರೆ ಲೋಹಿಯಾರ ಮಟ್ಟಿಗೆ ತಾವು ತನ್ನ ಹಿರಿಯಣ್ಣನೊಬ್ಬನ ಹಿತವಚನವಿಲ್ಲದೆ ತಾವು ಎಷ್ಟು ದುಃಖಿ ಮತ್ತು ಅಸಹಾಯಕರೆಂಬುದು ಅವರಿಗೆ ಮನದಟ್ಟಾಗಿತ್ತು. 1967ರಲ್ಲಿ ತಮ್ಮ ಸಾವಿನ ಕೆಲವು ವಾರಗಳ ಮುಂಚೆಯಷ್ಟೇ ಅವರು ಪ್ರೊ. ಸಮರ್ ಗುಹಾರಲ್ಲಿ ಕಳಕಳಿಯಿಂದ ಕೇಳಿಕೊಂಡಿದ್ದರು: 'ಸಮರ್‌ಬಾಬು, ನೀವು ಮೊದಲು ಹೋಗಿ ಜಯಪ್ರಕಾಶರನ್ನು ಕರೆತನ್ನಿ. ನಾನು ಒಡೆಯಬಲ್ಲೆ, ಆದರೆ ಬೀಳಿಸಲಾರೆ. ಸದ್ಯದ ಪ್ರಭುತ್ವವನ್ನು ಯಾರಾದರೂ ಬೀಳಿಸಬಲ್ಲವರಿದ್ದರೆ ಅವರು ಜೆಪಿ ಮಾತ್ರ. ದಯವಿಟ್ಟು ಹೋಗಿ ಜೆಪಿಯನ್ನು ಕರೆತನ್ನಿ'.

ಆತ್ಮೀಯ ಸ್ನೇಹಿತ ಮತ್ತು ಮಾಜಿ ಲೋಕಸಭಾ ಸದಸ್ಯರಾದ ಪ್ರೊಫೆಸರ್ ಸಮರ್ ಗುಹಾ ಅವರು, ಗಾಂಧಿ ಮತ್ತು ಡಾ.ಲೋಹಿಯಾರ ಐಕ್ಯತೆಯನ್ನು ಬಹು ಸುಂದರವಾಗಿ ಬಣ್ಣಿಸಿರುವುದು ಹೀಗೆ: "ಯುವಕ ಲೋಹಿಯಾರ ಮೇಲೆ ಮಹಾತ್ಮತೆಯ ಪ್ರಭಾವಳಿಯ ಮತ್ತು ಗಾಂಧಿಯವರ ಹೀರಿಕೊಳ್ಳುವಂತಹ ಪ್ರೀತಿಯ ಪರಿಣಾಮ ಎಷ್ಟು ದಟ್ಟವಾಗಿತ್ತೆಂದರೆ, ಲೋಹಿಯಾ ಯಾವ ಕಾಲಘಟ್ಟದಲ್ಲೂ ಆ ಮುದುಕನ ಭಾವನಾತ್ಮಕ ಸೆಳೆತದಿಂದ ಪಾರಾಗಲು ಸಾಧ್ಯವಾಗಲೇ ಇಲ್ಲ; ಲೋಹಿಯಾ ಹಲವು ಬಾರಿ ದಾರಿ ತಪ್ಪಿದ ಪಥಿಕನಂತೆ ಕಾಣುತ್ತಿದ್ದರಾದರೂ, ಅವರ ಮೇಲೆ ಗಾಂಧಿಯ ಕಾಣದ ಸಂಯಮಶೀಲತೆಯ ಪ್ರಭಾವ ಕೆಲಸ ಮಾಡುತ್ತಲೇ ಇರುತ್ತಿತ್ತು. ಈ ಅಶಾಂತ ವ್ಯಕ್ತಿಗೆ ಗಾಂಧಿ ಪರಮ ಗಂತವ್ಯವಾಗಿದ್ದರು

ಡಾ.ಲೋಹಿಯಾ ಆಧುನಿಕ ಗಾಂಧಿಯಾಗಲು ಬಯಸಿದ್ದರೇ...?

**(ಸಾರ್ವಜನಿಕ ಆರೋಗ್ಯ ಮತ್ತು ಕೃಷಿ ವಲಯಕ್ಕೆ ಸಂಬಂಧಿಸಿದಂತೆ ಉನ್ನತ ಸಂಶೋಧನೆಗಳನ್ನು ಕೈಗೊಂಡಿರುವ ಲೇಖಕ ಡಾ,ನೆನೆ ಅವರು ೧೯೫೦ರ ದಶಕದಲ್ಲೇ ಸಮಾಜವಾದಿ ಆಂದೋಲನದಿಂದ ಆಕರ್ಷಿತರಾಗಿ ರಾಷ್ಟ್ರೀಯ ಸೇವಾದಳದ ಸದಸ್ಯರಾದವರು. ಸಮಾಜವಾದ ಭಾರತೀಯ ಜ್ಞಾನ ಪರಂಪರೆಯನ್ನು ಅವಗಣಿಸಿದೆ ಎಂದು ಭಾವಿಸಿರುವ ನೆನೆಯವರು, ಲೋಹಿಯಾ ಮಾತ್ರ ಇದಕ್ಕೆ ಅಪವಾದವೆಂದು ಅಭಿಪ್ರಾಯಪಟ್ಟು ಅವರ ಚಿಂತನೆ ಕುರಿತಂತೆ ವಿಶೇಷ ಅಧ್ಯಯನ ಮಾಡಿದ್ದಾರೆ. ಈ ಲೇಖನ ಅವರ Remembering Lohia ಕೃತಿಯಿಂದ ಆಯ್ದ ಒಂದು ಅಧ್ಯಾಯ.)**

**'ಹೊಸ ಮನುಷ್ಯ' ಪತ್ರಿಕೆಗೆ**

**ಐದನೇ ವರ್ಷಕ್ಕೆ ಕಾಲಿಡುತ್ತಿರುವ ಶುಭ ಸಂದರ್ಭದಲ್ಲಿ**

**ಹುಟ್ಟುಹಬ್ಬದ ಶುಭಾಶಯಗಳು**



ನನ್ನ ತರುಣ ಮಿತ್ರರೇ ಶಕ್ತಿವಂತರಾಗಿ. ನಿಮಗೆ ನನ್ನ ಬುದ್ಧಿವಾದ ಇದೇ. ಸ್ವರ್ಗಕ್ಕೆ ಹತ್ತಿರವಾದ ಹಾದಿಯೆಂದರೆ ಗೀತೆಯ ಅಧ್ಯಯನಕ್ಕಿಂತ ಫುಟ್ಬಾಲ್ ಆಟ. ಇವು ಕೆಚ್ಚಿನ ಮಾತುಗಳು. ಆದರೆ ನಾನು ಅವನ್ನು ಆಡಲೇಬೇಕು. ಏಕೆಂದರೆ ನಿಮ್ಮನ್ನು ಕಂಡರೆ ನನಗೆ ತುಂಬಾ ಪ್ರೀತಿ. ಹೆಚ್ಚು ಬಲಿಷ್ಠವಾದ ನಿಮ್ಮ ತೋಳಿನ ಸ್ನಾಯುಗಳ ಮೂಲಕ ನಿಮ್ಮ ಮಾಂಸಖಂಡಗಳ ಮೂಲಕ ನೀವು ಗೀತೆಯನ್ನು ಹೆಚ್ಚು ಚೆನ್ನಾಗಿ ಅರ್ಥ ಮಾಡಿಕೊಳ್ಳಬಲ್ಲಿರಿ. ನಿಮ್ಮ ರಕ್ತ ಇನ್ನೂ ಸ್ವಲ್ಪ ಗಟ್ಟಿಯಾಗಿದ್ದರೆ ಕೃಷ್ಣನ ಮಹಾ ಪ್ರತಿಭೆಯನ್ನೂ ಮಹಾ ಶಕ್ತಿಯನ್ನೂ ನೀವು ಇನ್ನೂ ಚೆನ್ನಾಗಿ ಅರ್ಥಮಾಡಿಕೊಳ್ಳಬಲ್ಲಿರಿ. ನಿಮ್ಮ ದೇಹ ನಿಮ್ಮ ಕಾಲಿನ ಮೇಲೆ ನೆಟ್ಟಗೆ ನಿಂತಾಗ ನೀವು ಪುರುಷರು ಎಂಬ ಭಾವನೆ ಬಂದಾಗ ಉಪನಿಷತ್ತುಗಳೂ ಆತ್ಮದ ವೈಭವವೂ ಇನ್ನೂ ಚೆನ್ನಾಗಿ ನಿಮಗೆ ಅರ್ಥವಾಗುತ್ತವೆ.

**– ಸ್ವಾಮಿ ವಿವೇಕಾನಂದ**

**ಡಾ. ಬೆಸಗರಹಳ್ಳಿ ರಾಮಣ್ಣ ಪ್ರತಿಷ್ಠಾನ (ರಿ)**

**Dr. Besagarahally Ramanna Trust (R)**

# ಲೋಹಿಯಾ ಮತ್ತು ಅಂಬೇಡ್ಕರ್: ಒಂದು ತುಲನಾತ್ಮಕ ನೋಟ

–ಡಿ.ಎಸ್. ನಾಗಭೂಷಣ





ಲೋಹಿಯಾ, ಬಹುಶಃ ಅಂಬೇಡ್ಕರ್‌ರ ರಾಜ್ಯದವರಾದ ಕಾರಣ ಅವರ ಬಗ್ಗೆ ಹೆಚ್ಚಿನ ಸಹಾನುಭೂತಿ ಇದ್ದ ತಮ್ಮ ಶಿಷ್ಯ ಮಧುಲಿಮಯೆ ಅವರ ಕುತೂಹಲಕ್ಕಾಗಿಯೇನೋ ಅಂಬೇಡ್ಕರ್‌ರ ನಿಧನದ ಆರು ತಿಂಗಳುಗಳ ನಂತರ ತಮ್ಮ ಮತ್ತು ಅವರ ನಡುವಣ ಪತ್ರ ವ್ಯವಹಾರದ ದಾಖಲೆಗಳನ್ನು ಅವರಿಗೆ ಕಳಿಸುತ್ತಾ ಅವರಿಗೊಂದು ಪತ್ರ ಬರೆಯುತ್ತಾರೆ. ಅದರಲ್ಲಿ ಅವರು ಅಂಬೇಡ್ಕರ್ ಬಗೆಗೆ ಬರೆದಿರುವ ಮಾತುಗಳು ಅವರಿಬ್ಬರ ನಡುವೆ ಸಾಮಾನ್ಯ ಹಿತಾಸಕ್ತಿಗಳ ಜೊತೆಗೇ ಇದ್ದ ರಾಜಕೀಯ ವೈರುಧ್ಯಗಳ ಮೇಲೂ ಬೆಳಕು ಚೆಲ್ಲುವಂತಿವೆ. ಈ ಪತ್ರದಲ್ಲಿ ಲೋಹಿಯಾ ಅಂಬೇಡ್ಕರ್‌ರ ಅಕಾಲಿಕ ಸಾವು ತಮಗೆ ವೈಯಕ್ತಿಕ ವ್ಯಥೆಯನ್ನುಂಟು ಮಾಡಿದೆ ಅಂತ ಹೇಳ್ತಾ ಈ ಬಹುಮುಖ್ಯ ಮಾತುಗಳನ್ನಾಡ್ತಾರೆ: 'ಅಂಬೇಡ್ಕರ್ ಭಾರತದ ಬಹು ದೊಡ್ಡ ರಾಜಕೀಯ ನಾಯಕರಾಗಿದ್ದರು. ಬಹುಶಃ ಗಾಂಧೀಜಿಯೊಬ್ಬರ ಹೊರತಾಗಿ ಇನ್ನಾವ ಸವರ್ಣೀಯ ಹಿಂದೂ ನಾಯಕನಿಗಿಂತಲೂ ಅವರು ದೊಡ್ಡವರಾಗಿದ್ದರು. ಅವರು ಹಿಂದೂ ಧರ್ಮದಲ್ಲಿನ ಜಾತಿ ಪದ್ಧತಿಯನ್ನು ಒಂದಲ್ಲ ಒಂದು ದಿನ ನಾಶ ಮಾಡಬಹುದೆಂಬ ಆತ್ಮವಿಶ್ವಾಸದ ಪ್ರತೀಕವಾಗಿದ್ದು ಮತ್ತು ನಮ್ಮಂಥವರ ನೆಮ್ಮದಿಗೆ ಕಾರಣರಾಗಿದ್ದರು.' ಇದೇ ಪತ್ರದಲ್ಲಿ ಲೋಹಿಯಾ, ಅವರ ಕಹಿತನ ಮತ್ತು ಅನ್ಯರೊಂದಿಗೆ ಬೆರೆಯಲಿಚ್ಛಿಸದ ಗುಣಗಳ ಪ್ರಸ್ತಾವ ಮಾಡುತ್ತಾ 'ಅವರು ಜಾತಿ ಪರಿಧಿಯನ್ನು ದಾಟಿ ಹರಿಜನರ ಮಾತ್ರವಲ್ಲ, ಇಡೀ ಭಾರತದ ಜನತೆಯ ನಾಯಕರಾಗಲು ನಿರಾಕರಿಸಿದರು' ಅಂತ ವಿಷಾದದಿಂದ ಗಮನಿಸ್ತಾರೆ. ಅವರು ಅದೇ ವಿಷಾದದಲ್ಲಿ ಮುಂದುವರೆದು ಹೇಳ್ತಾರೆ: 'ಅವರ ಸಮುದಾಯದ ಐದು ಸಾವಿರ ವರ್ಷಗಳ ಕಾಲದ ನೋವು ಮತ್ತು ಅನ್ಯಾಯಗಳ ಚರಿತ್ರೆಯನ್ನು ನಾನು ಅರ್ಥಮಾಡಿಕೊಳ್ಳಬಲ್ಲೆ. ಆದರೆ ಅಂಬೇಡ್ಕರ್‌ರಂತಹ ದೊಡ್ಡ ನಾಯಕರು ಈ ಚರಿತ್ರೆಯ ಅಡ್ಡಗೋಡೆಯನ್ನು ದಾಟಿ ಹೊರಬರಬಲ್ಲರೆಂಬ ವಿಶ್ವಾಸವಿತ್ತು' ಎನ್ನುತ್ತಾರೆ. ಅದೇ ಉಸಿರಿನಲ್ಲಿ ಅಂಬೇಡ್ಕರ್ ಮಾದರಿಯ ರಾಜಕಾರಣವನ್ನು ಒಪ್ಪಿಕೊಳ್ಳದ ಲೋಹಿಯಾ, 'ಹರಿಜನ ಸಮುದಾಯ ಕಳೆದ ೪೦ ವರ್ಷಗಳ ಭಾರತದ ರಾಜಕೀಯ ಚರಿತ್ರೆಯನ್ನು ವಿವೇಚನೆಯಿಂದ ಗಮನಿಸುತ್ತಾ, ತನ್ನ ಕಹಿಯನ್ನು ಬಿಟ್ಟು ಮತ್ತು ಇಡೀ ದೇಶದ ನಾಯಕರಾಗಲು ತುಡಿಯುವಂತಹ ಕಲಿಕೆಯ ಶ್ರದ್ಧೆಯುಳ್ಳ ಅಂಬೇಡ್ಕರ್‌ರ ಮಾದರಿಯೊಂದನ್ನು ರೂಪಿಸಿಕೊಂಡು ಅನುಸರಿಸಬೇಕು' ಅಂತ ಹೇಳ್ತಾರೆ.

ಬಹುಶಃ ಆಧುನಿಕ ಭಾರತದ ಇತಿಹಾಸದಲ್ಲಿ ವಿವೇಕಾನಂದ ಮತ್ತು ಮಹಾತ್ಮ ಗಾಂಧಿಯವರನ್ನು ಬಿಟ್ಟರೆ ಅತ್ಯಂತ ಹೆಚ್ಚು ಸಾರ್ವಜನಿಕ ಪ್ರಭಾವವನ್ನು ಬೀರಿದವರಲ್ಲಿ ಅಂಬೇಡ್ಕರರವರೇ ಮೊದಲಿಗರು ಎಂದು ಕಾಣುತ್ತದೆ. ಲೋಹಿಯಾ, ಗಾಂಧಿ ಮತ್ತು ಅಂಬೇಡ್ಕರ್ ಒಂದು ರೀತಿಯ ತ್ರಿಕೋನ ಸಂಬಂಧವುಳ್ಳವರು. ಒಂದು ರೀತಿಯಲ್ಲಿ, ತ್ರಿಕೋನ ಪ್ರೇಮಕಥೆ ಅಂತ ಹೇಳ್ತೀವಲ್ಲ ಸಿನಿಮಾಗಳಲ್ಲಿ, ಆ ರೀತಿ ಒಂದು ತರಹದ ತ್ರಿಕೋನ ದುರಂತ ಪ್ರೇಮಕಥೆ ಇದು. ಈ ಮೊದಲೇ ಸೂಚಿಸಿದಂತೆ, ಲೋಹಿಯಾ ಅವರ ಬಗ್ಗೆ ಮಾತಾಡಬೇಕಾದರೆ ಗಾಂಧಿಯ ಪ್ರಸ್ತಾವವಿಲ್ಲದೇ ಮಾತಾಡೋದಕ್ಕೆ ಸಾಧ್ಯವೇ ಇಲ್ಲ. ಹಾಗೇನೇ ಅಂಬೇಡ್ಕರ್ ಬಗ್ಗೆ ಮಾತಾಡಬೇಕಾದರೂ ಗಾಂಧಿಯ ಪ್ರಸ್ತಾಪವಿಲ್ಲದೇ ಮಾತಾಡೋಕ್ಕೆ ಸಾಧ್ಯವೇ ಇಲ್ಲ.

ಲೋಹಿಯಾ ಮತ್ತು ಅಂಬೇಡ್ಕರ್ ನಡುವಣ ಒಂದು ತೌಲನಿಕ ವಿವೇಚನೆ ಮಾಡ್ಬೇಕಾದರೆ ಕೆಲವು ಆಧಾರ ಸಂಗತಿಗಳನ್ನು ನಾವು ಮೊದಲು ಗಮನಿಸಬೇಕಾಗ್ತದೆ. ಅವು ಇವರ ತೌಲನಿಕ ಅಧ್ಯಯನಕ್ಕೆ ಒಂದು ಪರಿಪ್ರೇಕ್ಷ್ಯವನ್ನು ಒದಗಿಸುವಂತಹ ಕೆಲವು ಸಂಗತಿಗಳನ್ನು ಒಳಗೊಂಡಿವೆ. ಮೊದಲನೆಯದಾಗಿ ಅಂಬೇಡ್ಕರ್ ಮತ್ತು ಲೋಹಿಯಾ ನಡುವೆ ಸುಮಾರು ೨೦ ವರ್ಷಗಳ ವಯಸ್ಸಿನ ಅಂತರ ಇದೆ ಅನ್ನೋದನ್ನ ಗಮನಿಸಬೇಕು. ಆ ಥರ ನೋಡಿದ್ರೆ ಅವರಿಬ್ಬರೂ ವಿಭಿನ್ನ ತಲೆಮಾರುಗಳಿಗೆ ಸೇರಿದವರು. ಇನ್ನೊಂದು ಮಾತು ಅಂತಂದ್ರೆ ಅಂಬೇಡ್ಕರ್ ಬ್ರಿಟಿಷ್ ಸೈನ್ಯಕ್ಕೆ ಸೇರಿದ ಸುಬೇದಾರ್‌ರ ಮಗ. ಆ ಕಾರಣದಿಂದಾಗಿ ಬ್ರಿಟಿಷ್ ಪ್ರಭುತ್ವದ ಬಗ್ಗೆ ಅವರ ಕುಟುಂಬಕ್ಕೆ ಒಂದು ಅಭಿಮಾನ, ಕೃತಜ್ಞತೆ ಇತ್ತು. ಅದಕ್ಕೆ ತದ್ವಿರುದ್ಧವಾಗಿ ಲೋಹಿಯಾ, ಗಾಂಧಿಯವರ ಖಾದಿ ಮತ್ತು ಗ್ರಾಮೋದ್ಯೋಗ ಚಳುವಳಿಯ ಸಕ್ರಿಯ ಸದಸ್ಯನಾಗಿ ಭಾಗವಹಿಸಿದ್ದಂತಹ ಹೀರಾಲಾಲರ ಮಗ. ಹೀಗೆ ಇಬ್ಬರೂ ಕೌಟುಂಬಿಕ ಹಿನ್ನೆಲೆಗಳಲ್ಲಿ ತದ್ವಿರುದ್ಧ ಧ್ರುವಗಳಿಗೆ ಸೇರಿದವರು. ಇವರಿಬ್ಬರ ನಡುವಣ ಇನ್ನೂ ಒಂದು ಸಾದೃಶ್ಯ ಏನೂಂತಂದ್ರೆ ಅಂಬೇಡ್ಕರ್ ಮುಂಬೈಯಂತಹ ಬೃಹತ್ ನಗರದ ಒಂದು ಸರ್ಕಾರೀ ಚಾಳ್‌ನಲ್ಲಿ ಬೆಳೆದವರು. ಲೋಹಿಯಾ ಅವರು ಅಯೋಧ್ಯೆಯ ಬಳಿಯ ಒಂದು ಸಣ್ಣ ಕುಗ್ರಾಮ, ಅಕ್ಬರ್‌ಪುರ ಅಂತ, ಅಲ್ಲಿ ಹುಟ್ಟಿ ಬಾಲ್ಯವನ್ನು ಕಳೆದವರು. ಅಂದರೆ, ಅಂಬೇಡ್ಕರ್ ನಗರದ ಹಿನ್ನೆಲೆಯಿಂದ ಬಂದಂತಹವರು, ಲೋಹಿಯಾ ಗ್ರಾಮೀಣ ಹಿನ್ನೆಲೆಯಿಂದ ಬಂದವರು. ಜೊತೆಗೆ ಲೋಹಿಯಾ ಅವರು ಅಯೋಧ್ಯಾ ಬಳಿ ಇದ್ದದ್ದರಿಂದ ಅವರು ರಾಮ ಕಥೆಗಳನ್ನ ಕೇಳಿಕೊಂಡೇ ಬೆಳೆದಂತಹವರು. ಅಂಬೇಡ್ಕರ್ ಅವರ ಕುಟುಂಬ ಕಬೀರ್‌ಪಂಥಿ ಅಂತ ಹೇಳ್ತಾರೆ. ಕಬೀರ್ ರಾಮನ ಆರಾಧಕನೇ ಆದ್ರೂ ಅವನು ರಾಮನನ್ನ ನೋಡಿರೋ ರೀತಿನೇ ಬೇರೆಯಾಗಿರೋದ್ರಿಂದ ಬಾಲಕ ಅಂಬೇಡ್ಕರ್ ಮನಸ್ಸಿನಲ್ಲಿ ಕೂತದ್ದು ಸ್ವಲ್ಪ 'ಆಧುನಿಕ' ಎಂದು ಕರೆಯಬಹುದಾದ–ಇಂದಿನ 'ಸೆಕ್ಯುಲರ್' ಅರ್ಥಕ್ಕೆ ಸಮೀಪವಾದ–ರಾಮನದ್ದು. ಲೋಹಿಯಾರದ್ದು ಹೆಚ್ಚು ಭಕ್ತಿ ಪಂಥದ, ಸ್ವಲ್ಪ 'ರಮ್ಯ' ಶೈಲಿಯ ಕಥನದಲ್ಲಿ ಸೃಷ್ಟಿಯಾದ ರಾಮ.

ಇವರಿಬ್ಬರ ನಡುವಣ ತೌಲನಿಕತೆಯ ಸಂದರ್ಭದಲ್ಲಿ ಗಮನಿಸಬಹುದಾದ ಇನ್ನೂ ಒಂದು ಸಂಗತಿ ಏನೂಂತಂದ್ರೆ, ಅಂಬೇಡ್ಕರ್‌ರವರು ಮಹಾರಾಜರೊಬ್ಬರ(ಬರೋಡಾದ ಸಯ್ಯಾಜಿರಾವ್ ಗಾಯಕ್‌ವಾಡ್) ಅನುಗ್ರಹದಿಂದ ಉನ್ನತ ಶಿಕ್ಷಣವನ್ನು ಪಡೆದವರು. ಅಮೇರಿಕಾಗೆ ಹೋದವರು. ಅಮೆರಿಕಾದ ಕೊಲಂಬಿಯಾ ಯೂನಿವರ್ಸಿಟಿಯಲ್ಲಿ ವಿದ್ಯಾಭ್ಯಾಸ ಮಾಡಿದವರು. ಸಂಸದೀಯ ಪ್ರಜಾಪ್ರಭುತ್ವವೇ ಶ್ರೇಷ್ಠ ಮತ್ತು ಪ್ರಭುತ್ವಕ್ಕೆ ಪ್ರಜೆಗಳು ಯಾವಾಗಲೂ ನಿಷ್ಠರಾಗಿ ಬಾಳಿದರೆ ಮಾತ್ರ ಅವರ ಕಲ್ಯಾಣ ಸಾಧ್ಯ ಅಂತ ನಂಬಿದಂತಹ ಒಂದು ಲಿಬರಲ್ ಸಂಪ್ರದಾಯದ ಅನುಯಾಯಿಯಾಗಿ ಅಂಬೇಡ್ಕರ್ ಬೆಳೆದರು. ಆದರೆ ಲೋಹಿಯಾ, ಅವರು ಬಡ ಮಾರ್ವಾಡಿ ಮಕ್ಕಳ ಕಲ್ಯಾಣನಿಧಿಯ ಅನುಗ್ರಹದಿಂದ ಅವರು ಉನ್ನತ ಶಿಕ್ಷಣಕ್ಕೋಸ್ಕರ ಇಂಗ್ಲೆಂಡ್‌ಗೆ ಹೋಗಿ ನಂತರ ಜರ್ಮನಿಗೆ ಹೋದವರು. ಜರ್ಮನಿ ಆವಾಗ ಹ್ಯಾಗಿತ್ತು ಅಂತಂದ್ರೆ, ೧೯೩೦ರ ದಶಕದಲ್ಲಿ, ಎರಡನೇ ಮಹಾಯುದ್ಧದ ಪೂರ್ವರಂಗದ ಕುದಿಬಿಂದು ಅದು. ಅಲ್ಲಿ ಬಂಡವಾಳವಾದ, ಮಾರ್ಕ್ಸ್‌ವಾದ, ಸಾಮಾಜಿಕ ಪ್ರಜಾಪ್ರಭುತ್ವ (ಸೋಶಿಯಲ್ ಡೆಮಾಕ್ರಸಿ) ಸೇರಿದಂತೆ ವಿವಿಧ ಆವೃತ್ತಿಗಳ ಸಮಾಜವಾದಗಳು, ಅಂದ್ರೆ ಇವತ್ತು ನಾವೇನು ಮಾತಾಡ್ತೀವಲ್ಲ ರಾಜಕೀಯಶಾಸ್ತ್ರದ ಬೇರೆ ಬೇರೆ ಶಾಖೆಗಳು ಅಥವಾ ಬೇರೆ ಬೇರೆ ಫಿಲಾಸಫಿಗಳು, ಅವೆಲ್ಲವೂ ಮುಖಾಮುಖಿಯಾಗ್ತಿದ್ದಂತಹ ಒಂದು ಕುದಿಬಿಂದು. ಅಲ್ಲಿ ಲೋಹಿಯಾ ಅವರು ಒಬ್ಬ *ಅನಾರ್ಕಿಸ್ಟ್* ಆಗಿ ಬೆಳೆದರು. *ಅನಾರ್ಕಿಸ್ಟ್* ಅಂದರೆ ಕನ್ನಡದಲ್ಲಿ ಅರಾಜಕತಾವಾದ ಅಂತ ಬಹಳ ಸಡಿಲವಾಗಿ ಅನುವಾದಿಸ್ತಾರೆ. ಅದು ತಪ್ಪು. ಹೀಗಾಗಿ ಅದಕ್ಕೊಂದು ಸ್ವಲ್ಪ ಅನುಮಾನಾಸ್ಪದವಾದ ಒಂದು ಅರ್ಥ ಬಂದುಬಿಟ್ಟಿದೆ. ಅರಾಜಕತಾವಾದಿಗಳು ಅಂತ ಅಂದ್ರೆ ಗೊಂದಲ ಉಂಟುಮಾಡುವವರು, ವಿನಾಶಾನಂದರು ಅಂತ. ಅಲ್ಲ ಅಲ್ಲ. *ಅನಾರ್ಕಿ* ಕೂಡ ಒಂದು ಗಂಭೀರವಾದ ರಾಜಕೀಯ ಫಿಲಾಸಫಿ. ಅಂದ್ರೆ ಪ್ರಭುತ್ವವನ್ನು ಯಾವಾಗಲೂ ಅನುಮಾನದಿಂದ ನೋಡ್ತಕ್ಕಂತದ್ದು. ಪ್ರಭುತ್ವ ವ್ಯಕ್ತಿಯನ್ನ ದಮನ ಮಾಡುತ್ತೆ. ಅವನ ಸಾಧ್ಯತೆ–ಸಾಮರ್ಥ್ಯಗಳನ್ನ ತನ್ನ ತಹಬಂದಿಗೆ ತೆಗೆದುಕೊಂಡುಬಿಡುತ್ತೆ. ಆದ್ದರಿಂದ ಪ್ರಭುತ್ವಕ್ಕೆ ಒಂದು ಮಿತಿಯಿರ್ಬೇಕು, ಪ್ರಭುತ್ವದ

ಬಗ್ಗೆ ಯಾವಾಗಲೂ ಒಂದು ಕಣ್ಣಿಟ್ಟಿರ್ಬೇಕು ಅಂತ ನಂಬಿಕೆ ಇಟ್ಟಿರ್ತಕ್ಕಂಥಾ ಒಂದು ಸಂಪ್ರದಾಯ ಅದು. ಅದರ ಸರಿಯಾದ ಪಾರಿಭಾಷಿಕ ಕನ್ನಡಾನುವಾದ, ಅನಧಿಪತ್ಯವಾದ ಎಂದಿರಬೇಕು. ಅವರು ರೂಪಿಸಿದ ಸಮಾಜವಾದಕ್ಕೆ ಅಡಿಗಲ್ಲೂ ಅದೇ.

ಇದೆಲ್ಲದರ ಜೊತೆಗೆ ಇನ್ನೊಂದು ಸಂಗತಿಯನ್ನೂ ಇಲ್ಲಿ ಹೇಳಬೇಕು. ಅಂಬೇಡ್ಕರ್ ಅವರು ಆಸಕ್ತಿಯಿಂದ ಓದಿದ್ದು ಸಮಾಜ ವಿಜ್ಞಾನ, ಕಾನೂನು ಮತ್ತು ಸಾರ್ವಜನಿಕ ವ್ಯವಹಾರ. ಸಂಶೋಧನೆಗಳೂ ಅವಕ್ಕೇ ಸಂಬಂಧಿಸಿದವು. ನಂತರ ಮಾಡಿದ್ದು ಇದೇ ವಿಷಯಗಳ ಬೋಧಕ ಮತ್ತು ವಕೀಲಿ ವೃತ್ತಿ. ಜೊತೆಗೇ ಜಾತಿಪದ್ಧತಿಯ ವಿರುದ್ಧ, ನಿರ್ದಿಷ್ಟವಾಗಿ ರಾಷ್ಟ್ರೀಯ ಮುಖ್ಯ ಪ್ರವಾಹದ ಪ್ರತೀಕವಾಗಿದ್ದ ಗಾಂಧಿ ಎದುರು ಕಟು ನಿಷ್ಠುರ ಹೋರಾಟ. ಹೀಗಾಗಿ ಅವರದ್ದು–ಅವರ ವ್ಯಕ್ತಿತ್ವದ್ದು ಅಂತಲೂ ಹೇಳಬಹುದು–ಒಂದು ತರಹದ ತಾರ್ಕಿಕ ಗದ್ಯದ ಲಯ, ಶೈಲಿ. ಈ ಲೋಹಿಯಾ ಓದಿದ್ದು ಮುಖ್ಯವಾಗಿ ಚರಿತ್ರೆ ಮತ್ತು ರಾಜಕೀಯ ತತ್ವಶಾಸ್ತ್ರವನ್ನು. ಅವರ ಡಾಕ್ಟೊರೇಟ್ ಕೆಲಸ ಕೂಡ ಅದಕ್ಕೇ ಸಂಬಂಧಿಸಿದ್ದು. ಇಷ್ಟೆಲ್ಲಾ ಉನ್ನತ ವಿದ್ಯಾಭ್ಯಾಸ ಮಾಡಿಬಂದ್ರೂ ಕೂಡ ಅವರು ಯಾವುದೇ ಉದ್ಯೋಗಕ್ಕೆ ಸೇರಲಿಲ್ಲ. ಆದಾಯವಿಲ್ಲದೇ ಅಲೆಮಾರಿಯಾಗಿಯೇ ಇದ್ದು ಗಾಂಧಿ ಪ್ರಭಾವದಲ್ಲಿ–ಅವರಿಂದ ವಿಮರ್ಶಾತ್ಮಕ ದೂರವಿದ್ದುಕೊಂಡೂ–ಸ್ವಾತಂತ್ರ್ಯ ಹೋರಾಟದಲ್ಲಿ ಸಂಕಷ್ಟ ಮತ್ತು ಸಾಹಸಪೂರ್ಣ ಪಾತ್ರ ವಹಿಸುತ್ತಾ ತೊಡಗಿಕೊಂಡವರು. ಆದ್ದರಿಂದ ಒಂದು ರೀತಿಯ ತತ್ವಪದಕಾರನ ಪದ್ಯ ಶೈಲಿ ಅವರದ್ದು. ಈ ಎಲ್ಲ ಸಾದೃಶ್ಯಗಳನ್ನು ಗಮನಿಸ್ತಾ ಹೋದ್ರೆ ನಮಗೆ ಲೋಹಿಯಾ ಮತ್ತು ಅಂಬೇಡ್ಕರ್ ನಡುವಣ ಈ ತೌಲನಿಕತೆ ಒಂದು ವಿಶೇಷ ರೂಪವನ್ನು ಪಡೆದುಕೊಳ್ಳುವುದು ಕಾಣ್ತಾ ಹೋಗುತ್ತೆ.

ಅಂಬೇಡ್ಕರ್ ಮತ್ತು ಲೋಹಿಯಾ ಇಬ್ಬರೂ ಸಮಾಜವಾದದಲ್ಲಿ ನಂಬಿಕೆ ಇಟ್ಟಿದ್ದವರು. ಆದರೆ ಅದು ಸಮಾಜವಾದ ತಾತ್ವಿಕವಾಗಿ ಹಲವು ಪ್ರಯೋಗಗಳನ್ನು ಹಾದು ಹೋಗುತ್ತಿದ್ದ ಕಾಲ. ಹಾಗಾಗಿ ಇಬ್ಬರದ್ದೂ ಒಂದೇ ಮಾದರಿಯ ಸಮಾಜವಾದವಲ್ಲ. ಅಂಬೇಡ್ಕರದ್ದು ಉದಾರವಾದಿ ಪ್ರಜಾಪ್ರಭುತ್ವದ ಸೂತ್ರಗಳಿಗೆ ಬದ್ಧವಾದ ಸಮಾಜವಾದವಾದರೆ, ಲೋಹಿಯಾ ಅನಧಿಪತ್ಯವಾದದಲ್ಲಿ ಹುಟ್ಟಿದ ಅಸೀಮ ನಾಗರಿಕ ಸ್ವಾತಂತ್ರ್ಯಗಳನ್ನು ಎತ್ತಿಹಿಡಿಯುವ ಸಮಾಜವಾದ. ಅವರು ತಮ್ಮ ಜೀವನದುದ್ದಕ್ಕೂ ಇಂತಹ ಸಮಾಜವಾದದ ರೂಹು–ರೂಪಗಳ ಅನ್ವೇಷಣೆ ಮಾಡುತ್ತಲೇ ಹೋದರು. ಸಮಾನತೆಯ ಹೊಸ ವ್ಯಾಖ್ಯಾನದ ಹೊಸ ನಾಗರೀಕತೆಯ ಕನಸು ಕಂಡರು. ಅವರಿಗೆ ಅವರ ರಾಜಕಾರಣವೆಂದರೆ ಈ ಕನಸನ್ನು ಸಾಕಾರಗೊಳಿಸುವುದೇ ಆಗಿತ್ತು. ಈ ದೃಷ್ಟಿಯಿಂದ ನೋಡಿದಾಗ ಅಂಬೇಡ್ಕರ್ ಅವರಿಗೆ ಸಮಾಜವಾದ ಅವರ ರಾಜಕಾರಣದ ಒಂದು ಸಿದ್ಧ ಉಪಕಾರಣ ಮಾತ್ರವಾಗಿತ್ತು. ಅಂದರೆ ಸಮಾಜವಾದ ಅನ್ನೋದು ಅವರಿಗೆ ಕೇವಲ ಒಂದು ಕಾರ್ಯಕ್ರಮ ಆಗಿತ್ತಷ್ಟೇನೇ. ಅವರ ಮಾತುಗಳಲ್ಲೇ ಹೇಳುವುದಾದರೆ ಸರ್ಕಾರಿ ಸಮಾಜವಾದ ಅವರದು. ಪ್ರಭುತ್ವ ಸಮಾಜವಾದ ಅಂತಲೂ ಕರೀತಾರದನ್ನ. ಅಂದ್ರೆ ಸಮಾಜವಾದ ಅನ್ನೋದು ಆಳುವ ಸರ್ಕಾರಕ್ಕೆ ಯಾವುದೇ ಚಾಯ್ಸ್ ಆಗಿರ್ಬಾರ್ದು, ಆಯ್ಕೆ ಆಗಿರ್ಬಾರ್ದು. ಅದು ಸಂವಿಧಾನದಲ್ಲೇ ಅಳವಡಿಸಲ್ಪಟ್ಟಿರಬೇಕು, ಅದಕ್ಕೆ ಕಾನೂನುಗಳ ಬೆಂಬಲ ಒದಗಿಸಬೇಕು. ಸರ್ಕಾರ ಅದನ್ನ ಜಾರಿಗೊಳಿಸಬೇಕು. ಈ ಪ್ರಭುತ್ವ ಸಮಾಜವಾದ ಜರ್ಮನಿಯ ಒಬ್ಬ ರಾಜಕೀಯ ಚಿಂತಕ ಕೊಟ್ಟಂತಹದ್ದು. ಅಂಬೇಡ್ಕರ್ ಅದನ್ನ ಇಲ್ಲಿ ಬೆಳಸ್ತಾರೆ ಅಷ್ಟೇನೆ. ಆದರೆ ಅದೊಂದು ಕಾರ್ಯಕ್ರಮವಷ್ಟೇ. ಅದೊಂದು ರಾಜಕೀಯ ಆಂದೋಲನವಲ್ಲ, ಅದೊಂದು ತತ್ತ್ವಜ್ಞಾನವೂ ಅಲ್ಲ.

ಹೀಗೆ ಯಾಕೆ ಹೇಳ್ಬಾಕಾಗುತ್ತೆ ಅಂದರೆ, ಅಂಬೇಡ್ಕರ್ ತಮ್ಮ ಪ್ರಭುತ್ವ ಸಮಾಜವಾದದ ಪ್ರತಿಪಾದನೆಯಲ್ಲಿ ಮುಖ್ಯವಾಗಿ ಎರಡು ಕಾರ್ಯಕ್ರಮ ಕೊಡ್ತಾರಷ್ಟೇ. ಒಂದು, ಭೂಮಿ ಮತ್ತು ಕೈಗಾರಿಕೆಗಳು ಸರ್ಕಾರದ ವಶದಲ್ಲಿರ್ಬೇಕು. ಎರಡು, ಭೂಮಿಯ ಸಾಮೂಹಿಕ ರಾಷ್ಟ್ರೀಕರಣ ಆಗ್ಬೇಕು. ಭೂಮಿಯನ್ನ ಕುಟುಂಬಗಳಿಗೆ ಹಂಚಿಬಿಟ್ಟು ಅಥವಾ ಕಾರ್ಪೋರೇಟ್ ಸಂಘ ಸಂಸ್ಥೆಗಳಿಗೆ ಕೊಟ್ಟುಬಿಟ್ಟು ಅವನ್ನ ನಿರ್ವಹಿಸಬೇಕು. ಕೈಗಾರಿಕೆಗಳೂ ಕೂಡ ಸರ್ಕಾರದ ಕೈಯಲ್ಲೇ ಇರ್ಬೇಕು. ಇದೊಂಥರಾ ರಾಷ್ಟ್ರೀಕರಣದ ತತ್ವ. ಅದರಾಚೆ ಸಮಾಜವಾದದ ಫಿಲಾಸಫಿಗೆ ತುಂಬಾ ಅವಿಭಾಜ್ಯವಾಗಿರ್ಬೇಕಾದಂತಹ ವಿಕೇಂದ್ರೀಕರಣದ ತತ್ವವಾಗಲೀ, ಜಾತಿಪದ್ಧತಿಯ ಕುರಿತಂಥ ಮೀಮಾಂಸೆಯಾಗಲೀ ಅಥವಾ ತಂತ್ರಜ್ಞಾನ ಕುರಿತಂಥ ಮೀಮಾಂಸೆಯಾಗಲೀ ಅದರಲ್ಲಿ ಸೇರಿಲ್ಲ. ಅಂಬೇಡ್ಕರ್ ಪಶ್ಚಿಮದ ಆಧುನಿಕತೆಯ ಆರಾಧಕರಾಗಿದ್ದರು ಅಂತಲೇ ಹೇಳಬಹುದು. ಇನ್ನೂ ಮುಂದೆ ಹೋಗಿ ಹೇಳೋದಾದ್ರೆ ತುಂಬಾ ಲಿಬರಲ್ ಆಗಿ ಹೇಳೋದಾದ್ರೆ. ಈ ಆಧುನಿಕತೆಯೇ ಭಾರತದಂತಹ ಬಡಜನತೆಯ ವಿಮೋಚನೆ ಮಾಡ್ತದೆ, ನಿರ್ದಿಷ್ಟವಾಗಿ ದಲಿತರ ವಿಮೋಚನೆ ಆಧುನಿಕತೆಯ ಮೂಲಕ ಮಾತ್ರ ಆಗ್ತದೆ ಅಂತ ಅವರು ನಂಬಿದ್ದರು.

ಉದಾಹರಣೆಗೆ ಯಂತ್ರಗಳ ಬಗ್ಗೆ ಅವರ ನಿಲುವನ್ನ ತೆಗೆದುಕೊಳ್ಳಿ. ಯಂತ್ರಗಳ ಬಗ್ಗೆ ದೊಡ್ಡ ಜಿಜ್ಞಾಸೆಯೇ ನಡೆದು ಹೋಗಿದೆ ಕಳೆದ ಶತಮಾನದಲ್ಲಿ. ವಿಶೇಷವಾಗಿ ಸಮಾಜವಾದಿ ಚಿಂತಕರ ಮಧ್ಯೆ. ಯೂರೋಪ್‌ನಿಂದ ಹಿಡಿದು ಭಾರತದ, ಏಷ್ಯಾದ ಎಲ್ಲ ಚಿಂತಕರು, ಯಂತ್ರ ನಾಗರಿಕತೆಯ ಬಗ್ಗೆ ದೊಡ್ಡ ಸಿದ್ಧಾಂತಗಳನ್ನೇ ಮಂಡಿಸಿದ್ದಾರೆ. ದೊಡ್ಡ ಚಿಂತನೆಗಳನ್ನ ನಡೆಸಿದ್ದಾರೆ. ಆದರೆ ಅಂಬೇಡ್ಕರ್ ಈ ಬಗ್ಗೆ ಬಹಳ ಸರಳವಾಗಿ ಚಿಂತನೆ ಮಾಡ್ತಾರೆ. ಭಾರತದ ಸಮಾಜ ಒಂದು ಸುಸಂಸ್ಕೃತ ಸಮಾಜ ಆಗ್ಬೇಕಾದ್ರೆ, ಮನುಷ್ಯನಿಗೆ ದುಡಿಮೆಯ ಮಧ್ಯೆ ವಿಶ್ರಾಂತಿ ಬೇಕು. ವಿಶ್ರಾಂತಿಯಲ್ಲಿ ಮಾತ್ರ ಮನುಷ್ಯ ಸಂಸ್ಕೃತಿಯ ಬಗ್ಗೆ ಯೋಚನೆ ಮಾಡ್ತಾನೆ. ಸುಸಂಸ್ಕೃತನಾಗುವ ಎಲ್ಲ ಡೈನಾಮಿಕ್ಸ್ ಅಂತಹ ವಿಶ್ರಾಂತಿಯಲ್ಲಿರುತ್ತೆ. ಮನುಷ್ಯನಿಗೆ ವಿಶ್ರಾಂತಿ ಹೇಗೆ ಸಿಗುತ್ತೆ? ಯಂತ್ರಗಳು ದುಡಿಮೆಯ ಅವಧಿಯನ್ನು ಕಡಿಮೆಗೊಳಿಸುವುದರಿಂದ ಅದು ವಿಶ್ರಾಂತಿಗೆ ದಾರಿ ಮಾಡಿಕೊಡುತ್ತೆ. ಆದ್ರಿಂದ ಯಂತ್ರಗಳು ಬೇಕು. ಇಷ್ಟೇ ಅವರು ಹೇಳೋದು ಯಂತ್ರಗಳ ಬಗ್ಗೆ. ಆದರೆ ಗಾಂಧಿ ಯಂತ್ರವನ್ನು ಕುರಿತಂತೆ ಒಂದು ದೊಡ್ಡ ಮೀಮಾಂಸೆಯನ್ನೇ ಮಂಡಿಸಿದ್ರು. ಯಂತ್ರಗಳು ಯಾಕೆ ಬೇಡ ಅಂತ ತಾತ್ವಿಕವಾಗಿ ಚಿಂತಿಸಿದ್ದರ ಜೊತೆಗೆ ಎಂಥ ಯಂತ್ರಗಳು ಬೇಕು ಮತ್ತು ಬೇಡ ಅಂತ ಹೇಳಿದ್ರು. ಯಂತ್ರಗಳ ಮಧ್ಯೆ ಇದ್ರೆ ಮನುಷ್ಯ ಯಂತ್ರದ ಥರ ಆಗ್ಹೋಗ್ಬಿಡ್ತಾನೆ. ಮನುಷ್ಯ ಒಳಗಡೆ ಏನಾಗ್ತಾನೆ ಅನ್ನೋದ್ರ ಬಗ್ಗೆ ಗಾಂಧಿ ಯೋಚ್ನೆ ಮಾಡಿದ್ರು. ಅಂಬೇಡ್ಕರ್‌ಗೆ ದಲಿತರ ಬಿಡುಗಡೆ ಅತಿ ತುರ್ತಾದ ಅಗತ್ಯವಾಗಿ ಕಂಡದ್ದರಿಂದ ಅವರು ಇಂತಹ ಒಂದು ಸಮೀಪದೃಷ್ಟಿದೋಷಕ್ಕೆ ಒಳಗಾಗಿ ಯಂತ್ರವನ್ನು ಕುರಿತಂತೆ ಸಂಕೀರ್ಣವಾಗಿ ಯೋಚನೆ ಮಾಡ್ಲಿಲ್ಲ ಅಂತ ಕಾಣುತ್ತೆ. ಅವರ ಕೇಂದ್ರ ಕಾರ್ಯಕ್ರಮವಾದ ಜಾತಿ ವಿನಾಶದ ಅಥವಾ ಅವರು ಆತ್ಯಂತಿಕವಾಗಿ ನಂಬಿದ ಬೌದ್ಧ ಧರ್ಮದ 'ಕರುಣಾ'ದ ತಾತ್ವಿಕತೆ ಅವರ ಸಮಾಜವಾದದ ಸಾವಯವ ಭಾಗವಾಗದೆ ಅದೊಂದು ಬೋಳು ಸಾಂವಿಧಾನಿಕ ವಿಧಿಯಾಗಿರಲು ಇದೇ ಕಾರಣವೆಂದು ತೋರುತ್ತದೆ. ಆದರೆ ಲೋಹಿಯಾ ಗಾಂಧಿಯನ್ನು ಸಾರಾಸಗಟಾಗಿ ಒಪ್ಪುತ್ತಿರಲಿಲ್ಲವಾದರೂ, ಸಹಾನುಭೂತಿಪರವಾದ ಸಂವಾದ ಮಾಡಿ ಗಾಂಧಿಯ ವಿಚಾರಗಳನ್ನ ಅದರ ಸನಾತನತೆಯ ಚಾರಿತ್ರಿಕತೆಯಿಂದ ಬಿಡಿಸಿ ಆಧುನೀಕರಿಸಲು ಪ್ರಯತ್ನಪಟ್ಟರು. ಇದೊಂದು ಅಸಾಮಾನ್ಯ ಸೃಜನಶೀಲ ಸಮನ್ವಯದ ಸಾಹಸವೇ ಸರಿ.

ಉದಾಹರಣೆಗೆ, ಯಂತ್ರ ಬೇಡ ಅಂತ ಅಂತೀರಲ್ಲ ನೀವು, ದೊಡ್ಡ ದೊಡ್ಡ ಯಂತ್ರಗಳು ಬೇಡ. ಬೃಹತ್ ಯಂತ್ರಗಳು ಏನ್ಮಾಡ್ತವೆ? ಮನುಷ್ಯನನ್ನ ತಿಂದ್ಹಾಕಿಬಿಡ್ತವೆ. ಮನುಷ್ಯನ ಆತ್ಮವನ್ನೇ ಕೊಂದು ಹಾಕಿ ಯಂತ್ರದ ಥರ ಮಾಡ್ಹಾಕ್ಬಿಡ್ತವೆ. ಇದರ ಹಿಂದೆ ಇರೋದು ಆಧುನಿಕ ತಂತ್ರಜ್ಞಾನ. ಅದರ ಸಂಕೀರ್ಣತೆ ಮತ್ತು ಜಟಿಲತೆ ಹಾಗೂ ಅವು ಹುಟ್ಟಿಸುವ ಕಾಯಕ 'ಪರಕೀಯತೆ' ಜೊತೆಗೆ ಅದರ ಹಿಂದೆ ಕೆಲಸ ಮಾಡುವ ಬಂಡವಾಳಶಾಹಿ ಮತ್ತು ಅದರ ರಾಜಕಾರಣ. ಆದ್ರಿಂದ ಅದನ್ನು ಬಳಸುವ ಮನುಷ್ಯನಿಗೆ ನಿಗೂಢವಾಗದೆ, ಅರ್ಥವಾಗಬಲ್ಲ, ಮನುಷ್ಯನನ್ನು ವಶ ಮಾಡಿಕೊಳ್ಳದೆ ತಾನೇ ಮನುಷ್ಯನ ವಶದಲ್ಲಿರಬಲ್ಲ, ಅವನ ಸೇವೆ ಮಾಡಬಲ್ಲ ವಿನ್ಯಾಸಗಳ ಬಗ್ಗೆ ಲೋಹಿಯಾ ಚಿಂತಿಸಿದರು. ಯೂರೋಪಿನ ಸಮಾಜವಾದಿಗಳು ಚಾಲ್ತಿಗೆ ತರಲಾರಂಭಿಸಿದ್ದ 'ಮಧ್ಯಮ' ಎಂದು ಕರೆಯಬಹುದಾದ ತಂತ್ರಜ್ಞಾನವನ್ನು (ಇಂಟರ್‌ಮೀಡಿಯೇಟ್ ಟೆಕ್ನಾಲಜಿ) ಅವರು ಪ್ರತಿಪಾದಿಸಿದರು. ಇದು ಗಾಂಧಿಯವರ ಖಾದಿ–ಗ್ರಾಮೋದ್ಯೋಗ ಪರಿಕಲ್ಪನೆಯ ಆಧುನೀಕರಣ ಎನ್ನಬಹುದು. ಅಂದರೆ ಸಣ್ಣ ಪ್ರಮಾಣದ ಯಂತ್ರಗಳನ್ನ ನಾವು ಮಾಡಿಕೊಳ್ಳಬೇಕು. ಪಶ್ಚಿಮದ ಆಧುನಿಕತೆಯನ್ನು ಲೋಹಿಯಾ ನಿರ್ವಹಿಸಿದ ಬಗೆಗೆ ಇದೊಂದು ಉದಾಹರಣೆ. ಆಧುನಿಕ ನಾಗರೀಕತೆಯಿಂದ ನಾವು ಸ್ವೀಕರಿಸಬಹುದಾದ ಬಹು ದೊಡ್ಡ ಮೌಲ್ಯವೆಂದರೆ 'ಸಮಾನತೆ' ಎನ್ನುತ್ತಿದ್ದ ಅವರು, ಅದನ್ನು ವಸಾಹತುಶಾಹಿಗೊಳಪಟ್ಟಿದ್ದ ದೇಶಗಳು ತಮ್ಮದೇ ರೀತಿಯಲ್ಲಿ ಸೃಜನಶೀಲವಾಗಿ ರಾಜಕೀಯ ಕಾರ್ಯಕ್ರಮವಾಗಿ ರೂಪಿಸಿಕೊಳ್ಳಬೇಕೆಂದು ಹೇಳುತ್ತಿದ್ದರು.

ಈ ಯಂತ್ರ ಮೀಮಾಂಸೆಯ ಜೊತೆಗೇ ಪ್ರಸ್ತಾಪ ಮಾಡಬಹುದಾದ ಇನ್ನೊಂದು ಸಂಗತಿ ಎಂದರೆ, ಇದೇ ತಾತ್ವಿಕ ಜಿಜ್ಞಾಸೆಯಿಂದ ಹುಟ್ಟುವ ಅಧಿಕಾರ



ಸ್ವತಂತ್ರ ಭಾರತದ ಮೊದಲ ಕಾನೂನು ಮಂತ್ರಿಯಾಗಿ
ಡಾ. ಅಂಬೇಡ್ಕರ್ ಪ್ರಮಾಣ ವಚನ ಸ್ವೀಕಾರ

ಅಥವಾ ಅಡಳಿತದ ವಿಕೇಂದ್ರೀಕರಣದ ಪ್ರಶ್ನೆ. ಅಂಬೇಡ್ಕರ್ ಸಾಂವಿಧಾನಿಕ ಮತ್ತು ಕಾನೂನು ವಿಧೇಯತೆಯ ರಾಜ್ಯ ವ್ಯವಸ್ಥೆಯ ಸಮರ್ಥಕರಾದ ಕಾರಣದಿಂದಲೋ ಏನೋ ಅಧಿಕಾರದ ಕೇಂದ್ರ ವ್ಯವಸ್ಥೆಯ ಪ್ರತಿಪಾದಕರಾಗಿದ್ದರು. ಅಂದರೆ ಆಧುನೀಕರಣವಾದಿಯಾದ ಅವರು ನಗರೀಕರಣದ ಪರವಾಗಿದ್ದರು. ಯಾಕೇಂತಂದ್ರೆ ಹಳ್ಳಿಗಳನ್ನ ನೋಡಿ ಅವರು, ಅವು ಸಾಮಾಜಿಕ ತಾರತಮ್ಯಗಳ ತವರು, ಮೌಢ್ಯದ ಕೊಂಪೆಗಳು, ದಲಿತರ ಪಾಲಿಗೆ ನರಕ ಅಂತ ಹೇಳ್ತಾ ಇದ್ದರು. ಯಾಕೇಂತಂದ್ರೆ ಮುಖ್ಯವಾಗಿ ಜಾತಿ ವ್ಯವಸ್ಥೆಯ ಕಾರಣದಿಂದಾಗಿ, ಭೀಕರ ಅಸ್ಪೃಶ್ಯತೆಯ ಕಾರಣದಿಂದಾಗಿ. ಆದರೆ ಲೋಹಿಯಾ ಅವರು ಅಧಿಕಾರದ ಕೇಂದ್ರೀಕರಣ ಪ್ರಭುತ್ವದ ಹಿಂಸೆಗೆ ದಾರಿ ಮಾಡಿಕೊಡುತ್ತದೆ ಎಂದು ನಂಬಿದ್ದರು. ಹಾಗಾಗಿ ಅವರು ಗಾಂಧಿಯವರ ಗ್ರಾಮ ಸ್ವರಾಜ್ಯದ ಕಲ್ಪನೆಯನ್ನೂ–ಅದು ಅವ್ಯಾವಹಾರಿಕ ಎಂದು–ಒಪ್ಪದೆ, ಆಧುನಿಕತೆಯೊಡನೆಯ ಒಂದು ವಿಶಿಷ್ಟ ಅನುಸಂಧಾನದಲ್ಲಿ, ಒಂದು ಮಧ್ಯಮ ಮಾರ್ಗವಾಗಿ *ಚತುಸ್ತಂಭ ರಾಷ್ಟ್ರ*ದ ಕಲ್ಪನೆ ಕೊಟ್ಟರು. ಅಧಿಕಾರವನ್ನು ನಾಲ್ಕು ಹಂತಗಳಲ್ಲಿ ವಿಸ್ತರಿಸಬೇಕಾಗ್ತದೆ. ಗ್ರಾಮ, ಮಂಡಲ, ರಾಜ್ಯ ಮತ್ತು ಕೇಂದ್ರ. ಅಂದರೆ ಒಂದು ರಾಜ್ಯ ವ್ಯವಸ್ಥೆ ಈ ನಾಲ್ಕು ಸ್ತಂಭಗಳ ಮೇಲೆ ನಿಂತಿರಬೇಕು. ರಾಜಕೀಯ ಅಧಿಕಾರವನ್ನ ನಾವು ಹೀಗೆ ಹರಿದು ಹಂಚಿಬಿಟ್ಟರೆ, ಪ್ರಭುತ್ವ ರಾಕ್ಷಸೀಯವಾಗುವುದಿಲ್ಲ ಅಂತ ಹೇಳ್ತಾ ಇದ್ದರು. ಹೀಗೆ, ಲೋಹಿಯಾ ಅವರು ಗಾಂಧಿಯವರ ಚಿತ್ರವನ್ನ ಸ್ವಲ್ಪ ನಿಷೇಧಾತ್ಮಕ ಅರ್ಥದ ಸನಾತನದಿಂದ ಈಚೆಗೆ ತಂದು, ಅದರ ಸಾಂಪ್ರದಾಯಿಕ ಚಿತ್ರವನ್ನು ಬದಲಾವಣೆ ಮಾಡಿ ತಮ್ಮದೇ ರೀತಿಯಲ್ಲಿ ಆಧುನೀಕರಿಸಿದರು.

ಇನ್ನು ಈ ತೌಲನಿಕತೆಯ ಮುಖ್ಯ ಸಂಗತಿಯಾದ ಜಾತಿಪದ್ಧತಿಗೆ ಸಂಬಂಧ ಪಟ್ಟಂತೆ ಮಾತಾಡೋದಾದ್ರೆ, ಲೋಹಿಯಾ ಮತ್ತು ಅಂಬೇಡ್ಕರ್ ನಡುವಣ ಸಾದೃಶ್ಯ ಎದ್ದು ಕಾಣುವುದು ಇಲ್ಲಿ. ಇಬ್ಬರೂ ಜಾತಿಪದ್ಧತಿಯನ್ನು ಕಟುವಾಗಿ ವಿರೋಧಿಸಿದರು. ಜಾತಿ ಪದ್ಧತಿ ನಾಶವಾಗದೇ ಭಾರತ ಒಂದು ರಾಜಕೀಯ ಸಮಾಜವಾಗಿರಲು ಸಾಧ್ಯನೇ ಇಲ್ಲ. ಆದ್ರಿಂದ ತಮ್ಮ ಸಮಾಜವಾದಿ ತತ್ವದ ಒಂದು ಅವಿಭಾಜ್ಯ ಅಂಗವಾಗಿ ಲೋಹಿಯಾ ಅವರು ಜಾತಿವಿನಾಶ ಕಾರ್ಯಕ್ರಮವನ್ನು ಕೊಟ್ಟರು. ಇನ್ನು ಅಂಬೇಡ್ಕರ್ ಅವರ ಹೋರಾಟ–ತತ್ವದ ಜೀವ ಜೀವಾಳವಿರುವುದೂ ಜಾತಿ ವಿನಾಶ ಕುರಿತಂತೆ ಇರುವ ಅವರ 'ಅನ್ಹಿಲೇಶನ್ ಆಫ್ ಕಾಸ್ಟ್' ಎಂಬ ಒಂದು ಮುಖ್ಯ ಲೇಖನದಲ್ಲೇ. ಜಾತಿ ಪದ್ಧತಿ ಕುರಿತಂತೆ ಅಂಬೇಡ್ಕರ್ ಮತ್ತು ಲೋಹಿಯಾರಿಗೆ ಈ ಪದ್ಧತಿ ಹೋಗಬೇಕು ಎನ್ನುವುದರಲ್ಲಿ ನಂಬಿಕೆ ಒಂದೇ ತೆರ ಮತ್ತು ತೀವ್ರತೆಯಲ್ಲಿತ್ತು. ಆದರೆ, ಈ ಪದ್ಧತಿಯನ್ನು ಐತಿಹಾಸಿಕವಾಗಿ ಅರ್ಥೈಸುವುದರಲ್ಲಿ ಇಬ್ಬರ ನಿಲುವುಗಳೂ ಬೇರೆ ಬೇರೆಯಾಗಿದ್ದವು. ಅಂಬೇಡ್ಕರ್ ಜಾತಿಯನ್ನ ಜಾತಿಪದ್ಧತಿಯನ್ನ ಕಂಡದ್ದು, ಸಗೋತ್ರ ಮತ್ತು ವಿಗೋತ್ರ ವಿವಾಹಗಳನ್ನು ಆಧರಿಸಿದಂತಹ ಸಾಮಾಜಿಕ ವಿಂಗಡಣೆ ಅಥವಾ ಸಾಮಾಜಿಕ ಸಂಘಟನೆಯ ಕ್ರಮವೇ ಮುಂದೆ ಜಾತಿ ಪದ್ಧತಿಯಾಗಿ ಬೆಳೆದುಬಂದಿದೆ ಎಂಬ ಗ್ರಹಿಕೆಯಲ್ಲಿ. ಅಂದ್ರೆ ಭಾರತೀಯ ಸಂದರ್ಭಕ್ಕೆ ಅನ್ವಯ ಮಾಡಿ ಅವರು ಜಾತಿಯನ್ನ ವ್ಯಾಖ್ಯಾನ ಮಾಡಿದ್ರು ಅಂತ ಹೇಳಬಹುದು. ಅಂದರೆ, ಜಾತಿ ವ್ಯವಸ್ಥೆ ಭಾರತಕ್ಕೆ ಅನನ್ಯವಾದ ವ್ಯವಸ್ಥೆ ಎಂಬ ಗ್ರಹಿಕೆ ಅವರದ್ದಾಗಿದ್ದಂತೆ ತೋರುತ್ತದೆ.

ಆದರೆ ಲೋಹಿಯಾ ಜಾಗತಿಕ ಇತಿಹಾಸದ ಪರಿಪ್ರೇಕ್ಷ್ಯದಲ್ಲಿ ಜಾತಿ ವ್ಯವಸ್ಥೆಯನ್ನ ವ್ಯಾಖ್ಯಾನ ಮಾಡಕ್ಕೆ ಟ್ರೈ ಮಾಡಿದ್ರು. ಅವರು ಹೇಳೋ ಮಾತು ಏನು ಅಂತಂದ್ರೆ, ಸ್ಥಗಿತಗೊಂಡ ವರ್ಗವೇ ಜಾತಿ, ಅರಳಿಕೊಂಡ ಜಾತಿಯೇ ವರ್ಗ. ಅಂದ್ರೆ ಒಂದು ನಾಗರೀಕತೆಯ ಏಳುಬೀಳಿನಲ್ಲಿ ಜಾತಿ ಮತ್ತು ವರ್ಗಗಳು ಸೃಷ್ಟಿಯಾಗ್ತಾ ಇರ್ತವೆ. ಅಂದರೆ ಒಂದು ನಾಗರೀಕತೆ ಹೊರಗಿನ ಆಕ್ರಮಣದ ಒತ್ತಡಗಳಿಗೆ ಒಳಗಾದಾಗ, ಸದಾ ಸ್ಪರ್ಧೆಯಲ್ಲಿರೋ, ಪರಸ್ಪರ ಹೋರಾಟಗಳಲ್ಲಿ ತೊಡಗಿರೋ ವರ್ಗಗಳು ಸ್ಥಗಿತಗೊಂಡುಬಿಡ್ತವೆ. 'ಓ ನಾವೆಲ್ಲರೂ ಅಪಾಯದಲ್ಲಿದ್ದೀವಿ ನಾವು ಹೆಚ್ಚು ಹೊಡೆದಾಡೋದು ಬೇಡ, ಸದ್ಯಕ್ಕೆ ನಮ್ಮ ನಮ್ಮ ಸ್ಥಾನಗಳಿಗೆ ಅಂಟಿಕೊಂಡಿರೋಣ' ಅಂತ. ಅದು ವರ್ಗ ವ್ಯವಸ್ಥೆ ಸ್ಥಗಿತಗೊಂಡು ಜಾತಿ ವ್ಯವಸ್ಥೆ ಆಗೋ ಪ್ರಕ್ರಿಯೆಯ ಆರಂಭ. ಮತ್ತೆ ಆ ನಾಗರೀಕತೆಯ ಮೇಲಿನ ಒತ್ತಡಗಳು ಕಡಿಮೆ ಆಗ್ತಿದ್ದ ಹಾಗೇನೇ ಮತ್ತೆ ತಮ್ಮ ತಮ್ಮ ಆಸ್ಪಿರೇಶನ್ಸ್‌ಗಾಗಿ, ಆಶೋತ್ತರಗಳಿಗಾಗಿ ಅವು ವರ್ಗಗಳಾಗಿ ಮತ್ತೆ ಹೊಡೆದಾಡಕ್ಕೆ ಶುರುಮಾಡ್ತವೆ. ಅಂದ್ರೆ ತಾವು ಮೇಲೇರೋದಕ್ಕೆ, ತಮ್ಮ ಸ್ಥಾನ–ಮಾನಗಳನ್ನ ಹೆಚ್ಚಿಸಿಕೊಳ್ಳೋದಕ್ಕೆ ಟ್ರೈ ಮಾಡ್ತವೆ. ಹೀಗೆ ಲೋಹಿಯಾ ನಾಗರೀಕತೆಯ ಏಳುಬೀಳುಗಳ ಪರಿಪ್ರೇಕ್ಷ್ಯದಲ್ಲಿ ಜಾತಿಯನ್ನ ವ್ಯಾಖ್ಯಾನಿಸ್ತಾ ಇದ್ದರು. ಇದು ಜಗತ್ತಿನ ನಾಗರೀಕತೆಗಳ ಏಳುಬೀಳುಗಳ ಇತಿಹಾಸದುದ್ದಕ್ಕೂ ಕಾಣಬರುವ ಪ್ರವೃತ್ತಿ ಎಂದು ಲೋಹಿಯಾ ಹೇಳುತ್ತಿದ್ದರು.

ಆದರೆ ಭಾರತೀಯ ಸಂದರ್ಭ ಇಟ್ಟುಕೊಂಡು ಜಾತಿಪದ್ಧತಿಯನ್ನ ಅಂಬೇಡ್ಕರ್ ವ್ಯಾಖ್ಯಾನ ಮಾಡಿದ ಕಾರಣದಿಂದಾಗಿ ಅವರಿಗೊಂದು ನಂಬಿಕೆ ಇತ್ತು. ಏನೂಂತಂದ್ರೆ, ಈವರೆಗೆ ಜಾತಿ ಪದ್ಧತಿಯ ನಾಶಕ್ಕೆ ಅನೇಕ ಪ್ರಯತ್ನಗಳು ನಡೆದಿವೆ–ಉದಾಹರಣೆಗೆ, ನಮ್ಮ ಭಕ್ತಿಪಂಥದವರು ದೊಡ್ಡ ಪ್ರಯತ್ನವನ್ನೇ ಮಾಡಿದ್ರು. ಜಾತಿ ಒಂದು ಮಿಥ್ಯ ಅಂತ ಹೇಳೋದಕ್ಕೆ–ಆದ್ರೂ ಆಗಲಿಲ್ಲ ಯಾತಕ್ಕೆ ಅಂತಂದ್ರೆ ಜಾತಿ ಪದ್ಧತಿ ಅನ್ನೋದು ನಮ್ಮ ಧರ್ಮಗ್ರಂಥಗಳಲ್ಲಿ ಅಂತರ್ಗತವಾಗ್ಹೋಗಿಬಿಟ್ಟಿದೆ. ಅಲ್ಲಿ ಅದಕ್ಕೊಂದು ಮಾನ್ಯತೆ, 'ಪಾವಿತ್ರ್ಯತೆ' ಸಿಕ್ಕಿಬಿಟ್ಟಿದೆ. ನಮ್ಮ ಜನರಿಗೆ ಧರ್ಮಗ್ರಂಥಗಳಲ್ಲಿರತಕ್ಕಂಥ ಆಳವಾದ ನಂಬಿಕೆನೇ ಜಾತಿಪದ್ಧತೀನ ಇಲ್ಲಿ ಉಳಿಸಿದೆ ಅಂತ ಅವರು ನಂಬಿದ್ದರು. ಆದ್ರಿಂದ ಭಾರತದಲ್ಲಿ ಜಾತಿ ಪದ್ಧತಿಯಿಂದ ಬಿಡುಗಡೆ ಅಂತಂದ್ರೆ ಧರ್ಮಗ್ರಂಥಗಳ ಪಾವಿತ್ರ್ಯವನ್ನ ನಾಶ ಮಾಡೋದು. ಈ ನಂಬಿಕೆಯ, ಕಾರ್ಯಕ್ರಮದ ಭಾಗವಾಗಿಯೇ ಅಂಬೇಡ್ಕರ್ ಮನುಸ್ಮೃತಿಯನ್ನು ಬಹಿರಂಗವಾಗಿ ಸುಡುವ ಕಾರ್ಯಕ್ರಮವನ್ನು ಘೋಷಿಸಿ ಸಾಂಪ್ರದಾಯಿಕರ ಕೆಂಗಣ್ಣಿಗೆ ಗುರಿಯಾದರು. ಭಾರತೀಯ ಧರ್ಮಗ್ರಂಥಗಳೂಂತ ನಾವು ಯಾವುದನ್ನ ಕರೀತೀವಿ, ಅವುಗಳನ್ನು ಐತಿಹಾಸಿಕ ನೆಲೆಗೆ ಒಯ್ದು ಅವುಗಳ ಪುರ್ನವ್ಯಾಖ್ಯಾನದ ಪ್ರಯತ್ನ ಮಾಡಿದರು. 'ಹಿಂದೂ ಧರ್ಮದ ಒಗಟುಗಳು' ಇದಕ್ಕೊಂದು ಜ್ವಲಂತ ಉದಾಹರಣೆ.

ಆದರೆ ಲೋಹಿಯಾ ಇದನ್ನ ಒಪ್ಪಲಿಲ್ಲ. ಲೋಹಿಯಾ ಅವರು ನಾಗರೀಕತೆಯ ಸಂದರ್ಭದಲ್ಲಿ ಎಲ್ಲ ದೇಶಗಳಲ್ಲೂ ಈ ಥರ ಜಾತಿ–ವರ್ಗಗಳ ನಡುವೆ ತುಯ್ದಾಟ ನಡೆದಿದೆ, ನಮ್ಮ ದೇಶದಲ್ಲೂ ನಡೆದಿದೆ. ಆದರೆ ಜಾತಿ ಪದ್ಧತಿ ಇಲ್ಲಿ ಕೆಲವು ವರ್ಷಗಳ ಕಾಲ ಸ್ಥಗಿತಗೊಂಡು ಈ ಶ್ರೇಣೀಕೃತ ಕ್ರೂರ ರೂಪ ಪಡೆದಿದೆ. ಯಾಕೇಂತಂದ್ರೆ ಪದೇ ಪದೇ ಇದು ವಿದೇಶೀ ಆಕ್ರಮಣಗಳಿಗೆ ಒಳಗಾಯಿತು. ಆ ಕಾರಣದಿಂದಾಗಿ ಇಲ್ಲಿ ಚಲನೆಯೇ ಇಲ್ಲ. ಜೊತೆಗೆ ಈ ಧರ್ಮಗ್ರಂಥಗಳನ್ನ ಆಶ್ರಯಿಸಿರುವ ಸಮುದಾಯಗಳು ತುಂಬಾ ಕಡಿಮೆ ಭಾರತದಲ್ಲಿ. ಧರ್ಮಗ್ರಂಥಗಳನ್ನ ಅವುಗಳ ಭಾಷೆ ಮತ್ತು ಜಟಿಲತೆಗಳಿಗಾಗಿ ಓದಿರೋರೇ ಕಡಿಮೆ. ಅದನ್ನ ಗಂಭೀರವಾಗಿ ನಂಬುವವರು ಇನ್ನೂ ಕಡಿಮೆ. ಅಲ್ಲದೆ ನಮ್ಮ ಬೇರೆ ಬೇರೆ ಸಮುದಾಯಗಳು ತಂತಮ್ಮ ಬದುಕಿನ ಅನುಭವಗಳ ನಿಜಗಳಿಗೆ ತಕ್ಕಂತೆ ಈ ಧರ್ಮಗ್ರಂಥಗಳ ಬೇರೆ ಬೇರೆ ಸ್ಥಳೀಯ ಆವೃತ್ತಿಗಳನ್ನು ಮಾಡಿಕೊಂಡಿವೆ. ಯಾರೋ. ಯಾತಕ್ಕೋ–ಬಹುಶಃ ತತ್ಕಾಲೀನ ರಾಜಕಾರಣಕ್ಕಾಗಿ–ಈ ಶ್ರುತಿ–ಸ್ಮೃತಿಗಳನ್ನೆಲ್ಲ ಮಾಡಿಕೊಂಡಿದ್ರು. ಆದರೆ ಇವೆಲ್ಲ ಜನಸಾಮಾನ್ಯರ ಗ್ರಂಥಗಳಲ್ಲ. ಆ ಮಡಿಗ್ರಂಥಗಳೆಲ್ಲ ಆಧುನಿಕತೆಯ ಒತ್ತಡಗಳಿಗೆ, ವೈಚಾರಿಕತೆಯ ಮಾತೃಕೆಗಳಿಗೆ ಸಿಕ್ಕಿ ತಾವಾಗೇ ಅಪ್ರಸ್ತುತವಾಗಿ ಹೋಗ್ತವೆ. ಏನಿದ್ರು ಪುರಾಣಗಳ ಕಡೆ ಗಮನ ಕೊಡಬೇಕು ನಾವು ಅಂತಿದ್ರು ಲೋಹಿಯಾ. ಪುರಾಣಗಳು, ಮಹಾಕಾವ್ಯಗಳು, ಅವುಗಳ ಸ್ಥಳೀಯ ಆವೃತ್ತಿಗಳು, ಜಾನಪದ ಕಥಾನಕಗಳಲ್ಲಿ ಜಾತಿಪದ್ಧತಿ ಬಗ್ಗೆ ಏನಿದೆ? ಜಾನಪದ ಕಥೆಗಳಲ್ಲಿ ಮತ್ತು ಪುರಾಣಗಳಲ್ಲಿ ಜಾತಿಪದ್ಧತಿ ವಿರುದ್ಧವಾದ ಕೌಂಟರ್ ಆರ್ಗ್ಯುಮೆಂಟ್ಸ್, ಕೌಂಟರ್ ನರೇಟಿವ್ಸ್ ಏನಿವೆ ಅವನ್ನ ನಾವು ಗಮನಿಸಬೇಕು. ಶಂಬೂಕನ ಕಥೆ ಬರ್ತದೆ

ವಿಶ್ವಾಮಿತ್ರನ ಕಥೆ ಬರ್ತದೆ, ಏಕಲವ್ಯನ ಕಥೆ ಬರ್ತದೆ. ನಮ್ಮ ಜಾನಪದ ಕಥೆಗಳಿಗ್ಹೋದ್ರಂತೂ ಜಾತಿ ಪದ್ಧತಿಯ ವಿರುದ್ಧ ಹೋರಾಟಗಳಿಗೆ ಸಂಬಂಧಿಸಿದ ಅನೇಕ ಮಿಥ್‌ಗಳು ನಮಗೆ ಸಿಗ್ತಾವೆ. ಆದ್ರಿಂದ ಪುರಾಣಗಳ ಆಧಾರದ ಮೇಲೆ ನಾವು ಜಾತಿಪದ್ಧತಿಯ ವಿರುದ್ಧದ ಸಂಕಥನಗಳನ್ನು ಕಟ್ಟಬೇಕು ಅಂತ ಲೋಹಿಯಾ ಅವರು ಹೇಳ್ತಾ ಇದ್ದರು. ಅಲ್ಲದೆ, ಜಾತಿ ತಾರತಮ್ಯದ ಜೊತೆಗೇನೇನೆ, ಲಿಂಗ ತಾರತಮ್ಯದ ಬಗ್ಗೆ ಯಾವಾಗಲೂ ಅವರು ಮಾತಾಡ್ತಾ ಇದ್ದರು. ಕಾರಣ ಅವೆರೆಡೂ ಒಂದೇ ಮೂಲದಿಂದ ಬಂದವು ಅಂತ ಅವರು ನಂಬಿದ್ರು.

ಲೋಹಿಯಾ Segregation of caste and gender– ಜಾತಿ ಮತ್ತು ಲಿಂಗ ಪ್ರತ್ಯೇಕತೆಗಳು ಇವೆರಡೂ ಒಂದೇ ಜೊತೇನಲ್ಲಿ–ಶುದ್ಧಿ ಅಥವಾ ಮಡಿ ಕಲ್ಪನೆಯ ಮೂಲದಿಂದ–ಬಂದಿರ್ತಕ್ಕಂಥವು. ಅದ್ರಿಂದ ಅವೆರಡರ ವಿರುದ್ಧನೂ ಹೋರಾಡಬೇಕು ಅಂತ ಹೇಳ್ತಾ ಇದ್ದರು. ಅಂಬೇಡ್ಕರ್ ಕೂಡಾ ಈ ಪ್ರತ್ಯೇಕತೆಗಳ ಜೋಡಿತನದ ಬಗ್ಗೆ ಲೋಹಿಯಾರಿಗಿಂತ ಮೊದಲೇ ಮಾತಾಡಿರುವರಾದರೂ, ಅದನ್ನ ವ್ಯಾಪಕವಾಗಿ ವಿಸ್ತರಿಸಲಿಲ್ಲ. ಆದರೆ ಲೋಹಿಯಾ ಇದನ್ನ ತಮ್ಮದೇ ರೀತಿಯಲ್ಲಿ ವಿಸ್ತರಿಸಿ ಹೇಳ್ತಾ ಇದ್ದರು, ಸಾವಿತ್ರಿ ಪಾತ್ರದ ಜೊತೆಲೇನೆ ನಮ್ಮ ಕಥಾನಕಗಳಲ್ಲಿ ದ್ರೌಪದಿ ಪಾತ್ರ ಕೂಡ ಇದೆ. ಹೀಗೆ ಪ್ರತಿಪಾತ್ರಗಳಿವೆ ನಮ್ಮ ಕಾವ್ಯ–ಪುರಾಣಗಳಲ್ಲಿ, ಜಾನಪದ ಕಥಾನಕಗಳಲ್ಲಿ, ಸ್ಥಳೀಯ ಐತಿಹ್ಯಗಳಲ್ಲಿ. ಅವರು ಸೀತೆ–ಸಾವಿತ್ರಿ–ದ್ರೌಪದಿ ಪಾತ್ರಗಳ ಬರೆದಿರುವ ಲೇಖನಗಳನ್ನು ಗಮನಿಸಿದರೆ ಇದು ಸ್ಪಷ್ಟವಾಗ್ತದೆ. ಆದ್ರಿಂದ ನಾವು, ಈ ಹಿನ್ನೆಲೆಯಲ್ಲಿ ಅಂಬೇಡ್ಕರ್ ಯಾರನ್ನ ತುಂಬ ತುಂಬಾ ಅನುಮಾನಾಸ್ಪದವಾಗಿ, ಕೀಳಾಗಿ ಚಿತ್ರಿಸಿದರೋ ಆ ರಾಮನನ್ನ ಲೋಹಿಯಾ ಅವರು 'ಮರ್ಯಾದಾ ಪುರುಷೋತ್ತಮ' ಅಂತ ಚಿತ್ರಿಸಿದರು. ಈ ವ್ಯತ್ಯಾಸಗಳಿಗೆ ಕಾರಣವೆಂದರೆ ಅಂಬೇಡ್ಕರ್ ರಾಮನನ್ನು 'ಇತಿಹಾಸದ ವ್ಯಕ್ತಿ'ಯಾಗಿ ಕಂಡಿದ್ದರೆ, ಲೋಹಿಯಾ ದೃಷ್ಟಿ ಜನಸಾಮಾನ್ಯರ ಪುರಾಣ–ಜನಪದೀಯವಾಗಿತ್ತು. ಭಾರತೀಯ ಪುರಾಣದ ಪ್ರತೀಕಗಳನ್ನ ಲೋಹಿಯಾ ಅವರು ಮರುನಿರೂಪಣೆ ಮಾಡುವ ಮೂಲಕ ಜಾತಿ ಪದ್ಧತಿ ವಿರುದ್ಧದ ಹೋರಾಟಕ್ಕೆ ಕಟುತನಕ್ಕೆ ಬದಲಾಗಿ ಒಂದು ವಿಶಿಷ್ಟ ಮಾರ್ದವತೆ, ಲಾಲಿತ್ಯಗಳನ್ನು ಒದಗಿಸಿದರು. ಆದರೆ, ಜಾತಿ ಪದ್ಧತಿಯನ್ನು ತೊಲಗಿಸಲು ಅವರು ಅಂಬೇಡ್ಕರ್‌ರಂತೆಯೇ ಪ್ರತಿಪಾದಿಸಿದ್ದು, ಅಂತರ್ಜಾತಿ ವಿವಾಹ, ಸಮೂಹ ಭೋಜನ, ಭೂಸುಧಾರಣೆ ಮತ್ತು ವಂಚಿತ ಸಮುದಾಯಗಳಿಗೆ ಸಕಾರಾತ್ಮಕ ಆದ್ಯತೆಯ ನೀತಿಗಳನ್ನು.

ಅಂಬೇಡ್ಕರ್–ಲೋಹಿಯಾರ ಚಿಂತನೆಗಳ ತುಲನಾತ್ಮಕತೆಯ ವಿಷಯವಾಗಿ ನಾವು ಗಮನಿಸಬೇಕಾದ ಇನ್ನೊಂದು ಬಹುಮುಖ್ಯ ವಿಚಾರವೆಂದರೆ, ಭಾಷೆ ಕುರಿತ ಈ ಇಬ್ಬರ ಚಿಂತನೆ ಮತ್ತು ನಿಲುವುಗಳು. ಅಂಬೇಡ್ಕರ್ ಭಾಷೆ ಬಗ್ಗೆ ವಿಶೇಷ ಚಿಂತನೆಯನ್ನೇನಾದರೂ ನಡೆಸಿದ ದಾಖಲೆಗಳಂತೂ ನನಗೆ ಕಂಡಿಲ್ಲ. ಭಾಷೆ ಬಹಳ ಮುಖ್ಯವಾದ ಸಂಗತಿ ಸಮಾಜವಾದದಲ್ಲಿ, ಸಮಾಜ ಕಟ್ಟುವ ಸಂದರ್ಭದಲ್ಲಿ. ಆದರೆ ಅಂಬೇಡ್ಕರ್ ಇಂಗ್ಲಿಷ್ ಎದುರು ಭಾರತೀಯ ಭಾಷೆಗಳ ಬಳಕೆ ಮತ್ತು ಸಂರಕ್ಷಣೆಯ ಮಹತ್ವದ ಬಗ್ಗೆ ಎಲ್ಲೂ ಜಿಜ್ಞಾಸೆ ನಡೆಸಿದಂತಿಲ್ಲ. ಬದಲಿಗೆ ಅವರು ಇಂಗ್ಲಿಷ್‌ನ್ನು ಸಿಂಹಿಣಿಯ ಹಾಲಿನಂತೆ; ಅದನ್ನು ಕುಡಿದು ಬಲಿಷ್ಠರಾಗಿ ಎಂದು ದಲಿತರಿಗೆ ಕರೆ ನೀಡಿದ್ದಾರೆಂದು ಕೆಲ ವರ್ಷಗಳ ಹಿಂದೆ ಕೆಲವರು ಪ್ರಚಾರ ಮಾಡಿದರು. ಆದರೆ ಅಂಬೇಡ್ಕರ್‌ರ ಈ ಉಲ್ಲೇಖಿತ ಮಾತು ನಿಜವಾಗಿದ್ದರೆ, ಅಂಬೇಡ್ಕರ್ ಅವರಿಗೆ ಅವರ ಮಾತೃಭಾಷೆ ಮರಾಠಿ ಏನಾಗಿತ್ತು ಗೊತ್ತಿಲ್ಲ ನನಗೆ. ಏಕೆಂದ್ರೆ ಮತ್ತೆ ಅಂಬೇಡ್ಕರ್ ಪಶ್ಚಿಮದ ಆಧುನಿಕತೆಯ ಎಲ್ಲ ಪರಿಕರಗಳನ್ನು ತುಂಬಾ ಸಾರಾಸಗಟಾಗಿ ಒಪ್ಪಿಕೊಂಡವರೋ ಎಂಬ ಅನುಮಾನವೇಳುತ್ತದೆ. ತಂತ್ರಜ್ಞಾನ, ಸಂಸದೀಯ ಪ್ರಜಾಪ್ರಭುತ್ವ ಕುರಿತ ಅವರ ಅವಿಮರ್ಶಾತ್ಮಕ ನಿಲುವುಗಳ ಭಾಗವಾಗಿ ಅವರು ಇಂಗ್ಲಿಷ್‌ನ್ನು ವೈಭವೀಕರಿಸಿದರು ಅಂತ ಕಾಣುತ್ತೆ. ಅವಸರದಲ್ಲಿದ್ದರು, ಒತ್ತಡದಲ್ಲಿದ್ದರು ಅವರು. ದಲಿತರ ಬಿಡುಗಡೆಗೆ ಏನು ಸಿಗುತ್ತೋ ಅದನ್ನ ತಕ್ಷಣಕ್ಕೆ ಬಳಸುವ ತುರ್ತಿನಲ್ಲಿದ್ದರು ಅವರು.

ಆದರೆ ಲೋಹಿಯಾ ಅವರು ಇಂಗ್ಲಿಷ್ ಇರುವವರೆಗೆ ಈ ದೇಶದ ನಿಜವಾದ ಬಿಡುಗಡೆ ಸಾಧ್ಯ ಇಲ್ಲ ಅಂತ ಹೇಳ್ತಾ ಇದ್ದರು. ಯಾಕೇಂತಂದ್ರೆ, ದೇಶೀಯ ಭಾಷೆಗಳು ನಮ್ಮ ಆಲೋಚನಾ ಕ್ರಮದ ಮೂಲ ನುಡಿಗಟ್ಟುಗಳ ತವರು. ಅಂದರೆ ಲೋಕಗ್ರಹಿಕೆಯ ಮೂಲ ಕೋಶಗಳವು. ಅವುಗಳಲ್ಲಿ ಆಡಳಿತ ನಡೆದರೆ ಮಾತ್ರ, ಆ ನೆಲೆಗಳಲ್ಲಿ ಅಭಿವ್ಯಕ್ತಿ ನಡೆದರೆ ಮಾತ್ರ ನಿಜವಾದ ವ್ಯಕ್ತಿತ್ವಗಳು ಹೊರಹೊಮ್ಮುತ್ತವೆ. ಹಾಗೆ ನಿಜವಾದ ವ್ಯಕ್ತಿತ್ವ ಹೊರಹೊಮ್ಮದವರೆಗೆ ಭಾರತ ತನ್ನ ನಿಜದ ವ್ಯಕ್ತಿತ್ವವನ್ನು ಕಂಡುಕೊಳ್ಳಲಾರದು; ಅದಕ್ಕಾಗಿ ಹೋರಾಟ ನಡೆಸಲಾರದು ಎಂದು ಅವರು ನಂಬಿದ್ದರು. ಹಾಗಾಗಿಯೇ 'ಇಂಗ್ಲಿಷ್ ತೊಲಗಿಸಿ' ಮತ್ತು 'ಭಾರತೀಯ ಭಾಷಾ ಸಮ್ಮೇಳನ'ಗಳು ಅವರ ಸಮಾಜವಾದಿ ಆಂದೋಲನದ ಅವಿಭಾಜ್ಯ ಅಂಗಗಳಾಗಿದ್ದವು. ಅಂದ ಮಾತ್ರಕ್ಕೆ ಅವರು ಇಂಗ್ಲಿಷ್‌ನ ಅಂಧ ವಿರೋಧಿಯಾಗಿರಲಿಲ್ಲ. ಹಾಗೆ ನೋಡಿದರೆ, ಅವರು ಇಂಗ್ಲಿಷ್ ಭಾಷೆಯ ಪರಿಣತರಾಗಿದ್ದರು. ಆದರೆ ಇಂಗ್ಲಿಷ್ ಗ್ರಂಥಾಲಯದ ಭಾಷೆಯಾಗಿರಬೇಕೆಂಬುದು ಅವರ ನಿಲುವಾಗಿತ್ತು.



ಲೋಹಿಯಾ, ಮಣಿ ಣಿರಾಂ ಬಾಗಡಿ, ಮಧು ಲಿಮಯೆ ಮತ್ತು ಎಸ್.ಎಂ. ಜೋಷಿ ಜೊತೆ

ಈ ಹಿನ್ನೆಲೆಯೊಂದಿಗೆ, ಈ ನನ್ನ ಮಾತುಗಳ ಕೊನೆಯ ಭಾಗಕ್ಕೆ ಬರುವುದಾದರೆ, ಲೋಹಿಯಾ ಮತ್ತು ಅಂಬೇಡ್ಕರ್ ಒಂದು ಕಾಲಘಟ್ಟದಲ್ಲಿ ಬದುಕಿದ್ದರೂ ಕೂಡ ಸಾರ್ವಜನಿಕ ಜೀವನದಲ್ಲಿ ಅವರಿಬ್ಬರು ಭೇಟಿ ಮಾಡಿರಲಿಲ್ಲ ಎಂದು. ಏಕೆ? ಅದಕ್ಕೆ ಹಲವಾರು ಕಾರಣಗಳು ಕಾಣ್ತವೆ. ಒಂದು, ಮೊದಲೇ ಹೇಳಿದ ಹಾಗೆ ರಾಜಕೀಯ ತಲೆಮಾರುಗಳ ಅಂತರ. ಎರಡನೆಯದು ಇನ್ನೂ ಮುಖ್ಯವಾದದ್ದು: ಇಬ್ಬರೂ ವಿಭಿನ್ನ ರಾಜಕೀಯ ಚಿಂತನೆಗಳ ಹಿನ್ನೆಲೆಗಳಿಂದ ಬಂದವರು. ಲೋಹಿಯಾ ಅವರು ತಮ್ಮ ಸಕ್ರಿಯ ರಾಜಕೀಯ ಜೀವನವನ್ನು ಆರಂಭಿಸಿದ್ದು ೧೯೩೪ರ ನಂತರ. ಅಂದರೆ ಅಷ್ಟು ಹೊತ್ತಿಗೆ ಪೂನಾ ಒಪ್ಪಂದದ ರೂಪದಲ್ಲಿ ಗಾಂಧಿ–ಅಂಬೇಡ್ಕರ್ ನಡುವಣ ಘರ್ಷಣೆ ತಾರಕಕ್ಕೇರಿ ಅಂಬೇಡ್ಕರ್ ಗಾಂಧಿ ವಿರೋಧಿ ಪಾಳೆಯದ ದೊಡ್ಡ ನಾಯಕರಾಗಿ ಬಿಂಬಿಸಲ್ಪಟ್ಟಿದ್ದರು. ಜೊತೆಗೆ ಅಂಬೇಡ್ಕರ್‌ರ ಹಿಂದೆ ಆಗ ಗಾಂಧಿಯನ್ನು ಕುರಿತಂತೆ ಬಹಳ ಕಹಿಯಾಗಿದ್ದ ದೊಡ್ಡ ಚರಿತ್ರೆಯೇ ಇತ್ತು. ಆದರೆ ಗಾಂಧೀಜಿಯೊಡನೆ ಕೆಲವು ಪ್ರಾಥಮಿಕ ಭಿನ್ನಾಭಿಪ್ರಾಯಗಳಿದ್ದೂ, ಅವರನ್ನು ಬಹುವಾಗಿ ಗೌರವಿಸುತ್ತಿದ್ದ ಲೋಹಿಯಾ, ಗಾಂಧಿ ಚಿಂತನೆಯ ಮೂಲ ಸ್ಫೂರ್ತಿಯಲ್ಲೇ ತಮ್ಮ ಆಲೋಚನೆಗಳನ್ನ ಕಟ್ಟಿಕೊಳ್ಳುತ್ತಿದ್ದವರು. ಇನ್ನೂ ಒಂದು ಕಾರಣಾಂದ್ರೆ, ಲೋಹಿಯಾ ಕಾಂಗ್ರೆಸ್ ಪಕ್ಷದೊಳಗಿನ ಉಪಪಕ್ಷವಾಗಿದ್ದ ಕಾಂಗ್ರೆಸ್ ಸಮಾಜವಾದಿ ಪಕ್ಷದ ಸದಸ್ಯರಾಗಿ ಕಾಂಗ್ರೆಸ್ಸಿನ ರಾಜಕೀಯ ಪರಿಧಿಗೆ ಒಳಪಟ್ಟವರು. ಅಂಬೇಡ್ಕರ್‌ರಾದರೋ, ಕಾಂಗ್ರೆಸ್ಸಿನ ಪರಮವಿರೋಧಿಯಾಗಿ ಅದನ್ನು ಕಟುವಾಗಿ ಟೀಕಿಸುತ್ತಿದ್ದರು. ಅಲ್ಲದೆ, ಅವರ ರಾಜಕಾರಣ ಏಕಾಯಾಮವಾಗಿ ಕಾಂಗ್ರೆಸ್ ವಿರೋಧಿಯಾಗುವ ಭರದಲ್ಲಿ ವಸಾಹತುಶಾಹಿ ಪ್ರಭುತ್ವದ ಪರವಾಗಿದ್ದಂತೆ ಬಹಳ ಜನರ ಕಣ್ಣಿಗೆ ಕಾಣತೊಡಗಿತ್ತು. (ನಿರ್ದಿಷ್ಟ ಉದಾಹರಣೆಯೆಂದರೆ, ರಾಷ್ಟ್ರೀಯ ಆಂದೋಲನದ ಹೋರಾಟದ ಬಹು ಮುಖ್ಯ ಘಟ್ಟವಾದ 'ಭಾರತ ಬಿಟ್ಟು ತೊಲಗಿ' ಚಳುವಳಿಯ ಸಂದರ್ಭದಲ್ಲಿ ಸ್ವಾತಂತ್ರ್ಯ ಹೋರಾಟಗಾರರನೆಲ್ಲ ಬ್ರಿಟಿಷ್ ಸಕಾರ ಬಂಧಿಸಿಟ್ಟಿದ್ದಾಗ ಅಂಬೇಡ್ಕರ್, ಬ್ರಿಟಿಷ್ ವೈಸ್‌ರಾಯ್ ರಚಿಸಿದ ಮಂತ್ರಿಮಂಡಲದ ಮುಖ್ಯ ಸದಸ್ಯರಾಗಿ ಸೇರಿಕೊಂಡರು)

ಆದರೆ ೧೯೫೫ರ ಹೊತ್ತಿಗೆ ಲೋಹಿಯಾ ಅವರಿಗೆ ತಮ್ಮ ಮಾತೃಪಕ್ಷ ಸಮಾಜವಾದಿ ಪಕ್ಷದಲ್ಲಿ ಇರೋದಕ್ಕೆ ಸಾಧ್ಯ ಆಗ್ಲಿಲ್ಲ. ಯಾಕೇಂದ್ರೆ ಗಾಂಧಿ ಸ್ಫೂರ್ತಿಯಲ್ಲಿ ಯಾವ ಸಮಾಜವಾದಿ ತತ್ವದ ಹೊಸ ರೂಹುಗಳನ್ನು ಅವರು ಕಂಡುಕೊಂಡಿದ್ದರೋ ಅವು ಆ ಸಮಾಜವಾದಿ ಪಕ್ಷದ ಮೂಲಕ ಸಾಕಾರಗೊಳ್ಳಲು ಸಾಧ್ಯವಿಲ್ಲ ಅನ್ನೋ ಒಂದು ಅನುಮಾನ ಶುರುವಾಯ್ತು ಅವರಿಗೆ. ಪಕ್ಷದೊಳಗಿನ ಕೆಲ ಬೆಳವಣಿಗೆಗಳು ಅವರಿಗೆ ಜಿಗುಪ್ಸೆ ತಂದಿದ್ದವು. ಅದು ಐರೋಪ್ಯ ಸಮಾಜವಾದದ ಪಡಿಯಚ್ಚಾಗತೊಡಗಿ, ನೆಹರೂ ಸಮಾಜವಾದದ ಸಮೀಪಕ್ಕೆ ಹೋಗಲು ಶುರುಮಾಡಿತ್ತು. ಜೆಪಿ–ನೆಹರೂ ಮಾತುಕತೆ ಶುರುವಾಗಿ, ಸಮಾಜವಾದಿ ಆಂದೋಲನ ತನ್ನ ಮೂಲ ಕ್ರಾಂತಿಕಾರಕತೆಯನ್ನ ಕಳೆದುಕೊಳ್ಳತೊಡಗಿದೆ ಅಂತ ಅವರಿಗೆ ಅನ್ನಿಸತೊಡಗಿತ್ತು. ಹೀಗಾಗಿ ಅವರು ತಮ್ಮದೇ ಒಂದು ಸಮಾಜವಾದಿ ಪಕ್ಷವನ್ನ ಸ್ಥಾಪಿಸಬೇಕಾದಂತಹ ಪ್ರಮೇಯ ಉಂಟಾಯ್ತು.

ಆಗ ತಮ್ಮ ಈ ಹೊಸ ಸಮಾಜವಾದಿ ಪಕ್ಷ ಕಟ್ಟೋದಕ್ಕೆ ಮುಖ್ಯವಾಗಿ

ಆದಿವಾಸಿಗಳು, ಹರಿಜನರು–ದಲಿತ ಅನ್ನೋ ಶಬ್ದ ಆಗಿನ್ನೂ ಚಲಾವಣೆಗೆ ಬಂದಿರಲಿಲ್ಲ–ಮಹಿಳೆಯರು, ಮುಸ್ಲಿಮರು ಮತ್ತು ಬಡವರು. ಇವರನ್ನ ಗುರಿಯಾಗಿಟ್ಟುಕೊಂಡು ಇವರ ಆಶೋತ್ತರಗಳನ್ನ ಈಡೇರಿಸುವಂಥ ಪಕ್ಷವಾಗಿ ತಮ್ಮ ಸಮಾಜವಾದಿ ಪಕ್ಷವನ್ನು ಕಟ್ಟೋದಕ್ಕೆ ಲೋಹಿಯಾ ಪ್ರಯತ್ನ ಪಟ್ಟಾಗ ಅವರಿಗೆ ನೆನಪಿಗೆ ಬಂದದ್ದು ಅಂಬೇಡ್ಕರ್. ಅಂಬೇಡ್ಕರ್ ಆಗ ಹಲವಾರು ರೂಪಾಂತರಗಳನ್ನು ತಾಳಿ, ಶೆಡ್ಯೂಲ್ಡ್ ಕ್ಯಾಸ್ಟ್ ಫೆಡರೇಶನ್ ಅನ್ನೋ ರಾಜಕೀಯ ಪಕ್ಷವನ್ನು ಸ್ಥಾಪಿಸಿದ್ರು. ಇಂಡಿಯನ್ ಲೇಬರ್ ಪಾರ್ಟಿ ಅನ್ನುವ ಜಾತ್ಯಾತೀತ ಕಾರ್ಮಿಕ ಪಕ್ಷ ಮಾಡಿ ಅದರ ರಾಜಕಾರಣದಿಂದ ನಿರಾಶೆಗೊಂಡು ಅವರು ಮತ್ತೆ ಶೆಡ್ಯೂಲ್ಡ್ ಕ್ಯಾಸ್ಟ್‌ಗಳನ್ನೇ ಆಧರಿಸಿದಂಥ ಒಂದು ಪಕ್ಷವನ್ನ ಕಟ್ಟಕ್ಕೆ ಹೊರಟಿದ್ರು. ಅದು ಕೊನೆಗೆ ರಿಪಬ್ಲಿಕನ್ ಪಕ್ಷವಾಗಿ ಬೇರೆ ಏನೇನೋ ಆಗೋಯ್ತು. ಅದು ಬೇರೆ ವಿಷಯ. ಆಗ ಅಂಬೇಡ್ಕರ್‌ಗೆ ಲೋಹಿಯಾ ಒಂದು ಪತ್ರ ಬರೆದು ಅವರನ್ನ ತಮ್ಮ ಪಕ್ಷದ ಸ್ಥಾಪನಾ ಸಮ್ಮೇಳನಕ್ಕೆ ಓರ್ವ ವಿಶೇಷ ಅತಿಥಿಯಾಗಿ ಬರಲು ಆಹ್ವಾನಿಸ್ತಾರೆ. ಹಾಗೇ ಬಂಡವಾಳಶಾಹಿ ಮತ್ತು ಸಮತಾವಾದಿ(ಕಮ್ಯೂನಿಸ್ಟ್) ಸಮಾಜಗಳಿಗಿಂತ ಭಿನ್ನವಾದ ಸಮಾಜವನ್ನು ರೂಪಿಸುವ, ಒಂದು ಹೊಸ ನಾಗರೀಕತೆಯ ಅಸ್ತಿವಾರ ಹಾಕಬಲ್ಲ, ಸಮಾನತೆಯ ಅರ್ಥಗಳನ್ನು ಒಂದು ಮುಕ್ತ ಪ್ರಜಾಸತ್ತಾತ್ಮಕ ಪರಿಪ್ರೇಕ್ಷ್ಯದಲ್ಲಿ ಶೋಧಿಸಿ ಸಂಘಟಿಸಬಲ್ಲ, ಒಬ್ಬ ಹೊಸ ಮನುಷ್ಯನನ್ನು ರೂಪಿಸಲು ಅನುವಾಗುವಂತಹ ಒಂದು ಸಮಾಜವಾದಿ ಪಕ್ಷವನ್ನ ಮತ್ತು ಆಂದೋಲನವನ್ನ ಕಟ್ಟಬೇಕು ಅನ್ನೋ ಹಂಬಲದಿಂದ ಅವರು 'ಮ್ಯಾನ್‌ಕೈಂಡ್' ಅನ್ನೋ ಒಂದು ಮಹತ್ವಾಕಾಂಕ್ಷೆಯ ಜಾಗತಿಕ ತ್ರೈಮಾಸಿಕವನ್ನು ಶುರು ಮಾಡುತ್ತಾರೆ. ಅದಕ್ಕಾಗಿ ಜಾತಿ ಪದ್ಧತಿ ಕುರಿತಂತೆ 'ಭಾರತದ ಜನತೆ ಕೇವಲ ಸಿಟ್ಟಿನಿಂದ ಅಲ್ಲ, ಬೆಚ್ಚಿಬಿದ್ದು ಕೂರುವಂತೆ ಮಾಡುವಂತಹ' ಲೇಖನ ಬರೆದು ಕಳಿಸುವಂತೆ ಅಂಬೇಡ್ಕರ್‌ರನ್ನು ಕೋರುತ್ತಾರೆ. ಜೊತೆಗೆ ತಮ್ಮ ಪಕ್ಷದ ವಲಯ ಅಧ್ಯಯನ ಶಿಬಿರಕ್ಕೆ ಗಣ್ಯ ಸಂಪನ್ಮೂಲ ವ್ಯಕ್ತಿಯಾಗಿ ಬರುವಂತೆಯೂ ಅವರು ಶಿಬಿರದ ಸಕಲ ವಿವರಗಳೊಂದಿಗೆ ಅವರನ್ನು ಪ್ರೀತಿಯಿಂದ ಆಹ್ವಾನಿಸುತ್ತಾರೆ. ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಒಂದು ಸಂಗತಿ ಎಂದರೆ, ಈ ಹೊತ್ತಿಗೆ ಲೋಹಿಯಾ ಅಂಬೇಡ್ಕರ್‌ರ ವ್ಯಕ್ತಿತ್ವ ಮತ್ತು ರಾಜಕಾರಣದ ಬಗ್ಗೆ ಸಾಕಷ್ಟು ವಿಶ್ಲೇಷಣೆ ಮಾಡಿರುವ ಸೂಚನೆಗಳೂ ಈ ಪತ್ರದಲ್ಲಿ ಸಿಗುತ್ತವೆ. ಅವರು ಅಂಬೇಡ್ಕರ್‌ಗೆ ಹೇಳುವ ಈ ಮಾತುಗಳನ್ನು ಗಮನಿಸಿ: 'ಈಗ ಕೂಡ ಸಿಟ್ಟಿನೊಂದಿಗೆ ಸರ್ವಾನುಭೂತಿಯೂ ಬೆರೆತಿರಬೇಕೆಂಬುದು ನನ್ನ ಅಭಿಲಾಷೆ. ನೀವು ಕೇವಲ ಪರಿಶಿಷ್ಟ ಜಾತಿಗಳಿಗಷ್ಟೇ ಅಲ್ಲ, ಇಡೀ ಭಾರತದ ಜನತೆಯ ನಾಯಕರಾಗಬೇಕೆಂದು ನಾನು ಆಶಿಸುತ್ತೇನೆ.' ಈ ಪತ್ರ ಬರೆಯುವುದರ ಜೊತೆಗೆ, ಲೋಹಿಯಾ ಅವರು ಮೆಹ್ರೋತ್ರಾ ಮತ್ತು ಗೋಸ್ವಾಮಿ ಎಂಬ ತಮ್ಮಿಬ್ಬರು ಸಮಾಜವಾದಿ ಶಿಷ್ಯರನ್ನು ಅವರನ್ನು ಮುಖತಃ ಭೇಟಿಯಾಗಿ ಮಾತಾಡಲು ಕಳಿಸುತ್ತಾರೆ.

ಈ ಇಬ್ಬರು ಶಿಷ್ಯರು ಲೋಹಿಯಾಗೆ ಬರೆದ ಪತ್ರದ ಪ್ರಕಾರ ಅಂಬೇಡ್ಕರ್ ಲೋಹಿಯಾರ ಮಾತು ಮತ್ತು ಸಲಹೆಗಳನ್ನು ಸಹಾನುಭೂತಿಯಿಂದ ಆಲಿಸುತ್ತಾರೆ ಮತ್ತು ನೆಹರೂ ರಾಜಕಾರಣದ ಆಧಿಪತ್ಯವನ್ನು ಎದುರಿಸುವ ಅಗತ್ಯವನ್ನು ಒಪ್ಪುತ್ತಾರೆ. ಸ್ವತಃ ಅವರು ಲೋಹಿಯಾಗೆ ಪತ್ರ ಬರೆದು ಇಬ್ಬರೂ ಒಟ್ಟುಗೂಡಿ ಕೆಲಸ ಮಾಡಲು ಏನೆಲ್ಲ ಮಾಡಬೇಕೆಂಬುದನ್ನು ಚರ್ಚಿಸಲು ಒಂದು ದಿನಾಂಕ ನಿಗದಿ ಮಾಡಿ ಅವರನ್ನು ದೆಹಲಿಗೆ ಆಹ್ವಾನಿಸುತ್ತಾರೆ. ಆದರೆ ಏಕೋ ಈ ಭೇಟಿಗೆ–ಮಧ್ಯವರ್ತಿಗಳು ಚುನಾವಣಾ ಮೈತ್ರಿ ಇತ್ಯಾದಿಗಳಿಗೆ ಸಂಬಂಧಿಸಿದಂತೆ ಮಾತುಕತೆ ಮುಂದುವರೆಸಿದರಾದರೂ–ಇಬ್ಬರಿಗೂ ಅನುಕೂಲವಾಗುವ ದಿನ ಒಂದು ವರ್ಷವಾದರೂ ಕೂಡಿ ಬರುವುದೇ ಇಲ್ಲ. ಅಷ್ಟರಲ್ಲಿ ಅಂಬೇಡ್ಕರ್ ಅಕಾಲಿಕವಾಗಿ ನಿಧನರಾಗಿತ್ತಾರೆ. ಈ ಬಗ್ಗೆ ವಿವರವಾಗಿ ಬರೆದಿರುವ ಸುಪ್ರಸಿದ್ಧ ಲೋಹಿಯಾವಾದಿ ಚಿಂತಕ ಯೋಗೇಂದ್ರ ಯಾದವ್, ಈ ಭೇಟಿ ಅವರ ಜೀವಿತಾವಧಿಯಲ್ಲಿ ಅಸಾಧ್ಯವಾಗಿತ್ತೆಂದೇ ಊಹಿಸುತ್ತಾರೆ. ಏಕೆಂದರೆ ಅಂದಿನ ರಾಜಕೀಯ ಸಂದರ್ಭದಲ್ಲಿ, ಇಬ್ಬರ ನಡುವೆ ಸಾಕಷ್ಟು ಸಾಮಾನ್ಯ ರಾಜಕೀಯ ಹಿತಾಸಕ್ತಿಗಳು ಇದ್ದರೂ, ಇಬ್ಬರ ರಾಜಕೀಯ ಗ್ರಹಿಕೆಯ ಮೂಲ ನೆಲೆಗಳು, ಮನೋಭೂಮಿಕೆ ಮತ್ತು ಪರಿಭಾಷೆಗಳು ಸಾಕಷ್ಟು ಬೇರೆಯಾಗಿದ್ದವು. ಯೋಗೇಂದ್ರ ಯಾದವ್ ಮಾತುಗಳಲ್ಲಿ ಹೇಳುವುದಾದರೆ. ಸ್ವಾತಂತ್ರ್ಯಪೂರ್ವ ಕಾಲಘಟ್ಟದಲ್ಲಂತೂ ಅವರಿಬ್ಬರೂ ರಾಜಕಾರಣದ ಎರಡು ದಡಗಳಲ್ಲಿದ್ದರು.

ಲೋಹಿಯಾ, ಬಹುಶಃ ಅಂಬೇಡ್ಕರ್‌ರ ರಾಜ್ಯದವರಾದ ಕಾರಣ ಅವರ ಬಗ್ಗೆ ಹೆಚ್ಚಿನ ಸಹಾನುಭೂತಿ ಇದ್ದ ತಮ್ಮ ಶಿಷ್ಯ ಮಧುಲಿಮಯೆ ಅವರ ಕುತೂಹಲಕ್ಕಾಗಿಯೇನೋ ಅಂಬೇಡ್ಕರ್‌ರ ನಿಧನದ ಆರು ತಿಂಗಳುಗಳ ನಂತರ ತಮ್ಮ ಮತ್ತು ಅವರ ನಡುವಣ ಪತ್ರ ವ್ಯವಹಾರದ ದಾಖಲೆಗಳನ್ನು ಅವರಿಗೆ ಕಳಿಸುತ್ತಾ ಅವರಿಗೊಂದು ಪತ್ರ ಬರೆಯುತ್ತಾರೆ. ಅದರಲ್ಲಿ ಅವರು ಅಂಬೇಡ್ಕರ್ ಬಗೆಗೆ ಬರೆದಿರುವ ಮಾತುಗಳು ಅವರಿಬ್ಬರ ನಡುವೆ ಸಾಮಾನ್ಯ ಹಿತಾಸಕ್ತಿಗಳ ಜೊತೆಗೇ ಇದ್ದ ರಾಜಕೀಯ ವೈರುಧ್ಯಗಳ ಮೇಲೂ ಬೆಳಕು ಚೆಲ್ಲುವಂತಿವೆ. ಈ ಪತ್ರದಲ್ಲಿ ಲೋಹಿಯಾ ಅಂಬೇಡ್ಕರ್‌ರ ಅಕಾಲಿಕ ಸಾವು ತಮಗೆ ವೈಯಕ್ತಿಕ ವ್ಯಥೆಯನ್ನುಂಟು ಮಾಡಿದೆ ಅಂತ ಹೇಳ್ತಾ ಈ ಬಹುಮುಖ್ಯ ಮಾತುಗಳನ್ನಾಡ್ತಾರೆ: 'ಅಂಬೇಡ್ಕರ್ ಭಾರತದ ಬಹು ದೊಡ್ಡ ರಾಜಕೀಯ ನಾಯಕರಾಗಿದ್ದರು. ಬಹುಶಃ ಗಾಂಧೀಜಿಯೊಬ್ಬರ ಹೊರತಾಗಿ ಇನ್ನಾವ ಸವರ್ಣೀಯ ಹಿಂದೂ ನಾಯಕನಿಗಿಂತಲೂ ಅವರು ದೊಡ್ಡವರಾಗಿದ್ದರು. ಅವರು ಹಿಂದೂ ಧರ್ಮದಲ್ಲಿನ ಜಾತಿ ಪದ್ಧತಿಯನ್ನು ಒಂದಲ್ಲ ಒಂದು ದಿನ ನಾಶ ಮಾಡಬಹುದೆಂಬ ಆತ್ಮವಿಶ್ವಾಸದ ಪ್ರತೀಕವಾಗಿದ್ದು ಮತ್ತು ನಮ್ಮಂಥವರ ನೆಮ್ಮದಿಗೆ ಕಾರಣರಾಗಿದ್ದರು.' ಇದೇ ಪತ್ರದಲ್ಲಿ ಲೋಹಿಯಾ, ಅವರ ಕಹಿತನ ಮತ್ತು ಅನ್ಯರೊಂದಿಗೆ ಬೆರೆಯಲಿಚ್ಚಿಸದ ಗುಣಗಳ ಪ್ರಸ್ತಾವ ಮಾಡುತ್ತಾ 'ಅವರು ಜಾತಿ ಪರಿಧಿಯನ್ನು ದಾಟಿ ಹರಿಜನರ ಮಾತ್ರವಲ್ಲ, ಇಡೀ ಭಾರತದ ಜನತೆಯ ನಾಯಕರಾಗಲು ನಿರಾಕರಿಸಿದರು' ಅಂತ ವಿಷಾದದಿಂದ ಗಮನಿಸ್ತಾರೆ. ಅವರು ಅದೇ ವಿಷಾದದಲ್ಲಿ ಮುಂದುವರೆದು ಹೇಳ್ತಾರೆ: 'ಅವರ ಸಮುದಾಯದ ಐದು ಸಾವಿರ ವರ್ಷಗಳ ಕಾಲದ ನೋವು ಮತ್ತು ಅನ್ಯಾಯಗಳ ಚರಿತ್ರೆಯನ್ನು ನಾನು ಅರ್ಥಮಾಡಿಕೊಳ್ಳಬಲ್ಲೆ. ಆದರೆ ಅಂಬೇಡ್ಕರ್‌ರಂತಹ ದೊಡ್ಡ ನಾಯಕರು ಈ ಚರಿತ್ರೆಯ ಅಡ್ಡಗೋಡೆಯನ್ನು ದಾಟಿ ಹೊರಬರಬಲ್ಲರೆಂಬ ವಿಶ್ವಾಸವಿತ್ತು' ಎನ್ನುತ್ತಾರೆ. ಅದೇ ಉಸಿರಿನಲ್ಲಿ ಅಂಬೇಡ್ಕರ್ ಮಾದರಿಯ ರಾಜಕಾರಣವನ್ನು ಒಪ್ಪಿಕೊಳ್ಳದ ಲೋಹಿಯಾ, 'ಹರಿಜನ ಸಮುದಾಯ ಕಳೆದ ೪೦ ವರ್ಷಗಳ ಭಾರತದ ರಾಜಕೀಯ ಚರಿತ್ರೆಯನ್ನು ವಿವೇಚನೆಯಿಂದ ಗಮನಿಸುತ್ತಾ, ತನ್ನ ಕಹಿಯನ್ನು ಬಿಟ್ಟ ಮತ್ತು ಇಡೀ ದೇಶದ ನಾಯಕರಾಗಲು ತುಡಿಯುವಂತಹ ಕಲಿಕೆಯ ಶ್ರದ್ಧೆಯುಳ್ಳ ಅಂಬೇಡ್ಕರ್‌ರ ಮಾದರಿಯೊಂದನ್ನು ರೂಪಿಸಿಕೊಂಡು ಅನುಸರಿಸಬೇಕು' ಅಂತ ಹೇಳ್ತಾರೆ.

ಒಟ್ಟು ಈ ಪತ್ರವ್ಯವಹಾರದಲ್ಲಿ ಮೂಡಿ ಬರುವ ಎರಡು ಮುಖ್ಯ ಸಂಗತಿಗಳೆಂದರೆ, ಒಂದು: ಅಂಬೇಡ್ಕರ್ ಮತ್ತು ಲೋಹಿಯಾ ಇಬ್ಬರೂ ನೆಹರೂ ಅವರ ವ್ಯಕ್ತಿಕೇಂದ್ರಿತ ರಾಜಕಾರಣದಿಂದ ಬೇಸತ್ತಿದ್ದರು ಮತ್ತು ಒಂದು ಸಂಪೂರ್ಣ ಬದಲಿ ರಾಜಕಾರಣದ ಮಾದರಿಗಾಗಿ ಕಾತರಿಸುತ್ತಿದ್ದರು. ಇನ್ನೊಂದು: ಅಂಬೇಡ್ಕರ್ ದಲಿತ ರಾಜಕಾರಣದಲ್ಲಿ ಎಷ್ಟು ವ್ಯಸ್ತರಾಗಿಹೋಗಿದ್ದರೆಂದರೆ, ಅದನ್ನು ಸಾರ್ವತ್ರಿಕ ರಾಜಕಾರಣದೊಡನೆ ಸುಸಂಗತವಾಗಿ ಮತ್ತು ಸಾಮರಸ್ಯದೊಂದಿಗೆ ಕೂಡಿಸದಿದ್ದರೆ ಅದು ತನ್ನ ಗುರಿ ಮುಟ್ಟಲಾಗದು ಎಂಬುದರ ಕಡೆ ಅಷ್ಟು ಗಮನ ಹೋದಂತಿರಲಿಲ್ಲ ಮತ್ತು ಅದೇ ಅವರ ಹೋರಾಟ ಮತ್ತು ರಾಜಕಾರಣದ ಮುಖ್ಯ ತೊಂದರೆಯಾಗಿತ್ತು ಎಂದು ಲೋಹಿಯಾ ಭಾವಿಸಿದ್ದರು. ಆದರೆ ಇಂದಿನ ವಾಸ್ತವ ಸಂಗತಿ ಎಂದರೆ ಅಂಬೇಡ್ಕರ್ ಮತ್ತು ಲೋಹಿಯಾ ಈ ಇಬ್ಬರ ರಾಜಕಾರಣವೂ ತಮ್ಮ ಗುರಿಗಳನ್ನು ಮುಟ್ಟಲು ವಿಫಲವಾಗಿವೆ. ಅಂಬೇಡ್ಕರ್ ರಾಜಕಾರಣ ತನ್ನ ಅವನತಿಯನ್ನು ಮಾಯಾವತಿ ರಾಜಕಾರಣದಲ್ಲಿ ಕಂಡುಕೊಂಡಿದ್ದರೆ, ಲೋಹಿಯಾ ರಾಜಕಾರಣ ಮುಲಾಯಂ–ಲಾಲೂ ರಾಜಕಾರಣದಲ್ಲಿ ಕಂಡುಕೊಂಡಿದೆ. ಈ ಎರಡೂ ತಮ್ಮ ಇತರೆಲ್ಲ ರಾಜಕೀಯ ಆಯಾಮಗಳನ್ನು ಕಳೆದುಕೊಂಡು ಅಪ್ಪಟ ಜಾತಿವಾದಿ ರಾಜಕಾರಣವಾಗಿ ಮಾರ್ಪಾಟಾಗಿವೆ. ಇಂದು ಅಂಬೇಡ್ಕರ್‌ರನ್ನಾಗಲೀ, ಲೋಹಿಯಾರನ್ನಾಗಲೀ ವರ್ತಮಾನದ ಮೂರ್ತ ನೆಲೆಗಳ ರಾಜಕಾರಣದ ಪರಿಭಾಷೆಯಲ್ಲಿ ಚರ್ಚಿಸಲು ಸಾಧ್ಯವಾಗದಂತಹ ಪರಿಸ್ಥಿತಿ ಉಂಟಾಗಿದೆ. ಚರ್ಚೆ ಏನಿದ್ದರೂ ಅಕಡೆಮಿಕ್ ನೆಲೆಯಲ್ಲಿ ಮಾತ್ರ ಸಾಧ್ಯವಾಗಿದೆ. ಇದೇ ಸದ್ಯದ ಈ ಇಬ್ಬರ ರಾಜಕಾರಣದ ನಿಜವಾದ ದುರಂತವಾಗಿದೆ.

**(ಇದು ೨೦೧೪ರ ಅಕ್ಟೋಬರ್ ೧೧ರಂದು ಬೆಂಗಳೂರು ಆಕಾಶವಾಣಿ ಮತ್ತು ಬೆಂಗಳೂರು ವಿಶ್ವವಿದ್ಯಾಲಯದ ಬಾಬಾ ಸಾಹೇಬ್ ಅಂಬೇಡ್ಕರ್ ಅಧ್ಯಯನ ಮತ್ತು ಸಂಶೋಧನಾ ಕೇಂದ್ರದ ಸಹಯೋಗದಲ್ಲಿ ನಡೆದ ವಿಚಾರ ಸಂಕಿರಣವೊಂದರಲ್ಲಿ ಆಡಿದ ಮಾತುಗಳ ಸಂಕ್ಷಿಪ್ತ ರೂಪ. ಇದರ ಪೂರ್ಣಪಾಠವನ್ನು ತುಮಕೂರು ವಿಶ್ವವಿದ್ಯಾಲಯದ ಚಾತುರ್ಮಾಸಿಕ ಲೋಕಜ್ಞಾನದ ಜನವರಿ–ಏಪ್ರಿಲ್, ೨೦೧೫ ಸಂಚಿಕೆಯಲ್ಲಿ ಓದಬಹುದು–ಲೇ)**

'ಹೊಸ ಮನುಷ್ಯ' ಪತ್ರಿಕೆಗೆ
ಐದನೇ ವರ್ಷಕ್ಕೆ ಕಾಲಿಡುತ್ತಿರುವ ಶುಭ ಸಂದರ್ಭದಲ್ಲಿ
ಹುಟ್ಟುಹಬ್ಬದ ಶುಭಾಶಯಗಳು



– **ಹಿಂದೆ ಎಷ್ಟು ಪ್ರಳಯ ಹೋಯಿತ್ತೆಂದರಿಯೆ?**
**ಮುಂದೆ ಎಷ್ಟು ಪ್ರಳಯವಾಗುವುದೆಂದರಿಯೆ?**
**ತನ್ನ ಸ್ಥಿತಿಯ ತಾನರಿದಡೆ ಅದೇ ಪ್ರಳಯವಲ್ಲಾ!?**
**ತನ್ನ ವಚನ ತನಗೆ ಹಗೆಯಾದಡೆ ಅದೆ ಪ್ರಳಯವಲ್ಲ!?**
**ಇಂಥ ಪ್ರಳಯ ನಿನ್ನಲುಂಟೆ ಗುಹೇಶ್ವರ?**

**- ಅಲ್ಲಮ ಪ್ರಭು**

**–ರೇಖಾಂಬ ಪ್ರಭು**
ಮತ್ತು **ಚಿ. ಸತ್ಯಕಾಮ**
**ಶಿವಮೊಗ್ಗ**

---

**ಹೊಸ ಮನುಷ್ಯ' ಪತ್ರಿಕೆಗೆ**


**ಹುಟ್ಟುಹಬ್ಬದ ಶುಭಾಶಯಗಳು**

ಮೌನದಿಂದ ಒಡಮೂಡುವುದು ಆಲೋಚನೆ. ಆಲೋಚನೆಯಿಂದ ಒಡಮೂಡುವುದು ಮಾತು. ಹೀಗಾಗಿ ಮಾತು ಮೌನದ ಮೊಮ್ಮಗ ಇದ್ದಂತೆ. ಹಾಗೇ ಮಾತಿನ ಮೂರು ಪಟ್ಟು ಶಕ್ತಿ ಮೌನಕ್ಕೆ.

**-ರಮಣ ಮಹರ್ಷಿ**



**– ಎನ್. ಆರ್. ಬಾಲಸುಬ್ರಹ್ಮಣ್ಯ,**
**ಮೀನಾ,**
**ಕು. ಶ್ರೇಯಾ ಮತ್ತು ಕು. ಶ್ರಾವ್ಯ**




**ಆ** ರಾತ್ರಿಯನ್ನು ಮತ್ತೆ ನೆನೆಯುತಿದ್ದೇನೆ. ಬೆಂಗಳೂರಿನ ರೈಲು ಹತ್ತಿದ್ದೆ. ಅದು ಹೊರಟ ಸ್ಟೇಶನ್ನಿನಿಂದ ಆಗಲೇ ಬೋಗಿಯಲ್ಲಿ ಒಬ್ಬಾತ ಇದ್ದ. ಇದೇನು ತನ್ನ ಮನೆಯೋ ಎಂಬಂತೆ ಫೋನಿನಲ್ಲಿ ಗರ್ಜನೆಯ ದನಿಯಲ್ಲಿ ಮಾತಾಡುತ್ತ ಇದ್ದ. ಈ ಆರ್ಭಟದ ಜೊತೆ ಇರಬೇಕಲ್ಲಪ್ಪ ಎಂದು ಒಳಗೇ ಒಮ್ಮೆ ಅನಿಸಿತು. ಫೋನು ಮುಗಿದೊಡನೆ ಲ್ಯಾಪ್‌ಟಾಪ್, ಮತ್ತೆ ಸ್ವಲ್ಪ ಹೊತ್ತಿಗೆ ಫೋನು, ಬೋಗಿಯೊಳಗೆ ಒಟ್ಟು ಇದ್ದದ್ದು ನಾವಿಬ್ಬರೇ ಸದ್ಯಕ್ಕೆ. ಮುಸ್ಸಂಜೆಯಂತೂ ಕಾಣಲಿಲ್ಲ ನಾನು, ಸುಮ್ಮನೆ ಮಲಗಿಬಿಟ್ಟೆ. ನಾಳಿಗೆ ಬೇಕಾದ್ದನ್ನೆಲ್ಲ ಮಾಡಿಟ್ಟು ಇದು ಹೀಗೆ, ಇದು ಇಲ್ಲಿದೆ, ಇದನ್ನು ಹೀಗೆ ಮಾಡಿದರೆ ಸಾಕು, ಮುಂತಾಗಿ ಸೂಚನೆಗಳನ್ನೆಲ್ಲ ಪತಿಗೆ ಹೇಳಿ ಮತ್ತೆ ಮತ್ತೆ ಎಲ್ಲ ನೋಡಿಟ್ಟು ತುಸು ದಣಿದೂ ಇದ್ದೆ.

ಈತನ ಆರ್ಭಟಕ್ಕೆ ಕಣ್ಣು ಮುಚ್ಚಿ ಮಲಗಬಹುದು. ಕಿವಿ ಮುಚ್ಚಲಾದೀತೆ? ಅದಾದರೂ ಯಾವ ಥರದ ಆರ್ಭಟ. ಮೂಲ ಭಾಷೆ ತಮಿಳೋ ಮಲೆಯಾಳವೋ ಎಂಬಂಥ ಉಚ್ಚಾರದ ಹಾಗೂ ಕಂಠದ ಇಂಗ್ಲಿಷ್, ಢಮಢಮಾರ್ ಎಂದು ಪಟಾಕಿ ಹೊಡೆದಂಥದು. ನಾನೊಮ್ಮೆ ಮಗ್ಗುಲಾಗಿ ಅವನತ್ತ ನೋಡಿದೆ. ನೋಡಿದ್ದಕ್ಕಾದರೂ ಸೂಕ್ಷ್ಮ ಸಿಕ್ಕಿ ತುಸು ಮೆಲ್ಲ ಮಾತಾಡಿಯಾನೆ? ಉಹುಂ, ಬದಲು ಮಾತು ಮುಂದರಿಸುತ್ತಲೇ ಆತನೂ ನನ್ನತ್ತ ನೋಡಿದ; ನಕ್ಕ. ಮಾತೆಲ್ಲ ಮುಗಿದ ಮೇಲೆ, 'ಹುಬ್ಬಳ್ಳಿಯಿಂದ ಬರುತ್ತಿರೋದು' ಎಂದ. ಎದ್ದು ಕುಳಿತೆ, ಹೌದೆ ಎಂಬಂತೆ ಮುಖ ಅಲ್ಲಾಡಿಸಿದೆ.

'ಬಿಡಲಿಕ್ಕೆ ಬಂದವರು ಯಾರು, ನಿಮ್ಮ ಪತಿಯೇ?'

'ಹ್ಞೂ'.

ಮತ್ತೆ ಫೋನು ಬಂದಾಯಿತು. ಇನ್ನೊಬ್ಬರು ಮಾತಾಡುತ್ತಿರುವಾಗ ಸುಮ್ಮನೆ ಕುಳಿತುಕೊಳ್ಳಲಾಗುತ್ತದೆಯೇ? ಕಿವಿ ತೆರೆದು ಕೊಂಚ ತೆರೆದು ಆಲಿಸಿದೆ. ಈ ಬಾರಿ ಯಾರಿಗೋ ಮಂಗಳೂರಿನಲ್ಲಿ ರೂಂ ರಿಸರ್ವ್ ಮಾಡುತಿದ್ದ. ಎದುರಿನ ಪಾರ್ಟಿ ತುಸು ಚೌಕಾಶಿಯದಿರಬೇಕು. ಈ ಹೋಟೆಲಿನಲ್ಲಿ ಏಸಿಗೀಸಿ ಎಲ್ಲ ಇದೆ. ರೂಮು ದರವೂ ಹೋಲಿಕೆಯಲ್ಲಿ ತುಸು ವಾಸಿ. ಅದು ಬೇರೆ ಸಿಟಿಯ ನಡುವಿನಲ್ಲೇ ಇದೆ, ಆದರೆ ಸ್ವಲ್ಪವೇ ಒಳಗೆ, ಹಳೆಯದು ನಿಜ, ಅದರೆ, ಚೊಕ್ಕವಿದೆ, ಚೆನ್ನಾಗಿದೆ, ನೀವು ಯಾರೆಲ್ಲ ಬರುತ್ತೀರಿ ಸರ್, ಎಷ್ಟು ದಿನಕ್ಕೆ? ಹಾಗಾದರೆ ಬಿಡಿ, ಇದೇ ಸರಿ ನಿಮಗೆ . . .

ಮನಸ್ಸು ಒಂದು ಗಳಿಗೆ ಸುಮ್ಮನಿರುವುದಿಲ್ಲವಲ್ಲ, ತನ್ನಷ್ಟಕ್ಕೆ ಗುಣುಗಿಕೊಂಡೇ ಇರುತ್ತದೆ. ಬಾಸ್ ಬರುತ್ತಿರಬೇಕು ಎಂದು ಅವನ ಉಮೇದು ನೋಡಿ ಗುಣುಗಿತು. ನನಗೂ ಕೇಳದಂತೆ. ಆತ ಮಾತು ಮುಗಿಸಿದವ, 'ತಮಿಳುನಾಡಿನವ ನಾನು, ಕೆಲಸದ ನಿಮಿತ್ತ ಸುತ್ತುತ್ತಿದ್ದೇನೆ' ಎಂದು ನಕ್ಕ, ಹುದ್ದೆಯನ್ನೂ ಹೇಳಿದ. ತಮ್ಮ ಬಗ್ಗೆ ಹೇಳಿಕೊಳ್ಳುವುದೇ ಖುಶಿಯಿರುತ್ತಲ್ಲ ಕೆಲವರಿಗೆ, ಯಾರೂ ಕೇಳದೆಯೇ ಹೇಳುವ ಒಂದು ಹೆಸರಿಲ್ಲದ ಉತ್ಸಾಹ? ನಾನು ಹೌದೆ ಎನ್ನುವುದರೊಳಗೆ ಉಚ್ಚಾರ ನೋಡಿಯೇ ಅಂದಾಜು ಮಾಡಿದೆ ಎಂದು ಮನಸ್ಸು ಪಿಸುನುಡಿಯಿತು. ಶ್ಶೆ! ಒಟ್ಟು ಗಲಾಟೆ ಬೋಗಿಗೆ ಸಿಕ್ಕಿಹಾಕಿಕೊಂಡಂತಾಯಿತೆ! ಒಮ್ಮೆ ನಿದ್ದೆ ಬಂದರೆ ಸಾಕು. . . .ಇನ್ನೂ ಎರಡು ಸೀಟು ಇದೆಯಲ್ಲ, ಮಂಗಳೂರಿನಲ್ಲಿ ಯಾರಾದರೂ ಹತ್ತಿಯಾರು. ಹತ್ತಿದರೆ ಸಾಕು.

ಆತನೂ ಯಾರಿಗೋ ಹೇಳುತಿದ್ದ, 'ಮಂಗಳೂರು ಸೆಂಟ್ರಲ್‌ನಲ್ಲಿ ಇಳಿಯುತ್ತೇನೆ, ಎ-೧ ಹತ್ತಿರ ಕಾದಿರು.'

ಹಾಗಾದರೆ ಮಂಗಳೂರಿನಲ್ಲಿ ಇಳಿಯುವವ ಇವ. ಬಚಾವ್.

ಮಂಗಳೂರು ಹತ್ತಿರವಾದಂತೆ ಲ್ಯಾಪ್‌ಟಾಪೆಲ್ಲ ಮುಚ್ಚಿ, ಬ್ಯಾಗು ತೆಗೆದುಕೊಂಡು, ನನ್ನನ್ನೊಮ್ಮೆ ನೋಡಿ ನಕ್ಕು ಬರಲೆ ಎಂದು, ಹೋಗಿ ಬಿಟ್ಟ. ಇನ್ನು ಎಂದಿಗೂ ಭೇಟಿಯಾಗದವ. ಮತ್ತೆಂದಿಗೂ ಭೇಟಿಯಾಗದೆ, ಒಂದೇ ಒಂದು ಭೇಟಿಯಲ್ಲಿ, ಬೇಕಾಗಲೀ ಬೇಡವಾಗಲೀ ನೆನಪಿನಲ್ಲಿ ಉಳಿದೇ ಬಿಡುವ ಮಂದಿಯಾದರೂ ಎಷ್ಟಿದ್ದಾರೆ!

ಅಯ್ಯಮ್ಮ! ಬಿರುಗಾಳಿಯೊಂದು ಬಿರ್ರನೆ ಹೊರಟುಹೋದ ಹಾಗಾಗಿ ಒಮ್ಮೆಲೇ ಬೋಗಿ ತಣ್ಣಗಾಯಿತು. ವಿಪರೀತ ಗದ್ದಲವಿದ್ದದ್ದು ಒಮ್ಮೆಗೇ ಪ್ರಶಾಂತತೆಗೆ ಮಗುಚಿಕೊಂಡರೆ ಹೇಗೆ! ಆದರೆ ಇಷ್ಟು ತಣ್ಣಗಿರುವುದಾದರೂ ಯಾರಿಗೆ ಬೇಕು? ಅದೂ ಇವತ್ತಿನ ವಿದ್ಯಮಾನದಲ್ಲಿ ಮನಸ್ಸೇ ಕೆಟ್ಟುಹೋಗಿದೆ, ಬೋಗಿಯಲ್ಲಿ ಒಬ್ಬಳೇ ಪಯಣ ಮಾಡಲೂ ಭಯವೆನಿಸುತ್ತದೆ. ಮೈಮರೆತು ನಿದ್ದೆಯಾದರೂ ಬರುತ್ತದೆಯೇ?

ಜನ ಒಳಬರುವುದು ಸೀಟು ಹುಡುಕುವುದು ಲಗೇಜನ್ನು ಸೀಟಿನ ಕೆಳಗೆ ಕರ್ರ ತೂರಿಸುವುದು ಕೂಲಿಗಳು ಓಡಾಡುವುದು ನಡೆಯುತಿದ್ದಂತೆ ಅರ್ಧ ಸರಿದುಕೊಂಡಿದ್ದ ಪರದೆ ಪೂರ್ತಿ ಸರಿಯಿತು. ಇಬ್ಬರು ಒಳಬಂದರು. ಒಬ್ಬ ಮುದುಕ, ಅವನ ಮುಂದಿಂದ ಲಗೇಜು ಹಿಡಿದುಕೊಂಡು ಸೀಟು ಹುಡುಕುತ್ತ ಬಂದ ಯುವಕನೊಬ್ಬ. ಈ ಬೋಗಿಯಲ್ಲಿ ನಂಬರು ನೋಡಿ ಅಂತೂ ಸೀಟು ಸಿಕ್ಕಿದ ಅಯ್ಯಬ್ಬದಲ್ಲಿ 'ಓ ಇದ್ರೀ, ನಿಮ್ಸೀಟು ಇದ್ರೀ, ಬರ್ರೀ' ಎಂದ. ಮುದುಕ ಸಾವಧಾನವಾಗಿ ಒಳಬಂದು ಕುಳಿತ ಮೇಲೆ ಯುವಕ ಲಗೇಜನ್ನು ಬರ್ತ್‌ನ ಕೆಳಗೆ ದೂಡಿದ. ಇಲ್ಲಿಟ್ಟಿದೀನ್ರೀ, ಇಲ್ಲಿ, ಇಲ್ಲಿ ನೋಡ್ರೀ ಎಂದು ಮತ್ತೆ ಮತ್ತೆ ತೋರಿಸಿದ. ಮುದುಕ, 'ಹೂಂ ಹೂಂ ಸರಿ, ಇನ್ನು ನೀನು ನಡಿ' ಎನ್ನುತ್ತ 'ಬೇಡ್ರೀ ಇದೆಲ್ಲ ಬೇಡ್ರೀ' ಎನ್ನುತಿದ್ದಂತೆ ಅವನ ಕೈಗೆ ಒಂದಷ್ಟು ನೋಟು ತುರುಕಿಸಿದ. 'ನಾ ಹೋಗ್ಲೇನ್ರೀ ಹಂಗಾರೆ?' ಎಂದ ಯುವಕ; ಅಲ್ಲೇ ಒಂಚೂರು ಹೋದ ಹಾಗೆ ಮಾಡಿ (ಚಾಕರನಂತಿರಲಿಲ್ಲ ಆತ, ವೃದ್ಧನ ಕಡೆಗೆ ಪ್ರೀತಿ ಕಾರುಣ್ಯ ತುಂಬಿದ ಮುಗ್ಧನಂತಿದ್ದ) ಮತ್ತೆ ಬಂದ 'ಅಯ್ಯಾವ್ರೆ, ಎಲ್ಲ ಸರೀ ಇದ್ಯಲ್ಲ, ಒಮ್ಮೆ ನೋಡ್ಕೊಳ್ರೀ' ಎಂದ. 'ಸರಿಯಾಗಿದ್ಯೋ ಮಾರಾಯ, ನೀ ನಡಿ' ಎಂದ ಮುದುಕ. ಆದರೂ ಯುವಕ ಹೋಗಲೊಲ್ಲ, ಮುದುಕನನ್ನು ಬಿಟ್ಟು ಹೋಗಲು ಮನಸ್ಸೇ ಇಲ್ಲದ ಹಾಗೆ ಕಾಣಿಸಿದ. ಹೋದಂತೆ ಮಾಡುವ ಮತ್ತೆ ಬರುವ. ಅದೇ ಪ್ರಶ್ನೆಯನ್ನು ಬೇರೆ ರೂಪದಲ್ಲಿ ಕೇಳುವ. ನನಗಂತೂ ಆತ 'ನಾ ಹೋಗ್ಲೇನ್ರೀ ಹಂಗಾರೆ?' ಪದೇ ಪದೇ ಕೇಳುತಿದ್ದಂತೆ ಸೇಡಿಯಾಪು ಕೃಷ್ಣಭಟ್ಟರ 'ಚಿನ್ನದ ಚೇಳು' ಕತೆಯಲ್ಲಿ 'ನಾನು ಹಾರಲೋ? ನಾನು ಹಾರಲೋ?' ಎಂದು ಕೇಳುತಿದ್ದ ಭೂತದ ನೆನಪಾಗಿ ಸಣ್ಣಗೆ ನಗೆ ಬಂತು. ಯುವಕನೋ ಎಣ್ಣೆಮಣಕನಂತೆ ತಲೆಗಿಷ್ಟು ಎಣ್ಣೆ ಸುರಿದುಕೊಂಡು ಕ್ರಾಪು ತಲೆಗೆ ಮೆತ್ತಿದಂತೆ ಬಾಚಿಕೊಂಡಿದ್ದ. ಆತ ಹೋಗುವುದು ಮತ್ತೆ ಬಂದು ಇಣಿಕಿ 'ನಾ ಹೋಗ್ಲೇನ್ರೀ ಮತ್ತ?' ಅಂತ ಕೇಳುವುದು ಸಾಕೋಸಾಕಾದಂತೆ ಮುದುಕ ಒಮ್ಮೆ 'ನೀ ಹೋಗ್ತೀಯೋ ಇಲ್ಲೋ!' ಎಂದು ಸಿಡುಕಿದ. ಇಷ್ಟಾದ ಮೇಲೆಯೇ ಮುದುಕನ ಕಡೆಗೊಮ್ಮೆ ಕರುಣಾರ್ದ್ರ ನೋಟ ಬೀರಿ ಅಂತು ಆತ ಹೊರಟು ಹೋದ. ಇಲ್ಲ, ಹೋದವ ಮತ್ತೆ ಬಂದು, ಮೇಲಿನ ಬರ್ತ್‌ನಲ್ಲಿ ಇರಿಸಿದ್ದ ಹಾಸು ಹೊದಿಕೆ ಬ್ಲಾಂಕೆಟ್ ಪ್ಯಾಕೆಟುಗಳನ್ನು ಒಡೆದ. ಸೀಟಿನ ಮೇಲೆ ಹಾಸಲು ಹೊರಟವನಿಗೆ 'ಯೇ, ನೀ ಹೋಗು ಅಂದ್ನಲ್ಲೋ ಬೇವ್ಕೂಫ' ಅಂತ ಮುದುಕ ಸಿಡುಗುಟ್ಟುತ್ತಲೂ ಅವುಗಳನ್ನು ಸೀಟಿನ ಮೇಲಿಟ್ಟು, ಪರದೆ ಸರಿಸಿ ಪೂರ್ತಿ ಮುಚ್ಚಿ ಒಮ್ಮೆ ಪರದೆ ಎಡೆಯಿಂದ ಇಣುಕಿ, ಮುದುಕ ಕೆಂಗಣ್ಣಿನಿಂದ ನೋಡುತ್ತಲೂ ಹೊರಟುಹೋದ. ವೃದ್ಧನೆಂದರೆ ಇಷ್ಟು ಪ್ರೀತಿ ಇರುವವ, ಎಷ್ಟೊಳ್ಳೆಯವನಪ್ಪಾ. . .ಈಗ ಮುದುಕ ಕುಳಿತಲ್ಲೇ ಮತ್ತೆ ಸರಿಯಾಗಿ ಕುಳಿತುಕೊಂಡ. ತನ್ನ ಪುಟ್ಟ ಕೈಚೀಲ, ಪುಟ್ಟ ಟವಲು ಇತ್ಯಾದಿಗಳನ್ನು ಓರಣವಾಗಿಡುತ್ತ ಸುಭದ್ರವಾಗಿ ತನ್ನ ಜಾಗದಲ್ಲಿ ನೆಲೆಯೂರುವ ಸನ್ನಾಹಕ್ಕೆ ತೊಡಗಿದ. ಯುವಕ ತೆಗೆದಿಟ್ಟ ಹಾಸು ಹೊದಿಕೆಗಳನ್ನು ಬಿಡಿಸಿ ಒಪ್ಪವಾಗಿ ಹಾಸಿಕೊಂಡ. ಬ್ಲಾಂಕೆಟನ್ನು ಅರೆಬಿಡಿಸಿ ಕಾಲ ಮೇಲೆ ಇರಿಸಿಕೊಂಡ. ನಾನು ಮಲಗಿದಲ್ಲೇ ಕಣ್ಣು ಮುಚ್ಚುತ್ತ ತೆರೆಯುತ್ತ ಆಗೊಮ್ಮೆ ಈಗೊಮ್ಮೆ ನೋಡುತ್ತ ಇದ್ದು ಒಮ್ಮೆ 'ಎದ್ದು ಹೋಗಿ' ಬಂದು ಮತ್ತೆ ಮಲಗಿದೆ.

ಒಂದು ಕ್ಷಣದ ಹಿಂದೆ ಗುಡುಗು ದನಿಯಿಂದ ಗದಗುಡುತ್ತಿದ್ದ ಬೋಗಿ ಈಗ ನಿಶ್ಶಬ್ದವಾಗಿತ್ತು. ಆಫ್ ಸೀಸನ್ ಆಗಿದ್ದುದರಿಂದಲೋ ಏನೋ ಬರ್ತ್‌ಗಳೆಲ್ಲ ಖಾಲಿ ಇದ್ದವು. ಆಚೆ ಈಚೆ ಬೋಗಿಯಲ್ಲಿರುವ ಜನ ಊಟ ಮುಗಿಸಿ ಮೆಲುದನಿಯಲ್ಲಿ ಮಾತಾಡುತ್ತ ಮಲಗುವ ಸನ್ನಾಹ ನಡೆಸುತಿದ್ದುದು ಕೇಳಿಸುತಿತ್ತು. ನಾನೂ ಇನ್ನು ನಿದ್ದೆ ಹೋಗಬೇಕು, ಹಾಗಾದರೆ ಪಕ್ಕದ ಬರ್ತ್, ಈತನದು. ಅಡ್ಡಿಲ್ಲ, ಮುದುಕ. ಆ ಇಳಿದು ಹೋದ ಗುಡುಗುಡು ಗುಮ್ಮಟ ಇದ್ದಿದ್ದರೆ

ರಾತ್ರಿಯಿಡಿ ಪುಕ್ಕಿನಲ್ಲೇ ಕಾಲ ಕಳೆಯಬೇಕಿತ್ತು. ದೇವರೇ ಪಾರುಮಾಡಿದ– ಮನಸ್ಸು ಮಾತಾಡುತ್ತಲೇ ಇತ್ತು. ಯಾಕೆ ಪುಕ್ಕು ಏನು ಪುಕ್ಕು ಅಂತೆಲ್ಲ ತನಗೆ ತಾನೇ ದಬಾಯಿಸುವುದೇ ಮರೆತು ಹೋದಂತೆ.

ಎದುರೇ ಇರುವುದರಿಂದ ಕಣ್ಣು ಬೇಡವೆಂದರೂ ಆತನನ್ನು ದಾಟುತಿತ್ತು. ದಾಟುವಾಗೆಲ್ಲ, ಏನಾದರೊಂದನ್ನು ಗ್ರಹಿಸುತಿತ್ತು. ಒಮ್ಮೆ ಆಳಕ್ಕಿಳಿದ ಕಣ್ಣು, ಒಮ್ಮೆ ಗುಳಿಬಿದ್ದ ಕೆನ್ನೆ, ಎಲುಬಿನ ಬಳೆ ಬಿಟ್ಟು ಸೊರಗಿದ ಕತ್ತಿನ ಸುತ್ತ ಹೊಳೆವ ಬಂಗಾರದ ದಪ್ಪ ಚೈನು, ಕೃಶ ಶರೀರದ ಮೇಲೆ ಗೂಟದಲ್ಲಿ ನೇತಾಡುವಂತೆ ನೇತಾಡುತಿದ್ದ ಬಿಳೀ ಅಂಗಿ, ಬಿಳೀ ಪೈಜಾಮ, ಬಿಳೀ ತಲೆ, ಕರೀ ಮೈ ಬಣ್ಣ. ಸುಮ್ಮನೆ ಕೆಳಗೆ ಹರಿದ ದೃಷ್ಟಿಗೆ ಕಂಡ ಕರೀ ಎಂದರೆ ಕರಿ ಪಾದಗಳು, ಅವುಗಳ ಮೇಲೆ ನಾ ಕರಿಯೋ ನೀ ಕರಿಯೋ ಕೇಳುವಂತಿರುವ ಕರೀ ಚಪ್ಪಲಿದಂಟು.

ಮುದುಕನ ಕಿಸೆಯಲ್ಲಿನ ಸ್ಮಾರ್ಟ್ ಫೋನ್ ಕಿಣಿಕಿಣಿಸಿತು. ಕಣ್ಣಿಗೆ ಹತ್ತಿರ ಹಿಡಿದುಕೊಂಡು ಫೋನ್ ಆನ್ ಮಾಡಿ ಬೆಳಿಗ್ಗೆ ಬರುತ್ತೇನೆ, ಎಂಟುಗಂಟೆಗೆ ಎಂದ. ಮತ್ತೆ ಆಚೆಯಿಂದ ಏನು ಕೇಳಿದರೋ 'ಹೇಳಿದ್ರೆ ಕೇಳಿಸ್ತಿಲ್ವಾ?' ಯಜಮಾನ ಗತ್ತಿನಲ್ಲಿ ಗದರಿದ. ತೆಲುಗು ಉಚ್ಚಾರದ ಕನ್ನಡ. ಮುಖದಲ್ಲಿ ನಗೆಯ ಒಂದೇ ಒಂದು ಗೀಟು ಇಲ್ಲದವ. ಅಷ್ಟರೊಳಗೇ ಆತನನ್ನು ಒಂದು ಸಮುದಾಯದೊಳಗೆ ಸೇರಿಸುವ ಪ್ರಯತ್ನ ಒಳಗಿಂದೊಳಗೆ ನನಗೇ ಅರಿಯದಂತೆ ನಡೆಯುತ್ತಿರುವುದು ಗಮನಕ್ಕೆ ಬಂದು ಈ ಸಲ ದಬಾಯಿಸಿ ಸುಮ್ಮನಾಗಿಸಿದೆ. ದೀಪ ಆರಿಸಿದ ಆತ.

ನಾನು ಫೋನು ಸ್ವಿಚ್ ಆಫ್ ಮಾಡಿ ಮಗ್ಗುಲು ಮಗುಚಿ ನಿದ್ದೆಗಾಗಿ ಪ್ರಯತ್ನಿಸಿದೆ. ನಿದ್ದೆಯೆಂಬುದು ಎಷ್ಟು ವಿಚಿತ್ರವೋ. ಒಮ್ಮೊಮ್ಮೆ ನಿಂತಲ್ಲೇ ಧುಮ್ಮಿಕ್ಕಿ ಬರುತ್ತದೆ. ಒಮ್ಮೊಮ್ಮೆ ಮಲಗಿ ಎಷ್ಟೊತ್ತಾದರೂ ಗೊತ್ತೇ ಆಗದಂತೆ ನಡೆಯುವ ಒಳಗಿನ ಗದ್ದಲ ಕೇಳಿ ಹೆದರಿಯೋ ಇನ್ನೇನೋ ಹತ್ತಿರವೇ ಸುಳಿಯುವುದಿಲ್ಲ. ಈಗಲೂ ಹಾಗೆಯೇ. ಮೇಲಿನ ಬರ್ತ್‌ಗಳಲ್ಲಿಯೂ ಯಾರಿಲ್ಲ. ಬದಿಯಲ್ಲಿಯೂ. ಆಚೆ ಈಚೆ ಜನ ಇದ್ದಾರೆ ನಿಜ, ಆದರೆ. . .

ಹೊತ್ತು ಬಹಳವಾಗಿರಬೇಕು. ರೈಲು ಘುಡುಘುಡಿಸುತ್ತ ಮುಂದರಿಯುತಿತ್ತು. ನಿದ್ದೆ ಬರುತ್ತಿಲ್ಲ. ಮುಚ್ಚಿದರೂ ತೆರೆದಂತೆ ಕಣ್ಣು ನಿಚ್ಚಳವಾಗಿತ್ತು. ನಾನು ಮತ್ತೆ ಮಗ್ಗುಲಾದೆ. ನೋಡಿದರೆ, ಇದೇನು! ಮುದುಕ ಇನ್ನೂ ಕುಳಿತೇ ಇದ್ದಾನೆ! ಪರದೆಯ ದಿಕ್ಕಿಗೆ ಮುಖಮಾಡಿ ಚಕ್ಕಳಮಕ್ಕಳ ಹಾಕಿ, ಶಿಲೆಕಲ್ಲಿನಂತೆ ಅಲುಗಾಡದೆ. ಹಾಸಿಕೊಂಡ ಹಾಸಿನ ಮೇಲೆಯೇ. ಬ್ಲಾಂಕೆಟನ್ನು ಕಾಲಮೇಲೆ ಎಳೆದು ಕೊಂಡಂತೆಯೇ. 'ಏನು, ಭೂತದ ಹಾಗೆ ಕುಳಿತಿದ್ದೀ' ಎಂದು ಕೇಳುತ್ತಾರಲ್ಲ, ಹಾಗೆ.

ಮುಂಚಿನಂತಾಗಿದ್ದರೆ, 'ಏನಜ್ಜಾ, ನಿದ್ದೆ ಬೀಳುತ್ತಿಲ್ಲವೆ?' ಅಂತ ಕಲ್ಲನ್ನು ಅಲ್ಲಾಡಿಸಿಯೇ ಬಿಡುತಿದ್ದೆ. ಆದರೆ ಕಾಲವೋ ನಾನೋ ಮುಂಚಿನಂತಿಲ್ಲವಲ್ಲ, 'ಅವ ಮಲಗಲಿ ಬಿಡಲಿ, ನಿನಗೇಕೆ ಅಧಿಕ ಪ್ರಸಂಗ?' ಎಂದು ಬಾಯಿಗೆ ಬೀಗ ಹಾಕುವಷ್ಟು 'ಬೆಳೆದಿದ್ದೆ'. ಕಳಿಸಲು ಬಂದ ಪತಿ ಬೇರೆ 'ಜಾಗ್ರತೆ ಮತ್ತೆ. ನಿನಗೆ ಕೆಲ ಬಾರಿ ಏನೂ ತಿಳಿಯುವುದಿಲ್ಲ' ಎಂದು ಸಿಟ್ಟು ನಗೆ ಎರಡೂ ಒಟ್ಟಿಗೇ ಬರಿಸಿ ಹೊರಟು ಹೋಗಿದ್ದರಲ್ಲ. ಆಗೇನೋ ಆ ಗುಡುಗುಡು ರಾಯನಿದ್ದ. ಈತ ಪಾಪ, ಮುದುಕ.

ಆದರೇನು? ಮುದಿತನದ ಜೊತೆ ಇರುವ ಭಯಾನಕ ಗಾದೆ ಬೇರೆ ಸಮಯ ಕಾದಂತೆ ನೆನಪಾಗಿದೆ.

ಮಗ್ಗುಲು ಬದಲಿಸಿ ಬೆನ್ನು ಹಾಕಿ ಮಲಗಲೂ ಭಯ. ಬೆನ್ನಿಗೆ ಕಣ್ಣುಂಟೆ? ಹೊದಿಕೆಯನ್ನು ಮುಖದ ಮೇಲೆ ಕಣ್ಣಿನವರೆಗೂ ಮುಚ್ಚಿ, ನಿದ್ದೆಗೆ ಪ್ರಯತ್ನಿಸಿದೆ. ಉಹುಂ, ಅದು ಹತ್ತಿರ ಬರುತ್ತಿಲ್ಲ, ಮನದ ಮೂಲೆಯೊಳಗೆ ಮನೆ ಮಾಡಿಯೇ ಬಿಟ್ಟಿರುವ ಗೂಬೆ ಕೂಗ ಹತ್ತಿ ಅದನ್ನು ಓಡಿಸುತ್ತಿದೆ. ಆಚೀಚಿನ ಬರ್ತ್‌ನಲ್ಲಿ ಜನ ಇದ್ದಿದ್ದರಾದರೂ? . . ಬಿಡು, ಜನ ಇದ್ದರೂ ಕಷ್ಟ, ಇಲ್ಲವಾದರೂ. ಈಗ ಏನು? ಅಂಥದ್ದೇನು, ಭ್ರಾಂತು ಅತಿಯಾಯಿತು. ಮಲಗು ಸುಮ್ಮನೆ. ಇನ್ನು ಮೇಲೆ ಸುದ್ದಿ ಕೇಳುವುದು, ಪೇಪರು ಓದುವುದು ಎಲ್ಲ ಬಂದ್.

ವಿಧಿಯೇ!

***

ಕಣ್ಣು ತೆರೆದಷ್ಟು ಸಲವೂ ಆತ ಕುಳಿತೇ ಇದ್ದಾನೆ. ಮಂದ ಬೆಳಕಿನಲ್ಲಿ ಭೂತದಂತೆಯೇ ಕಾಣುತಿದ್ದಾನೆ.

ಫ್ಹ!

ಕಲ್ಲಿನ ಹಾಗಿದ್ದವ ಅಲುಗತೊಡಗಿದ್ದಾನೆ.

ಪುಟ್ಟ ಟವೆಲಿನಿಂದ ಮುಖವರೆಸಿಕೊಳುವ.

ತಲೆಯ ಮೇಲೆ ಸುಮ್ಮನೆ ಕೈಯಾಡಿಸಿಕೊಳುವ.

ಕನ್ನಡಕ ತೆಗೆದು ಕಣ್ಣೊರಸಿಕೊಳುವ.

ಮೈಯನ್ನಿಡೀ ಮುದ್ದೆ ಮುದುಡಿ ಮತ್ತೆ ಸರ್ತ ಮಾಡಿಕೊಳ್ಳುವ.

ತಿದ್ದಲಾರದ ಅಪರಾಧ ಮಾಡಿದವನಂತೆ, ಸಿಟ್ಟು ಪರಾಕಾಷ್ಠೆಗೇರಿದಂತೆ ತನ್ನನ್ನು ತಾನೇ ತಿವಿದುಕೊಳ್ಳುವ

ಇದೀಗ ಹುಚ್ಚರ ಸಹವಾಸ ಆಯಿತಲ್ಲಪ್ಪಾ. . .

ಆ ಆರ್ಭಟವೀರನಾದರೂ ಇದ್ದಿದ್ದರೆ ಆರ್ಭಟಿಸಿ ಆರ್ಭಟಿಸಿ ಸುಸ್ತಾಗಿ ನಿದ್ರಿಸುತಿದ್ದನೇನೋ. ಇದು ಇನ್ನೂ ಅತ್ತತ್ತ ಎನುವಂತಾಯಿತೆ!

ಅರೆಗಣ್ಣಿನಲ್ಲಿ ಎಲ್ಲ ನೋಡುತ್ತ ಮುಚ್ಚುತ್ತ ಇದ್ದಂತೆ ನಿದ್ದೆ ಬರಲಿ ಎಂದು ಹಂಬಲಿಸುತಿದ್ದವಳು ನಿದ್ದೆ ಬಾರದಿರಲಿ ಎಂದು ಹಂಬಲಿಸ ತೊಡಗಿದೆ.

ಆದರೆ ಎಷ್ಟೊತ್ತಿಗೆ ಬಂದು ಬಿಟ್ಟಿತೋ. . .

ಗಾಢ ನಿದ್ದೆ ಆವರಿಸಿಯೇ ಬಿಟ್ಟಿತು. . . .

***

ಯಾರೋ ಮೈಮೇಲೆ ತಲೆ ಮೇಲೆ ಕೈಯಿಟ್ಟಂತಾಗಿ ಥಟ್ಟನೆ, ಮೊದಲೇ ಭಯಗೊಂಡವಳು, ಹೌಹಾರಿಬಿದ್ದು ಎಚ್ಚರಾದೆ. ಹ್ಹೊ! ಕಡೆಗೂ ಭಯ ಸತ್ಯವಾಯಿತೆ!

ಅಯ್ಯೊ ಅಮ್ಮ!

ಮುದುಕ! ನನ್ನ ಬರ್ತ್‌ನಲ್ಲಿಯೇ! ಬದೀಯಲ್ಲಿ ಮುದುರಿ ಕುಳಿತಿದ್ದಾನೆ. ನನ್ನ ಬಾಗುಮಗ್ಗುಲ ಮೇಲೆ ಒಂದು ಕೈಯಿಟ್ಟು ಒಂದು ಕೈಯಿಂದ ತಲೆ ನೇವರಿಸುತ್ತ ಮುಖವನ್ನೇ ನೋಡುತ್ತಿದ್ದಾನೆ.

ಆಕಸ್ಮಿಕ ಸಂಭವಿಸಿದಾಗ ತಕ್ಷಣ ಚೀತ್ಕಾರ ಹೊರಡುತ್ತದೆ ಅಂತಲೇ ಅಂದುಕೊಂಡಿದ್ದೆನಲ್ಲ! ಆದರೆ ಅಂತಹ ಕಲ್ಪನೆಗಳೆಲ್ಲ ಹೋಕಿಲ್ಲದ ಸಿನೆಮಾ ನೋಡಿದ ಪ್ರಭಾವ, ಚೀತ್ಕಾರ ಹೊರಡದೇ ಇರುವುದೂ ಇದೆ ಎಂಬುದಕ್ಕೆ ನಾನೇ ಸಾಕ್ಷಿ. ಕೂಗಲಾರದೆ ದನಿ ಕಟ್ಟಿಹೋದ ಸ್ಥಿತಿಯಲ್ಲಿ ಕಂಗಾಲು ಕವುಚಿ ಆತನನ್ನೇ ಬಿರುಬಿರು ನೋಡತೊಡಗಿದೆ. ಆತನೋ ಇನ್ನೂ ಕುಳಿತೇ ಇದ್ದಾನೆ, ನನ್ನನ್ನೇ ನೋಡುತಿದ್ದಾನೆ.

ಬೆಪ್ಪುಬಡಿದೆ ನಾನು, ಸಣ್ಣಗೆ ಕಂಪಿಸ ತೊಡಗಿದೆ.

ಪಟಕ್ಕನೆ ಎದ್ದು ಕುಳಿತು ಈಗ ಜೋರಾಗಿ ಕೂಗಿಕೊಂಡೆ.

ಆತ 'ಕೂಗವ್ವ, ಬೇಕಾದಷ್ಟು ಕೂಗು. ಎಲ್ಲ ಬರ್ಲಿ, ಜನ ಪಂಚಾಯ್ತಿ ಸೇರಿ ನನ್ನ್ ಬೆನ್ನು ಮುರೀಲಿ ಕಣವ್ವಾ. ನಿಂಗೆ ಅನ್ಯಾಯ ಮಾಡ್ದೆ ಮಗಳೆ ನಾನು, ಏನು ಎತ್ತ ತಿಳೀದೇ, ಸಹಿ ಹಾಕ್ಬಿಟ್ಟವ. ನಿಂಗೇನೂ ಇಲ್ದ್ ಹಾಂಗೆ ಮಾಡ್ದೆ ಕಣವ್ವಾ ತಾಯೀ. ಹಾಳಾದ್ ಬುದ್ಧೀನ ಎಲ್ಲ್ ಕಳೆದಿದ್ನೋ, ಹೊಲಸು ತಿನ್ನೋ ಕೆಲ್ಸ ಮಾಡ್ದೆ. ನನ್ನ ಕ್ಷಮಿಸವ್ವಾ ಕ್ಷಮಿಸೂ' ಎಂದು ಗದ್ಗದ ಕಂಠದಲ್ಲಿ ಸ್ವಗತವಾಗಿ ಹೇಳುತ್ತ ಹೇಳುತ್ತ ಎದ್ದು ತನ್ನ ಬರ್ತ್‌ಗೆ ಮರಳಿದ. ಮರಳಿದವನೇ ಬೋರಲು ಮಲಗಿಬಿಟ್ಟ.


ಅರರೆ! ಇವ ಎಲ್ಲಿಯ ಲಿಯರ್ ಮಹಾರಾಜ!

ಗೊಂದಲ ಮತ್ತು ಭೀತಿಯ ಮಡುವಿನಲ್ಲಿಯೇ ಅಚ್ಚರಿ ಬೆರೆತು ಒಳಗೇ ಉದ್ಗರಿಸಿದೆ ನಾನು.

ಎಲ್ಲ ಮೈಮರೆತು ನಿದ್ದೆಹೋದ ಹೊತ್ತದು. ಅಂಥಲ್ಲೂ ಯಾರೋ ಇಬ್ಬರು ದಢದಢನೆ ಓಡಿ ಬಂದರು, ಏನು ಏನಾಯಿತು? ಚೈನು ಎಳೆಯಬೇಕೆ– ಎಂದು ಮುಂತಾಗಿ ಏನೋ ಆಗಿಯೇ ಬಿಟ್ಟಿದೆ ಎಂಬಂತೆ ಸಹಾಯಕ್ಕೆ ಸನ್ನದ್ಧರಂತೆ ಗಾಬರಿಗಾಬರಿಯಾಗಿ ಕೇಳಿದರು. ಛಕ್ಕನೆ ಲೈಟು ಹಾಕಿದರು. ಏನಾದರೂ ಅಪಘಟನೆಯೆ, ತದುಕಬೇಕೆ ಎಂಬಂತೆ ಮುದುಕನನ್ನು ಮೂಕಸನ್ನೆಯಲ್ಲಿ ತೋರಿಸಿದರು. ತೋರಿಸಿದ್ದಷ್ಟೇ ಅಲ್ಲ, ಕ್ಷಣ ತಡೆದಿದ್ದರೆ ಅದನ್ನೂ ಮಾಡುತಿದ್ದರೇನೋ; ಆಗಲೇ ತೋಳೆತ್ತಿಯೇ ಬಿಟ್ಟಿದ್ದರು.

ಅದನ್ನು ನೋಡಿದ್ದೇ ಮಿಂಚು ಹೊಡೆದಂತಾಗಿ ನಾನು ಭಯರೋಗ ಪೀಡಿತ ಮನಸ್ಸಿನ ಬಾಯಿಬತ್ತಿ ಹಿಡಿದೆ.

'ಅಯ್ಯೊ, ಅಂಥದ್ದೇನಿಲ್ಲ, ಕನಸು, ಕೆಟ್ಟ ಕನಸು, ಕೂಗಿಕೊಂಡೆನೆ, ಅಷ್ಟು ಗಟ್ಟಿ! ನನಗೇ ತಿಳಿಯಲಿಲ್ಲ . . .ಥ್ಯಾಂಕ್ಸ್, ಥ್ಯಾಂಕ್ಸ್ . . ಥ್ಯಾಂಕ್ಯೂ' ಎಂದು ಧಡಕ್ಕನೆ ಮಲಗಿ ಹೊದಿಕೆ ಎಳೆದುಕೊಂಡೆ. *



**(ವೈದೇಹಿವರು ಸಾಹಿತ್ಯದ ಬಹುತೇಕ ಎಲ್ಲ ಪ್ರಕಾರಗಳಲ್ಲೂ ಬರೆದು ಸೈ ಎನಿಸಿಕೊಂಡಿರುವ ಕನ್ನಡದ ಹಿರಿಯ ಲೇಖಕಿ)**

# ಕಾವ್ಯ ಲಹರಿ


ಚಿತ್ರ: ರೂಪ ಹಾಸನ

## ಭರವಸೆ

ಕಾಮನಬಿಲ್ಲು ಮೂಡಲಿ ಗೆಳೆಯ
ಛಿದ್ರವಾಗಿರುವ ಹೃದಯದಲಿ
ತಾರೆಯ ಗೊಂಚಲು ಮಿಂಚುತಲೀ
ಕತ್ತಲು ತುಂಬಿದ ಬದುಕಿನಲಿ

ಎಲ್ಲೆಡೆ ಕೇಳುವ ಗೋಳಿನ ಬದಲು
ಜಗದಲಿ ಹರಿಯಲಿ ಗಾನಸುಧೆ
ನೆಲೆಯನು ಕಾಣದೆ ನೆಲಕೆ ಬಿದ್ದಿರುವ
ಮುಖದಲಿ ಅರಳಲಿ ದಿವ್ಯಪ್ರಭೆ

ಹಾವಿನ ಸಾವಿರ ಹೆಡೆಗಳ ನಡುವೆ
ತೇಲುತ ಬರಲಿ ಕೊಳಲದನಿ
ಸಾವಿರ ಸಾವಿನ ದನಿಗಳು ಕರೆದರು
ಮೊಳಗಲಿ ಎದೆಯಲಿ ಜೀವಧ್ವನಿ

ವಿಷವೂಡುವ ಕೈ ನಡುಗುತ್ತಿಹುದು
ಮುಖದಲಿ ಮಿನುಗಿದೆ ಕಪಟನಗೆ
ಬಗೆಬಗೆ ನಗೆಯಲಿ ಕೊಲ್ಲುವ ಹಗೆಯಿದೆ
ಮೃತ್ಯುವು ಅಡಗಿದೆ ನೆರಳಿನಲಿ



ನೂರು ಬಾಣಗಳು ಹೊಕ್ಕರು ಎದೆಗೆ
ಜಗ ಬೆರಗಾಗಲಿ ನಕ್ಕುಬಿಡು
ದಾಸ್ಯದ ಶೃಂಖಲೆ ಬಿಗಿಯುತ್ತಿದ್ದರು
ಹಾಸ್ಯದ ಮುಗಿಲನು ತೇಲಿಬಿಡು

–ಡಾ. ಸಿದ್ಧಲಿಂಗಯ್ಯ

## ಅಗ್ನಿಯ ಅನಂತ ಲೀಲೆ


ಚಿತ್ರ: ರೂಪ ಹಾಸನ

ಉರಿಯುತ್ತಿದೆ ನೆಲ ಉರಿಯುತ್ತಿದೆ ಜಲ
ಸುಟ್ಟುರಿಯುತ್ತಿಹ ರವಿಸಖಿ ಬಾಲೆ
ಬಡಬಾಗ್ನಿಯ ಅನಂತ ಲೀಲೆ

ಕಾಡುಮೇಡುಗಳಲ್ಲಿ ಊರುಕೇರಿಗಳಲ್ಲಿ
ಕಿಡಿ ನುಡಿ ಕೆನ್ನಾಲಿಗೆ ಚಾಚಿ
ಬಂಗಲೆ ಜೋಪಡಿ ಮನೆ ಮನಗಳಲ್ಲಿ
ಪ್ರೀತಿ ಪ್ರಣಯದ ಪುರುಷಾರ್ಥದ ದಳ್ಳುರಿ
ಅಂತಸ್ಥಿನ ಅಸಮಾನತೆ ಭುಗಿಲೆದ್ದು
ಜಾತ್ಯಾಂಧರ ಒಡಲುರಿಯಲ್ಲಿ
ನಂದುತ್ತಿಹ ಕರುಣೆಯ ಕರುಳಿನ ಬಳ್ಳಿ

ಪುಟಿದೇಳುತ್ತಿದೆ ಒಡಲಗ್ನಿಯ ಜ್ವಾಲೆ
ಪ್ರತಿಭಟನೆಯ ಸುಭಟನು ಸತಿಸಾಧ್ವಿಯರ ಸಖನು
ಕಾಮಾಂಧರ ಕೆಂಗಣ್ಣಿನ ಕಿಡಿ
ಜಿದ್ದು ಜಿಹಾದಿನ ಭಸ್ಮಾಂಗಿಗಳ ಕುಟಿಲಾಗ್ನಿ
ಸಿಡಿದುರಿಯುತ್ತಿದೆ ಮತ ಧರ್ಮದ ಮದ ಮತ್ಸರ



ಧೀಶಕ್ತಿಯ ಅರಣಿಯ ದಿವ್ಯಾಗ್ನಿಯ ಕುಡಿ
ಪುಟಗೊಳ್ಳಲಿ ತಿಳಿಮನದ ಅಂತಃಕರಣ
ಪಂಚಾಗ್ನಿಯ ಸಾತ್ವಿಕ ತಪಸಿನ ಸಿದ್ಧಿ
ಸಖ್ಯದ ಸಾಂಗತ್ಯದ ಸಮಭಾವದ ಜ್ಯೋತಿ
ಕವಿ ಮಾತಿನ ರಸ ಭಾವದ ನಿಜದರಿವಿನ
ಕುಡಿ ಹೊಮ್ಮಲಿ ಶೀಲಾಗ್ನಿಯ ನನ್ನಿ
ತಿಂಗಳ ತಿಳಿವಿನ ಬೋಧಿಯ ಪ್ರೀತಿ

–ಸತ್ಯನಾರಾಯಣರಾವ್ ಅಣತಿ

## ಒಂದು ದಿನ


ಚಿತ್ರ: ರೂಪ ಹಾಸನ

ನಾನು ನೋಡದ
ನಾನು ಕೇಳದ
ನಾನು ನಂಬದ
ಆ ದೇವರನ್ನು ಪ್ರಾರ್ಥಿಸಿದೆ ಒಂದು ದಿನ.

ಮುಕ್ತಿ ಕೊಡು
ಹಾಸುಗೆಯಲ್ಲಿ ಹೊರಳಾಡಿ ನರಳಾಡುವವರಿಗೆ
ಬಿಟ್ಟು ಬಿಡು
ಸಾಸಿವೆ ಜೀವ ಹಿಡಿದು ತೊಳಲಾಡುವವರಿಗೆ

ಜೀವಕ್ಕೂ ಬೇಸರಾದವರ
ಸಾವಿಗೂ ದೂರಾದವರ
ಕೋಟಿ ಕೋಟಿ ಪಿಳುಗಣ್ಣ ಜೀವಿಗಳಿಗೆ ಮುಕ್ತಿ ಕೊಡು



ಈ ನೆಲದ ಎಲ್ಲ
ಆಸ್ಪತ್ರೆಗಳ ಕಣ್ಣು ಮುಚ್ಚಿಸಿಬಿಡು
ಬಿಳಿಬಟ್ಟೆ ಜನರ
ನಿಟ್ಟುಸಿರುಗಳಿಗೆ ಕೊನೆಯೊಂದ ಹಾಡು.

ಆತ್ಮಹತ್ಯಾ ಸರಣಿಗಳ
ಕತ್ತರಿಸಿಬಿಡು

–ಸತೀಶ್ ಕುಲಕರ್ಣಿ

## ಗುರುತಿಲ್ಲದ ಹೆಜ್ಜೆ

ನೀ ಬಿಟ್ಟು ಹೋದಮೇಲೆ
ಯಾರೂ ಭೇಟಿಯಾಗಿಲ್ಲ
ನೀ ಊರಿದ ಪಾದದ ಗುರುತು
ಈ ಹೃದಯದ ಮೇಲೆ ಇನ್ನೂ ಉಳಿದಿದೆ
ಯಾರೂ ಅದರ ಮೇಲೆ ಹೆಜ್ಜೆ ಇಡುತ್ತಿಲ್ಲ
ಹೆಜ್ಜೆ ಗುರುತನು ಸರಿಸಿ ಪಕ್ಕಕ್ಕೆ ದಾಟಿ
ಹೋಗುತ್ತಿದ್ದಾರೆ ವಿದಾಯ ಹೇಳುವಂತೆ

ಹರಿದ ಕಣ್ಣೀರು ಕೆನ್ನೆಯ ಮೇಲೇ ಇಳಿದಂತೆ
ಗುರುತಿಡದು ಮರುಗುತ್ತಾರೆ
ಯಾರೊಬ್ಬರೂ ಹತ್ತಿರ ಬರುವುದಿಲ್ಲ
ಕಣ್ಣೀರ ಕಲೆಯ ಒರೆಸುವುದಿಲ್ಲ
ಸತ್ತೇ ಹೋದಂತೆ ಸುತ್ತ ನೊಣ ಮುತ್ತಲು
ಆರಂಭವಾಗುತ್ತದೆ ಕಾಲ

'ನಾನಿನ್ನೂ ಸತ್ತಿಲ್ಲ'
ಪಿಸುನುಡಿ ಕೇಳುವುದಿಲ್ಲ ಯಾರಿಗೂ
ಅಳಿಸಿಹೋದ ಅಕ್ಷರದಂತೆ
ಯಾರ ಕಣ್ಣಿಗೂ
ಬೀಳುವುದಿಲ್ಲ ಅರೆತೆರೆದ ಕಣ್ಣು



ಯಾರಿಗೂ ಕೇಳಿಸುವುದಿಲ್ಲ ತಾಪ
ಒಬ್ಬರಿಗೂ ತಾಳ್ಮೆಯಿಲ್ಲ ಪಾಪ
ಉಸಿರಿದ್ದರೂ ತಾಗಿಸಿ ಮಾಡಿಸುತ್ತಾರೆ
ಸ್ಮಶಾನ ಯಾತ್ರೆ

–ಬಾ.ಹ. ರಮಾಕುಮಾರಿ

## ಊರುವೆ ಬೀಜ




ಊರುವೆ ಬೀಜ
ಗುಣಿ ಮಾಡಿ.
ಇಡೀ ಇರುಳ
ಒಳಗು ಮಾಡಿ

ಮಗಮಗಿಸುವ ಹಗಲು
ನಿಧಾನ ಬರುವಂತೆ
ಸಾವಧಾನಗೊಳಿಸುವೆ
ರಾತ್ರೆಯ.

ಬೆಳಕ ಬೀಜ
ಊರುವೆ–
ಗುಣಿ ತೋಡಿ

ಸಕಲ ಕಾಲಕು ಹಬ್ಬಿ
ನಿಲುವಂಥ ವೃಕ್ಷ.
ಲಕ್ಷೋಪಲಕ್ಷ
ಎಲೆ ಧರಿಸಿ
ಜಗವಿಡೀ ಚೆಲ್ಲುವುದು ಹರಿತ್ತು.



ಚಿತ್ರ: ರಾಮನಗೌಡ

ನೂರು ದಾರಿಗಳನೆಲ್ಲ ಏಕ ಮಾಡಿ
ಲೋಕವ ಸಾಕುವಂಥ
ಬೀಜ ಊರುವೆ
ಹದದ ಹೊಲದಿ
ಮೊದಲ ಮಳೆ ಸಮೇತ.

**–ಕೆ.ಪಿ. ಮೃತ್ಯುಂಜಯ**

## ಶತಮಾನಗಳಿಗಿನ್ನು ಹರೆಯದ ಕಾಲ



ಒಲೆಯ ಸೌದೆಯನು ತಳ್ಳುತ ಕುಳಿತ
ಅವ್ವನ ಕಣ್ಣಲ್ಲಿ ಅಪ್ಪನದೆ ದಾರಿ
ಅಂಬಲಿಗೆ ಹೆಸರಿಟ್ಟ ಮಡಿಕೆಗೆ
ಎಷ್ಟು ಶತಮಾನದ ಹರೆಯವೊ.

ಹೊಟ್ಟೆ ಹಿಡಿದಳುವ ನಮಗೆಲ್ಲ
ಕಣ್ಣಗಲಿಸಿ ಜಬರಿಸುವ ಹುಸಿಕೋಪ
ಖಾಲಿ ಡಬ್ಬಗಳನೆ ತಡಕಾಡುವ–
ಕೈಗಳಿಗೆ ಎಷ್ಟು ಶತಮಾನದ ಹರೆಯವೊ.

ಬೆವರು ನೀರಾಗಿಸಿದ ಅಪ್ಪನ ಮೈತುಂಬ
ಗುರುತಾಗದವರ ಮೋಡಿ ಗಾಯಗಳು
ಅಂಬಲಿ ಬಾಯಿಗಂಟಿದಂತೆ ಬದುಕಿದ ಜೀವ
ಕಣ್ಣಲ್ಲಿ ಕನಸ ಹುಡುಕುವ ಅಪ್ಪನ ಕನಸುಗಳಿಗೆ
ಎಷ್ಟು ಶತಮಾನದ ಹರೆಯವೊ.



ಚಿತ್ರ: ರಾಮನಗೌಡ

ಅಪ್ಪನ ವಲ್ಲಿ ಅವ್ವನ ಸೀರೆ ಆರಿಸಿ
ಚಂದಾಗಿ ಚಿತ್ತಾರಿಸಿದ ಕೌದಿಗೆ
ಮೈತುಂಬ ಬಣ್ಣಗಳು ಅಂಚಂಚಿಗೂ–
ಹಕ್ಕಿಗಳು ಅಕ್ಕನ ಕೈ ಕುಸುರಿಗೆ
ಎಷ್ಟು ಶತಮಾನದ ಹರೆಯವೊ.

ಅಮ್ಮ ಹೇಳುವ ಕತೆತುಂಬ
ನಾನೆರಾಜ ಅತ್ತೆಯ ಮಗಳು ರಾಣಿ.
ಆಗಸವ ಎಗರಿಸಿ, ಚುಕ್ಕಿ ಚಂದ್ರರ ಜೇಬಿಗಿಳಿಸಿ,
ಹಾರುಗುದುರೆಯನೇರಿ, ಹಾಲುಬಾನವನುಂಡ–
ಕತೆಗಳಿಗೆ ಎಷ್ಟು ಶತಮಾನದ ಹರೆಯವೊ

**–ಎಚ್.ಎಸ್. ರಾಮನಗೌಡ**

## ಕನಸೊಂದು



ಚಿತ್ರ: ಸಿ.ರವೀಂದ್ರನಾಥ್

ಕೆಟ್ಟಕನಸೊಂದು ಬಿದ್ದು
ಉಟ್ಟ ಬಟ್ಟೆಯೆಲ್ಲ ಬೆವರಿ
ನಡುಗಿಬಿಟ್ಟೆ ನಾನು
ಅಂಥ ಸೆಕೆಯಲ್ಲೂ.

ಪಕ್ಕದಲಿ ಮಲಗಿದ್ದ
ಪುಟ್ಟ ಮಗು
ಸಿಹಿ ನಗುತ್ತಿತ್ತು
ನಿದ್ದೆಯಲ್ಲೂ.

ನನ್ನ ಯೋಚನೆಗಳೆಲ್ಲ
ಭಾರವಾಗಿ
ಅಹಂಕಾರವಾಗಿ
ತಲೆಜಾರಿ
ನೆಲಕ್ಕಂಟಿ
ಕಾಲುಗಳು ತೂಗಿ ಗಾಳಿಯಲ್ಲಿ
ಉಸಿರೇ ಕಟ್ಟಿದಂತೆ
ಕೆಟ್ಟ ಕನಸು


ಆಮೇಲ್ಯಾಕೋ
ಅನ್ನಿಸಿತು
ಕನಸೇ ನಿಜ
ನಿಜವೆಲ್ಲ ಸುಳ್ಳು,
ಸುಂದರವಾದ
ಕಣ್ಣುಗಳೊಳಗಿನ್ನೇನಿಲ್ಲ
ಖಾಲಿ ಬರೀ ಪೊಳ್ಳು.



ಮಂಪರಿನಲ್ಲೇ ಎದ್ದು
ಬುದ್ಧನಂತೆ
ಹೊರಡಲನುವಾದೆ
ಕುಡಿಯಲೊಂದಿಷ್ಟು ನೀರು.

**–ಸ್ವಯಂಪ್ರಭ**

## ಸರೋದ್: ಕೆಲವು ಹಾಯ್ಕುಗಳು



ಚಿತ್ರ: ಸಿ.ರವೀಂದ್ರನಾಥ್

ಸರೋದ್ ಸ್ವರಗಳು
ತೊಳೆಯುತ್ತಿವೆ
ನನ್ನ ಮಲಿನ ಹೃದಯ

***

ಸಂಗೀತ ಸಂಜೆ
ಪಾರಿವಾಳಗಳ ಕೊಕ್ಕಿನಲ್ಲಿ
ಸರೋದ್ ಸ್ವರದ ತುಣುಕುಗಳು

***

ಆಳದ ನೋವು
ಸರೋದ್ ಸ್ವರಗಳು
ಇಳಿಯುತ್ತಿವೆ

***

ಬಂಗಾರದ ಅಂಗಡಿಯಲ್ಲಿ
ದಾರಿತಪ್ಪಿ ಬಂದ ಸರೋದ್
ಎತ್ತಕೊಂಡು ಬಂದೆ

***



ಸರೋದ್
ತುಂಬಿ ಬಂದಿದೆ
ತುಂಬಿ.....

**-ಡಾ.ಸಿ.ರವೀಂದ್ರನಾಥ್**

# ಸಮಕಾಲೀನ ಕನ್ನಡ ಸಾಹಿತ್ಯ ಪರಿದೃಶ್ಯ: ಐದು ನೋಟಗಳು

ಕನ್ನಡದಲ್ಲಿ ಇಂದು ವಿಫುಲವಾಗಿ ಸಾಹಿತ್ಯ ಸೃಷ್ಟಿಯಾಗುತ್ತಿದೆ. ಲೇಖಕರ ಸಂಖ್ಯೆಯೂ ವಿಪರೀತವಾಗಿದ್ದು, ಅವರ ಸಾಮಾಜಿಕ ಹಿನ್ನೆಲೆಗಳ ಮತ್ತು ಅನುಭವ ವೈವಿಧ್ಯವೂ ಹೆಚ್ಚಿದೆ. ಸಾಹಿತ್ಯ ಪ್ರಕಾರಗಳ ವಿಂಗಡಣೆಗಳ ನಡುವಣ ಗೆರೆಗಳು ಮಸುಕುಗಾಗುತ್ತಾ ಹೊಸ ಪ್ರಕಾರಗಳೂ ರೂಪುಗೊಳ್ಳತೊಡಗಿವೆ. ಆದರೆ ಇದೆಲ್ಲವೂ ವರ್ತಮಾನದ ಒಟ್ಟು ಕನ್ನಡ ಸಂವೇದನೆಯೆಂಬುದನ್ನು ಹಿಡಿದಿಡಲಾಗುತ್ತಿದೆಯೆ? ಈ ಹಿಂದಿನ ತಲೆಮಾರುಗಳು ಸೃಷ್ಟಿಸಿದ ಸಾಹಿತ್ಯದ ಎದುರು ಇದರ ಶಕ್ತಿ–ದೌರ್ಬಲ್ಯಗಳೇನು? ಈ ಕುರಿತು ಇಲ್ಲಿ ಐವರು ಸಾಹಿತಿಗಳು–ಸಾಹಿತ್ಯ ಚಿಂತಕರ ವಿವಿಧ ನೋಟಗಳಿವೆ.

ನಮ್ಮ ಈ ಕೆಳಗಿನ ಮೂರು ಪ್ರಶ್ನೆಗಳನ್ನು ಇವರು ಒಟ್ಟಾಗಿ ಗ್ರಹಿಸಿದಂತೆ ಉತ್ತರಗಳನ್ನು ನೀಡಿದ್ದಾರೆ. ನಮ್ಮ ಪ್ರಶ್ನೆಗಳು ಹೀಗಿದ್ದವು:

೧) ಕನ್ನಡ ಸಾಹಿತ್ಯ ಇಂದು ತನ್ನ ಸೃಜನ ಮತ್ತು ಸೃಜನೇತರ ನೆಲೆಗಳೆರಡರಲ್ಲೂ (ಈ ಹಿಂದಿನ ತಲೆಮಾರುಗಳ ಸಾಹಿತ್ಯ ಸೃಷ್ಟಿಗೆ ಹೋಲಿಸಿದಂತೆ) ತನ್ನ (ಸಾಹಿತ್ಯಕ) ಗುಣಮಟ್ಟವನ್ನು/ಸ್ಪಂದನವನ್ನು ಕಳೆದುಕೊಳ್ಳುತ್ತಿದೆ ಎಂಬ ಮಾತಿದೆ. ಇದನ್ನು ನೀವು ಒಪ್ಪುವಿರಾ? ನೀವು ಒಪ್ಪುವುದಿಲ್ಲವಾದರೆ, ಇಂತಹ ಮಾತುಗಳಿಗೆ ಕಾರಣಗಳೇನಿರಬಹುದು? ಅಥವಾ ಸಾಹಿತ್ಯವೆಂಬುದರ ಅರ್ಥೋದ್ದೇಶಗಳೇ ಬದಲಾಗುತ್ತಿದೆಯೇ?

೨) ಒಪ್ಪುವುದಾದರೆ, ಇದಕ್ಕೆ ಕಾರಣಗಳೇನಿರಬಹುದು ಮತ್ತು ಇದರ ಪರಿಣಾಮಗಳೇನಾಗಬಹುದು?

೩) ನೀವು ಗಮನಿಸಿದಂತೆ ಇತ್ತೀಚಿನ ವರ್ಷಗಳಲ್ಲಿ ನಿಮಗೆ ಆಸೆ ಹುಟ್ಟಿಸಿರುವ ಐದು ಮುಖ್ಯ ಕೃತಿ ಮತ್ತು ಕೃತಿಕಾರರನ್ನು ಹೆಸರಿಸಿ ಮತ್ತು ಅವರು ಆಸೆ ಹುಟ್ಟಿಸಿರುವುದೇತಕ್ಕೆ ಎಂದು ಹೇಳಿರಿ.

## ಏಕಾನುಗಳು ಮುಖ್ಯವಾಗಿದ್ದಾರೆ, ಬರವಣಿಗೆಯು ಹಿನ್ನೆಲೆಗೆ ಸರಿದಿದೆ.



ಇವು ಅನಿಸಿಕೆಗಳೇ ಹೊರತು ತೀರ್ಮಾನಗಳಲ್ಲ. ಹಲವು ಹಿನ್ನೆಲೆಗಳ, ಮನೋಧರ್ಮಗಳ, ಪೂರ್ವಸಿದ್ಧತೆಗಳ ಬರಹಗಾರರು, 'ಸರ್ವಸಮ್ಮತವಾದ' ಯಾವುದೇ ನಿರ್ದೇಶನಗಳಿಲ್ಲದೆ, ನಿಜಕ್ಕೂ ಕುಲಗೆಟ್ಟಿರುವ ಸಾಹಿತ್ಯಶಿಕ್ಷಣವನ್ನು ಪಡೆದು, ಲಾಭೈಕನಿಷ್ಠವಾದ ಮಾಧ್ಯಮಗಳು ಮತ್ತು ಪ್ರಕಾಶನೋದ್ಯಮಗಳ ನಡುವೆ ಸಿಕ್ಕಿಕೊಂಡಾಗ ನಿಜವಾದ ಪ್ರತಿಭೆಗೂ ದಿಕ್ಕು ತೋಚುವುದಿಲ್ಲ. ಕನ್ನಡದ ಸಾಹಿತ್ಯ ಪರಂಪರೆ ಮತ್ತು ಕನ್ನಡದಾಚೆಗಿನ ಮೌಲಿಕ ಸಾಹಿತ್ಯದೊಂದಿಗೆ ಅರ್ಥಪೂರ್ಣವಾದ ಸಂಬಂಧವನ್ನು ಇಟ್ಟುಕೊಳ್ಳುವುದಕ್ಕೆ, ನಾವೇ ಕಟ್ಟಿಕೊಂಡ ಸಾಮಾಜಿಕನ್ಯಾಯ, ಸಾಮಾಜಿಕ ಪ್ರಸ್ತುತತೆ ಮತ್ತು ಸ್ಥಳೀಯವಾದ ಅನುಭವಗಳಿಗೆ ಕೊಡುವ ಒತ್ತು ಮುಂತಾದ ಮಹತ್ವದ ವಿಷಯಗಳ ಕಿರಿಯಾಳದ ಅನ್ವಯವು ಅಡ್ಡಿಯಾಗಿದೆ. ವಾಸ್ತವವಾದ ಅನುಭವ, ಭಾವನೆ ಮತ್ತು ವಿಚಾರಗಳನ್ನು ಪ್ರಾದೇಶಿಕವಾದ ಭಾಷೆಯಲ್ಲಿ ಹೇಳಿದರೆ, ಸಾಹಿತ್ಯವಾಗಿಬಿಡುತ್ತದೆ ಎನ್ನುವ ಭ್ರಮೆಯನ್ನು ಹುಟ್ಟಿಸಲಾಗಿದೆ. ಆತ್ಮವಿಮರ್ಶೆಯಲ್ಲಿ ತೊಡಗಿಕೊಳ್ಳಲು ಸಿದ್ಧವಿಲ್ಲದ ವ್ಯಕ್ತಿಗಳು ಮತ್ತು ಸಮುದಾಯಗಳು ಒಟ್ಟಿಗೆ ಸೇರಿಕೊಂಡು, ನಿಜವಾದ ಲೇಖಕರ ಬದಲು, ಆಕ್ರಮಣಶೀಲರಾದ ವಕೀಲರನ್ನು ಸೃಷ್ಟಿಸುತ್ತಿದ್ದಾರೆ. ನಿಜವಾದ ಸಾಹಿತ್ಯದ ಹುಟ್ಟಿಗೆ ಕಡ್ಡಾಯವಾದ ಕಥಾಕಲ್ಪನೆ, ಆಕೃತಿಕಲ್ಪನೆ ಮತ್ತು ಭಾಷಿಕ ಕಲ್ಪನೆಗಳು ಕಾಣೆಯಾಗುತ್ತಿವೆ. ಭಾವನೆಗಳಿಗೂ ಭಾವುಕತೆಗೂ ಇರುವ ಅಂತರ ಮಸುಳಿಸಿದೆ. ಸುಲಭವಾಗಿ ಅರ್ಥವಾಗುವ, ರಂಜಿಸುವ, ಯಥಾಸ್ಥಿತಿಯ ಮುಂದುವರಿಕೆಗೆ ಕುಮ್ಮಕ್ಕು ಕೊಡುವ ಬರವಣಿಗೆಯು ಜನಪ್ರಿಯವಾಗುತ್ತಿದೆ. ಓದುಗನಿಗೆ ಸವಾಲಾಗಿ, ಅವನ ತೀವ್ರವಾದ ತೊಡಗುವಿಕೆಯನ್ನು ಪಡೆದುಕೊಂಡು, ತಾನು ಅವನೊಳಗೆ ಬೆಳೆದು ಅವನನ್ನೂ ಬೆಳೆಸುವ ಬರವಣಿಗೆಯು ಬಂದರೂ ಅದನ್ನು ಮೆಚ್ಚುವವರು ಸಿಗುವ ಹಾಗೆ, ಓದುವವರು ಸಿಗುವುದಿಲ್ಲ. 'ಸಾಹಿತ್ಯಕ ಪುಢಾರಿ'ಗಳು ಸಂಸ್ಕೃತಿಯ ಹಣೆಬರೆಹವನ್ನು ನಿರ್ಧರಿಸುವ ಈ ಸನ್ನಿವೇಶವು ಅನಾರೋಗ್ಯಕರವಾದುದು. ಇಂದು ನಮಗೆ ಏಕಾನುಗಳು ಮುಖ್ಯವಾಗಿದ್ದಾರೆ, ಬರವಣಿಗೆಯು ಹಿನ್ನೆಲೆಗೆ ಸರಿದಿದೆ. ಬಸವಣ್ಣನವರಿಂದ ಮೊದಲಾಗಿ ದೇವನೂರ ಮಹಾದೇವರವರೆಗೆ ಇಂಥ 'ಉತ್ಸವಮೂರ್ತಿ' ಮೆರವಣಿಗೆ ನಡೆಯುತ್ತದೆ. ಈ ವಿದ್ಯಮಾನಗಳನ್ನು ಆದಷ್ಟು ಪ್ರಾಮಾಣಿಕವಾಗಿ ವಿವರಿಸುವ ವಿಮರ್ಶೆಯು ಇರುವುದೇ ಕಡಿಮೆ. ಇದ್ದರೂ ಅದಕ್ಕೆ ಮೂರು ಕಾಸಿನ ಬೆಲೆಯೂ ಇಲ್ಲ.

ಪ್ರತಿಯೊಂದು ಪೀಳಿಗೆಯಲ್ಲಿಯೂ ಕುವೆಂಪು, ಬೇಂದ್ರೆ, ಕಾರಂತರಂತಹ ಲೇಖಕರು ಇರಬೇಕೆಂದು ನಿರೀಕ್ಷಿಸುವುದು ಸರಿಯಲ್ಲ. ಅಂಥವರು ಬರುವುದೇ ಇಲ್ಲವೆಂದು ಮೊದಲೇ ನಿರ್ಧರಿಸುವುದು ಕೂಡ ಅನ್ಯಾಯವೇ.


ವಿಕ್ರಂ ವಿಸಾಜಿ


ಜ.ನಾ. ತೇಜಶ್ರೀ


ಅಂಕುರ್ ಬೆಟಗೇರಿ

ಬರವಣಿಗೆಯ ಮೊದಲ ಹಂತದಲ್ಲಿ ತೋರಿಸಿರುವ ಪ್ರತಿಭೆ ಮತ್ತು ಎಚ್ಚರಗಳನ್ನು ಕಾಪಾಡಿಕೊಂಡರೆ, 'ಸರ್ವರ ಸಮ್ಮತ ಸಂತೆಯ ದಾರಿ'ಗಳಿಗೆ ಮರುಳಾಗದಿದ್ದರೆ, ಮಾಧ್ಯಮನಿರ್ಮಿತವಾದ ಕೀರ್ತಿಗೆ ಕರಗಿ ಹೋಗದಷ್ಟು ನೋವು ಮತ್ತು ಏಕಾಂತಗಳನ್ನು ಕಾಪಾಡಿಕೊಂಡರೆ ಅತ್ಯುತ್ತಮವಾದುದನ್ನು ಬರೆಯಬಲ್ಲ ಬರಹಗಾರ್ತಿಯರು ಮತ್ತು ಬರಹಗಾರರು ನಮ್ಮ ನಡುವೆ ಇದ್ದಾರೆ. ದಿಗ್ಭ್ರಮೆ ಹುಟ್ಟಿಸುತ್ತಿರುವ ಸಾಮಾಜಿಕ ವಿದ್ಯಮಾನಗಳು ಮತ್ತು ಮಾನವೀಯತೆಯ ಮೂಲನೆಲೆಗಳನ್ನು ಕಳೆದುಕೊಂಡ/ ಉಳಿಸಿಕೊಂಡ ಮನುಷ್ಯರನ್ನು ನಿಷ್ಠುರವಾದ ಪ್ರೀತಿಯಿಂದ ನೋಡಬಲ್ಲ, ಸಾಹಿತ್ಯವೆಂಬ ಕಲೆಯ ಸಾಧ್ಯತೆಗಳನ್ನು ಹಿಗ್ಗಿಸಬಲ್ಲ ಕವಿಗಳು, ಕಥೆಗಾರರು ನಮ್ಮ ನಡುವೆ ಈಗಲೂ ಇರುವರೆಂದು ನನ್ನ ನಂಬಿಕೆ.

ವಯಸ್ಸಿನ ಗೊಡವೆಗೆ ಹೋಗದೆ, ಈಚಿನ ವರ್ಷಗಳಲ್ಲಿ ಮಹತ್ವದ ಕೆಲಸ ಮಾಡಿದವರಲ್ಲಿ ಷ. ಶೆಟ್ಟರ್, ಡಿ.ಎನ್. ಶಂಕರಭಟ್, ಕೆ. ಸತ್ಯನಾರಾಯಣ, ಲಲಿತಾ ಸಿದ್ದಬಸವಯ್ಯ, ಪ್ರತಿಭಾ ನಂದಕುಮಾರ್, ಅಮರೇಶ ನುಗಡೋಣಿ, ಮೊಗಳ್ಳಿ ಗಣೇಶ್ ಮತ್ತು ಹೆಚ್.ಎಸ್. ನಾಗವೇಣಿ ಮುಖ್ಯರೆಂದು ನಾನು ತಿಳಿದಿದ್ದೇನೆ.

ನಲವತ್ತು ವರ್ಷಗಳ ಆಸುಪಾಸಿನಲ್ಲಿ ಮತ್ತು ಅದಕ್ಕಿಂತ ಕಡಿಮೆ ಇದ್ದು ಬಹಳ ಚೆನ್ನಾಗಿ ಬರೆಯುತ್ತಿರುವವರ ಪಟ್ಟಿಯಲ್ಲಿ ಜ.ನಾ. ತೇಜಶ್ರೀ, ಮೌನೇಶ್ ಬಡಿಗೇರ, ಅಂಕುರ್ ಬೆಟಗೇರಿ, ಆರಿಫ್ ರಾಜ, ಕೆ.ಪಿ. ಮೃತ್ಯುಂಜಯ ಮತ್ತು ವಿಕ್ರಂ ವಿಸಾಜಿ ಮುಖ್ಯರಾದವರು. ಇವರೆಲ್ಲರ ಬಿಡಿ ಕೃತಿಗಳನ್ನು ಇಲ್ಲಿ ಹೆಸರಿಸುವುದು ಅನಗತ್ಯ. ಈ ಪಟ್ಟಿಯು ಸಮಗ್ರವಲ್ಲ. ಇದು ನನ್ನ ಓದು ಮತ್ತು ಗ್ರಹಿಕೆಗಳಿಗೆ ಸೀಮಿತವಾಗಿದೆ.

ಪರಂಪರೆಯ ತಿಳಿವಳಿಕೆ, ಅದನ್ನು ವಿಸ್ತರಿಸುವ ಹಂಬಲ/ಪ್ರತಿಭೆ, ತಮ್ಮ ಮಾಧ್ಯಮವನ್ನು ಕುರಿತ ನಿಷ್ಠೆ, ಏಕಾಂತ–ಲೋಕಾಂತಗಳ ಸಹಯೋಗ, ಜನಪ್ರಿಯವೂ ಆಕ್ರಮಣಶೀಲವೂ ಆದ ಯಾವುದೇ ತಾತ್ವಿಕತೆಯ ಬಗೆಗಿನ ಅನುಮಾನ ಮತ್ತು 'ಲಿಟರರಿ ಇಮ್ಯಾಜಿನೇಷನ್'ಗಳು ಇವರೆಲ್ಲರಿಗೂ ಸಮಾನವಾದ ಲಕ್ಷಣಗಳು.


**–ಡಾ. ಎಚ್.ಎಸ್. ರಾಘವೇಂದ್ರ ರಾವ್**

## ಅಧ್ಯಯನ ಮತ್ತು ಚಿಂತನದ ಕೊರತೆ



**ನಾ**ನು ನಿಮ್ಮ ಪ್ರಶ್ನೆಗಳಿಗೆ ಎಷ್ಟು ಸಮರ್ಪಕವಾಗಿ ಉತ್ತರಿಸುತ್ತೇನೊ ಗೊತ್ತಿಲ್ಲ. ಆದರೆ, ನಿಮ್ಮ ಪ್ರಶ್ನೆಗಳನ್ನು ನೆಪವಾಗಿಟ್ಟುಕೊಂಡು ಕೆಲವು ಮಾತುಗಳನ್ನು ಹೇಳಲು ಅಪೇಕ್ಷಿಸಿದ್ದೇನೆ. ನವ್ಯದ ಸಂದರ್ಭದಲ್ಲಿ ಸಾಹಿತ್ಯ ವ್ಯಕ್ತಿ ಕೇಂದ್ರಿತವಾಗಿ ಅಂತರ್ಮುಖಿಯಾಯಿತು. ಆದರೆ, ಅದು ಉತ್ತಮ ಕಲೆಗಾರಿಕೆಯನ್ನು– ಕುಸುರುಕೆಲಸವನ್ನು ಸಾಧಿಸಿತು. ಆ ಬಳಿಕ ಬಂದ ಬಂಡಾಯ ಸಾಹಿತ್ಯ ಸಮುದಾಯ ಪ್ರಜ್ಞೆಯನ್ನು ಬೆಳೆಯಿಸಿತು. ಆದರೆ, ಅದು ತೀರ ಸಂವಹನಮುಖಿಯಾಗಿ ಕಲೆಗಾರಿಕೆಯನ್ನು ಬಹುಮಟ್ಟಿಗೆ ನಿರ್ಲಕ್ಷಿಸಿತು. ಬಂಡಾಯೋತ್ತರ (ನವ್ಯೋತ್ತರ) ಸಂದರ್ಭದಲ್ಲಿ ಸಾಹಿತ್ಯ ತನ್ನ ದಾರಿಯನ್ನು ಸ್ಪಷ್ಟವಾಗಿ ಕಂಡುಕೊಳ್ಳಬೇಕಾಗಿದೆ. ಅದು ಸಾಮಾಜಿಕತೆಯ ಹರವು ಪಡೆಯುತ್ತಲೇ ಅಂತರ್ಮುಖತೆಯ ಆಳಕ್ಕೆ ಹೋಗುತ್ತಾ ಕಲೆಗಾರಿಕೆಯನ್ನು ಸಾಧಿಸಬೇಕಾಗಿದೆ. ಇವತ್ತು ಪಂಥ, ಪಂಗಡ ಎನ್ನದೆ ಮನುಷ್ಯತ್ವದ ನೆಲೆಯಲ್ಲಿ ಅಂತಃಕರಣ ಕೇಂದ್ರದಿಂದ (ಭಾವಾತಿರೇಕವಾಗದಂತೆ ಬುದ್ಧಿ ಕೆಲಮಟ್ಟಿಗೆ ಪಾತ್ರ ವಹಿಸಲಿ) ಬರೆಯಬೇಕಾದ ಜರೂರು ಇದೆಯೆಂದು ನನ್ನ ಅನಿಸಿಕೆ. ಸಾಹಿತ್ಯ ತನ್ನ ಸ್ಪಂದನಶೀಲತೆಯನ್ನು ಈ ರೀತಿ ಕಾಪಾಡಿಕೊಳ್ಳಬೇಕಾಗಿದೆ.

ಸಹಜವಾಗಿ ಶ್ರೇಷ್ಠ ಕೃತಿಗಳು ಬರುತ್ತಿರುವುದು ಕನ್ನಡದಲ್ಲಿ ಹಳಬರಿಂದಲೇ ಎಂದರೆ ೫೦ ವಯಸ್ಸು ದಾಟಿದವರಿಂದ. ಆದರೆ ೪೦–೪೫ ರೊಳಗೆ ಇರುವ ಬರಹಗಾರರಲ್ಲಿ ಅನೇಕರು ಉತ್ತಮ ಕೃತಿಗಳನ್ನು ಕೊಟ್ಟವರಿದ್ದಾರೆ. ಕೆಲವರನ್ನು ಹೆಸರಿಸುವುದಾದರೆ ವಿಕ್ರಮ ವಿಸಾಜಿ, ಕಲಿಗಣನಾಥ ಗುಡದೂರ, ವೀರಣ್ಣ ಮಡಿವಾಳರ, ವಿನಯಾ, ಸುನಂದಾ ಕಡಮೆ, ಮಹಾಂತೇಶ ನವಲಕಲ್, ವಸುಧೇಂದ್ರ, ವಸ್ತಾರೆ, ಚಿದಾನಂದ ಸಾಲಿ, ಟಿ.ಎಸ್.ಗೊರವರ, ಆರೀಫ್ ರಾಜಾ, ಬಸವಣ್ಣೆಪ್ಪ ಕಂಬಾರ, ಕಲ್ಲೇಶ್ ಕುಂಬಾರ, ಮೌನೇಶ ಬಡಿಗೇರ್ ಬೇರೆ ಬೇರೆ ವೃತ್ತಿಗಳಿಂದ, ವರ್ಗಗಳಿಂದ ಬಂದಿರುವ ಇಂಥ ಬರಹಗಾರರು ಆಸೆ ಹುಟ್ಟಿಸಿದ್ದಾರೆ. ಇವರಲ್ಲಿ ಈಗಾಗಲೇ ಕೆಲವರು ನಾಮಾಂಕಿತರಾಗಿದ್ದಾರೆ. ಸೃಜನಶೀಲ ಸಾಹಿತ್ಯ ಇವತ್ತು ತನ್ನ ಗುಣಮಟ್ಟ ಕಾಪಾಡಿಕೊಳ್ಳಲು ಹೆಣಗುತ್ತಿದೆ. ಆದರೆ ಸೃಜನೇತರ ಕ್ಷೇತ್ರದಲ್ಲಿ– ವೈಚಾರಿಕ ಮತ್ತು ವಿಮರ್ಶೆ ಬರೆಯುವವರು ತೀರಾ ಕಮ್ಮಿ. ಇವತ್ತು ಹೊಸ ವಿಮರ್ಶಕರ ಅಭಾವ ತುಂಬಾ ಇದೆ. ಅದಕ್ಕೆ ಬೇಕಾದ ಆಳವಾದ ಅಧ್ಯಯನ ಮತ್ತು ಚಿಂತನದ ಕೊರತೆಯನ್ನು ಸಾಹಿತ್ಯ ಕ್ಷೇತ್ರ ಅನುಭವಿಸುತ್ತಿದೆ. ಸೃಜನಕ್ಕೆ ಸಂಬಂಧಿಸಿದಂತೆ ನನಗೆ ನಿರಾಸೆಯೇನೂ ಇಲ್ಲ.



ಮೌನೇಶ್



ಚಿದಾನಂದ



ಗೊರವರ


**–ಮಲ್ಲಿಕಾರ್ಜುನ ಹಿರೇಮಠ**

## ರೂಪ–ಆಕಾರ–ಬಣ್ಣ ಆಕರ್ಷಕ. ಆದರೆ ಜೀವವಿಲ್ಲ.



**ಕು**ವೆಂಪು, ಬೇಂದ್ರೆ, ಮಾಸ್ತಿ, ಕಾರಂತ, ಲಂಕೇಶ್, ತೇಜಸ್ವಿ, ಅನಂತಮೂರ್ತಿ, ದೇವನೂರ ಮಹಾದೇವ, ವೈದೇಹಿ, ವೀಣಾ, ಹೀಗೆ ನಾನು ಪುಂಖಾನುಪುಂಖವಾಗಿ ಸಾಹಿತಿಗಳ ಪಟ್ಟಿಯನ್ನು ಕೊಡುತ್ತಾ ಹೋದರೆ ಈ ತಲೆಮಾರಿನವರಿಗೆ ಏನನ್ನಿಸುವುದೋ! ಇವರನ್ನೆಲ್ಲ ಜೀವದ ಹತ್ತಿರ ಇಟ್ಟುಕೊಂಡು ಬದುಕಿದ ತಲೆಮಾರು ನಮ್ಮದು. ಲೇಖನಿ, ಕಾಗದ, ಪುಸ್ತಕ, ಅಕ್ಷರಮಾಲೆಯನ್ನು ಒಡವೆಯಂತೆ ಧರಿಸಿ ಮೋಹಿಸಿದ್ದೆವು. ಇದೀಗ ಜೆಸಿಬಿ ಯುಗದಲ್ಲಿದ್ದೇವೆ. ಟಿವಿ, ಕಂಪ್ಯೂಟರ್, ಟ್ಯಾಬ್ಲೆಟ್, ಮೊಬೈಲ್, ಫೇಸ್‌ಬುಕ್, ವಾಟ್ಸ್ಯಾಪ್ ನಮ್ಮನ್ನು ಆಳುತ್ತಿವೆ. ಜಗತ್ತಿನ ಏನೆಲ್ಲ ಚಟುವಟಿಕೆಗಳು ನಿರಂತರವಾಗಿ ನಡೆಯುತ್ತಿರುತ್ತವೆ! ಸಾಹಿತ್ಯವೂ ಅದರಲ್ಲಿ ಒಂದಷ್ಟೆ. ಅದೊಂದು ಸೀಮಿತವಾದ ಚಟುವಟಿಕೆಯೆಂದು ಬೇರೆಯವರಿಗೆ ಅನ್ನಿಸಬಹುದು. ಯಾಕೆಂದರೆ ನಮ್ಮಲ್ಲಿ ಅಕ್ಷರ ಬಲ್ಲ ವಿದ್ಯಾವಂತರಿಗಿಂತ ಅಕ್ಷರ ಬಾರದ ವಿದ್ಯಾವಂತರ ಸಂಖ್ಯೆಯೇ ಹೆಚ್ಚು. ಹಾಗಾಗಿ ಒಂದು ಪುಸ್ತಕದ ಸಾವಿರ ಪ್ರತಿ ಖರ್ಚಾಗಲು ಹತ್ತು ವರ್ಷವೇ ಬೇಕು. ಸರ್ಕಾರದ ವತಿಯಿಂದ 'ಬಲ್ಕ್ ಪರ್ಚೇಸ್' ಇರುವುದರಿಂದ ಸಾಮಾನ್ಯ ಲೇಖಕ ಪ್ರಕಟಣೆಯ ಸಮಸ್ಯೆಯಿಂದ ಬಚಾವ್ ಆಗಿದ್ದಾನೆ. ಈ ಹೊತ್ತಿಗೂ ಕೆಲ ಲೇಖಕರನ್ನು ಹೊರತುಪಡಿಸಿದರೆ( ಎಸ್.ಎಲ್.ಭೈರಪ್ಪ, ರವಿ ಬೆಳಗೆರೆ, ಪ್ರತಾಪ್‌ಸಿಂಹ, ಯಂಡಮೂರಿ ಮುಂತಾದವರು) ಮಿಕ್ಕ ಲೇಖಕರ ಪುಸ್ತಕಗಳಿಗೆ ಬೇಡಿಕೆ ಕಡಿಮೆ. ಇಷ್ಟಾದರೂ ನಮ್ಮ ತಲೆಮಾರಿನ ಸಾಹಿತಿಗಳ ಪಾಲಿಗೆ ಅದು ಜೀವನ್ಮರಣದ ಪ್ರಶ್ನೆಯಾಗಿತ್ತು.

ಹಿಂದಿನ ತಲೆಮಾರಿಗೂ ಇಂದಿನ ತಲೆಮಾರಿಗೂ ನಡುವೆ ದೊಡ್ಡ ಕಂದರವೇ ಇರುವುದು. ಬರವಣಿಗೆಯ ಗುಣಾತ್ಮಕತೆಯ ಬಗ್ಗೆ ಹೇಳುವುದಾದರೆ, ಸಂವೇದನೆಗೂ–ಸರಕಿಗೂ ನಡುವೆ ಎಷ್ಟು ವ್ಯತ್ಯಾಸವಿದೆಯೋ ಅಷ್ಟು! ನೈತಿಕ–ಭೌತಿಕ ಭ್ರಷ್ಟತೆಗೆ ಪಕ್ಕಾಗಿ ಸಂವೇದನೆ ಮುಕ್ಕಾಗಿ ಹೋಗಿದೆ. ಹಾಡುವ ಹಕ್ಕಿ, ಆಡುವ ಮಕ್ಕಳು, ಸರಳವಾಗಿ ಮಾತುಕತೆಯಾಡಿ ನಡೆದಾಡುತ್ತಿದ್ದ ಮಂದಿ ಕಾಣೆಯಾಗಿದ್ದಾರೆ. ಎಲ್ಲೆಲ್ಲೂ ವೇಗವಾಗಿ ಚಲಿಸುವ ವಾಹನಗಳು. ಗಡಿಬಿಡಿ ಗೊಂದಲ. ಪುರುಸೊತ್ತಿಲ್ಲದ ಮಂದಿ. ಚಿಂತನೆ, ಸೂಕ್ಷ್ಮತೆ ಕೌಶಲ ಮಾಯವಾಗಿದೆ. ಕಾರ್ಖಾನೆಗಳಲ್ಲಿ ತಯಾರಾಗುವ ಸಿದ್ಧ ವಸ್ತುವಿನಂತೆ ಪುಸ್ತಕಗಳು ದಂಡಿಯಾಗಿ ಹೊರಬರುತ್ತಿವೆ. ರೂಪ–ಆಕಾರ–ಬಣ್ಣ ಆಕರ್ಷಕವಾಗಿದೆ. ಆದರೆ ಜೀವವಿಲ್ಲ. ಜಂಕ್! ಪರಿಣಾಮ ಅನಾರೋಗ್ಯ.



ವಸುಧೇಂದ್ರ



ಬಿ.ಟಿ. ಜಾಹ್ನವಿ



ದು. ಸರಸ್ವತಿ

ಗುಂಪುಗಾರಿಕೆ, ಜಾತಿಬಾಧೆ ಸಾಹಿತ್ಯಲೋಕವನ್ನು ಹೆಬ್ಬಾವಿನಂತೆ ಸುತ್ತಿಕೊಂಡಿದೆ. ಕಳೆದ ಐದು ವರ್ಷಗಳಲ್ಲಿ ನಾನು ನೂರಾರು ಪುಸ್ತಕಗಳನ್ನು ಗಮನಿಸಿರುವೆ. ಕೆಲವಾರನ್ನು ಇಷ್ಟಪಟ್ಟು ಓದಿರುವೆ. ಥಟ್ಟಂತ ನೆನಪಿಗೆ ಬರುವುದು ಶ್ರೀನಿವಾಸ ವೈದ್ಯ, ವಸುಧೇಂದ್ರ, ಸುಮಂಗಲಾ, ನಾಗವೇಣಿ, ದು. ಸರಸ್ವತಿ, ಜಾಹ್ನವಿ, ಜಯಂತ್ ಕಾಯ್ಕಿಣಿ, ವಿವೇಕ ಶಾನಭಾಗರ ಕಥೆಗಳು. ಅಲ್ಲದೆ ಕೆಲ ತಿಂಗಳ ಹಿಂದೆ 'ಮಯೂರ'ದಲ್ಲಿ ಬಂದ 'ಗತಿಸ್ಥಿತಿ' ಖ್ಯಾತಿಯ ಗಿರಿಯವರ ಒಂದು ಕಥೆ ಈಗಲೂ ಕಾಡುತ್ತಿದೆ. ಇನ್ನು ನಟರಾಜ್ ಹುಳಿಯಾರ್, ಬಂಜಗೆರೆ ಜಯಪ್ರಕಾಶ್ ಮತ್ತು ಎಂ.ಎಸ್. ಆಶಾದೇವಿ ಅವರ ಬಿಡಿ ಬರಹಗಳು ನೆನಪಿನಲ್ಲಿ ಉಳಿದಿವೆ.

ನನ್ನ ನಂತರದ ತಲೆಮಾರಿನವರ ಬಗ್ಗೆ ಅಳುಕಿನಿಂದಲೇ ಎರಡು ಮಾತು ಹೇಳಬಹುದೆನಿಸುತ್ತದೆ. ಈ ಹೊತ್ತು ಅನೇಕ ಎಳೆಯ ಬರಹಗಾರರ ಪುಸ್ತಕಗಳ ಪಟ್ಟಿಗಿಂತ ಅವರು ಪಡೆದಿರುವ ಪ್ರಶಸ್ತಿ–ಪುರಸ್ಕಾರಗಳ ಪಟ್ಟಿಯೇ ದೊಡ್ಡದಿರುತ್ತದೆ. ಇವರು ಚಂಗ್ ಎಂದು ಪುಟ್ಟ ಕರುಗಳಂತೆ ಬಾಲ ಎತ್ತಿಕೊಂಡು ನೆಗೆಯುತ್ತಿದ್ದಾರೆ. ಅದನ್ನು ನೋಡುವುದೇ ಒಂದು ಚಂದ! ಆದರೆ ಇವು ಉಳುಮೆಗೆ ಬರುವವೆ? ಹಾಲು ಕರೆವವೆ? ಕಾದು ನೋಡಬೇಕಿದೆ.

**–ಸವಿತಾ ನಾಗಭೂಷಣ**

# ಹದವರಿಯದ ಕಾಲ



ಪೂರ್ತಿ ಒಪ್ಪುವುದಿಲ್ಲ. 'ಪೂರ್ತಿ' ಎಂಬ ಮಾತೇಕೆಂದರೆ, ಎಲ್ಲ ಕಾಲದಂತೆ ಈ ಕಾಲದಲ್ಲೂ ಕಳಪೆ ಕೃತಿಗಳು ಹುಟ್ಟುತ್ತಲೇ ಇವೆ. ಜೊತೆಗೆ ಒಳ್ಳೆಯ ಕೃತಿಗಳೂ ಇವೆ. ಹಿಂದಿನ ತಲೆಮಾರುಗಳಲ್ಲಿ ಹುಟ್ಟಿದ ಯುಗಪಲ್ಲಟ ಗುಣದ ಕೃತಿಗಳು ಈ ತಲೆಮಾರಿನ ಸೃಜನ ಬರಹಗಳಲ್ಲಿ ಅಷ್ಟಾಗಿ ಕಾಣುತ್ತಿಲ್ಲ ಎಂಬುದು ನಿಜ. ಅದಕ್ಕೆ ಮುಖ್ಯ ಕಾರಣ, ಈ ಕಾಲವೇ ಆಗಿದೆ. ಹಿಂದಿನ ತಲೆಮಾರು ಹೊಸ ಭಾರತದ ನಿರ್ಮಾಣದ ಕನಸಿನಲ್ಲಿ ಆಧುನಿಕತೆಯೊಂದಿಗೆ ದೇಸೀಯತೆಯನ್ನು ಮಿಳಿತಗೊಳಿಸಿ ಹೊಸ ತಾತ್ವಿಕತೆ ಕಟ್ಟಿಕೊಟ್ಟಿತು. ಅದರ ಹಿಂದೆ ಆಳವಾದ ಅನುಭವ/ಪಾಂಡಿತ್ಯಗಳಿವೆ. ಹೊಸ ಆರ್ಥಿಕತೆ ಫಲವಾಗಿ ಇಂದಿನವರು ಅದರ ಪರ ವಿರುದ್ಧದ ದಿಕ್ಕೆಟ್ಟ ಸ್ಥಿತಿಯಲ್ಲಿದ್ದಾರೆ. ಅದನ್ನೊಂದು ಥೀಸಿಸ್ ಆಗಿ ಹಿಡಿದಿಡಲು ಅವರಿಗೆ ಆಗುತ್ತಿಲ್ಲ.

ಕೃತಿಯೊಂದು ಸ್ಪಂದಿಸುವುದೆಂದರೇನು? ಗುಣಮಟ್ಟಕ್ಕೂ ಅದಕ್ಕೂ ಸಂಬಂಧವಿದೆಯೇ? ಗುಣಮಟ್ಟವಿದ್ದೂ ಸ್ಪಂದನೆ ಇಲ್ಲದೇ ಹೋಗಬಹುದಲ್ಲವೇ? ಮುಖ್ಯವಾಗಿ ಸೃಜನೇತರ ಪ್ರಕಾರಗಳಲ್ಲಿ ಒಳ್ಳೆಯ ಕೃತಿ ಬಂದೂ ಸ್ಪಂದನೆ ಕಾಣುತ್ತಿಲ್ಲ. ಹೀಗಾಗಲು ಓದುಗರ ನೆಲ ಹದವಾಗದೇ ಹೋಗುವುದೂ ಒಂದು ಕಾರಣವಾಗುತ್ತದೆ, ಉದಾಹರಣೆಗೆ, ಕಳೆದ ಹದಿನೈದು ವರ್ಷಗಳಿಂದ ಡಿ.ಎನ್.ಶಂಕರಬಟ್ಟರು ಕನ್ನಡದ ಉಳಿವಿಗಾಗಿ ಅತ್ಯಂತ ವೈಜ್ಞಾನಿಕವಾಗಿ ಆಳವಾದ ಅಧ್ಯಯನದಿಂದ ಪ್ರತಿಪಾದಿಸುತ್ತಿರುವ ವಿಚಾರಗಳನ್ನು ಸ್ವೀಕರಿಸಲು ನೆಲ ಹದವಾಗಿಲ್ಲ. ಈ ಕೃತಿಗಳು ನಮ್ಮ ಸಮಗ್ರ ಆಲೋಚನೆಗಳನ್ನೇ ಪಲ್ಲಟಗೊಳಿಸುವ ಶಕ್ತಿಯಿರುವಂತವು. ಪುರುಷನ ಮೂಲಕ ಸ್ತ್ರೀ, ವೈದಿಕ ಸಂಸ್ಕೃತಿಯ ಮೂಲಕ ಇತರ ಸಂಸ್ಕೃತಿ, ವಿದೇಶಿ ಬಂಡವಾಳದ ಮೂಲಕ ದೇಸೀ ಆರ್ಥಿಕತೆ, ನಗರದ ಮೂಲಕ ಹಳ್ಳಿ, ಸಂಸ್ಕೃತ-ಇಂಗ್ಲೀಷ್ ಮೂಲಕ ಕನ್ನಡ ಎಂಬ ಬಂದಳಿಕೆ ಮಾದರಿಯ ಚಿಂತನೆಯನ್ನು ಬುಡಮೇಲು ಮಾಡಿ ನಮ್ಮದೇ ಸ್ವಾಯತ್ತತೆಯನ್ನು ಅರಿತು ಕೀಳರಿಮೆ ಕಳೆದು ಬದುಕುವ ಮಾರ್ಗವನ್ನು ತೋರುವ ಹೊಸಹುಟ್ಟಿನ ನೋಟಕ್ರಮವನ್ನು ಅವರು ತಪಸ್ವಿಯಂತೆ ಬಳಸುತ್ತಿದ್ದಾರೆ. ಇಂತದೇ ಚಿಂತನೆಗಳ ಫಲವಾಗಿ ಆಫ್ರಿಕನ್ ಸಾಹಿತ್ಯ ಜೀವ ತುಂಬಿಕೊಂಡಿದೆ. ಇದು ಕನ್ನಡದ ಸೃಜನ ಬರಹಗಳಿಗೂ ಹರಿದು ಬರಬೇಕಾಗಿದೆ. ಆದರೆ ಕನ್ನಡದಲ್ಲಿ ಬಟ್ಟರ ಕೃತಿಗಳನ್ನು ಕುರಿತು ವಿದ್ಯಾರ್ಥಿಗಳನ್ನು ಬಿಟ್ಟು, ಕನಿಷ್ಟ ಕುತೂಹಲವನ್ನೂ ತೋರದಿರುವ, ಓದುಗ/ವಿದ್ವಾಂಸ ಸಮೂಹವನ್ನಿಟ್ಟುಕೊಂಡು ಏನನ್ನು ತಾನೇ ನಿರೀಕ್ಷಿಸಲು ಸಾಧ್ಯ? ಇದು ಶಂಬಾಜೋಷಿಯವರಿಂದ ಹಿಡಿದು ಇಂದಿನ ಹಲವರ ವಿಷಯದಲ್ಲೂ ನಿಜವಾಗಿದೆ.



ಸುಮಂಗಲಾ



ಕೆವೈಎನ್



ವೀರಣ್ಣ

ಕಳೆದ ಐದು ವರ್ಷಗಳಲ್ಲಿ ಆಸೆಹುಟ್ಟಿಸಿದ, **ಕಿರಿಯರ** ಐದು ಕೃತಿಗಳು, ಐದು ಕೃತಿಕಾರರು:

i) **ನೆಲದ ಕರುಣೆಯ ಹಾಡು– ವೀರಣ್ಣ ಮಡಿವಾಳರ**. ಅನುಭವದ ಗ್ರಹಿಕೆ, ತಾಜಾತನ ಮತ್ತು ನುಡಿಯ ಮೇಲಿನ ಹಿಡಿತಗಳು ಮೆಚ್ಚುವಂತಿವೆ.

ii) **ಕಾಲಿಟ್ಟಲ್ಲಿ ಕಾಲುದಾರಿ– ಸುಮಂಗಲಾ**. ದಿಕ್ಕೆಟ್ಟ ಒಳ ಹೊರ ಪರಿಸರದಲ್ಲಿ ಬದುಕು ಕಟ್ಟಿಕೊಳ್ಳುವ ಪರಿಯನ್ನು, ಮನುಷ್ಯ ಸಣ್ಣತನವನ್ನು ಮೀರಬೇಕಾದ ಬಗೆಯನ್ನು ಅತ್ಯಂತ ಸೂಕ್ಷ್ಮವಾಗಿ ನಿವೇದಿಸಬಲ್ಲರು.

iii) **ಮಾಯಾ ಕೋಲಾಹಲ – ಮೌನೇಶ ಬಡಿಗೇರ**. ಆಧುನಿಕತೆಯ ಬಳುವಳಿಯಾದ ತಣ್ಣನೆಯ ಕ್ರೌರ್ಯ ಮತ್ತು ದಿಕ್ಕೇಡಿತನಗಳನ್ನು ಹೇಳುವುದರೊಂದಿಗೆ, ಹೆಣ್ಣಿನ ಮನಸ್ಸಿನ ಸೂಕ್ಷ್ಮವನ್ನು ಅರಿಯುವುದು ಇವರಿಗೆ ಸಾಧ್ಯವಾಗಿದೆ.

iv)**ನಡುವೆ ಸುಳಿವ ಆತ್ಮ – ಎಂ.ಎಸ್.ಆಶಾದೇವಿ**. ಕೃತಿಲೋಕದ ಮೂಲಕ ಸಾಮಾಜಿಕ ಲೋಕವನ್ನು ಕಟ್ಟಿಕೊಳ್ಳಬಹುದಾದ ದಾರಿಯನ್ನು ವಿಮರ್ಶೆಯಲ್ಲಿ ಹೆಣ್ಣುನೋಟದ ಮೂಲಕ ಗಂಭೀರವಾಗಿ ಮಂಡಿಸುತ್ತಿದ್ದಾರೆ. ಈ ಕೃತಿಗಿಂತಲೂ ಅವರ ಅಂಕಣ 'ನಾರೀಕೇಳ'ದ ಕೆಲವು ಬರಹಗಳು ಹೆಚ್ಚು ಇಷ್ಟವಾಗಿವೆ.

v)**ಅನಭಿಜ್ಞ ಶಾಕುಂತಲ – ಕೆ.ವೈ.ನಾರಾಯಣ ಸ್ವಾಮಿ**. ಇಲ್ಲಿ ನೆನಪು ಕಳೆದುಕೊಳ್ಳದ ಶಾಕುಂತಲೆ, ಹೆಣ್ಣಿನ ಮಡಿಲು ಕಳೆದುಕೊಂಡ ಕಾಳಿದಾಸನ ಮೂಲಕ ಲೋಕ ಕಳೆದುಕೊಂಡ ವಿವೇಕವನ್ನು ಹೇಳುತ್ತಿದ್ದಾರೆ. ಸಂಕೀರ್ಣ ಹೆಣಿಗೆ, ರೂಪಕ ಭಾಷೆಯ ಚಮತ್ಕಾರದೊಂದಿಗೆ ನಾಟಕೀಯತೆಯನ್ನು ಕಟ್ಟಿಕೊಡುವುದು ಇವರಿಗೆ ಸಾಧ್ಯವಾಗಿದೆ.

**–ಡಾ. ಸಬಿತಾ ಬನ್ನಾಡಿ**

---

# ಆಳವಾದ ತಿಳುವಳಿಕೆಗಳನ್ನು ರೂಪಿಸುತ್ತಿರುವ ಬರಹಗಳು



**ಮೇ**ಲ್ನೋಟಕ್ಕೆ ಈಚಿನ ದಿನಗಳಲ್ಲಿ ನಮ್ಮ ಸಾಹಿತ್ಯ-ಸಂಸ್ಕೃತಿ ಚಿಂತನೆಗಳ ಸ್ಪಂದನಶೀಲತೆ ಕಡಿಮೆಯಾಗುತ್ತಿದೆ ಎಂದು ಅನ್ನಿಸುತ್ತಿರುವುದು ನಿಜ. ಕಳೆದ ವರ್ಷ ನಡೆದ ಸಾರ್ವತ್ರಿಕ ಚುನಾವಣೆಗಳ ಸಂದರ್ಭದಲ್ಲಿ ಸೃಷ್ಟಿಯಾದ ಮೋದಿಮೇನಿಯಾ ಕುರಿತು ದೇಶಾದ್ಯಂತ ಸಾಹಿತ್ಯವಲಯ ತಳೆದ ಸಾಮೂಹಿಕ ಮೌನವನ್ನಾಗಲೀ(ಕೆಲವು ಅಪವಾದಗಳನ್ನು ಹೊರತುಪಡಿಸಿ), ಅಥವಾ ಇತ್ತೀಚೆಗೆ ಕರ್ನಾಟಕದಲ್ಲಿ ನಡೆಯುತ್ತಿರುವ ಸಾಲು ಸಾಲು ರೈತರ ಆತ್ಮಹತ್ಯೆಗಳ ಕುರಿತು ನಮ್ಮಲ್ಲಿ ನೆಲೆಯೂರಿರುವ ಸ್ಮಶಾನ ಶಾಂತಿಯನ್ನಾಗಲೀ ನೋಡಿದರೆ ನಮ್ಮ ಸಂವೇದನೆಯ ಮಟ್ಟ ಎಷ್ಟು ಕುಸಿತ ಕಂಡಿದೆಯೆಂಬುದಕ್ಕೆ ಸಾಕ್ಷಿಯಾಗಿದೆ. ಆದರೆ, ನಮ್ಮ ನಡುವಿನ ಸಂಕಷ್ಟಗಳಿಗೆ ಸಾಹಿತ್ಯ ನಿರಂತರವಾಗಿ ಒತ್ತಾಸೆಯಾಗಿ ನಿಲ್ಲುತ್ತದೆ ಎಂಬ ಆಸೆಯಿಂದ ತಾನೇ ನಾವೆಲ್ಲ ಅದನ್ನು ನಮ್ಮ ನಿತ್ಯ ಸಂಹಿತೆಯಾಗಿ ಸ್ವೀಕರಿಸಿರುವುದು? ಸಾಹಿತ್ಯದ ಸ್ಪಂದನಶೀಲತೆ ಇಲ್ಲವಾಗಿದೆಯೆಂದರೆ, ನಮಗೆ ಒಟ್ಟಾರೆಯಾಗಿ ಬದುಕಿನ ಬಗೆಗೆ, ಸಮಾಜದ ಬಗೆಗಿನ ಸ್ಪಂದನಶೀಲತೆಯೂ ನಾಶವಾಗಿದೆ ಎಂದರ್ಥ.



ಲಲಿತಾ ಸಿ.ಬಿ.



ಅರೀಫ್



ಅನುಪಮಾ

ಹಾಗಿದ್ದರೂ, ಸಾಹಿತ್ಯ-ಸಂಸ್ಕೃತಿ-ಅಭಿರುಚಿಗೆ ಸಂಬಂಧಿಸಿದ ವಿಷಯಗಳಲ್ಲಿ ನಡೆಯುವ ಪಲ್ಲಟಗಳು ಬಹಳ ನಿಧಾನಕ್ಕೆ ಜರುಗುವ ಸಂಗತಿಗಳಾಗಿರುವುದರಿಂದ ಅವುಗಳ ಬಗ್ಗೆ ಅಲ್ಲೇ ನಿಂತು ಅಖೈರಾದ ತೀರ್ಪು ನೀಡುವುದು ಸರಿಯಲ್ಲ. ಸಮಾಜದ ಏರಿಳಿತಗಳಿಗೆ ಸಾಹಿತ್ಯ ನೀಡುವ ಪ್ರತಿಕ್ರಿಯೆಗಳು ಬಹಳ ಸೂಕ್ಷ್ಮವಾಗಿರುವುದರಿಂದ ಅವು ಸಾಂದರ್ಭಿಕತೆಯ ಹಂಗನ್ನು ಮೀರಿದ ನೆಲೆಯಲ್ಲಿ

ಸೃಷ್ಟಿಯಾಗಿರುತ್ತವೆ. ಸಮಾಜದ ಎಲ್ಲ ಸಂಗತಿಗಳಿಗೂ ಸಾಹಿತ್ಯ ಕೃತಿಗಳ ಮೂಲಕ ದೊರಕುವ ಪ್ರತಿಕ್ರಿಯೆ ತತ್‌ಕ್ಷಣದ ನೆಲೆಯಲ್ಲಿಯೇ ರೂಪುಗೊಳ್ಳುವುದಿಲ್ಲ. ಹಾಗಂತ ಅದು ತನ್ನ ಭಿತ್ತಿಯೊಳಗಿನಿಂದ ನಮ್ಮ ಸುತ್ತ ಜರುಗುವ ವಿದ್ಯಮಾನಗಳಲ್ಲಿ ಉಂಟಾಗುತ್ತಿರುವ ವಿಕಾರಗಳನ್ನು ಅಳಿಸಿಹಾಕುತ್ತದೆ ಎಂದು ನಿರ್ಧರಿಸುವುದೂ ಸರಿಯಲ್ಲ. ಮುಖ್ಯವಾಗಿ ನವ್ಯೋತ್ತರ ಕಾಲದಲ್ಲಿ ನವ್ಯದ ಸಂದರ್ಭದಲ್ಲಿ ಆದಂತೆ ಒಂದು ಕೇಂದ್ರ ರೂಪಕವೊಂದರ ಮುಖೇನ ಅನುಭವಗಳನ್ನು ಅಭಿವ್ಯಕ್ತಿಸುವ ಕ್ರಮವಿಲ್ಲವಾದುದರಿಂದ, ಸಾಹಿತ್ಯ ಅಭಿವ್ಯಕ್ತಿ ಹಲವು ಪ್ರಕಾರಗಳಲ್ಲಿ ಹಂಚಿಹೋಗಿರುವುದರಿಂದ, ಹಲವು ಬಗೆಯ ಸಾಮಾಜಿಕ ಮಾಧ್ಯಮಗಳ ಮೂಲಕ ಪ್ರಕಟಗೊಳ್ಳುತ್ತಿರುವುದರಿಂದ ನಿರ್ದಿಷ್ಟವಾದ, ಏಕಪ್ರಕಾರದ ಪರಿಣಾಮ ಉಂಟಾಗುತ್ತಿಲ್ಲ ಎಂಬ ಭಾವನೆ ಉಂಟಾಗುತ್ತಿದೆ ಎನಿಸುತ್ತದೆ. ಈಚಿನ ವರ್ಷಗಳಲ್ಲಿ ಮಡೆ ಸ್ನಾನದ ಕುರಿತು ನಡೆದ ಚರ್ಚೆ, ಪ್ರಜಾವಾಣಿಯಲ್ಲಿ ನಡೆದ ಜಾತಿಸಂವಾದದ ಬಗೆಗಿನ ತುರುಸಿನ ಸಂವಾದ, ಅಥವಾ ತೀರ ಇತ್ತೀಚೆಗೆ ಭೈರಪ್ಪನವರು ಅನ್ನಭಾಗ್ಯದ ಕುರಿತು ವ್ಯಕ್ತಪಡಿಸಿದ ಅಭಿಪ್ರಾಯಗಳ ಬಗೆಗೆ ನಡೆದ ಕಾವೇರಿದ ಚರ್ಚೆಗಳನ್ನು ಗಮನಿಸಿದರೆ, ನಮ್ಮಲ್ಲಿ ಸಾಹಿತ್ಯ–ಸಂಸ್ಕೃತಿಗಳ ಚಿಂತನೆಗಳು ತಮ್ಮ ಜೀವಂತಿಕೆಯನ್ನು ಉಳಿಸಿಕೊಂಡಿವೆ ಎಂಬುದಕ್ಕೆ ಉದಾಹರಣೆಯಾಗಿವೆ. ಇದನ್ನೆಲ್ಲ ಕೇವಲ ಸಾಹಿತ್ಯ ಚಿಂತನೆ ಎಂದು ಮಾತ್ರ ಗುರುತಿಸದೆ ಅವುಗಳನ್ನು ಕನ್ನಡದಲ್ಲಿ ನಿರಂತರವಾಗಿ ರೂಪುಗೊಳ್ಳುತ್ತಿರುವ ಯೋಚನಾಕ್ರಮದ ಭಾಗವಾಗಿ ನೋಡಿದಲ್ಲಿ ಅದನ್ನು ಬೇರೆಯಾಗಿ ಅರ್ಥಮಾಡಿಕೊಳ್ಳಲು ಸಾಧ್ಯ. ಈಚಿನ ದಿನಗಳಲ್ಲಿ ಕನ್ನಡದಲ್ಲಿ ರೂಪುಗೊಳ್ಳುತ್ತಿರುವ ಚಿಂತನೆ ಕೇವಲ ಕೆಲವು ನಿರ್ದಿಷ್ಟ ಸಾಹಿತ್ಯ ಪ್ರಕಾರಗಳ ಅಂಗಳದಲ್ಲಿ ಮಾತ್ರ ರೂಪುಗೊಳ್ಳುವ ಸಂಗತಿಯಾಗಿ ಉಳಿಯದೆ ಅದು ಕಥೆ, ಕಾದಂಬರಿ, ವಿಮರ್ಶಾಬರಹಗಳು, ಸಂಸ್ಕೃತಿ ಅಧ್ಯಯನದ ಮಾದರಿಗಳು, ಬ್ಲಾಗ್ ಮೊದಲಾದ ಸಾಮಾಜಿಕ ಮಾಧ್ಯಮಗಳಲ್ಲಿ ಸಿಗುವ ಹಂಗಾಮಿ ಬರಹಗಳಲ್ಲಿ ಕಾಣಿಸುತ್ತಿದೆ. ಪರಿಣಾಮದ ದೃಷ್ಟಿಯಿಂದ ಗಾಢವಾಗಿ ಕಾಣಿಸದೇ ಹೋದರೂ ಅದು ಸತ್ವದ ದೃಷ್ಟಿಯಲ್ಲಿ ಬಹಳ ನಿರಾಶಾದಾಯಕವಾಗಿ ಕಾಣಿಸುವುದಿಲ್ಲ.

ಈ ಮಾತನ್ನೇ ಮುಂದುವರಿಸಿ ಹೇಳುವುದಾದರೆ, ಈಚಿನ ವರ್ಷಗಳಲ್ಲಿ ಕನ್ನಡದಲ್ಲಿ ಆಸೆ ಹುಟ್ಟುವಂತೆ ಮಾಡುತ್ತಿರುವ ಬರಹಗಳು ಕೇವಲ ಒಂದು ಪ್ರಕಾರದಲ್ಲಿ ಕಾಣಿಸುತ್ತಿಲ್ಲ. ಬದಲಾಗಿ ಅವು ಹಲವು ಪ್ರಕಾರಗಳಲ್ಲಿ ಮೈದಳೆದಂತೆ ಕಾಣುತ್ತಿವೆ. ಶೆಟ್ಟರ್ ಅವರ ಕನ್ನಡ ಸಂಸ್ಕೃತಿ ಹಾಗೂ ಲಿಪಿಯ ಬಗೆಗಿನ ಅಧ್ಯಯನಗಳು, ಶಂಕರಭಟ್ಟರ ನುಡಿ ಚಿಂತನೆಗಳು, ಲಲಿತಾ ಸಿದ್ದಬಸವಯ್ಯ, ಆರಿಫ್ ರಾಜಾ, ಶಿವಪ್ರಕಾಶರ ಕಾವ್ಯ, ರಹಮತ್ ತರೀಕೆರೆ, ರಾಜೇಂದ್ರ ಚೆನ್ನಿ, ಮೊಗಳ್ಳಿ, ನಟರಾಜ್ ಹುಳಿಯಾರ್, ಅನುಪಮಾ, ಯು.ಆರ್.ಅನಂತಮೂರ್ತಿ ಮೊದಲಾದವರ ಸಾಹಿತ್ಯವಿಮರ್ಶೆ–ಸಾಮಾಜಿಕ/ಸಂಸ್ಕೃತಿ ಚಿಂತನೆಯ ಬರಹಗಳು, ಗೋಪಾಲಕೃಷ್ಣ ಪೈಯವರ ಸ್ವಪ್ನಸಾರಸ್ವತದಂಥ ಕಾದಂಬರಿ–ಅಮರೇಶ ನುಗಡೋಣಿ, ವಿವೇಕ ಶಾನಭಾಗರ ನೀಳ್ಗತೆಗಳು, ಮಹಾದೇವರ ಎದೆಗೆ ಬಿದ್ದ ಅಕ್ಷರ–ಹೀಗೆ ಸಾಹಿತ್ಯ ಪ್ರಕಾರಗಳ ನಿರ್ದಿಷ್ಟತೆಗಳನ್ನು ಮೀರಿದ ವಿಸ್ತಾರ ನೆಲೆಯಲ್ಲಿ ಸೃಷ್ಟಿಯಾಗಿರುವ ಇಂಥ ಬರಹಗಳ ಒಟ್ಟು ಪರಿಣಾಮವಾಗಿ ಈಚಿನ ಕನ್ನಡದ ಚಿಂತನೆ ರೂಪುಗೊಳ್ಳುತ್ತಿದೆ. ಅದರಲ್ಲೂ ಈ ಪಟ್ಟಿಯಲ್ಲಿ ಮುಖ್ಯವಾಗಿ ಸೃಜನೇತರವೆನ್ನಲಾಗುವ ಬರಹಗಳು ಕನ್ನಡದ ಈ ಹೊತ್ತಿನ ಆಲೋಚನಾ ಕ್ರಮಗಳನ್ನು ಹೆಚ್ಚು ಪ್ರಭಾವಿಸುತ್ತಿರುವಂತೆ ಕಾಣುತ್ತಿದೆ. ಅವು ಕೆಲದಶಕಗಳ ಹಿಂದೆ ಚಳವಳಿಗಳು ರೂಪಿಸುತ್ತಿದ್ದ ಸಮಾಜದೃಷ್ಟಿಯನ್ನು ಈ ಮಾದರಿಯ ಬರಹಗಳು ನಿರ್ದೇಶಿಸುವಂತೆ ಕಾಣಿಸುತ್ತಿವೆ. ಇವುಗಳ ಒಟ್ಟಂದದ ಪರಿಣಾಮವನ್ನು ಗುರುತಿಸುವ ಕೆಲಸ ಆಗಿಲ್ಲ. ಹಲವು ದಿಕ್ಕುಗಳಲ್ಲಿ ಹರಡಿಹೋಗಿದ್ದರೂ ಬಹಳ ಆಳವಾದ ತಿಳುವಳಿಕೆಗಳನ್ನು ರೂಪಿಸುತ್ತಿರುವ ಈ ಬರಹಗಳ ಪ್ರಭಾವಶೀಲತೆಯನ್ನು ಒಪ್ಪಿಕೊಳ್ಳುವ ಸಂದರ್ಭ ಇನ್ನೂ ಸೃಷ್ಟಿಯಾದಂತೆ ಕಾಣುತ್ತಿಲ್ಲ.

**–ಡಾ. ಎಸ್. ಸಿರಾಜ್ ಅಹಮದ್**


‘ಹೊಸ ಮನುಷ್ಯ’ನ ಓದುಗರೆಲ್ಲರಿಗೂ
‘ಕಾವ್ಯ ಶ್ರಾವಣ’ದ ಶುಭಾಶಯಗಳು.



**ಸಹೃದಯರನ್ನ**

## ‘ಬಾರೋ ಸಾಧನಕೇರಿಗೆ’

ಎಂದು ಸದಾ ಕರೆದ **‘ಅಂಬಿಕಾತನಯದತ್ತ’** ದರ್ಶನ–ಪ್ರದರ್ಶನ ನೋಡಲು ಬನ್ನಿ **‘ಬೇಂದ್ರೆ ಭವನ’**ಕ್ಕೆ

ಪ್ರದರ್ಶನದ ಸಮಯ
ಪ್ರತಿದಿನ ಮುಂ.೧೦.೩೦ ರಿಂದ ೧.೩೦ ಮತ್ತು ಮಧ್ಯಾಹ್ನ ೨.೩೦ ರಿಂದ ಸಂ.೬ ಗಂಟೆ

**ದ.ರಾ.ಬೇಂದ್ರೆ ರಾಷ್ಟ್ರೀಯ ಸ್ಮಾರಕ ಟ್ರಸ್ಟ್**
ವರಕವಿ ದ.ರಾ.ಬೇಂದ್ರೆ ಮಾರ್ಗ, ಸಾಧನಕೇರಿ, ಧಾರವಾಡ–580008, ಫೋನ್:0836–2435327
Email: bendrebhavan@gmail.com Web:bendretrustdharwad.org

**ಹಳ್ಳಿಯ ನೆನಪು**

# ಬೇಸಿಗೆಯ ಆ ರಜೆ ದಿನಗಳು...

–ಜಿ.ವಿ. ಆನಂದಮೂರ್ತಿ

**ನಾನು ಬಾಲ್ಯದಲ್ಲಿ ಕಂಡಂತೆ, ನಮ್ಮೂರಿನ ಎಲ್ಲರಿಗೂ ಬಡತನ, ದಾರಿದ್ರ್ಯ ಸಮಾನವಾಗಿತ್ತು. ಸ್ವಲ್ಪಮಟ್ಟಿಗೆ ಹೆಚ್ಚು ಕ್ರೌರ್ಯವಿಲ್ಲದ ಜಾತಿಪದ್ಧತಿಯ ರೂಢಿಗಳೂ ಇದ್ದವು. ಆದರೆ ಎಲ್ಲಕ್ಕಿಂತ ಹೆಚ್ಚಾಗಿ ಬಡತನ ನಮ್ಮ ಜನಗಳ ಚೈತನ್ಯವನ್ನೇ ಉಡುಗಿಸಿತ್ತು. ಆದರೂ ಹುಲ್ಲೆಸಳಿನ ಮೇಲೆ ಕುಳಿತ ಬೆಳಗಿನ ಇಬ್ಬನಿಯನ್ನು ಸೂರ್ಯನ ಎಳೆಯ ಕಿರಣಗಳು ಕರಗಿಸುವಂತೆ, ಸಹಬಾಳ್ವೆಯ ಬದುಕು ನಮ್ಮ ಹಳ್ಳಿಯ ಸಾಮುದಾಯಿಕ ಜೀವನವನ್ನು ಹೆಚ್ಚು ಸ್ವಾರ್ಥಿಯಾಗದಂತೆ ಹದಮಾಡಿ ಸಹ್ಯವಾಗಿಸಿತ್ತು. ನಮ್ಮ ಊರಿನಲ್ಲಿ ಪ್ರೀತಿ, ವಿಶ್ವಾಸವಿರುವ ಸಾಮರಸ್ಯದ ಪುಟ್ಟ ದೀಪ ಎಂದೂ ನಂದದಂತೆ ಸದಾ ಜ್ವಲಿಸುತ್ತಿರಲು, ಸರಳ ಮತ್ತು ಮಾನವೀಯ ನಡವಳಿಕೆಗಳಿರುವ ಗಾಳಿತಿಮ್ಮಿ, ಅಜ್ಜವ್ವ, ಗಂಗಣ್ಣಮ್ಮ, ನೀರಗಂಟಿ ಚಿಕ್ಕೆಲ್ಲಯ್ಯ ಇಂತಹ ಜೀವಗಳ ಪಾತ್ರವೂ ಹಿರಿದು.**



**ಬೇ**ಸಗೆ ರಜೆ ಬಂತೆಂದರೆ ಎಣೆಯಿಲ್ಲದ ಸಂತೋಷ ನಮಗೆ. ಸ್ಕೂಲಿನಲ್ಲಿ ಪಾಸು–ಫೇಲು ಹೇಳಿ ರಜೆ ಘೋಷಿಸುವ ದಿನ ನಮ್ಮ ಪಾಲಿಗೆ ವರ್ಣನಾತೀತ. ಸುಧೀರ್ಘ ಸೆರೆವಾಸದಿಂದ ಬಿಡುಗಡೆ ಹೊಂದಿದವನು, ಹೊರಗೆ ಯಾರ ಬಂಧನವೂ ಇಲ್ಲದ ಹೊಳೆಯುವ ಆಕಾಶ, ಮುಗ್ಗರಿಸದೆ ಬೀಸುವ ಗಾಳಿ, ಹಗಲನ್ನು ಸದಾ ಚೇತೋಹಾರಿಯಾಗಿರಿಸಿರುವ ಬೆಳಕನ್ನು ನೋಡಿ ಪುಳಕಗೊಳ್ಳುವಂತೆ; ನಾವೂ ಕೂಡ ನಮ್ಮನ್ನು ವರ್ಷವಿಡೀ ಶಾಲೆಯ ನಾಲ್ಕು ಗೋಡೆಗಳ ನಡುವೆ ಹಿಡಿದಿಟ್ಟಿದ್ದ ಮೇಸ್ಟ್ರು, ಹೊಡೆತ, ಭಯ, ಮಗ್ಗಿ, ತಲೆಚಚ್ಚಿಕೊಂಡರೂ ಮೈಗತ್ತದ ಇಂಗ್ಲಿಶ್ ಮುಂತಾದ ಶಿಕ್ಷಣದ ಬಂಧನಗಳಿಂದ ಶಾಶ್ವತವಾಗಿ ಬಿಡುಗಡೆ ಹೊಂದಿದವರಂತೆ ಭಾವಿಸುತ್ತಿದ್ದೆವು. ಇನ್ನು ಎರಡು ತಿಂಗಳು ನಮ್ಮ ಚೈತನ್ಯವನ್ನು ಬಂಧಿಸುವ ಯಾವ ಬಂದೀಖಾನೆಯೂ ಈ ಭೂಮಿಯ ಮೇಲಿಲ್ಲ ಎಂದು ಬವರದಲ್ಲಿ ಗೆದ್ದುಬಂದವರಂತೆ ವೀರೋಚಿತವಾಗಿ ಮನೆಕಡೆ ಹೆಜ್ಜೆಹಾಕುತ್ತಿದ್ದೆವು. ಅಂದಿನಿಂದಲೇ ನಮ್ಮ ಬೆನ್ನಿನ ಮೇಲೆ ಸ್ವಾತಂತ್ರ್ಯದ ರೆಕ್ಕೆಗಳು ಚಿಗುರೊಡೆಯುತ್ತಿದ್ದವು. ಸ್ವಾತಂತ್ರ್ಯವೆನ್ನುವುದು ನಮ್ಮೊಳಗಿನ ಜಡತ್ವದ ಗಾಯಕ್ಕೆ ಹಚ್ಚುವ ಮುಲಾಮಿನಂತೆ ಎನ್ನುವುದು ನಮಗೆ ನಿಜವೆನಿಸುತ್ತಿತ್ತು.

ಬೇಸಗೆ ರಜೆಯಲ್ಲಿ ಊರಮುಂದಿನ ಕೆರೆಬಯಲು, ಅಡ್ಲುಬಾವಿ, ಕಡೆಮನೆ ದೊಡ್ಡತಿಮ್ಮಯ್ಯನವರ ಸೀಬಿ ತೋಟ, ಹಳ್ಳಿಕಾರರ ಮನೆಯ ಕಸಿಗಿಡದ ತೋಪು ಇವೆಲ್ಲವನ್ನೂ ನಮ್ಮ ಸುಪರ್ದಿಗೆ ತೆಗೆದುಕೊಳ್ಳುತ್ತಿದ್ದೆವು. ಹೊತ್ತಿನಂಟೆ ಎದ್ದು ಮನೆಯವರು ಹೇಳಿದ ಕೆಲಸಗಳನ್ನೆಲ್ಲಾ ಮುಗಿಸಿ ಊರಮುಂದಲ ಇಪ್ಪೆ ತೋಪಿನಲ್ಲಿ ನಮ್ಮ ತಂಡ ಜಮಾವಣೆಗೊಳ್ಳುತ್ತಿತ್ತು. ಗೋಲಿ ಆಡುವುದರ ಮೂಲಕ ಉದ್ಘಾಟನೆಗೊಳ್ಳುತ್ತಿದ್ದ ನಮ್ಮ ಆಟ; ಸೂರ್ಯ ನೆತ್ತಿಗೇರುವ ಹೊತ್ತಿಗೆ ಅಡ್ಲುಬಾವಿಗೆ ಈಜು ಹೊಡೆಯಲು ಹೋಗುತ್ತಿತ್ತು. ನಮ್ಮ ಇಡೀ ತಂಡದಲ್ಲಿ ನಾನೊಬ್ಬನೆ ಈಜು ಬಾರದವನು. ಉಳಿದವರೆಲ್ಲವರೂ ಈಜಿನಲ್ಲಿ ಎತ್ತಿದಕೈ. ಅದರಲ್ಲೂ ಮುದ್ದ ಈಜಾಡುವುದನ್ನು ನೋಡುವುದೇ ಚೆಂದ! ತರಾವರಿ ಈಜುತ್ತಿದ್ದ ಮುದ್ದ ಬಾವಿಯ ಮಧ್ಯೆ ಕೈಕಾಲು ಆಡಿಸದೆ ಅಂತರಲಾಗಿ ಗಂಟೆಗಟ್ಟಲೆ ತೇಲುವುದನ್ನು ನೋಡಿ ಬೆಕ್ಕಸಬೆರಗಾಗುತ್ತಿದ್ದೆ. ಮುದ್ದ ಮತ್ತು ಲಕ್ಷ್ಮಯ್ಯ ನನಗೆ ಈಜು ಕಲಿಸಲು, ಆಳ್ವಾಣದ ಬೆಂಡೊಂದನ್ನು ನನ್ನ ಬೆನ್ನಿಗೆ ಕಟ್ಟಿ ನೀರಿಗೆ ನೂಕುತ್ತಿದ್ದರು. ಬೆಂಡಿನಿಂದಾಗಿ ತೇಲುತ್ತಿದ್ದ ನಾನು, ಕೈಕಾಲುಗಳನ್ನು ಒದರುತ್ತ ನನಗೂ ಈಜು ಬಂದೇಬಿಟ್ಟಿತೆಂದು ಭಾವಿಸಿದ್ದೆ.

ಉರಿಬೇಸಗೆಯ ಒಂದು ಮಧ್ಯಾಹ್ನ ಹೀಗೆ ನನ್ನ ಗೆಣೆಕಾರರೆಲ್ಲರೂ ಅಡ್ಲುಬಾವಿಯಲ್ಲಿ ಹರಟೆಕೊಚ್ಚುತ್ತಾ ಈಜುಹೊಡೆಯುವದರಲ್ಲಿ ಮಗ್ನರಾಗಿದ್ದರು. ನಾನು ದಡದ ಮೇಲೆ ನಿಂತು ಅವರ ಜಲಕ್ರೀಡೆಯನ್ನು ನೋಡುತ್ತಿದ್ದೆ. ಎಲ್ಲಿಂದಲೋ ಬಂದ ಕೆಂಪ  ನನ್ನನ್ನು ಬಾವಿಗೆ ದಡಾರನೆ ನೂಕಿದ. ಏನು ಎತ್ತ ಎಂದು ನಾನು ನೋಡುವುದರೊಳಗಾಗಿ ಬಾವಿಗೆ ಬಿದ್ದಿದ್ದೆ. ನೀರಿನಲ್ಲಿ ಈಜಾಡುತ್ತಿದ್ದವರ ಕೇಕೆ ನನಗೆ ಕೊನೆಯಬಾರಿ ಕೇಳಿಸಿತು. ಬಿದ್ದ ರಭಸಕ್ಕೆ ನಾನು ಬಾವಿಯ ತಳ ಸೇರಿದ್ದೆ. ಎತ್ತ ನೋಡಿದರೂ ನನ್ನ ಕಣ್ಣಿಗೆ ಕೇವಲ ಜಲರಾಶಿಯೆ ಕಾಣುತ್ತಿತ್ತೇ ಹೊರತು, ಒಂದು ನರಪಿಳ್ಳೆಯೂ ಗೋಚರಿಸಲಿಲ್ಲ! ಸಾವಿನ ಭಯ, ಗಾಬರಿ, ಉದ್ವೇಗ ಎಲ್ಲವೂ ನನ್ನನ್ನು ದಿಕ್ಕೆಡಿಸಿದವು. ಕೈ ಕಾಲುಗಳನ್ನು ಬಡಿದಷ್ಟೂ ನಾನು ನೀರಿನಲ್ಲೇ ಉಳಿದಿದ್ದೆ. ಆಸರೆಗೆ ಏನನ್ನಾದರೂ ಹಿಡಿಯೋಣವೆಂದು ಕೈಚಾಚಿದರೆ ಬರಿ ನೀರೆ ಸಿಗುತ್ತಿತ್ತು. ನನ್ನ ಬಾಯಿಂದ ಒಂದು ಶಬ್ಧವೂ ಹೊರಡದಂತಾಯಿತು. 'ಇಂದಿಗೆ ನನ್ನ ಗತಿ ಖಲಾಸ್ ಆದಂತೆ' ಎಂದು ಭಾವಿಸಿ, 'ಸಿಂಪೂರದಮ್ಮ ನೀನೆ ಉಳಿಸವ್ವ' ಎಂದು ಕೊನೆಯದಾಗಿ ಮೊರೆಯಿಟ್ಟೆ. ಇದಿಷ್ಟೆ ನನಗೆ ತಿಳಿದಿದ್ದು.

ಕಣ್ಣು ತೆರೆದಾಗ ನನ್ನನ್ನು ದಡದ ಮೇಲೆ ಮಲಗಿಸಿದ್ದರು. ನನ್ನ ಸುತ್ತಲೂ ಕೆಂಪ, ಮುದ್ದ, ಚಿಕ್ಕನರಸ, ಆಂಜಿನಿ, ಸಂಜೀವ ಮುಂತಾದ ಗೆಳೆಯರೆಲ್ಲಾ ಏನೂ ಆಗದವರಂತೆ ನನ್ನನ್ನೇ ನೋಡಿ ನಗುತ್ತ ನಿಂತಿದ್ದರು. ನಾನಿನ್ನೂ ಬದುಕಿದ್ದೀನಿ ಎಂಬ ಅರಿವು ಆಗ ನನಗಾಯಿತು. ಈಜಿನಲ್ಲಿ ಎಲ್ಲರಿಂದಲೂ ಸೈ ಅನಿಸಿಕೊಂಡಿದ್ದ ಮುದ್ದನೇ ನನ್ನನ್ನು ನೀರಿನಿಂದ ಹೊರಗೆಳೆದು ತಂದಿದ್ದನಂತೆ! ಸ್ವಲ್ಪಹೊತ್ತಿನ ನಂತರ ತೇಡ್ರಿಸಿಕೊಂಡು ಎದ್ದುನಿಂತು 'ಯಂಗನಾ ಆಗಲಿ, ನಮ್ಮ ಮನೆಗೆ ಹೇಳಬ್ಯಾಡ್ರೋ' ಎಂದು ನಾನೇ ಅವರಲ್ಲಿ ಮೊರೆಯಿಟ್ಟೆ. ಏಕೆಂದರೆ ಮನಯುವರಿಗೆ ಗೊತ್ತಾದರೆ, ನನಗೆ ಇನ್ನಷ್ಟು ಹೊಡೆತ, ಬೈಗುಳಗಳು ಸಿಗುತ್ತಿದ್ದವೆಯೇ ಹೊರತು ಸ್ವಾಂತನವಂತೂ ಸಿಗುತ್ತಿರಲಿಲ್ಲ! ಕೆಂಪ ಮಾತ್ರ ಏನೂ ಆಗದವನಂತೆ 'ಯಸಟ್‌ಕೋ ಬಾರ್ಲ ಬಿಕ್ಕಲ' ಎಂದು ಮತ್ತೆ ನನ್ನ ಹೆಗಲ ಮೇಲೆ ಕೈ ಹಾಕಿಕೊಂಡು ಗೋಲಿ ಆಡಲು ಕರೆದುಕೊಂಡು ಹೊರಟುಬಿಟ್ಟ. ಅಂದಿಗೆ ನನ್ನ 'ಈಜು ಪರ್ವ' ಮುಗಿಯಿತು. ಇನ್ನೆಂದಿಗೂ ನಾನು ನೀರಿನ ಬಳಿ ಸುಳಿಯಲಿಲ್ಲ. ಇಂಗ್ಲೀಷಿನಂತೆ ಈಜೂ ಕೂಡ ನನ್ನ ಪಾಲಿಗೆ ಗಗನಕುಸುಮವಾಯಿತು!

'ಬಿಕ್ಕಲ' ಎನ್ನುವುದು ನನಗೆ ಬಾಲ್ಯದಲ್ಲಿದ್ದ ಅಡ್ಡ ಹೆಸರು, ನನ್ನ ಓರಿಗೆಯವರು, ಶಾಲೆಯ ಸಹಪಾಠಿಗಳು, ನೆರೆಹೊರೆಯ ಕಿರಿಯರು ನನ್ನನ್ನು 'ಬಿಕ್ಕಲ' ಎಂದೇ ಕರೆಯುತ್ತಿದ್ದರು. 'ಬಿಕ್ಕಲು' ನಾನು ಮಾತು ಕಲಿತಾಗಲಿಂದಲೇ ಇತ್ತೆಂದು ಅಜ್ಜವ್ವ ಹೇಳುತ್ತಿದ್ದಳು. ಎಲ್ಲರ ಹಾಗೆ ನನಗೆ ಸರಾಗವಾಗಿ ಮಾತನಾಡಲು ಆಗುತ್ತಿರಲಿಲ್ಲ. ಒಂದೊಂದು ಮಾತನಾಡಲು ನಾನು ಯಮಯಾತನೆ ಪಡುತ್ತಿದ್ದೆ.



ಶಾಲೆಯಲ್ಲಿ ಹಾಜರಿ ಹಾಕುವಾಗ ಮೇಸ್ಟರು ನನ್ನ ಹೆಸರು ಕೂಗುತ್ತಿದ್ದರು. ನಾನು ಎಲ್ಲರ ಹಾಗೆ ಸರಾಗವಾಗಿ 'ಪ್ರೆಸೆಂಟ್ ಸಾ' ಎಂದು ಹೇಳಲು ಆಗುತ್ತಿರಲಿಲ್ಲ. ಸುಮ್ಮನೆ ಎದ್ದುನಿಂತು 'ಪೆ..ಪೆ..ಪೆ..' ಎಂದು ವಾಕ್ಯವನ್ನು ಮುಂದುವರೆಸಲಾಗದೆ ಕಣ್ಣೀರುದುಂಬಿಕೊಂಡು ನಿಂತುಬಿಡುತ್ತಿದ್ದೆ. ಮೇಸ್ಟ್ರು ನನ್ನನ್ನು ನೋಡಿ 'ಕುಳಿತುಕೊಳ್ಳೋ ಬಿಕ್ಕಲ' ಎಂದು ಉದಾರದಿಂದ ಹಾಜರಿ ಹಾಕುತ್ತಿದ್ದರು. ನನ್ನ ಆಗಿನ ಸ್ಥಿತಿಯನ್ನು ನೋಡಿ ತರಗತಿಯ ಹುಡುಗರೆಲ್ಲಾ ನಗುತ್ತಿದ್ದರು. ದಿನವೂ ಇಂತಹ ಅಪಮಾನದಿಂದ ನಾನು ಕುಗ್ಗಿಹೋಗುತ್ತಿದ್ದೆ. ಇದು ನನಗಂಟಿಬಂದಿರುವ ಶಾಪವೆಂದೇ ನಾನು ಆ ದಿನಗಳಲ್ಲಿ ಬಲವಾಗಿ ನಂಬಿದ್ದೆ.

ಒಂದೊಂದು ದಿನ ಮೇಸ್ಟರು 'ಇವತ್ತು ಎಲ್ಲರೂ ಒಬ್ಬೊಬ್ಬರಾಗಿ ನಿಂತು ಪಾಠ ಓದಿ' ಅಂತ ಹೇಳಿ ಕುಳಿತುಬಿಡುತ್ತಿದ್ದರು. ಆ ಹೊತ್ತಿನ ದಿನ 'ನನ್ನನ್ನು ಗಲ್ಲಿಗೇರಿಸುವ ದಿನ'ವೆಂದೇ ನಾನು ಭಾವಿಸುತ್ತಿದ್ದೆ. ಎಲ್ಲರೂ ಸರದಿಯಂತೆ ನಿಂತು ಪಾಠ ಓದುತ್ತಿದ್ದರೆ, ನಾನು ಮಾತ್ರ ತೊದಲುತ್ತಾ ಹೇಗೆ ಓದುವುದು? ಎಂಬ ಭಯದಿಂದ ಬೆವರಿ ಬೆಂಡಾಗುತ್ತಿದ್ದೆ. ಇಂತಹ ಮುಜುಗರದಿಂದ ತಪ್ಪಿಸಿಕೊಳ್ಳಲು ನನ್ನ ಸರದಿ ಬಂದಾಗ ಒಂದು ಸಣ್ಣ ಆವುಟವನ್ನೂ ಕಟ್ಟಿಬಿಡುತ್ತಿದ್ದೆ. ಪುಸ್ತಕ ಹಿಡಿದುಕೊಂಡು ನಿಂತು ತಲೆತಿರುಗಿ ಬೀಳುವವನಂತೆ ನಟಿಸಿ ಕೆಳಗೆ ಬಿದ್ದುಬಿಡುತ್ತಿದ್ದೆ. ಆಗ ಮೇಸ್ಟರೇ ಓಡಿ ಬಂದು ನನ್ನನ್ನು ಮೇಲೆತ್ತಿ ನೀರು ಕುಡಿಸಿ ಕುಳ್ಳಿರಿಸುತ್ತಿದ್ದರು. ಅಲ್ಲಿಗೆ ಬಿಕ್ಕಳಿಸಿಕೊಂಡು ಪಾಠ ಓದಿ ನಗೆಪಾಟಲಿಗೀಡಾಗುವ ಶಿಕ್ಷೆಯಿಂದ ತಾತ್ಕಾಲಿಕ ಬಿಡುಗಡೆ ದೊರೆಯುತ್ತಿತ್ತು. ಇಂತಹ 'ಏಕಪಾತ್ರಭಿನಯ'ವನ್ನು ಬೇರೆ ಬೇರೆ ರೂಪದಲ್ಲಿ ಆಗಾಗ ಮುಂದುವರೆಸುತ್ತಿದ್ದೆ.

ಮನೆಯಲ್ಲಿ ನನ್ನನ್ನು ಅಂಗಡಿಗೆ ಹೋಗಿ ಕಾಫಿಪುಡಿಯನ್ನೋ, ಬೆಲ್ಲವನ್ನೋ ತರಲು ಕಳುಹಿಸುತ್ತಿದ್ದರು. ಅಲ್ಲಿಯೂ ಹೀಗೆಯೇ ಆಗುತ್ತಿತ್ತು. ಕಾಫಿಪುಡಿ ಕೊಡಿ ಅಂತ ಕೇಳೋದಕ್ಕೆ ನನಗೆ ಆಗುತ್ತಿರಲಿಲ್ಲ. ಕಾ.. ಕಾ.. ಕಾ.. ಅಂತ ತೊದಲುತ್ತಲೇ ಸುಮಾರು ಹೊತ್ತು ನಿಂತುಬಿಡುತ್ತಿದ್ದೆ. ಅಂಗಡಿಮನೆಯವರು ನನ್ನ ಸ್ಥಿತಿ ನೋಡಿ ನಗುತ್ತಾ ನಿಂತುಬಿಡೋರು. ಇನ್ನೂ ಕೆಲವರು ಗದರಿಸಿ ಕಳಿಸೋರು. ಆಗ ನನ್ನ ಜಂಘಾಬಲವೇ ಉಡುಗಿ ಹೋಗುತ್ತಿತ್ತು. ಆದರೆ ತಿಮ್ಮರಾಯಪ್ಪನ ಅಂಗಡಿಯೋರು ಮಾತ್ರ 'ಅದೇನು ಬೇಕೋ ಬರ್ಕೊಂಡು ಬಾ' ಅಂತ ವಾಪಸ್ಸು ಕಳಿಸೋರು. ಮತ್ತೆ ನಾನು ಪೆನ್ಸಿಲ್‌ನಲ್ಲಿ ಬರೆದುಕೊಂಡುಹೋಗಿ ತರುತ್ತಿದ್ದೆ. ತೊದಲುವಿಕೆಯ ಕಾರಣದಿಂದಾಗಿಯೇ ಕೀಳರಿಮೆ ಮತ್ತು ಆತ್ಮವಿಶ್ವಾಸಗಳು ಕುಗ್ಗಿ ನನ್ನನ್ನು ಹಿಂಡಿ ಇಪ್ಪೆಕಾಯಿ ಮಾಡಿದ್ದವು. ಆದ್ದರಿಂದಲೇ ಶಾಲೆಯಲ್ಲಿ ಹಾಗೂ ಸಾರ್ವಜನಿಕರ ಎದುರಿನಲ್ಲಿ ನಾನೂ ಎಂದೂ ತಲೆಯೆತ್ತಿ ಮಾತನಾಡುತ್ತಿರಲಿಲ್ಲ.

ಮಾದಿಗರ ಹಟ್ಟಿಯ ಗಾಳಿತಿಮ್ಮಿಗೂ ಅಜ್ಜವ್ವನಿಗೂ ಬಾರಿ ದೋಸ್ತಿ. ದಿನಕ್ಕೊಂದಾವರ್ತಿಯಾದರೂ ಅವರಿಬ್ಬರೂ ಹಟ್ಟಿಮುಂದೆ ಕುಳಿತು, ಹೊಗೆಸೊಪ್ಪಿನ ಕಡ್ಡಿಯನ್ನು ಪರಸ್ಪರ ಹಂಚಿಕೊಂಡು ಎಲೆಯಡಕೆ ಜಗಿಯುತ್ತಾ ಮಾತನಾಡುತ್ತಾ ಕುಳಿತುಕೊಂಡಿರುತ್ತಿದ್ದನ್ನು ನಾನು ದಿನವೂ ಗಮನಿಸುತ್ತಿದ್ದೆ. ಗಾಳಿತಿಮ್ಮಿ ಬಂದಾಗ ಸುಮ್ಮನೆ ಇರುತ್ತಿರಲಿಲ್ಲ! ರಾಗಿ ಮಾಡಿಕೊಡದೋ ಅಥವಾ ಮೊರ, ಪುಟ್ಟಗೂಡೆ, ವನರಿ ಬಳಿದು ಕೊಡೋದೋ ಹೀಗೆ ಅಜ್ಜವ್ವನಿಗೆ ಏನಾದರೊಂದು ಸಹಾಯ ಮಾಡುತ್ತಿದ್ದಳು. ಅವಳ ಮುಂದೆ ಯಾರಾದರು ನನ್ನನ್ನು 'ಬಿಕ್ಕಲ' ಎಂದು ಕರೆದರೆ ಅವಳು ಸುಮ್ಮನಿರುತ್ತಿರಲಿಲ್ಲ! ಅವರಿಗೆ ಇಡ್ರಿಸಿಬಿಡುತ್ತಿದ್ದಳು. 'ಉಸ್ಕೂಲ್‌ಗೆ ಹೋಗೋ ಆ ಮಗೀನ ಬಿಕ್ಕಲ ಅಂತ ಕರೀತಿರಲ್ಲ! ನಿಮ್ಮ ಮನಗೆ ಯಾರಿಗಾದ್ರೂ ಹೀಂಗಾಗಿದ್ರೆ?' ಎಂದು ನನ್ನನ್ನು ಆಡಿಕೊಂಡವರನ್ನು ನಿಲೆಹಾಕಿ ಬಿಸಿಮುಟ್ಟಿಸೋಳು. ನನ್ನನ್ನು ಅನಾಮತ್ತಾಗಿ ತನ್ನ ಮಡಿಲಿನಲ್ಲಿ ಕುಳ್ಳಿರಿಸಿಕೊಂಡು ಸೀರಣಿಗೆಯಲ್ಲಿ ತಲೆಬಾಚಿ ಹೇನು, ಸೀರು ಹಿಡಿದು ಕುಕ್ಕೋಳು. ತಲೆಗೆ ಹರಳೆಣ್ಣೆ ತಿಕ್ಕಿ ಜಡೆ ಹಾಕಿ ಕೆನ್ನೆ ಮೇಲೊಂದು ಸಾದಿನ ಬೊಟ್ಟು ಇಡೋಳು. 'ನೀನು ದೊಡ್ಡವನಾದ ಮೇಲೆ ನನಗೆ ಒಂದುಕಟ್ಟು ವಿಳೆದೆಲೆ ಒಂದು ಪಾವು ಅಡಕೆ ಕೊಡಸಿಬಿಡಪ್ಪ ಈ ಬಡವಿಗೆ ಅಷ್ಟೇ ಸಾಕು' ಎಂದು ನನಗೆ ಹೇಳುತ್ತಿದ್ದಳು. ಇಂತಹ ಸರಳ ಆಸೆಯ ಜೀವಿಗಳಲ್ಲೇ ನಾನು ಬದುಕಿನಲ್ಲಿ ಎಲ್ಲೂ ಕಲಿಯಲಾಗದ ಪಾಠಗಳನ್ನು ಕಲಿತಿದ್ದೇನೆ.

ಸದಾ ಎಲೆ ಅಡಕೆ ಜಗಿಯುತ್ತಿದ್ದ ಗಾಳಿತಿಮ್ಮಿಯ ಬಾಯಿ ಸದಾ ಕೆಂಪಗಿರುತ್ತಿತ್ತು. ಸಿಕ್ಕುಗಟ್ಟಿದ ತಲೆಕೂದಲು. ಅಲ್ಲಲ್ಲಿ ಹರಿದು ತೇಪೆ ಹಾಕಿದ ಸೀರೆ, ಕಂಕುಳಿನಲ್ಲಿ ಹಸುಮಗು. ತುಂಬು ಬೆಳುದಿಂಗಳಿನಂತೆ ಸದಾ ಹಸನ್ಮುಖಿಯಂತಿರುತ್ತಿದ್ದಳು. ಕಗ್ಗಲ್ಲನ್ನೂ ಕರಗಿಸುವಂತ ಕರುಣೆ ಮತ್ತು ಪ್ರೀತಿ ತುಂಬಿದ ಅವಳ ಮಾತುಗಳು ಕೇರಿಯ ಮಣ್ಣು ಮತ್ತು ನೀರಿನಲ್ಲಿ ಬೆರೆತಿದ್ದವು. ನೆರೆಹೊರೆಯವರ ಕಷ್ಟಕ್ಕೆ ಮರುಗುವ ಗುಣದಿಂದಾಗಿ ಊರಿನಲ್ಲಿ ಎಲ್ಲರಿಗೂ ಹತ್ತಿರವಾಗಿದ್ದಳು. ಕೇರಿಯಲ್ಲಿ ಜಾತಿಪದ್ಧತಿಯ ಹೀನ ನಡವಳಿಕೆಗಳು ಇವಳಿಂದಾಗಿಯೇ ಬಹುಪಾಲು ಕಡಿಮೆಯಾಗಿದ್ದವು. ಗಾಳಿತಿಮ್ಮಿ ಎಂದೂ ತನ್ನ ಬಡತನ ಮತ್ತು ಸಾಮಾಜಿಕ ಅಂತಸ್ತಿನ ಬಗ್ಗೆ ಕೊರಗಿದ ಹೆಣ್ಣಲ್ಲ! ತುಂಬು ಸ್ವಾಭಿಮಾನದ ಹೆಣ್ಣು ಅವಳು. ನಮ್ಮ ಹಳ್ಳಿಗಳು ನಗರೀಕರಣದ ವಿಲಕ್ಷಣ ಪ್ರಭಾವಕ್ಕೆ ಒಳಗಾಗಿರಬಹುದು! ಆದರೂ ಸಮಾಜದಲ್ಲಿ ಕೂಡಿ ಬಾಳುವುದನ್ನೇ ಬಯಸುವ ನಿರ್ವ್ಯಾಮೋಹಿಯಾದ ಗಾಳಿತಿಮ್ಮಿಯಂತಹ ಜೀವಗಳು ಇನ್ನೂ ನಮ್ಮ ನಡುವೆ ಇವೆ. ಇಂತವರಿಂದಾಗಿಯೇ ನಾವಿನ್ನೂ ಹಳ್ಳಿಗಳ ಮೇಲೆ ಭರವಸೆ ಇಡಬಹುದಾಗಿದೆ.

ನಾನು ಬಾಲ್ಯದಲ್ಲಿ ಕಂಡಂತೆ, ನಮ್ಮೂರಿನ ಎಲ್ಲರಿಗೂ ಬಡತನ, ದಾರಿದ್ರ್ಯ ಸಮಾನವಾಗಿತ್ತು. ಸ್ವಲ್ಪಮಟ್ಟಿಗೆ ಹೆಚ್ಚು ಕ್ರೌರ್ಯವಿಲ್ಲದ ಜಾತಿಪದ್ಧತಿಯ ರೂಢಿಗಳೂ ಇದ್ದವು. ಆದರೆ ಎಲ್ಲಕ್ಕಿಂತ ಹೆಚ್ಚಾಗಿ ಬಡತನ ನಮ್ಮ ಜನಗಳ ಚೈತನ್ಯವನ್ನೇ ಉಡುಗಿಸಿತ್ತು. ಆದರೂ ಹುಲ್ಲೆಸಳಿನ ಮೇಲೆ ಕುಳಿತ ಬೆಳಗಿನ ಇಬ್ಬನಿಯನ್ನು ಸೂರ್ಯನ ಎಳೆಯ ಕಿರಣಗಳು ಕರಗಿಸುವಂತೆ, ಸಹಬಾಳ್ವೆಯ ಬದುಕು ನಮ್ಮ ಹಳ್ಳಿಯ ಸಾಮುದಾಯಿಕ ಜೀವನವನ್ನು ಹೆಚ್ಚು ಸ್ವಾರ್ಥಿಯಾಗದಂತೆ ಹದಮಾಡಿ ಸಹ್ಯವಾಗಿಸಿತ್ತು. ನಮ್ಮ ಊರಿನಲ್ಲಿ ಪ್ರೀತಿ, ವಿಶ್ವಾಸವಿರುವ ಸಾಮರಸ್ಯದ ಪುಟ್ಟ ದೀಪ ಎಂದೂ ನಂದದಂತೆ ಸದಾ ಜ್ವಲಿಸುತ್ತಿರಲು, ಸರಳ ಮತ್ತು ಮಾನವೀಯ ನಡವಳಿಕೆಗಳಿರುವ ಗಾಳಿತಿಮ್ಮಿ, ಅಜ್ಜವ್ವ, ಗಂಗಣ್ಣಮ್ಮ, ನೀರಗಂಟಿ ಚಿಕ್ಕೆಲ್ಲಯ್ಯ ಇಂತಹ ಜೀವಗಳ ಪಾತ್ರವೂ ಹಿರಿದು.

ಇಂತಹುದೇ ಒಂದು ಬೇಸಗೆಯ ದಿನ. ನಾವೆಲ್ಲಾ ಕೆರೆ ಬಯಲಿನಲ್ಲಿ ಚಿಣ್ಣಿದಾಂಡು ಆಡುತ್ತಿದ್ದೆವು. ಚಿಕ್ಕನರಸ ಹೊಡೆದ ಒಂದು ಹೊಡೆತಕ್ಕೆ ಚಿಣ್ಣಿ ಹೋಗಿ ಬಂದೂಕದ ಗಿರಿಯಣ್ಣನವರ ತೋಟದಲ್ಲಿ ಆಳೆತ್ತರಕ್ಕೆ ಬೆಳೆದಿದ್ದ ಕಳ್ಳಿಸಾಲಿಗೆ ಹೋಗಿ ಬಿತ್ತು. ಚಿಣ್ಣಿ ತರಲು ನಾನೇ ಕಳ್ಳಿಸಾಲಿಗೆ ನುಗ್ಗಿದೆ. ನುಗ್ಗಿ ಚಿಣ್ಣಿಯನ್ನು ಹುಡುಕಾಡುತ್ತಿದ್ದಾಗ ಅದ್ಯಾವ ಮಾಯದಲ್ಲೋ ಕಳ್ಳಿಹಾಲು ಸಿಡಿದು ನನ್ನ ಎಡದ ಕಣ್ಣಿಗೆ ಬಿತ್ತು. ಉರಿಯಿಂದ ಕಣ್ಣು ಮರಳಿಸತೊಡಗಿತು. ಕಣ್ಣಿಗೆ ಬಿದ್ದ ಕಳ್ಳಿಹಾಲಿನ ಉರಿಯನ್ನು ತಡೆಯಲಾರದೆ 'ಅಯ್ಯೊಯ್ಯೋ..ಉರಿ..ಉರಿ..' ಎಂದು ಚೀರಾಡುತ್ತಾ ಬೇಲಿ ಸಾಲಿನ ಹೊರಗೆ ಬಂದು ಎರಡೂ ಕೈಗಳಿಂದ ಕಣ್ಣುಗಳನ್ನು ಮುಚ್ಚಿಕೊಂಡು ನೆಲದ ಮೇಲೆ ಉರುಳಾಡತೊಡಗಿದೆ. ಬೆಂಕಿಯ ನೀರಿನಲ್ಲಿ ನನ್ನ ಕಣ್ಣನ್ನು ಮುಳುಗಿಸಿದಂತಾಗಿತ್ತು.

ಚಿಣ್ಣದಾಂಡು ಆಡುತ್ತಿದ್ದ ಎಲ್ಲ ಗೆಣೆಕಾರರು ಓಡಿ ಬಂದು ನನ್ನನ್ನು ಅನಾಮತ್ತಾಗಿ ಎತ್ತಿಕೊಂಡು ನಮ್ಮ ಹಟ್ಟಿಬಾಗಿಲಿಗೆ ತಂದರು. 'ಏನಾಯಿತಲ?' ಎಂದು ಒಳಗಿನಿಂದ ಅಜ್ಜವ್ವ ಹೊರಗೆ ಓಡೋಡಿಬಂದಳು. 'ಅಜ್ಜವ್ವ, ಚಿಣ್ಣಿದಾಂಡು ಆಡ್ತಿರಬೇಕಾದ್ರೆ ಕಣ್ಣಿಗೆ ಕಳ್ಳಿಹಾಲು ಸಿಡಿತು' ಅಂತ ತಡೆಯಲಾರದ ನೋವಿನಲ್ಲೂ ನಾನೇ ಹೇಳಿದೆ. ಅಜ್ಜವ್ವ ಗಾಬರಿಯಿಂದ ಏನೂ ಮಾಡಲು ತಿಳಿಯದೆ ತಬ್ಬಿಬ್ಬಾದಳು. 'ಕಣ್ಣು ಒಸಗಬ್ಯಾಡ ಕಣ್ಲ, ನೋವು ಜಾಸ್ತಿ ಆಗ್ತೈತೆ' ಅಂತ ಅಜ್ಜವ್ವ ಸಂಕಟದಿಂದ ಹೇಳಿದಳು. ಅಷ್ಟರಲ್ಲಿ ನಮ್ಮ ಕೇರಿಗೆ ಹಿರಿಯಳಾಗಿದ್ದ ಪುಟ್ಟಮ್ಮಜ್ಜಿ ಬಂದು 'ಯವ್ವಾ, ಕಳ್ಳಿಹಾಲು ಬಿದ್ದ ಉರಿ ತಣ್ಣಗಾಗೋದಕ್ಕೆ ಬಾಣಂತಿ ಎದೆಹಾಲು ಬಿಟ್ರೆ




ಒಳ್ಳೇದು, ಎಲ್ಲಾದ್ರೂ ನೋಡ್ರವ್ವ' ಅಂದಳು.

ಎಲ್ಲರೂ ಆ ಕಡೆ, ಈ ಕಡೆ ನೋಡುವಷ್ಟರಲ್ಲಿ ಅದೆಲ್ಲಿದ್ದಳೋ ಗಾಳಿತಿಮ್ಮಿ ತನ್ನ ಎಳೆಮಗವನ್ನು ಕಂಕಳಲ್ಲಿ ಇರಿಕಿಕೊಂಡು, ಬಿರುಗಾಳಿಗಿಂತ ವೇಗವಾಗಿ ನಾನು ಮಲಗಿದ್ದ ಕಡೆಗೇ ಓಡೋಡಿ ಬಂದಳು. ಅವಳು ಬಂದಕೂಡಲೆ ನೆರೆದಿದ್ದ ಗುಂಪು ಅರುಗಾಗಿ ಅವಳಿಗೆ ಜಾಗ ಬಿಟ್ಟಿತು. 'ಯವ್ವಾ, ನಾನು ಹಿಟ್ಟಿನ್ಹೆಸರಿಗೆ ಕುದಿಹಾಕಿದ್ದೆ. ಅಷ್ಟರಲ್ಲಿ ನಮ್ಮಹಟ್ಟಿ ಆಂಜಿನಿ ಬಂದು ಹಿಂಗಾದರೆ.. ಹಿಂಗೆ.. ಅಂತ ಹೇಳಿದ. ಅದ್ಕೆ ಹಿಟ್ಟಿನ್ಹೆಸರು ಅಂಗೆ ಒಲೆಮೇಲೆ ಬಿಟ್ಟು ಬಂದೆ' ಅಂತ ನನ್ನನ್ನೇ ನೋಡುತ್ತಾ, ನೋವು ತನ್ನ ದೇಹಕ್ಕೇ ಆಗಿದೆಯೇನೋ ಅನ್ನುವಂತೆ ತಟಗುಡುತ್ತ ಅಜ್ಜವ್ವನಿಗೆ ಹೇಳಿದಳು. ಅಲ್ಲಿಯೆ ಇದ್ದ ಪುಟ್ಟಮ್ಮಜ್ಜಿ 'ಲೇ ತಿಮ್ಮಿ, ಅವನ ಕಣ್ಣಿಗೆ ಕಳ್ಳಿಹಾಲು ಸಿಡಿದೈತೆಕನವ್ವ, ಅದ್ಕೆ ಉರಿ ಅಂತಾವನೆ. ರವೋಟು ನಿನ್ನ ಎದೆಹಾಲು ಅವನ ಕಣ್ಣಿಗೆ ಬಿಡವ್ವ, ಉರಿ ತಣ್ಣಗಾಗ್ತೈತೆ' ಅಂದಳು.

'ಯವ್ವಾ ಬುಡ್ತು ಅನ್ನು, ಈ ಮಗಿನ ಕಣ್ಣಿಗಿನ್ನ ಹೆಚ್ಚೆ ನನ್ನ ಎದೆಹಾಲು' ಎಂದು ಗಾಳಿತಿಮ್ಮಿ ಹೇಳುತ್ತಿದ್ದಂತೆ, ಅಜ್ಜವ್ವ ಮತ್ತು ಪುಟ್ಟಮ್ಮಜ್ಜಿ ಇಬ್ಬರೂ ಕೂಡಿ ನನ್ನನ್ನು ಆಕಡೆ, ಈಕಡೆ ಹಿಡಿದುಕೊಂಡು ಸೀದ ಪಡಸಾಲೆಗೆ ಕರೆದುಕೊಂಡುಬಂದು ಈಸಲು ಸಾಪೆಮೇಲೆ ಅಂಗಾತ ಮಲಗಿಸಿದರು. ಗಾಳಿತಿಮ್ಮಿ ತನ್ನ ಮಗುವಿನೊಂದಿಗೆ ಪಡಸಾಲೆ ಬಾಗಿಲಲ್ಲೇ ನಿಂತು ಒಳಗೆ ಬರೋದೋ, ಬ್ಯಾಡವೊ ಅಂತ ಮೀನಾಮೇಷ ಎಣಿಸುತ್ತಾ ನಿಂತಿದ್ದಳು. 'ಅಯ್ಯೋ ಒಳಗೆ ಬಾರವ್ವ, ನನ್ನೆದೆಹಾಲು ನಿನ್ನೆದೆಹಾಲು ಒಂದೇ ಅಲ್ವೆ! ಅದರಾಗೂ ಬಿನ್ನಬೇದ ಇದ್ದಾತೆ? ಒಳಗೆ ಬಾರೆ ನನ್ನವ್ವ' ಎಂದು ಅಜ್ಜವ್ವ ಹೇಳಿದಳು. ಅಜ್ಜವ್ವ ಹಾಗೆ ಹೇಳಿದ್ದೇ ತಡ, ಗಾಳಿತಿಮ್ಮಿ ಪಡಸಾಲೆಗೆ ಬಂದು, ಕಂಕುಳಲ್ಲಿದ್ದ ಮಗುವನ್ನು ಸಾಪೆ ಮೇಲೆ ಕುಳ್ಳಿರಿಸಿದಳು. ನನ್ನ ತಲೆಯನ್ನು ತನ್ನ ತೊಡೆಯಮೇಲೆ ಇಟ್ಟುಕೊಂಡು 'ಎಲ್ಲಿ ನನ್ನರಾಜ, ರವೊಟು ಕಣ್ಣು ತೆಗೆಯಪ್ಪ' ಅಂದು, ಕಳ್ಳಿಹಾಲು ಸಿಡಿದಿದ್ದ ನನ್ನ ಎಡದ ಕಣ್ಣಿಗೆ ಎದೆಹಾಲು ಸುರಿಸಿದಳು. ಅವಳ ಎದೆಹಾಲು ನನ್ನ ಕಣ್ಣನ್ನು ತುಂಬಿಕೊಂಡು ಕೆಳಗಿಳಿಯತೊಡಗಿತು. ಅವಳ ಎದೆಹಾಲಿನ ಸ್ಪರ್ಶದಿಂದ, ಕಾರೆಹಣ್ಣಿನಂತೆ ಕೆಂಪಾಗಿ ಉರಿಯುತ್ತಿದ್ದ ನನ್ನ ಕಣ್ಣು ತಂಪಾಯಿತು.

ಅಂದು ಮಾದಿಗರ ಹಟ್ಟಿಯ ಗಾಳಿತಿಮ್ಮಿಯ ಎದೆಹಾಲು, ಕೇವಲ ನನ್ನೊಬ್ಬನ ಕಣ್ಣುಗಳನ್ನು ಮಾತ್ರ ಸ್ವಚ್ಚಗೊಳಿಸಲಿಲ್ಲ! ಜಾತಿಪದ್ಧತಿಯ ವಿಲಕ್ಷಣ ರೂಢಿಗಳಿಂದ ಮಸುಕಾಗಿದ್ದ ಕೇರಿಯ ಕಣ್ಣುಗಳನ್ನೇ ಸ್ವಚ್ಚಗೊಳಿಸಿತು. ಜಾತಿ ಆಧಾರಿತ ಮೇಲು ಕೀಳುಗಳು ಆಳವಾಗಿ ಬೇರೂರಿರುವ ಈ ಸಮಾಜದಲ್ಲಿ, ಸಾಮೂಹಿಕ ಹಿತವನ್ನೇ ಬಯಸುವ ಗಾಳಿತಿಮ್ಮಿಯಂಥ ನಿಸ್ವಾರ್ಥ ಜೀವಿಗಳಿಗೆ ಮಾತ್ರ ಜಾತಿಪದ್ಧತಿಯ ಬಲಿಷ್ಠ ಗೋಡೆಗಳನ್ನು ಕೆಡುವಿಹಾಕುವ ಶಕ್ತಿಯಿರುತ್ತದೆ.

ಅವಳು ಸುರಿಸಿದ ಎದೆಹಾಲು ನನ್ನ ಕಣ್ಣುಗಳ ಉರಿಯನ್ನು ಶಮನಗೊಳಿಸಿ ನನ್ನ ಎದೆಗೂ ಇಳಿಯಿತು. ಸಾಮರಸ್ಯ, ಪ್ರೀತಿ ಎನ್ನುವುದು ಮಾತಿನಲ್ಲಲ್ಲ! ಅದು ಇರುವುದು ಕ್ರಿಯೆಯಲ್ಲಿ ಎನ್ನುವುದನ್ನು ಗಾಳಿತಿಮ್ಮಿಯಿಂದ ನಾನು ಕಲಿತೆ.



**(ನಿವೃತ್ತ ಕನ್ನಡ ಉಪನ್ಯಾಸಕರಾದ ಜಿ.ವಿ. ಆನಂದಮೂರ್ತಿ ಈಗ ತುಮಕೂರಿನಲ್ಲಿ ನೆಲೆಸಿದ್ದು, ಕವಿಯಾಗಿ, ಕಥೆಗಾರರಾಗಿ, ದಟ್ಟ ಗ್ರಾಮೀಣ ಸೊಗಡಿನ ಲಲಿತ ಪ್ರಬಂಧಕಾರರಾಗಿ ಮತ್ತು ಜಾನಪದ ಕ್ಷೇತ್ರಕ್ಕೆ ಸಂಬಂಧಿಸಿದ ಹಲವು ಪುಸ್ತಕಗಳ ಸಂಪಾದಕರಾಗಿ ಹೆಸರು ಮಾಡಿದ್ದಾರೆ )**


'ಹೊಸ ಮನುಷ್ಯ' ಪತ್ರಿಕೆಗೆ

ಐದನೇ ವರ್ಷಕ್ಕೆ ಕಾಲಿಡುತ್ತಿರುವ ಶುಭ ಸಂದರ್ಭದಲ್ಲಿ

ಹುಟ್ಟುಹಬ್ಬದ ಶುಭಾಶಯಗಳು

ವಿವೇಕಿಗಳನ್ನು ಪೀಡಿಸುವುದು ಮೂರ್ಖರ ಸಹಜ ಗುಣ

ಹಾಗೇ ಆ ಮೂರ್ಖರ ಪೀಡನೆಯಿಂದ ವಿಚಲಿತನಾಗದಿರುವುದೂ

ವಿವೇಕಿಯ ಸಹಜ ಗುಣ

— ಪಂಚತಂತ್ರ



–ಮೆ. ಬ್ರೈಟ್ ಏಜೆನ್ಸೀಸ್

ಎಲ್.ಎಲ್.ಆರ್. ರಸ್ತೆ

ಶಿವಮೊಗ್ಗ–577201(ಕರ್ನಾಟಕ)

ದೂ: 08182-290057

ಟೆಲಿಫ್ಯಾಕ್ಸ್: 08182–279850

e-mail: brightagency@dataone.in

brightagenciessmg@gmail.com

ಹೊಸ ಮನುಷ್ಯ' ಓದುಗರೆಲ್ಲರಿಗೆ
ಸ್ವಾತಂತ್ರ್ಯೋತ್ಸವದ ಹಾರ್ದಿಕ
ಶುಭಾಶಯಗಳು



ಕೊಟ್ಟ ಮಾತನ್ನು ತಪ್ಪುವವನಿಗೆ ಧರ್ಮವೆಲ್ಲಿ ಬಂತು?
– ಕುರಾನ್


**ಜಾಕೀರ್ ಹುಸೇನ್ ಬಿ ಶಿಬಾರಗಟ್ಟಿ**
ಮೊದಲ ದರ್ಜೆ ಸಿವಿಲ್ ಗುತ್ತಿಗೆದಾರರು
ಲಕ್ಷ್ಮಿಸಿಂಗನಕೇರಿ, ನಗರ್‌ಕರ್ ಕಾಲೋನಿ
**ಧಾರವಾಡ**

# ಕಾಲುದಾರಿಯಲ್ಲಿ ಸಿಕ್ಕ ಕಥೆಗಳು

–ಡಾ. ಕೃಷ್ಣಮೂರ್ತಿ ಹನೂರು

ಕನ್ನಡದ ಪ್ರಖ್ಯಾತ ಜನಪದ ವಿದ್ವಾಂಸರಾದ ಡಾ. ಹನೂರು ಕೃಷ್ಣಮೂರ್ತಿಯವರ ಜಾನಪದ ವಿದ್ವತ್ತು ವ್ಯಾಪಕ ಕ್ಷೇತ್ರಕಾರ್ಯದಿಂದ ದತ್ತವಾದದ್ದು. ನಮ್ಮ ಹಳ್ಳಿಗಳ ಬದುಕಿನಲ್ಲಿನ ಹಾಡು–ಹಸೆ–ಕಥೆ–ದಂತಕಥೆ–ಪುರಾಣ ಪ್ರತೀಕಗಳ ಬೇರುಗಳನ್ನು ತಡಕಿ ನೋಡಿ ಅದರ ಆಧಾರದ ಮೇಲೆ ಸಂಸ್ಕೃತಿ ಕಥನ ನಿರೂಪಿಸುವವರು. ಅವರು ೭೦–೮೦ರ ದಶಕಗಳಲ್ಲಿ ಚಿತ್ರದುರ್ಗ ಸೀಮೆಯಲ್ಲಿ ನಡೆಸಿದ ಜಾನಪದ ಅಲೆದಾಟದಲ್ಲಿ ಕಂಡುಕೊಂಡ ಸತ್ಯಗಳನ್ನು ದಾಖಲಿಸಿದ್ದು, ಅದರ ಕೆಲವು ಪುಟಗಳನ್ನು ಇಲ್ಲಿ ನೀಡುತ್ತಿದ್ದೇವೆ

–ಸಂಪಾದಕ



೧೯೭೩ರ ಸುಮಾರಿನಲ್ಲಿ ನನ್ನನ್ನು ಹುಡುಕಿಕೊಂಡು ಮೊಳಕಾಲ್ಮೂರು ಕಡೆಯ ಕೋನಸಾಗರದ ಗ್ರಾಮದವರಾದ ಕೊ.ಶ.ವಿಶ್ವನಾಥರು ನಾನಿದ್ದ ಚಳ್ಳಕೆರೆಯ ಕಾಲೇಜಿನ ಕಡೆ ಬಂದರು. ಅವರ ವಯಸ್ಸು ಆಗ ಮುವತ್ತು ಇದ್ದಿರಬಹುದು. ಗೌರಸಮುದ್ರವೆಂಬ ಗ್ರಾಮದಲ್ಲಿ ಅವರು ಗ್ರಾಮ ಲೆಕ್ಕಿಗರಾಗಿದ್ದರು. ಅವರು ಸಾಹಿತ್ಯಾಸಕ್ತರಾಗಿದ್ದು, ಅಷ್ಟು ಹೊತ್ತಿಗಾಗಲೇ ಕನ್ನಡ ಪ್ರಭ ಪತ್ರಿಕೆಯಲ್ಲಿ ಕೆಲವು ಕಥೆಗಳು ಪ್ರಕಟವಾಗಿದ್ದವು. ನನ್ನ ಕಡೆ ಬಂದ ಅವರು ಪರಿಚಯ ಹೇಳಿಕೊಂಡು ವಿಶ್ವಾಸದಿಂದ ಮಾತಾಡಿಸಿದರು. ಅವರದು ತುಂಬ ನಿಧಾನದ ಮಾತು ಮತ್ತು ಸಮಾಧಾನದ ಮನಸ್ಸಾಗಿದ್ದಿತು. ಮೊಳಕಾಲ್ಮೂರಿನಿಂದ ತಮ್ಮ ಕೆಲಸಕ್ಕೆ ಆಗಾಗ ಚಳ್ಳಕೆರೆಗೆ  ಬರುತ್ತಿದ್ದರು.

ಒಮ್ಮೆ ಅವರು ಸಾಹಿತ್ಯಸಂಗತಿಗಳನ್ನು ಕುರಿತು ಮಾತನಾಡುತ್ತ ಅವರ ಗ್ರಾಮ ಕೋನಸಾಗರದಲ್ಲಿ ನೂರು ವರ್ಷಗಳ ಹಿಂದೆ ಜರುಗಿ ಹೋದ ಘಟನೆಯೊಂದರ ಹಿನ್ನೆಲೆಯಲ್ಲಿ ಜನಪದ ಗೀತೆಯೊಂದಿದೆ, ಬಂದರೆ ಕೇಳಬಹುದು ಎಂದರು. ನಾನು ಚಳ್ಳಕೆರೆ ಸುತ್ತಮುತ್ತ ಅಂಡಲೆಯುತ್ತ ಶಾಸನ ಬರೆಹ, ತಾಡೆಯೋಲೆಗಳಿಗಾಗಿ ತಡಕಾಡುತ್ತಿದ್ದುದು ಅವರಿಗೆ ಗೊತ್ತಿತ್ತು. ನನಗೆ ಕೇಳುವ ಕುತೂಹಲವಾಯಿತು. ಒಂದು ಶನಿವಾರ ಚಳ್ಳಕೆರೆಯಲ್ಲೇ ಇದ್ದ ವೈಶ್ಯಾ ಬ್ಯಾಂಕ್ ಉದ್ಯೋಗಿ ವಿಜಯಕುಮಾರ್ ಮತ್ತು ವಿದ್ಯಾರ್ಥಿಮಿತ್ರ ರಾಮು ಜತೆಯಲ್ಲಿ ಕೋನಸಾಗರದ ಆಚೆ ಇದ್ದ ಗೌರಸಮುದ್ರದ ಕಡೆ ಹೊರಟೆ. ಐದು ಘಂಟೆಗೆ ನಾವು ಬಸ್ಸು ಹತ್ತುವಲ್ಲಿ ಅದು ಏಳುವರೆಯ ಹೊತ್ತಿಗೆ ಗೌರಸಮುದ್ರ ತಲುಪಿತು. ಆ ರಾತ್ರಿ ನಮ್ಮ ವಾಸ್ತವ್ಯ ಆ ಗ್ರಾಮದ ಪಂಚಾಯ್ತಿ ಹಾಲಿನಲ್ಲಿ. ಅದು ಒಂದು ಕಣದ ಕಟ್ಟಡವಷ್ಟೆ. ವಿಶ್ವನಾಥರು ನಾಲ್ಕೈದು ಜನ ಜನಪದ ಗಾಯಕಿಯರನ್ನು ಕರೆಸಿದ್ದರು. ವಯಸ್ಸಿನಲ್ಲಿ ಅವರೆಲ್ಲ ಅರುವತ್ತು ಎಪ್ಪತ್ತು ದಾಟಿದ ಮಹಿಳೆಯರು. ಸಾಮೂಹಿಕ ದನಿಯಲ್ಲಿ ಜನಪದ ಕಥನ ಗೀತೆಯೊಂದನ್ನು ಹಾಡಲು ಆರಂಭಿಸಿದರು. ನನಗೆ ಆ ಹಾಡುಗಾರಿಕೆಯ ದನಿಯೇ ಹೊಸತು. ಎಷ್ಟೋ ಹೊತ್ತು ಹಾಡಿದರು. ಏನೇನೂ ಅರ್ಥವಾಗಲಿಲ್ಲ. ಎಲ್ಲಕ್ಕಿಂತ ಮುಖ್ಯ ನನಗೆ ಚಿತ್ರದುರ್ಗ ಸುತ್ತಿನ ಭಾಷೆಯೇ ಹೊಸದಾಗಿತ್ತು. ಪಕ್ಕದಲ್ಲಿ ಕೂತಿದ್ದ ವಿಜಯಕುಮಾರ್ ತಮಗೆ ಅರ್ಥವಾಗುತ್ತಿದೆಯೆಂದರು. ಅವರು ವೈಶ್ಯಾಬ್ಯಾಂಕಿನಲ್ಲಿ ಉದ್ಯೋಗಿಯಾಗಿದ್ದರೂ, ಕನ್ನಡದಲ್ಲಿ ತುಂಬ ಪರಿಣಿತಿ ಇದ್ದಿತು. ಒಂದೆರಡು ವರ್ಷಗಳಿಂದ ಚಳ್ಳಕೆರೆ ಪ್ರದೇಶದಲ್ಲಿ ವಾಸವಿದ್ದವರು. ಕೊ.ಶ. ವಿಶ್ವನಾಥರು ಆ ಹೆಣ್ಣುಮಕ್ಕಳು ಹಾಡುತ್ತಿದ್ದ ಗುಣಸಾಗರಿ ಕಥನವನ್ನು ವಿವರಿಸಿದರು. ರಾತ್ರಿ ಎಷ್ಟೋ ಹೊತ್ತಿನವರೆಗೆ ಹೆಣ್ಣುಮಕ್ಕಳ ಗೀತೆ ಕೇಳಿ ಅವರಿಗೆ ಎಲೆ ಅಡಿಕೆ ಇತ್ತು ಗೌರವಿಸಿ ಕಳುಹಿಸಿಕೊಟ್ಟೆವು. ಅದೇ ಪಂಚಾಯ್ತಿ ಹಾಲಿನಲ್ಲಿ ಮಲಗಿ ಬೆಳಗೆದ್ದು ಮುಖಮಾರ್ಜನ ಮಾಡಿ ನಡೆದುಕೊಂಡು ವಿಶ್ವನಾಥರ ಸ್ವಗ್ರಾಮ ಕೋನಸಾಗರಕ್ಕೆ ಬಂದೆವು. ಇದ್ದುದರಲ್ಲಿ ಅದು ದೊಡ್ಡ ಗ್ರಾಮ. ವಿಶ್ವನಾಥ ಅವರಿಗೆ ತಂದೆ, ತಾಯಿ ಇದ್ದು, ತಂದೆಯವರು ಬಟ್ಟೆ ಹೊಲೆಯುವ ಕಾಯಕ ಮಾಡುತ್ತಿದ್ದರು. ಸಂಜೆಯ ಹೊತ್ತಿಗೆ ಕೋನಸಾಗರದ ಊರ ಆಚೆಯ ಒಂದು ವೀರಗಲ್ಲು ನೋಡಲು ಹೊರಟೆವು. ವಿಶ್ವನಾಥರು ಆ ವೀರಗಲ್ಲು ತೊಂಬತ್ತು ವರ್ಷದ ಹಿಂದೆ ನೆಟ್ಟದ್ದು ಎಂದರು. ಕರ್ನಾಟದಲ್ಲಿ ೧೯೦೦ ರವರೆಗೂ ವೀರಗಲ್ಲು ನೆಡುವ ಪರಂಪರೆ ಇದ್ದಿತೇ ಎಂದು ಕುತೂಹಲವಾಯಿತು. ಊರಾಚೆ ಒಂದು ಸಣ್ಣ ಹಟ್ಟಿಯ ಬಳಿ ಹೋದೆವು. ಆ ವ್ಯಾಸಬೇಡರ ಹಟ್ಟಿಯಲ್ಲಿದ್ದ ಪೆದ್ದಾಳನಾಯಕನು ಕುರಿ ಕೊಪ್ಪ ಕಾಯುವಲ್ಲಿ ಎರಗಿಬಂದ ಹುಲಿಯೊಡನೆ ಹೋರಾಡಿ ತೀರಿಕೊಂಡವನ ವೀರಗಲ್ಲು ಅದಾಗಿತ್ತು. ವೀರಗಲ್ಲು ವ್ಯಾಸಬೇಡರ ಕಪ್ಪಡಬಂಡಲಹಟ್ಟಿಯ ಉತ್ತರದಿಕ್ಕಿನ ಹೊಲದಲ್ಲಿ ನೆಡಲ್ಪಟ್ಟಿತ್ತು. ಹಟ್ಟಿಯಲ್ಲಿ ವಯಸ್ಸಾದ ಮಹಿಳೆಯೊಬ್ಬಳನ್ನು ಭೇಟಿ ಮಾಡಿಸಿದರು. ಆಕೆಯ ವಯಸ್ಸು ಎಂಬತ್ತು ಆಗಿದ್ದಿರಬಹುದು. ಆಕೆ ತಾನು ಹುಲಿಯೊಂದಿಗೆ ಹೋರಾಡಿ ಸತ್ತ ಪೆದ್ದಾಳನಾಯಕನ ತಂಗಿ ಎಂದಳು. ಆಕೆಯೊಂದಿಗೆ ವೀರಗಲ್ಲಿನ ಬಳಿ ಹೊರಟೆವು. ಆಕೆ ಅಣ್ಣನ ಸಾವನ್ನು ಕುರಿತಾಗಿ ತನ್ನ ನೆನಪನ್ನು ಹೇಳುತ್ತಿದ್ದಳು.

ಪೆದ್ದಾಳನಾಯಕನು ಕುರಿ ಕೊಪ್ಪದಲ್ಲಿ ಮಲಗಿರುವಾಗ್ಗೆ ಹುಲಿಯು ಆಗಾಗ ಬಂದು ಕುರಿಗಳನ್ನು ಹೊತ್ತೊಯ್ಯುತ್ತಿತ್ತು. ಒಂದು ದಿನ ಹುಲಿಯನ್ನು ಹೊಡೆಯಲೇಬೇಕೆಂದು ಪೆದ್ದಾಳನಾಯಕ ಎಚ್ಚರವಾಗಿದ್ದ. ಹುಲಿ ಬರುವುದನ್ನೇ ಕಾಯ್ದು ತನ್ನ ನಾಯಿಯೊಂದಿಗೆ ಅದರ ಮೇಲೆ ಬಿದ್ದ. ಹೋರಾಡಿ ಗಾಯಗೊಂಡ ಹುಲಿ ಸತ್ತಿತು. ಒಂದೆರಡು ವಾರದಲ್ಲಿ ಮೈಯೆಲ್ಲ ಆಗಿದ್ದ ಹುಲಿಯುಗುರಿನ ಗಾಯ ಊದಿಕೊಂಡಿತು. ಜತೆಗೆ ಪೆದ್ದಾಳನಾಯಕನಿಗೆ ರಾತ್ರಿಯೆಲ್ಲ ಹುಲಿ ಎರಗಿ ಬಂದಂತೆ ಭ್ರಮೆ ಹಿಡಿಯಿತು. ಮೈಗೆ ಹತ್ತಿದ ನಂಜಿನ ವ್ರಣ ಮತ್ತು ಭ್ರಮೆಯೊಡನೆ ಪೆದ್ದಾಳನಾಯಕ ಹತ್ತು ಹದಿನೈದು ದಿನಗಳ ಕಾಲ ನೋವು ತಿಂದ. ನಾಯಕನ ಹಟ್ಟಿ ತಿಪ್ಪೇಸ್ವಾಮಿ ಜಾತ್ರೆ ಇನ್ನೊಂದು ವಾರವಿದೆಯೆನ್ನುವಾಗ ತೀರಿಕೊಂಡನಂತೆ. ಚಳ್ಳಕೆರೆಯಲ್ಲಿರುವ ತಿಪ್ಪೇಸ್ವಾಮಿಯ ಜಾತ್ರೆ ನಡೆಯುವುದು ಸಾಮಾನ್ಯವಾಗಿ ಮಾರ್ಚ್ ತಿಂಗಳ ಹುಣ್ಣಿಮೆಯಲ್ಲಿ. ಪೆದ್ದಾಳನಾಯಕ ತೀರಿಕೊಂಡ ಹತ್ತು ಹನ್ನೆರಡು ದಿನಕ್ಕೆ ಹಟ್ಟಿಯವರೆಲ್ಲ ಸೇರಿಕೊಂಡು ಅವನ ಹೆಸರಿನಲ್ಲಿ ಕಲ್ಲು ಕೆತ್ತಿಸಿ ಹೊಲದ ಬದಿಯಲ್ಲಿರಿಸಿದರು. ವೀರಗಲ್ಲು ಸುಮಾರು ನಾಲ್ಕು ಅಡಿ ಎತ್ತರವಿದ್ದು ಅದಕ್ಕೆ ಇನ್ನಿತರ ಕಲ್ಲು ಚಪ್ಪಡಿಗಳೊಡನೆ ರಕ್ಷಣೆಯನ್ನು ಒದಗಿಸಿದ್ದರು. ಇದರಿಂದ ಕಲ್ಲು ಸುರಕ್ಷಿತವಾಗಿದ್ದಿತು. ಕಲ್ಲಿನ ಮೇಲು ತುದಿಯಲ್ಲಿ 'ಕರೆನಿಗೊಡೊಬೆಯ ಮಗ ಯರಮಂಚಯ್ಯ ಮಗ ಪೆದ್ದಯ್ಯಾ ಪಯಿಂಗಳ ಸಂಮಸರದ ಸುಬ ಸುಕ್ರವಾರ ಪೆದ್ದಯ್ಯ ಮೃತ್ಯು' ಎಂಬ ವಾಕ್ಯವಿದ್ದಿತು. ಅಂದರೆ ಸತ್ತ ತಮ್ಮನ ಹೆಸರು ಪೆದ್ದಾಳನಾಯಕ ಎಂದು ತಂಗಿ ಪೆದ್ದನಬೋರಮ್ಮ ಹೇಳಿದಳು.

ಆಮೇಲೆ ಒಂದೆರಡು ವರ್ಷದ ನಂತರ ಈ ವಿವರವನ್ನು ಬೆಂಗಳೂರಿನಲ್ಲಿದ್ದ ಶೇಷಶಾಸ್ತ್ರಿಯವರಿಗೆ ತಿಳಿಸಿದೆ. ಅವರು ಆಗ ಕರ್ನಾಟಕದ ವೀರಗಲ್ಲುಗಳ ಬಗ್ಗೆಯೇ ಪಿಎಚ್.ಡಿ ಮಹಾಪ್ರಬಂಧ ರಚಿಸುತ್ತಿದ್ದರು. ಇತಿಹಾಸದ ಕೊನೆಯ ವೀರಗಲ್ಲು ಎಂಬ ಕಾರಣಕ್ಕೆ ಅವರಿಗೆ ಹೇಳಿದ್ದೆ. ಅವರು ಕಪ್ಪಡಬಂಡಲಹಟ್ಟಿಗೆ ಹೋಗಿ ಆ ವೀರಗಲ್ಲನ್ನು ಕುರಿತು ಇಂಗ್ಲಿಷಿನಲ್ಲಿ ಒಂದು ಪುಟ್ಟ ಲೇಖನ ಬರೆದು ಕರ್ನಾಟಕದ ಖ್ಯಾತ ಸಂಶೋಧಕರೂ, ಇತಿಹಾಸಜ್ಞರೂ ಆದ ಷ.ಶೆಟ್ಟರ್ ಅವರಿಗೆ ಕಳಿಸಿಕೊಟ್ಟರು. ನನ್ನನ್ನು ಸಹಲೇಖಕನನ್ನಾಗಿಸಿಕೊಂಡಿದ್ದರು. ಸದರಿ ಇಂಗ್ಲಿಷ್ ಲೇಖನವು ೧೯೮೨ ರಲ್ಲಿ ಹೈಡಲ್‌ಬರ್ಗ್ ವಿಶ್ವವಿದ್ಯಾನಿಲಯದಿಂದ ಪ್ರಕಟವಾದ 'ಮೆಮೋರಿಯಲ್ ಸ್ಟೋನ್ಸ್' ಎಂಬ ಕೃತಿಯಲ್ಲಿ ಪ್ರಕಟವಾಯಿತು.

ಪೆದ್ದನಬೋರಮ್ಮನನ್ನು ಆಕೆಯ ಗುಡಿಸಿಲಿಗೆ ಬಿಟ್ಟು ನಾವು ಅಲ್ಲಿಂದ



ಕೋನಸಾಗರ ಗ್ರಾಮಕ್ಕೆ ಸುಮಾರು ಏಳುಘಂಟೆ ಹೊತ್ತಿಗೆ ಬಂದೆವು. ರಾತ್ರಿ ಒಂಬತ್ತು ಘಂಟೆಯ ಹೊತ್ತಿಗೆ ಕೋನಸಾಗರದ ಗೌಡನ ಕೊಲೆಯ ಸುತ್ತಮುತ್ತ ಕಟ್ಟಿದ್ದ ಪದ ಕೇಳುವುದೆಂದುಕೊಂಡು ಅದನ್ನು ಹಾಡಬಲ್ಲ ಗಾಯಕನ ಮನೆಯ ಕಡೆ ಬಂದೆವು. ಗಾಯಕ ಹನುಮಯ್ಯನು ನಮ್ಮನ್ನು ಕಂಡು ಇನ್ನೂ ತಡವಾಗಿ ಬರಬೇಕಿತ್ತು ಎಂದ. ಹನುಮಯ್ಯನ ಬಳಿಹೋದಾಗ ಒಂಬತ್ತು ಘಂಟೆ. ವಿಶ್ವನಾಥರು ತೊಂಬತ್ತುವರ್ಷಗಳ ಹಿಂದೆ ಕೊಲೆಯಾದ ಪಾಪನಾಯಕನ ಸಂಬಂಧಿಕರು ಇನ್ನೂ ಬದುಕಿರುವರು. ಇವನು ಹಾಡುವುದು ಗೊತ್ತಾದರೆ ತೊಂದರೆಯಾಗಬಹುದೆಂದು ಅವನ ಭಯಕ್ಕೆ ಸಮಜಾಯಿಷಿ ಕೊಟ್ಟರು. ಹೆಂಡತಿ ಇನ್ನೂ ಬದುಕಿರುವುದಾಗಿ, ತಲೆಕೆಟ್ಟು ಎತ್ತಲೋ ಹೋಗಿಬಿಟ್ಟಿರುವುದಾಗಿ ಹೇಳಿದರು. ಪಾಪನಾಯಕನ ವಿಶಾಲವಾದ ಮನೆ ಸಂಪೂರ್ಣ ಖಾಲಿ ಬಿದ್ದಿತ್ತು.

ಹನುಮಯ್ಯನನ್ನು ನಾನು ಕೋನಸಾಗರದ ಗೌಡನ ಮೇಲಿನ ಹಾಡನ್ನು ಕಲಿತದ್ದು ಯಾರಿಂದ ಎಂದು ಕೇಳಿದೆ. ಅದಕ್ಕೆ ಉತ್ತರ ಕುತೂಹಲಕರವಾಗಿತ್ತು. ಗೌಡನ ಕೊಲೆ ಆದಮೇಲೆ ಊರೆಲ್ಲ ಭಯ ತುಂಬಿಕೊಂಡಿತು. ಎಲ್ಲಿ ಯಾರಿಗೆ ಏನು ಆಗಿಬಿಡುತ್ತದೋ ಎಂಬ ಆತಂಕ. ಕೋನಸಾಗರ ಹೋಗಿ ರಣಸಾಗರವಾಯಿತಲ್ಲ ಎಂದುಕೊಂಡರಂತೆ. ಗೌಡ ಸತ್ತಮೇಲೆ ಅವನ ಮನೆಯಲ್ಲಿ ಕೆಲಸಕ್ಕಿದ್ದ ಚೆನ್ನಿ ಎಂಬ ಕೆಳವರ್ಗದ ಹೆಣ್ಣುಮಗಳು ಈ ಹಾಡುಕಟ್ಟಿ ಊರೆಲ್ಲ ಹಾಡಲು ಆರಂಭಿಸಿಬಿಟ್ಟಳಂತೆ. ಗೌಡನ ದುರ್ಘಟನೆ ಜರುಗಿಹೋಗಿ ಜನ ಮಾತನಾಡಲು ಹೆದರುತ್ತಿದ್ದ ಸಂದರ್ಭದಲ್ಲಿ ಚೆನ್ನಿಯು ಪದ ಕಟ್ಟಿಕೊಂಡು ಬೀದಿ ಬೀದಿಯಲ್ಲೆಲ್ಲ ಹಾಡತೊಡಗಿದ್ದು ಎಲ್ಲರಿಗೂ ದಿಗಿಲು ಹುಟ್ಟಿಸಿತು. ನಾನು ಹನುಮಯ್ಯನನ್ನು ಚೆನ್ನಿ ಹಾಡು ಕಟ್ಟುವಷ್ಟು ಜಾಣೆಯಾಗಿದ್ದಳೇ ಎಂದು ಕೇಳಿದ್ದಕ್ಕೆ ಅವಳಿಗೆ ಜಾಣತನಕ್ಕಿಂತ ಗೌಡನ ಮೇಲೆ ಪ್ರೇಮವಿದ್ದಿತು. ಅದೇ ಹಾಡುಕಟ್ಟಿಸಿತು ಎಂದ. ಅಷ್ಟೇ ಅಲ್ಲ ಗೌಡನಿಗೆ ಅವನ ಕೋಮಿನವರಲ್ಲದೆ ಇತರ ಕೋಮಿನ ಆರೇಳು ಜನ ಹೆಣ್ಣು ಮಕ್ಕಳ ಸಂಪರ್ಕವಿದ್ದಿತು ಎಂದು ಹೇಳಿದ. ಇದೇ ಮಾತಿನ ಸಂದರ್ಭದಲ್ಲಿ ವಿಶ್ವನಾಥರೂ ಒಂದು ನೆನಪನ್ನು ಸೇರಿಸಿದರು. ಒಮ್ಮೆ ವಿಶ್ವನಾಥರು ಪಾಪನಾಯಕನ ಹೆಂಡತಿಯನ್ನು 'ಅಲ್ಲಮ್ಮಾ ನಿನ್ನ ಗಂಡನಿಗೆ ಊರೆಲ್ಲ ಒಬ್ಬೊಬ್ಬಳ ನೆಂಟಸ್ತನ. ನಿನ್ನೊಂದಿಗೆ ಇರಲು ಎಷ್ಟು ಹೊತ್ತಿಗೆ ಬರುತ್ತಾನೆ?' ಎಂದರಂತೆ. ಅದಕ್ಕೆ ಅವಳು ಕೊಟ್ಟ ಉತ್ತರ ಬೀದಿಯಲ್ಲಿ ಆಡುವುದು ಒಂದು ಕೂಸು, ತೊಡೆಯಲ್ಲಿ ಒಂದು, ಹೊಟ್ಟೆಯಲ್ಲಿ ಇನ್ನೊಂದು ಕೂಸು ಎಂದು ಹೇಳಿ, ನಿಂಗೆ ಲಗ್ನವಾಗಿದೆಯೇ ಎಂದು ಕೇಳಿದಳಂತೆ. ವಿಶ್ವನಾಥರು ಇಲ್ಲ ಎನ್ನಲು ಅದಕ್ಕವಳು 'ನೀನು ಒಬ್ಬ ಗಂಡಸಾ' ಎಂದಳಂತೆ.

ಕೋನಸಾಗರದ ಪಾಪನಾಯಕನ ಕೊಟ್ಟಿಗೆಯ ಕೆಲಸದವಳಾದ, ಪ್ರೇಮಿಯಾದ ಚೆನ್ನಿ ಯಾವಾಗ ಊರ ತುಂಬೆಲ್ಲ ಗೌಡನ ಪದ ಹಾಡಿಕೊಂಡು ತಿರುಗಿದಳೋ, ಆಗ ಕೊಲೆ ಮಾಡಿಸಿದವರು ಆಕೆಯನ್ನು ಕರೆದು, ಹಾಡುವುದನ್ನು ನಿಲ್ಲಿಸದಿದ್ದರೆ ಗತಿ ಬೇರೆಯಾಗುವುದೆಂದರಂತೆ. ಅಷ್ಟು ಹೊತ್ತಿಗೆ ಬುದ್ಧಿ ಭ್ರಮಣೆಗೊಂಡು ತಿರುಗುತ್ತಿದ್ದ ಚೆನ್ನಿ ಊರುಬಿಟ್ಟು ಅದರಾಚೆಯ ಗ್ರಾಮಗಳ ಮೇಲೂ ಹಾಡಿಕೊಂಡು ತಿರುಗಿದಳು. ಅವಳ ಹಾಡಿನಲ್ಲಿಯೇ ಒಂದು ವಾಕ್ಯ 'ಬಳ್ಳಾರಿಯಿಂದ ಚಿತ್ರದುರ್ಗದವರೆಗೆ ಕುರಿ ಹಿಕ್ಕೆ ಹಾಕಿದಂಗೆ ಹಾಡುವೆ ನನ್ನೊಡೆಯನ ಹಾಡು' ಎಂದಿತ್ತು. ಯಾರು ಹೆದರಿಸಿದರೂ ಆಕೆ ಹಾಡುವುದನ್ನು ಬಿಡಲಿಲ್ಲ. ಅಂತೆಯೇ ಆಕೆ ಒಂದು ದಿನ ಇಲ್ಲವಾದಳು. ಆಮೇಲಾಮೇಲೆ ಅವಳ ಹಾಡಿನ ಕೆಲವು ಭಾಗಗಳನ್ನು ಊರ ಹುಡುಗರು ಕಲಿತು ಕೋಲಾಟ ಆಡಿದರು. ತದನಂತರ ಅದೂ ನಿಂತು ಹೋಯಿತು.

ನಾನು ಕೋನಸಾಗರಕ್ಕೆ ಹೋದಾಗ ಆ ಹಾಡು ಹೇಳಲು ಬರುತ್ತಿದ್ದುದು ಹನುಮಯ್ಯ ಒಬ್ಬನಿಗೆ ಮಾತ್ರ. ಚೆನ್ನಿಯ ಹಾಡುಗಾರಿಕೆ, ಹುಡುಗರ ಕೋಲಾಟ ಇದೆಲ್ಲ ನಿಂತು ಹೋದದ್ದರ ಹಿನ್ನೆಲೆಯಲ್ಲಿ ಹನುಮಯ್ಯ ಪಾಪನಾಯಕನ ಹಾಡನ್ನು ನಮ್ಮ ಮುಂದೆ ಹಾಡಲು ಹೆದರಿದ್ದ. ಅರ್ಧರಾತ್ರಿಯ ಹೊತ್ತಿಗೆ ಹಾಡುವೆನೆಂದ. ಸದ್ದಿಲ್ಲದೆ ಸಣ್ಣಗೆ ಹಾಡುತ್ತೇನೆಂದ. ಆದರೆ ಹಾಡುವಾಗ ದಪ್ಪಗಂಟಲಿನಲ್ಲಿಯೇ ಹಾಡಿದ. ಮ್ಯಾಸನಾಯಕರು ತೆಲುಗರಾದುದರಿಂದ ಆ ಹಾಡು ತೆಲುಗಿನಿಂದಲೇ ಆರಂಭವಾಗಿ ಕಥನ ಕನ್ನಡದಲ್ಲಿ ಮುಂದುವರೆಯುವಂತಿತ್ತು. 'ಚುಟ್ಟು ಮುಟ್ಟಲ ಪಲ್ಲಲಂತ ಕೊಟ್ಟುಕೊನಿ ಉನ್ನಾಡು ನಾಯಕಡು...' (ಸುತ್ತಮುತ್ತ ಹಳ್ಳಿಯವರನ್ನೆಲ್ಲ ಹೊಡೆದು ಹಾಕಿರುವ ನಾಯಕ...) ಎಂದು ಆರಂಭವಾಗುವ ಗೀತೆ, ಆ ಮುಂದಕ್ಕೆ –

**ಗದ್ಯಾಗೆ ಬೆಳೆಯೋದು ದೊಡ್ಡ ಗೋಣಿಸೊಪ್ಪು**
**ಅದ್ವಾನದ ಕೊಂಪೆ ಕೋನಸಾಗರ**
**ಹಾಡು ಹಗಲಲ್ಲೇ ಹಸುಮಗನ ತಲೆ ತಗುದಾರು ॥**
**ಉಳ್ಳಾಗಡ್ಡಿಯ ಸೀರೆ ಬೆಳ್ಳಿ ಕುಪ್ಪಸದಹೆಣ್ಣು**
**ಗಟವಾಣಿ ಗೌರವ್ವ ಹಸು ಮಗನಾ ಕೊಂದಾಳು**
**ಸುಗ್ಗೀದ ಜ್ವಾಳಾದ ರೊಟ್ಟಿ ಉಳ್ಳಾಗಡ್ಡಿ ಪಚಡೀಯ**
**ಲಜ್ಜೆಗೆಟ್ಟೋರು ತಳವಾರರು**
**ಗೌಡನ ತಲೆಯಾ ತಗುದಾರು ॥**
**ಕೆಳಗೇರಿ ಕ್ಯಾದೀಗೆ ಮ್ಯಾಗೇರಿ ಮಲ್ಲೀಗೆ**
**ನಡುಗೇರಿ ಸಾಲೇಸಂಪೀಗೆ ಅಲ್ಲಿರುವ**
**ಅಣ್ಣಾ ಪಾಪಣ್ಣಗೆ ಕೈಗೂಡಿ ಬರುತಾವೆ ॥**
**ಎಂತ ಬುದ್ಧಿವಂತುಡು ನಾ ಪಾಪನ್ನ ಗೌಡುಡು**
**ಮಿರಿವಾನಿಕಿ ವೈರಿಗಾಡನ್ನವಾಡು**
**ಚಟುಮುಟ್ಟಲು ಪಲ್ಲವಂತ ಕೋಟ್ಯಾಡು**
**ತಾನು ಭಯಮು ಪೆಟ್ಟಿಕೋನಿ**
**ಕಾಸಿ ಚೆಪ್ಪಲು ಮೆಟ್ಟಿನಾಡು**
**ಕೋಲು ಕೋಲೆನ್ನ ಕೋಲೆನ್ನ ಸಿರಿಗಂದಾದಿ**
**ಕೋಲು ಕೋಲೆನ್ನ ಕೋಲೆ ॥**

ಕೋನಸಾಗರದ ಗ್ರಾಮ ಚಿತ್ರದುರ್ಗದ ಪಾಳೆಯಗಾರರಿಗೆ ಆಂಧ್ರದ ಕೊನೆಯ ಗಡಿಯಾಗಿದ್ದಿತು. ಗಡಿಠಾಣ್ಯದ ಗುರಿಕಾರರಾಗಿ ಪಟೇಲ ಪಾಪನಾಯಕನ ವಂಶಸ್ಥರು ಇದ್ದರಂತೆ. ಅವರಿಗೆ ಸಾಕಷ್ಟು ಸಿಬ್ಬಂದಿಯೂ ಇದ್ದಿತು. ಈ ವಂಶದಲ್ಲಿ ಬಂದ ಪಾಪನಾಯಕನಿಗೆ ಇಬ್ಬರು ಅಪ್ಪಂದಿರು. ಒಬ್ಬ ಹೆತ್ತ ತಂದೆ. ಇನ್ನೊಬ್ಬ ಸಾಕುತಂದೆ, ದತ್ತು ತೆಗೆದುಕೊಂಡವ. ಸಾಕು ತಂದೆ ಪಾಪನಾಯಕನನ್ನು ದತ್ತು ತೆಗೆದುಕೊಂಡ ಒಂದೇ ವರ್ಷದಲ್ಲಿ ತೀರಿಕೊಂಡ. ಇದರಿಂದಾಗಿ ಇನ್ನೂರು ಎಕರೆ ಭೂಮಿ, ತೆಂಗಿನ ತೋಟ, ದನಕರುವಿನ ರೊಪ್ಪ, ದೊಡ್ಡಮನೆ ಎಲ್ಲಕ್ಕೂ ಪಾಪನಾಯಕನೇ ಯಜಮಾನನಾದ. ಈ ಜವಾಬ್ದಾರಿ ಪಾಪನಾಯಕನ ಹೆಗಲ ಮೇಲೆ ಬಿದ್ದಾಗ ಅವನ ವಯಸ್ಸು ಇಪ್ಪತ್ತು. ಆ ವಯಸ್ಸಿಗೆ ದೇವರ ಹಟ್ಟಿ ಪೂಜಾರಿಯ ಮನೆತನದ ಹೆಣ್ಣನ್ನು ಮದುವೆಯಾದ. ಆ ಮುಂದಿನ ಏಳೆಂಟು ವರ್ಷಗಳಲ್ಲಿ ಊರಿನ ಇತರೇ ಕೋಮಿನವರಿಂದ ಕಟ್ಟಿಕೊಂಡ ದ್ವೇಷದಿಂದಾಗಿ ನಾಯಕನ ಜೀವನ ದುರಂತದಲ್ಲಿ ಕೊನೆಗೊಂಡಿತು. ನಾಯಕನ ಇನ್ನೊಬ್ಬ ಪ್ರಿಯತಮೆಯಾಗಿದ್ದ ಚೆನ್ನಿ ಹಾಡು ಕಟ್ಟಿ ಕುರಿಹಿಕ್ಕೆ ಹಾಕಿದಂತೆ ಹಾಡಿ ಇದನ್ನು ಪ್ರಚುರ ಪಡಿಸುವೆನೆಂದು ಹೇಳಿದ್ದೇನೋ ಸರಿ. ಆದರೆ ಆಕೆಯೂ ಇಲ್ಲವಾದಳು. ಆಮೇಲೆ ಹಾಡು ಹನುಮಯ್ಯನ ನೆನಪಿನಲ್ಲಿ ಮಾತ್ರ ಉಳಿದಿತ್ತಷ್ಟೆ. ಈ ಬಗೆಯ ಅನೇಕ ಕಥನಗಳು ಚಿತ್ರದುರ್ಗದ ಬಯಲಲ್ಲಿ ಜಮೀನ್ದಾರಿ ಪದ್ಧತಿ, ಪಾಳೆಯಗಾರಿಕೆ, ಪ್ರಭುತ್ವ ಪರಂಪರೆಯ ಕೊನೆಯ ಕೊಂಡಿಗಳಂತೆ ತೋರಿಬರುತ್ತಿದ್ದವು.

ಯಾವುದೇ ದೈವ ಪಾರಮ್ಯ, ಧಾರ್ಮಿಕ ಉದ್ದೇಶ, ನೀತಿ ಪ್ರತಿಪಾದನೆ ಅಥವಾ ಐತಿಹಾಸಿಕ ಪ್ರಾಮುಖ್ಯತೆ ಇಲ್ಲದ ಕಥನ ಗೀತೆಗಳು ಜನಪದರ ನೆನಪಿನಲ್ಲಿ ಉಳಿಯುವುದು ಕಷ್ಟ. ಕೋನಸಾಗರದ ಗೌಡನ ದುರಂತದ ಸುತ್ತ ಹೆಣೆದ 'ರಣಸಾಗರದಗೌಡ' ಎಂಬ ಗೀತೆಯಲ್ಲಿ ಸೀಮಿತ ಉದ್ದೇಶವಿದ್ದುದರಿಂದ ಅದು ಹನುಮಯ್ಯನ ಬಾಯಲ್ಲಿ ಅಳಿದುಳಿದಿದ್ದಿತು. ವಿಶ್ವನಾಥರನ್ನು ಮೊದಲುಗೊಂಡು ಇನ್ನಿತರರನ್ನು ವಿಚಾರಿಸಲಾಗಿ ಇಪ್ಪತ್ತು ಮುವತ್ತರ ಹರೆಯದಲ್ಲಿ ಸತ್ತ ಪಾಪನಾಯಕನ ಬಗ್ಗೆ ಕೆಲವರಿಗೆ ಗೌರವವೂ, ಕೆಲವರಿಗೆ ಭಯವೂ ಮತ್ತೆ ಕೆಲವರಿಗೆ ಅಸಹನೆ, ದ್ವೇಷವೂ ಇದ್ದಂತೆ ತಿಳಿಯಿತು. ಊರುಮಧ್ಯದ ಪಂಚಾಯಿತಿ ಕಟ್ಟಡದ ಒಳಗೆ ನಾಟಕದ ತಾಲೀಮು ನೋಡಲು ಪಾಪನಾಯಕನನ್ನು ಬರಹೇಳಿ



ವೀರ ಮದಕರಿ ನಾಯಕ



ಒನಕೆ ಓಬವ್ವ

ಕೊಲ್ಲಲಾಯಿತು. ಗೌಡನನ್ನು ಕೊಲ್ಲಲೆಂದೇ ಹೊಸ ಆಯುಧ ಮಾಡಿಸಿ ತರಿಸಲಾಗಿತ್ತೆಂದು ಕಥನ ಗೀತೆಯಿಂದ ತಿಳಿದು ಬರುತ್ತದೆ. ಗೌಡನು ಪಂಚಾಯಿತಿ ಹಾಲಿಗೆ ನುಗ್ಗುತ್ತಿದ್ದಂತೆಯೇ ತನಗೆ ಅಪಾಯದ ಸೂಚನೆಯಿದೆಯೆಂದು ತಿಳಿದು ತಪ್ಪಿಸಿಕೊಳ್ಳಲು ಪ್ರಯತ್ನಿಸಿದರೂ ಕತ್ತಿಯ ಏಟು ಬಿದ್ದಿತು. ಚಿತ್ರದುರ್ಗದ ಆಸ್ಪತ್ರೆಗೆ ಸೇರಿದ. ಅಲ್ಲಿಂದಲೇ ಗೌಡ ಊರಿನಲ್ಲಿ ತನ್ನನ್ನು ಕೊಲೆ ಮಾಡಲು ಯತ್ನಿಸಿದವರನ್ನು ಕುರಿ ಕತ್ತರಿಸಿದಂತೆ ರುಂಡಮುಂಡ ಬೇರೆ ಮಾಡುವುದಾಗಿ ಸುದ್ದಿಕಳಿಸಿದ. ಚಿತ್ರದುರ್ಗದ ಆಸ್ಪತ್ರೆಯಿಂದ ಚಿಕಿತ್ಸೆ ಪಡೆದು ಕೋನಸಾಗರ ಸೇರಿದರೆ ಕತ್ತಿನ ಹಿಂಭಾಗಕ್ಕೆ ಬಿದ್ದ ಗಾಯ ಇನ್ನು ವಾಸಿಯಾಗಿರಲಿಲ್ಲ. ಆ ಮೇಲೆ ಗಾಯಕ್ಕೆ ನಂಜು ಹಿಡಿದು ಸತ್ತನಂತೆ. ನಾಯಕನು ಸತ್ತ ದುಃಖವನ್ನು ಪ್ರೇಮಿ ಚೆನ್ನಿಯಿಂದಲೂ, ಹೆಂಡತಿಗೂ ತಡೆಯಲಾಗದೆ ಅವರಿಗೆ ಬುದ್ಧಿ ಭ್ರಮಣೆಯಾಯಿತು. ಚೆನ್ನಿ ಹಾಡುತ್ತಿದ್ದುದನ್ನು ಹೇಗೋ ಕಲಿತ ಹನುಮಯ್ಯನೂ ಪಾಪನಾಯಕನ ಮನೆಯಲ್ಲಿಯೇ ಆಳಾಗಿ ಕೆಲಸ ಮಾಡುತ್ತಿದ್ದ. ಅವನು ಕೋಲಾಟದ ಧಾಟಿಯಲ್ಲಿ ಹಾಡು ಹಾಡಿ ಮುಗಿಸಿದಾಗ ರಾತ್ರಿ ಎರಡು ಘಂಟೆ.

ಗೌರಸಮುದ್ರದಲ್ಲಿ ಹಿಂದಿನ ರಾತ್ರಿ ಹೆಣ್ಣುಮಕ್ಕಳು ಗುಣಸಾಗರಿ ಹಾಡು ಹಾಡಿದಾಗ ನನಗೇನು ಅರ್ಥವಾಗಿರಲಿಲ್ಲ. ಅದಕ್ಕೆ ಕಾರಣ ಐದಾರು ಜನಹೆಂಗಸರು ಗುಂಪಿನಲ್ಲಿ ಚಿತ್ರದುರ್ಗ ಸುತ್ತಿನ ಭಾಷೆಯಲ್ಲಿ ಹಾಡಿದ್ದೇ ಕಾರಣವಿರಬೇಕು. ಹನುಮಯ್ಯನು ಹಾಡಿದ್ದು ನನಗೆ ಸ್ಪಷ್ಟವಾಗಿ ಕೇಳಿಸಿತ್ತು. ಆಮೇಲೆ ಹನುಮಯ್ಯನೇ ಹೇಳಿದ ಇನ್ನೊಂದು ಕಥೆಯೆಂದರೆ ಕಸಗಾನಳ್ಳಿ ನಾಗನದು. ಇದು ಕೂಡ ಒಬ್ಬ ಜಮೀನುದಾರ ಮತ್ತು ಆಳಿನ ನಡುವೆ ನಡೆದ ಘರ್ಷಣೆ ಮತ್ತು ಕೊಲೆಯ ಕಥೆಯಾಗಿತ್ತು.

ಮಲೆಯ ಮಹದೇಶ್ವರನಂಥವನೇ ಸಂತ ತಿಪ್ಪೇಸ್ವಾಮಿಯು ಚಳ್ಳಕೆರೆ ಬಳಿಯ ನಾಯಕನ ಹಟ್ಟಿಯಲ್ಲಿ ನೆಲೆಯೂರಿದ್ದ. ಈತನೂ ಮಹದೇಶ್ವರನಂತೆ ಹದಿನಾರನೆಯ ಶತಮಾನದವನೇ ಇದ್ದಿರಬೇಕು. ನಾಯಕನಹಟ್ಟಿಯಲ್ಲಿ ಅವನ ಸಮಾಧಿ ಮಂದಿರವೂ, ಗದ್ದುಗೆಯೂ ಇದೆ. ಸಮಾಧಿ ಮಂದಿರವನ್ನು ನವಾಬ್ ಹೈದರಾಲಿ ಚಿತ್ರದುರ್ಗದ ಕಡೆಬಂದಾಗ ಕಟ್ಟಿಸಿದನೆಂದು, ಅವರ ಫಲವಾಗಿ ಹೈದರ್‌ಗೆ ಗಂಡು ಶಿಶು ಜನಿಸಲು ಅವನ ಹೆಸರನ್ನು ತಿಪ್ಪೇಸಾಹೇಬನೆಂದೇ ಕರೆದನೆಂದು ಈಗಲೂ ಅಲ್ಲಿ ದಂತ ಕಥೆಯಿದೆ. ತಿಪ್ಪೇಸ್ವಾಮಿಯ ಸಮಾಧಿಮಂದಿರ ಮುಸ್ಲಿಂ ಶೈಲಿಯಲ್ಲೇ ಇದ್ದು ಅದನ್ನು ಹೈದರಾಲಿಯೇ ಕಟ್ಟಿಸಿದನೆಂದು ನಂಬಬಹುದು. ಯಾಕೆಂದರೆ ಹೈದರ್ ಮಲೆಯ ಮಹದೇಶ್ವರನ ಭಕ್ತನೂ ಆಗಿದ್ದು ಆ ಗುಡಿಗೆ ಉಂಬಳಿಯನ್ನು ಬಿಟ್ಟು ಕೊಟ್ಟ ದಾಖಲೆಯೂ ಇದೆ. ಟಿಪ್ಪುವೂ ಕೂಡ ಮಲೆಯ ಮಹದೇಶ್ವರನ ಬೆಟ್ಟಕ್ಕೆ ಹೋಗುವ ದಾರಿಯಲ್ಲಿಯ ಕಣಿವೇ ಆಂಜನೇಯನಿಗೂ ಐದು ಎಕರೆ ಭೂಮಿಯನ್ನು ದಾನ ಬಿಟ್ಟು ಕೊಟ್ಟದ್ದಕ್ಕೆ ದಾಖಲೆಯಿದೆ. ಆದರೆ ಹೈದರಾಲಿ ತಿಪ್ಪೇಸ್ವಾಮಿಯ ಸಮಾಧಿಯನ್ನು ಕಟ್ಟಿಸಿದನಂತರವೇ ಟಿಪ್ಪು ಹುಟ್ಟಿದನೆಂಬ ಸಂಗತಿಯನ್ನು ಸ್ಥಳೀಯ ಇತಿಹಾಸಕಾರರು ತಳ್ಳಿಹಾಕಿ, ಹೈದರ್ ಚಿತ್ರದುರ್ಗಕ್ಕೆ ಬರುವ ಹೊತ್ತಿಗೇ ಟಿಪ್ಪು ಇಪ್ಪತ್ತೈದು ವರ್ಷ ಪ್ರಾಯದವನಾಗಿದ್ದನೆಂದು ಹೇಳುತ್ತಾರೆ.

ಮಲೆಯ ಮಹದೇಶ್ವರನಂತೆಯೇ ತಿಪ್ಪೇಸ್ವಾಮಿಯ ಮೇಲೂ ಅನೇಕಾನೇಕ ಪವಾಡ ಕಥೆಗಳು ಚಿತ್ರದುರ್ಗ ಪ್ರದೇಶದಲ್ಲುಂಟು. ಆದರೆ ಅವು ಕಾವ್ಯರೂಪದಲ್ಲಿರದೆ ದಂತಕಥೆಗಳೇ ಆಗಿ ಪ್ರಚಾರದಲ್ಲಿದ್ದವು. ಅಲ್ಲದೆ ಭಕ್ತಿ ಪೂರ್ವಕ ಸ್ತುತಿ ರೂಪದ ನೂರಾರು ತ್ರಿಪದಿಗಳೂ ಇದ್ದು ಅವನ್ನು ಹೆಣ್ಣುಮಕ್ಕಳು ಗುಂಪಿನಲ್ಲಿ ಹಾಡುತ್ತಿದ್ದರು. ಚಿತ್ರದುರ್ಗದ ಪಟ್ಟಣಪ್ರದೇಶದ ಜನ ತಮ್ಮ ನೆಲವನ್ನು ಗಂಡುಮೆಟ್ಟಿನ ನಾಡು ಎಂದೇ ಕರೆದುಕೊಳ್ಳುತ್ತಿದ್ದರು. ದಕ್ಷಿಣ ಕರ್ನಾಟಕದಿಂದ ಹೋದ ನನಗೆ ಅದೊಂದು ಹೊಸಬಗೆಯ ನುಡಿಗಟ್ಟಾಗಿದ್ದಿತು. ನನ್ನಂತೆ ಹೊರಗಿನಿಂದ ಹೋದವರಿಗೆ ಈ ಪದಪ್ರಯೋಗ ತಮಾಷೆಯಾಗಿ ಕಂಡರೂ, ಸ್ಥಳೀಯರು ಮಾತ್ರ ಚಿತ್ರದುರ್ಗದ ಇತಿಹಾಸ ಕುರಿತು ಮಾತನಾಡುವಾಗ ತುಂಬ ಗಂಭೀರವದನರಾಗಿ, ಅಭಿಮಾನಪೂರ್ವಕವಾಗಿ, ಅಂತರಂಗಪೂರ್ವಕವಾಗಿ ಈ ಮಾತನ್ನಾಡುತ್ತಿದ್ದರು. ಕಡೆಯ ಮದಕರಿನಾಯಕನ ಕಾಲಕ್ಕೆ ಹೈದರಾಲಿಯು ಸುಮಾರು ಆರು ತಿಂಗಳಕಾಲ ಚಿತ್ರದುರ್ಗ ಕೋಟೆಯ ಹೊರಗೆ ಠಾಣ್ಯ ಹಾಕಿದರೂ ಕೋಟೆಯನ್ನು ಭೇದಿಸಲಾಗಲೂ ಇಲ್ಲ, ಅದನ್ನು ವಶಡಿಸಿಕೊಳ್ಳಲಾಗಲೂ ಇಲ್ಲವಂತೆ. ಕೋಟೆ ಉಕ್ಕಿನಂತಿದ್ದು ಅದರ ಯಾವ ಭಾಗದಲ್ಲೂ ಶತ್ರುಗಳಿಗೆ ಪ್ರವೇಶ ಸಾಧ್ಯವಿರಲಿಲ್ಲ! ಅಂಥ ವೇಳೆ ಒಂದು ದಿನ ಹೈದರನ ಸೈನಿಕರು ಕೋಟೆಯ ವಾಯುವ್ಯ ದಿಕ್ಕಿನಲ್ಲಿ ಒಂದು ಕಳ್ಳಗಂಡಿ ಪತ್ತೆ ಹಚ್ಚಿದರು. ಆ ಒಳದಾರಿಯಲ್ಲಿ ಸೈನಿಕರು ನುಗ್ಗಲು ಪ್ರಯತ್ನಿಸುವಲ್ಲಿ ಆ ಬತೇರಿ ಕಾಯುತ್ತಿದ್ದ ಸೈನಿಕನ ಹೆಂಡತಿ ಶತ್ರುಗಳ ವಾಸನೆ ಹಿಡಿದು ನುಸುಳುತ್ತಿದ್ದ ಒಬ್ಬೊಬ್ಬರ ತಲೆಯನ್ನು ಒನಕೆಯಿಂದ ಚಚ್ಚಿಹಾಕಿದಳಂತೆ. ಆಕೆಯನ್ನು ವೀರವನಿತೆ ಓಬವ್ವ ಎಂದು ಕರೆಯುತ್ತಿದ್ದು, ಆಕೆಯ ಮೇಲೆ ಪುಟ್ಟಣ್ಣ ಕಣಗಾಲರ ಸಿನಿಮಾ ಗೀತೆ ಬಂದ ನಂತರವಂತೂ ಚಿತ್ರದುರ್ಗದ ಈ ದಂತಕಥೆ ಪ್ರಸಿದ್ಧವಾಗಿಬಿಟ್ಟಿತು. ಗಂಡು ಮೆಟ್ಟಿನ ನಾಡಿನಲ್ಲಿ ಈ ಬಗೆಯ ವೀರವನಿತೆಯರ ಕಥೆಗಳೂ ವ್ಯಾಪಕವಾಗಿದ್ದವು. ಪುರುಷರು ಶೂರರೇ ಆಗಿರುವಲ್ಲಿ ಹೆಣ್ಣುಮಕ್ಕಳು ದುರಂತವನ್ನಪ್ಪಬೇಕಾದುದು ಸಹಜವೇ. ಒನಕೆ ಓಬವ್ವನ ಘಟನೆ ಓದಿದರೆ ಹೇಗೆ ನಡೆದಿರಬಹುದೆಂದು ನನಗೆ ಊಹಿಸುವುದೇ ಕಷ್ಟವಾಗುತ್ತಿತ್ತು. ಒಬ್ಬ ನುಸುಳಿ ಏಟುತಿಂದರೆ ಹಿಂದಿದ್ದವನಿಗೆ ಗೊತ್ತಾಗುತ್ತಿರಲಿಲ್ಲವೇ ಎಂಬುದೇ ಅನುಮಾನ. ಇವಳು ಎಷ್ಟು ಜನರನ್ನು ಹೇಗೆ ಕೊಂದಳೋ ಊಹಿಸುವುದು ಕಷ್ಟ. ಆಕೆ ಹಾಗೆ ಸೈನಿಕರನ್ನು ಯಾವುದೋ ಬಗೆಯಲ್ಲಿ ಕೊಂದು ಅಂಥದ್ದೊಂದು ಕಥೆ ಹುಟ್ಟಿರಲಿಕ್ಕೂ ಸಾಧ್ಯ.

ತ.ರಾ.ಸು. ಅವರು ಬರೆದ ಐತಿಹಾಸಿಕ ಕಾದಂಬರಿಗಳೂ ಒಂದಕ್ಕಿಂತ ಒಂದು ರೋಚಕವಾಗಿರುತ್ತಿದ್ದವು. *ರಕ್ತರಾತ್ರಿ, ಕಂಬನಿಯ ಕುಯಿಲು, ತಿರುಗುಬಾಣ, ನಾಗರಹಾವು, ಸರ್ಪಮತ್ಸರ, ಎರಡು ಹೆಣ್ಣು–ಒಂದು ಗಂಡು* ಈ ಬಗೆಯ ಕಾದಂಬರಿಗಳನ್ನು ಚಿತ್ರದುರ್ಗದಾದ್ಯಂತ ಜನ ವ್ಯಾಪಕವಾಗಿ ಆಗ ಓದುತ್ತಿದ್ದರು. ಈ ಹಿನ್ನೆಲೆಯಲ್ಲಿ ತ.ರಾ.ಸು ಅವರಿಂದ ಚಿತ್ರದುರ್ಗ ಇತಿಹಾಸವು ರೋಚಕಬಗೆಯಲ್ಲಿ ಪ್ರಚಾರವಾಯಿತು. ಆದರೆ ಐತಿಹಾಸಿಕ ಸಂಗತಿಗಳ ವಾಸ್ತವ, ಅವು ಜರುಗಿದ ಕಾಲಕ್ಕೆ ಹಾಗಿರಲಿಲ್ಲ ಎಂಬುದನ್ನು ಜನಪದಲೋಕ ಹೇಳುವಂತೆ ತೋರುತ್ತಿತ್ತು.

ತ.ರಾ.ಸು ಒಮ್ಮೆ ಚಿತ್ರದುರ್ಗಕ್ಕೆ ಬಂದಾಗ, ಅವರ ಅಭಿಮಾನಿಗಳು ಕೆಲವರು ಒಂದು ಸನ್ಮಾನ ಸಮಾರಂಭವನ್ನು ಏರ್ಪಡಿಸಿ, ಚಿತ್ರದುರ್ಗದ ಕೊನೆಯ ಮದಕರಿನಾಯಕನ ಬಗ್ಗೆ ಒಂದು ಬೃಹತ್ ಕಾದಂಬರಿಯನ್ನು ಬರೆಯ ಬೇಕೆಂಬ ಕೋರಿಕೆಯಿಟ್ಟರು. ಅಕಸ್ಮಾತ್ತಾಗಿ ತ.ರಾ.ಸು ಅವರ ಅಭಿಲಾಷೆಯೂ ಹಾಗೆಯೇ ಇದ್ದಿತು. ಚಿತ್ರದುರ್ಗ ಪತನದ ಕೊನೆಯ ಕಥೆಯನ್ನು ಬರೆದೇ ತೀರುವುದಾಗಿ ತ.ರಾ.ಸು ಸಭಿಕರಿಗೆ ವಾಗ್ದಾನ ನೀಡಿದರು. ಆದರೆ. ತ.ರಾ.ಸು ಅವರ ದೇಹಶಕ್ತಿ ಶಿಥಿಲವಾದಂತಿತ್ತು. ಅಷ್ಟು ಹೊತ್ತಿಗೆ ತ.ರಾ.ಸು ಹೇಳಿದ್ದನ್ನು ಬರೆದು ಕೊಳ್ಳುವ ಸ್ನೇಹಿತರೂ ಅವರಿಗೆ ಸಿಕ್ಕಿದ್ದರು. ಈ ಕಾರಣದಿಂದ ಚಿತ್ರದುರ್ಗದ ಕಡೆ ಮದಕರಿ ನಾಯಕನನ್ನು ಕುರಿತು ತ.ರಾ.ಸು ಒಂದು ವರ್ಷದಲ್ಲಿ 'ದುರ್ಗಾಸ್ತಮಾನ' ಎಂಬ ಶೀರ್ಷಿಕೆಯಲ್ಲಿ ಕಾದಂಬರಿ ಬರೆದು ಮುಗಿಸೇಬಿಟ್ಟರು. ಈ ಕಾದಂಬರಿ ಕಥನ ಸಂಬಂಧ ತ.ರಾ.ಸು ಮತ್ತೆ ಮತ್ತೆ ಚಿತ್ರದುರ್ಗಕ್ಕೆ ಬಂದು ಸಣ್ಣಪುಟ್ಟ ಗ್ರಾಮಗಳತ್ತ ಕ್ಷೇತ್ರ ಕಾರ್ಯವನ್ನೂ ಕೈಗೊಂಡಿದ್ದರು. ವಾಸ್ತವವಾಗಿ ಅವರು ಆ ವರೆಗೆ ಬರೆದ ಕಾದಂಬರಿಗಳು ಕ್ಷೇತ್ರಕಾರ್ಯಾಧಾರಿತವಾದುದಾಗಿರಲಿಲ್ಲ. ಹಾಗಾಗಿ ಅವರ ಕೃತಿಗಳು ಅರಮನೆಯ ಒಳಗಿನ ಭಾವುಕ, ರೋಚಕ, ಕಾಲ್ಪನಿಕ ಕಥನಗಳೇ ಹೊರತು ಹೊರಭಾಗದ ವಾಸ್ತವ ವಿವರಗಳಾಗಿ ಮೂಡಿದಂತಿರಲಿಲ್ಲ. ಅವರು



ಹೈದರಾಲಿ




ಟಿಪ್ಪು ಸುಲ್ತಾನ್



ತರಾಸು

ತಮ್ಮ ಕೃತಿಗಳಲ್ಲಿ ಓದುಗರಿಗೆ ಬೇಕಾದ ಒಂದು ಸಾಮಾನ್ಯ ಪರಿಪ್ರೇಕ್ಷ್ಯವನ್ನೇ ಸೃಷ್ಟಿ ಮಾಡಿ ಕಥೆ ಹೆಣೆಯುತ್ತಿದ್ದರು. ಚಿತ್ರದುರ್ಗವನ್ನಾಳಿದ ಪ್ರಭುಗಳು ಎಂದರೆ ಅಲ್ಲಿಯ ಜನತೆಗಿಂತ ಹೆಚ್ಚು ಭಾವುಕವಾಗಿ ತ.ರಾ.ಸು ಮಾತನಾಡುತ್ತಿದ್ದರು.

ತ.ರಾ.ಸು ಅವರು ತಮ್ಮ ಕೊನೆಯ ಕಾದಂಬರಿಯ ದುರ್ಗಾಸ್ತಮಾನ ಬರೆಯುವ ಹೊತ್ತಿಗೆ ನಾನು ಚಿತ್ರದುರ್ಗದ ಅನೇಕ ಗ್ರಾಮ ಪ್ರದೇಶಗಳಲ್ಲಿ ಸಂಚಾರ ಕೈಗೊಂಡಿದ್ದೆ. ಗ್ರಾಮೀಣ ಭಾಗಗಳಲ್ಲಿ ಜನಪದರು ಚಿತ್ರದುರ್ಗದ ಇತಿಹಾಸ ಕುರಿತು ಅಂಥ ಅಭಿಮಾನದ ಮಾತುಗಳನ್ನೇನೂ ಆಡುತ್ತಿರಲಿಲ್ಲ. ಯುದ್ಧಗಳ ವಿನಾಶ ಕುರಿತು ವಿಷಾದದ ದನಿಯಲ್ಲಿ ಮಾತನಾಡುತ್ತಿದ್ದರು. ಯುದ್ಧದ ವೇಳೆ ತಮ್ಮ ತಾತ ಮುತ್ತಾತಂದಿರು ಅನುಭವಿಸಿದ ಹಿಂಸೆಯನ್ನು ಹೇಳುತ್ತಿದ್ದರು. ಆ ಕಾರಣಕ್ಕಾಗಿಯೇ ಚಿತ್ರದುರ್ಗ ಪ್ರದೇಶವನ್ನು ಬಿಟ್ಟು ಬೇರೆ ಬೇರೆ ಊರುಗಳಿಗೆ ಗುಳೆ ಹೊರಟಿದ್ದನ್ನು ಹೇಳುತ್ತಿದ್ದರು. ಅಲ್ಲದೆ ಮದಕರಿನಾಯಕನನ್ನು ಹೈದರ್ ಮೋಸದಿಂದ ಕೋಟೆಯ ಹೊರಗೆ ಬರುವಂತೆ ಸಂಚುಮಾಡಿ ಮುಳ್ಳುಪಂಜರದಿಂದ ಹಿಡಿದುಕೊಂಡು ಹೋದುದನ್ನು ಹೇಳುತ್ತಿದ್ದರು. ಈ ಸಂಗತಿ ತಿಳಿದಿದ್ದ ನಾನು ತ.ರಾ.ಸು ಕಾದಂಬರಿಯನ್ನು ಕುತೂಹಲದಿಂದ ಓದಿದೆ. ಯಥಾವಿಧಿಯಾಗಿ ದುರ್ಗ, ಅರಮನೆ, ನಾಗತಿಯರು ಆ ಕಾಲದ ವೈಭವದೊಂದಿಗೆ ಇದ್ದ ಮದಕರಿನಾಯಕ ಹೈದರನೊಂದಿಗೆ ಹೋರಾಡುತ್ತ, ಶತ್ರುಗಳ ಕತ್ತಿಗೆ ಸಿಕ್ಕಿ ಸಾಯುತ್ತ, ಏನಾದರೂ ಈ ದುರ್ಗದ ಭೂಮಿಯನ್ನು ಬಿಡಲಾರೆನೆಂಬಂತೆ ಅಪ್ಪಿಕೊಂಡೇ ಸತ್ತನಂತೆ. ನಾನು ತ.ರಾ.ಸು ಅವರಿಗೆ ಜನಪದ ವ್ಯಕ್ತಿಗಳು ಹೇಳಿದ ಮಾಹಿತಿಯನ್ನು ತಿಳಿಸಿ ಹೈದರಾಲಿ ಸಂಚಿನಿಂದ ನಾಯಕನನ್ನು ಹೊರಗೆ ಬರಹೇಳಿ ಹಿಡಿಸಿ ಪಂಜರದಲ್ಲಿ ಹಾಕಿಕೊಂಡು ಶ್ರೀರಂಗ ಪಟ್ಟಣದ ಕಡೆ ನಡೆಯುವಲ್ಲಿ ದಾರಿಯಲ್ಲಿ ತೀರಿಕೊಂಡನಂತಲ್ಲ ಎಂದು ಕೇಳಿದೆ. 'ಚಿತ್ರದುರ್ಗದ ಪಾಳೆಯಗಾರರು' ಕೃತಿಯಲ್ಲಿ ಎಂ.ಎಸ್.ಪುಟ್ಟಣ್ಣನವರೂ ಹಾಗೆಯೇ ಬರೆದಿದ್ದಾರಲ್ಲ. ಅದರೊಂದಿಗೆ 'ಊರನೇ ಕಟ್ಟಿಸಿರುವ ದೊರೆಯೆ ಹೋದನೆ । ಕಾಮನ ಬಾವಿ ಕರುವರ್ತಿ– ಕಟ್ಟಿಸಿರುವ । ಧೀರ ಮದಕೇರಿ ಸೆರೆಹೋದ'॥ ಎಂಬ ತ್ರಿಪದಿಯನ್ನೂ ಜನಪದರು ಹಾಡುತ್ತಾರಲ್ಲ ಎಂದೆ. ಅದಕ್ಕೆ ತ.ರಾ.ಸು ಅವರು ಅದು ನನಗೂ ಗೊತ್ತು. ಹಾಗೆ ಹೈದರ್‌ಗೆ ಮದಕರಿ ಸೆರೆಸಿಕ್ಕಿದ ಎಂದು ಬರೆದರೆ ದುರ್ಗದ ಜನ ನನ್ನ ಬಿಡುತ್ತಾರೆಯೇ ಎಂದರು. ಪ್ರಾದೇಶಿಕ ಅಭಿಮಾನದ ಲೇಖಕರು ಮತ್ತು ಅದೇ ಭಾಗದ ಜನ ಇತಿಹಾಸವನ್ನು ನೋಡುವ ಕ್ರಮವೇ ಹೀಗೆ ಎನ್ನಿಸಿತು. ಐತಿಹಾಸಿಕ ಸತ್ಯವೆಂಬುದು ನಮ್ಮ ಬರೆಹದಿಂದಲೂ, ಚಿಂತನೆಯಿಂದಲೂ, ನಿತ್ಯದ ಮಾತುಕತೆಯಿಂದಲೂ ದೂರವೇ ಆಗಿ ಮತ್ತೆಲ್ಲೋ ಅಡಗಿರುತ್ತದೆಂದೆನಿಸಿತು. ಹೀಗೆ ನನಗೆ ಚಿತ್ರದುರ್ಗದ ಐತಿಹಾಸಿಕ ಸಂಗತಿಗಳು ಒಂದೊಂದು ಕಡೆ ಒಂದೊಂದು ರೀತಿಯಲ್ಲಿ ಕೇಳಿಸತೊಡಗಿತು. ಗ್ರಾಮೀಣ ಪ್ರದೇಶಗಳಲ್ಲಿ ಚಿತ್ರದುರ್ಗದ ಪಾಳೆಯಗಾರರನ್ನು ಕುರಿತು ವಿಚಾರಿಸಿದರೆ, 'ಅಲ್ಲೇ ದುರ್ಗದ ಸುತ್ತ ಮುತ್ತಲ ಗ್ರಾಮಗಳಲ್ಲಿ ನಾವು ಇದ್ದವರು. ಕಡೆಯ ಯುದ್ಧ ಆಯಿತಲ್ಲ ಆಗ ನಮಗೆ ಅಲ್ಲಿ ಉಳಿಯುವುದು ಕಷ್ಟವಾಯಿತು. ಫಿರಂಗಿಯ ಹೊಗೆ ತಾಳಲಾಗಲಿಲ್ಲ. ಬಾವಿ ಮತ್ತು ಕೆರೆಯ ನೀರಿಗೆ ಮದ್ದು ಬೆರೆಸಿದರು. ನಿತ್ಯ ಅನ್ನ, ಮುದ್ದೆ, ಹೊಟ್ಟೆಗಾಗಿ ಸುತ್ತಮುತ್ತಲಿನ ಗ್ರಾಮಸ್ಥರನ್ನು ಸಿಪಾಯಿಗಳು ಪೀಡಿಸುತ್ತಿದ್ದರು. ಇದರಿಂದ ಘಾಸಿಗೊಂಡು ನಾವು ಆ ಘಾಸಲೆಯನ್ನೇ ಬಿಟ್ಟೆವು. ಹಾಗೆ ಅಲ್ಲಿಂದ ಗುಳೆಬಂದು ಇಲ್ಲಿ ಗುಡಿಸಲು ಕಟ್ಟಿ ವಾಸಮಾಡುವುದು ನಮ್ಮ ತಾತಮುತ್ತಾತಂದಿರಿಗೆ ಬಹಳ ಸಂಕಟದ ಸಂಗತಿಯಾಯಿತು' ಎಂಬುದಾಗಿ ವಿವರಿಸುತ್ತಿದ್ದರು. ನನಗೆ ಚಿತ್ರದುರ್ಗ ಪಟ್ಟಣದ ವಿದ್ಯೆಕಲಿತ ಜನ ಇತಿಹಾಸವನ್ನು ಕುರಿತು ಅಭಿಮಾನದಿಂದ ಮಾತನಾಡುವುದಕ್ಕಿಂತ ಗ್ರಾಮೀಣ ಜನ ಯಾವ ಬಿಂಕ, ಬೆಡಗು, ಬಿಗುಮಾನವಿಲ್ಲದೆ ಸತ್ಯಕಥೆಗಳನ್ನು ತಮ್ಮ ತಾತಮುತ್ತಾತಂದಿರು ತಿಳಿಸಿದಂತೆ ಹೇಳುತ್ತಿದ್ದರು.



**ಮೈಸೂರು ವಿಶ್ವವಿದ್ಯಾಲಯದಲ್ಲಿ ಕನ್ನಡ ಪ್ರಾಧ್ಯಾಪಕರಾಗಿದ್ದು ಈಗ ನಿವೃತ್ತರಾಗಿರುವ ಡಾ. ಕೃಷ್ಣಮೂರ್ತಿ ಹನೂರು ಅವರು ಕನ್ನಡದ ಖ್ಯಾತ ಕಥೆಗಾರ, ಕಾದಂಬರಿಕಾರ, ಜನಪದ ಸಂಗ್ರಹಕಾರ ಮತ್ತು ಕರ್ನಾಟಕ ಜಾನಪದ ವಿಶ್ವಕೋಶದ ಇಂಗ್ಲಿಷ್ ಅವತರಣಿಕೆಯ ಸಂಪಾದಕರೂ ಹೌದು.**

'ಹೊಸ ಮನುಷ್ಯ' ಪತ್ರಿಕೆಗೆ
ಐದನೇ ವರ್ಷಕ್ಕೆ ಕಾಲಿಡುತ್ತಿರುವ ಶುಭ ಸಂದರ್ಭದಲ್ಲಿ
ಹುಟ್ಟುಹಬ್ಬದ ಶುಭಾಶಯಗಳು

SET DeMS®

ಅಧ್ಯಕ್ಷರು, ಕಾರ್ಯದರ್ಶಿ, ಆಡಳಿತ ಮಂಡಳಿ ಸದಸ್ಯರು,
ಪ್ರಾಂಶುಪಾಲರು, ಉಪನ್ಯಾಸಕರು ಹಾಗೂ ಸಿಬ್ಬಂದಿ ವರ್ಗ
**ಜೆ. ಹೆಚ್. ಪಟೇಲ್ ಪದವಿ ಕಾಲೇಜು**
ಹೇಮಾವತಿ ಹಾಸ್ಟೆಲ್ ಹತ್ತಿರ, ಬಿ.ಐ.ಇ.ಟಿ ರಸ್ತೆ,
ದಾವಣಗೆರೆ–577004.

# ಪ್ರತ್ಯೇಕ ರಾಜ್ಯದ ಕೂಗು: ಎಷ್ಟು ಪ್ರಸ್ತುತ?



ಕರ್ನಾಟಕದ ಏಕೀಕರಣಕ್ಕೆ ವಿರುದ್ಧವಾಗಿದ್ದ ಧ್ವನಿಗಳನ್ನು ಅಡಗಿಸಿ ಸಾಧಿಸಲಾದ ಏಕೀಕರಣದ ಧ್ವನಿಗಳು ಮಸುಕಾಗುತ್ತಿದ್ದಂತೆ ರಾಜ್ಯವನ್ನು ಒಡೆಯಬೇಕೆಂಬ ಕೂಗುಗಳು ಕೇಳಬರಹತ್ತಿವೆ. ಈಗ ಈ ಧ್ವನಿಗಳಿಗೆ ಕಾರಣ, ಅಸಮಾನ ಅಭಿವೃದ್ಧಿ. ಈ ಅಸಮಾನತೆಯು ನಿಜವೇ ಆಗಿದ್ದಲ್ಲಿ ಅದು ಏಕೀಕರಣದ ಆಶಯಕ್ಕೆ ಬಗೆದ ದ್ರೋಹವೇ ಸರಿ. ಆದರೆ ಅದಕ್ಕೆ ಪ್ರತ್ಯೇಕ ರಾಜ್ಯದ ಬೇಡಿಕೆ ನಿಜವಾದ ಪರಿಹಾರವೇ? ಅಸಮಾನ ಅಭಿವೃದ್ಧಿಗೆ ಒಳಗಾಗಿರುವುದೆಂದು ಹೇಳಲಾಗುವ_ಪ್ರದೇಶಗಳ ಕೆಲವು ಅ-ರಾಜಕೀಯ ವ್ಯಕ್ತಿಗಳನ್ನೂ ಈ ಬಗ್ಗೆ ಮೂರು ಪ್ರಶ್ನೆಗಳನ್ನು ಕೇಳಿ ಉತ್ತರಗಳನ್ನು ಪಡೆಯುವ ಮೂಲಕ ಈ ವಿಷಯದ ಬಗ್ಗೆ ಒಂದಿಷ್ಟು ಬೆಳಕು ಚೆಲ್ಲುವ ಪ್ರಯತ್ನವೊಂದನ್ನು ಪತ್ರಿಕೆ ಇಲ್ಲಿ ಮಾಡಿದೆ. ನಾವು ಕೇಳಿದ ಪ್ರಶ್ನೆಗಳೆಂದರೆ:

೧.ಪ್ರತ್ಯೇಕ ರಾಜ್ಯದ ಕೂಗು ಕೇವಲ ರಾಜಕೀಯ ಉದ್ದೇಶದ ಕೂಗೋ ಅಥವಾ ಅದಕ್ಕೆ ನಿಜವಾದ ಆಧಾರಗಳು ಇವೆಯೋ?
೨.ನಂಜುಂಡಪ್ಪ ವರದಿ ಶಿಫಾರ್ಸುಗಳು ನಿಮ್ಮ ಪ್ರಕಾರ ಎಷ್ಟು ಪ್ರಾಮಾಣಿಕವಾಗಿ ಅನುಷ್ಠಾನಗೊಳ್ಳುತ್ತಿವೆ?
೩.ಪ್ರತ್ಯೇಕ ರಾಜ್ಯದ ಕೂಗಿಗೆ ಪ್ರತ್ಯೇಕ ರಾಜ್ಯ (ತೆಲಂಗಾಣದಂತೆ) ಸ್ಥಾಪನೆ ಮಾತ್ರ ಉತ್ತರವೆನಿಸುತ್ತದೆಯೇ? ನಿಮ್ಮ ಸಲಹೆ ಏನು?

## ಪ್ರತ್ಯೇಕ ರಾಜ್ಯ ಕೇಳುವುದು ಸರಿಯಲ್ಲ.



೧. ನಿಜವಾದ ಆಧಾರಗಳು ಇವೆ. ಉತ್ತರ ಕರ್ನಾಟಕ ಎಂದರೆ ನಮ್ಮ ಕಣ್ಣಮುಂದೆ ಸುಳಿಯುವುದು ಒಂದೋ ಭೀಕರ ಬರಗಾಲದಿಂದ ಬಸವಳಿದ ಬಡಜನರು, ಪಕ್ಕದ ರಾಜ್ಯಗಳಿಗೆ ಅನ್ನ ಅರಸಿಕೊಂಡು ಗುಳೇ ಹೋಗುವ ದೃಶ್ಯ, ಇಲ್ಲವೇ ಭಯಂಕರ ನೆರೆ ಹಾವಳಿಗೆ ತುತ್ತಾಗಿ ಕುಸಿದ ಮನೆಗಳಡಿಯಲ್ಲಿಯೋ, ಹರಿವ ನದಿಗಳಲ್ಲೋ ಹೆಣವಾಗುವ ನಿಷ್ಪಾಪಿ ಜನತೆಯ ದೃಶ್ಯ. ಹಳ್ಳಿಗಳಿರಲಿ, ಪಟ್ಟಣಗಳಲ್ಲೂ ಹಾಳುಬಿದ್ದ ರಸ್ತೆಗಳು, ಬಯಲು ಶೌಚಾಲಯದ ನಿರ್ಲಜ್ಜ ವ್ಯವಸ್ಥೆ. ಶಿಕ್ಷಕರಿಲ್ಲದ ಶಾಲೆಗಳು, ವಿದ್ಯುತ್ ಇಲ್ಲದ ಗ್ರಾಮಗಳು, ಮನುಕುಲಕ್ಕೆ ಕಳಂಕವಾದ ದೇವದಾಸಿ ಪದ್ಧತಿ. ಈಡೇರದ ಯೋಜನೆಗಳು, ಕಾಗದದ ಮೇಲೆ ಮಾತ್ರ ಕಾಣಸಿಗುವ ಕೊಳವೆ ಬಾವಿಗಳು... ಆಗೀಗ ಭಾರತದ ಗಡಿಯಂಚಿನಿಂದ ಬರುವ ಯುವ ಸೈನಿಕರ ಶವಗಳು ಪಟ್ಟಿ ಬೆಳೆಯುತ್ತಲೇ ಹೋಗುತ್ತದೆ.

೨.ಶಿಫಾರ್ಸುಗಳು ಪ್ರಾಮಾಣಿಕವಾಗಿ ಅನುಷ್ಠಾನಗೊಳ್ಳುತ್ತಿಲ್ಲ. ಬೆಳಗಾವಿಯಲ್ಲಿ ಸುವರ್ಣ ವಿಧಾನಸೌಧವು ನಿರ್ಮಾಣಗೊಳ್ಳಲು ಅಂದಾಜು ೪೫೦ ಕೋಟಿ ರೂಪಾಯಿ ಖರ್ಚಾಗಿದೆ. ವರ್ಷದಲ್ಲೊಮ್ಮೆ ಅಧಿವೇಶನ ನಡೆಸಲು ಇಷ್ಟೊಂದು ಖರ್ಚು ಅಗತ್ಯವೆ? ಕಾರಣ, ನಂಜುಂಡಪ್ಪ ವರದಿಯನ್ನು ಅನುಲಕ್ಷಿಸಿ ಉತ್ತರ ಕರ್ನಾಟಕವನ್ನು ಅಭಿವೃದ್ಧಿ ಮಾಡಬೇಕೆನ್ನುವ ರಾಜಕೀಯ ಇಚ್ಛಾಶಕ್ತಿ ಇದ್ದರೆ, ಉ.ಕರ್ನಾಟಕಕ್ಕೆ ಅನುಕೂಲ ಇರುವ ಕೆಲವು ಇಲಾಖೆಗಳನ್ನು ಬೆಳಗಾವಿಯಲ್ಲಿ ಕಟ್ಟಲಾಗಿರುವ ಸುವರ್ಣ ವಿಧಾನಸೌಧಕ್ಕೆ ಸ್ಥಳಾಂತರಿಸಬೇಕು. ಈ ದಿಸೆಯಲ್ಲಿ ಈ ಸೌಧವನ್ನು ಕ್ರಿಯಾಶೀಲಗೊಳಿಸಿದಾಗ ಇಷ್ಟು ಖರ್ಚು ಮಾಡಿದ್ದು ಸಾರ್ಥಕವಾಗುವುದನ್ನು ಗುರುತಿಸಿ ಏಕೀಕರಣದ ನಂತರ ಸರ್ಕಾರಗಳ ವೈಫಲ್ಯವನ್ನು ಜಗಜ್ಜಾಹೀರುಗೊಳಿಸಿತು.

೩. ಹಲವು ಹನ್ನೊಂದು ಹೋರಾಟಗಳ ಮೂಲಕ ಏಕೀಕರಣಗೊಂಡ ಕರ್ನಾಟಕ ಮತ್ತೊಂದು ಪ್ರತ್ಯೇಕ ರಾಜ್ಯ ಕೇಳುವುದು ಸರಿಯಲ್ಲ. ಅಭಿವೃದ್ಧಿ ವಿಷಯದಲ್ಲಿ ಈ ಭಾಗದ ೯೪ ಜನ ಶಾಸನಸಭಾ ಸದಸ್ಯರು, ೧೨ ಸಂಸತ್ ಸದಸ್ಯರು ಜಡತೆಯನ್ನು ಬಿಟ್ಟು ಅಭಿವೃದ್ಧಿ ವಿಷಯದಲ್ಲಿ ಪ್ರಬಲ ಇಚ್ಛಾಶಕ್ತಿಯನ್ನು ಪ್ರದರ್ಶಿಸಬೇಕು.

**–ಡಾ. ಸಿದ್ಧಲಿಂಗ ಸ್ವಾಮೀಜಿ**
ಗದುಗಿನ ತೋಂಟದಾರ್ಯ ಮಠ
(ಹಲವು ಜನಪರ ಹೋರಾಟಗಳ ನೇತೃತ್ವ ವಹಿಸಿದ ಮಠಾಧೀಶರು)

## ನಂಜುಂಡಪ್ಪ ವರದಿಯನ್ನು ಇಡಿಯಾಗಿ ಜಾರಿಮಾಡಬೇಕು



೧) ಕರ್ನಾಟಕ ಏಕೀಕರಣವಾಗಿ ೫೯ ವರ್ಷಗಳು ಗತಿಸಿದರೂ ಉ.ಕರ್ನಾಟಕಕ್ಕೆ ಈವರೆಗೆ ಮೂಲಭೂತ ಸೌಕರ್ಯಗಳನ್ನು ಒದಗಿಸುವದಾಗಲಿ, ಪ್ರಮುಖ ನೀರಾವರಿ ಯೋಜನೆಗಳನ್ನು ಪೂರ್ಣಗೊಳಿಸುವದಾಗಲಿ ಇಲ್ಲಿ ಯುವಜನರಿಗೆ ಉದ್ಯೋಗವಕಾಶಗಳನ್ನು ಒದಗಿಸುವದಾಗಲಿ, ಸಾಹಿತ್ಯಿಕವಾಗಿ, ಸಾಂಸ್ಕೃತಿಕವಾಗಿ ಈ ಪ್ರದೇಶದ ಜನರನ್ನು ಗುರುತಿಸುವುದಾಗಲಿ ಆಗಿಲ್ಲ. ಅದಕ್ಕಾಗಿ ಸಾಂಸ್ಕೃತಿಕ ಮೀಸಲಾತಿಗಾಗಿ ಒತ್ತಾಯಿಸುತ್ತಿರುವುದು. ವಿಶ್ವವಿದ್ಯಾಲಯಗಳಿಗೆ ನಮ್ಮ ಭಾಗದವರನ್ನು ಕುಲಪತಿಗಳನ್ನಾಗಿ ನೇಮಿಸುವದು, ವಿವಿಧ ಅಕಾಡೆಮಿಗಳಲ್ಲಿ, ನಿಗಮ, ಮಂಡಳಿ, ಪ್ರಾಧಿಕಾರಗಳಲ್ಲಿ ಈ ಭಾಗದವರಿಗೆ ಪ್ರಾತಿನಿಧ್ಯ ನೀಡುವುದೇ ಸಾಂಸ್ಕೃತಿಕ ಮೀಸಲಾತಿ.

೨) ನಂಜುಂಡಪ್ಪ ಸಮಿತಿ ನೆಪದಲ್ಲಿ ಕರ್ನಾಟಕದ ಹಿಂದುಳಿದ, ಅತಿಹಿಂದುಳಿದ ಪ್ರದೇಶಗಳನ್ನು ಗುರುತಿಸುವಂತಾಯಿತು. ಬಿ.ಜೆ.ಪಿ. ಸರಕಾರವಿದ್ದಾಗ ಶಶೀಲ್ ನಮೋಶಿಯವರನ್ನು ಅನುಷ್ಠಾನ ಸಮಿತಿ ಅಧ್ಯಕ್ಷರೆಂದು ನೇಮಕಮಾಡಿದ್ದರು. ಈ ಸಮಿತಿ ಯಾವ ಕಾರ್ಯವನ್ನೂ ಮಾಡಲಿಲ್ಲ. ಆಗಿನ ಲೆಕ್ಕಾಚಾರದ ಪ್ರಕಾರ ೧೬೦೦೦ ಕೋಟಿ. ಈಗಿನ ಲೆಕ್ಕಾಚಾರದ ಪ್ರಕಾರ ೩೨೦೦೦ಕೋಟಿ ಹಣ ಬಿಡುಗಡೆಯಾಗಬೇಕಿತ್ತು. ಆಗಿಲ್ಲ. ಹೈದರಾಬಾದ ಕರ್ನಾಟಕ ಅಭಿವೃದ್ಧಿ ಮಂಡಳಿಗೆ ೩೭೧ನೇ ಜೆ ಕಲಮಿನ ಅನ್ವಯದ ಪ್ರಕಾರ ೨೦೧೪–೧೫ನೇ ಸಾಲಿನ ೧೦೦೦ ಕೋಟಿ ಅನುದಾನದಲ್ಲಿ ೪೦ ಕೋಟಿ ಮಾತ್ರ(ಅದೂ ನಿರ್ವಹಣಾ ವೆಚ್ಚ ಮಾತ್ರ) ಬಳಕೆಯಾಗಿ ಉಳಿದ ಹಣ ಸರಕಾರಕ್ಕೆ ವಾಪಾಸಾಗಿದೆ. ಈ ಸಂಗತಿಗಳು ಜನಸಾಮಾನ್ಯರನ್ನು ರೊಚ್ಚಿಗೆಬ್ಬಿಸಿವೆ.

ಕಾವೇರಿ ಸಮಸ್ಯೆ ಬಂದಾಗ ಕರ್ನಾಟಕ ಬಂದ್‌ಗೆ ಕರೆಕೊಡಲಾಗುತ್ತದೆ. ಕೃಷ್ಣಾಕೊಳ್ಳದ ಆಲಮಟ್ಟಿ, ನಾರಾಯಣಪುರ, ತುಂಗಭದ್ರಾ ಹೂಳೆತ್ತುವಿಕೆ, ಕಳಸಾ ಬಂಡೂರಿ ಕಾರ್ಯಾನುಷ್ಠಾನಕ್ಕೆ ಒತ್ತಾಯಿಸುವಾಗ ಆ ಕಡೆಯ ಜನ, ಸರಕಾರ ಸ್ಪಂದಿಸುವುದಿಲ್ಲವೆಂಬುದು ನಮ್ಮ ಜನಕ್ಕೆ ಮನವರಿಕೆಯಾಗಿದೆ. ಹಳೇ ಮೈಸೂರಿನ ಮೇಕೆದಾಟು ಯೋಜನೆಗೆ ಒತ್ತು ಕೊಟ್ಟಂತೆ ಹಳೆಯದಾದ ಕಳಸಾಬಂಡೂರಿ ಯೋಜನೆಗೆ ಒತ್ತು ಕೊಡುವುದಿಲ್ಲ.

೩) ಒಂದು ಕಾಲಮಿತಿಯಲ್ಲಿ ಸರಕಾರ ಈ ಭಾಗದ ಹಿಂದುಳಿದ ಪ್ರದೇಶಾಭಿವೃದ್ಧಿಗಾಗಿ ಕಾರ್ಯಯೋಜನೆಯನ್ನು ರೂಪಿಸಿ ಅನುಷ್ಠಾನಕ್ಕೆ ತಂದರೆ ಪ್ರತ್ಯೇಕ ರಾಜ್ಯದ ಕೂಗನ್ನು ತಡೆಯಬಹುದು. ಹೋರಾಟಗಾರರಿಗೆ ರಾಜ್ಯ ಒಡೆಯುವ ಮನಸಿಲ್ಲ. ಸರಕಾರ ಮಲತಾಯಿ ದೋರಣೆಯನ್ನು (ಉದಾ: ರಾಯಚೂರಿಗೆ ಐ ಐ ಟಿ ಸ್ಥಾಪಿಸಲು ನಂಜುಡಪ್ಪ ಸಮಿತಿ ಶಿಫಾರಸು ಮಾಡಿದ್ದರೂ ಮೈಸೂರು, ಧಾರವಾಡ, ಹೆಸರು ಸರಕಾರ ಸೂಚಿಸಿದ್ದು) ಬಿಡಬೇಕು.

ನಂಜುಂಡಪ್ಪ ವರದಿಯನ್ನು ಇಡಿಯಾಗಿ ಜಾರಿಮಾಡಬೇಕು. ಮಂತ್ರಿಗಳನ್ನು ಹೈ.ಕ. ಅಭಿವೃದ್ಧಿ ಮಂಡಳಿ ಸಮಿತಿಯ ಅಧ್ಯಕ್ಷರನ್ನಾಗಿ ಮಾಡದೆ, ಪೂರ್ಣಆವಧಿ ಕೆಲಸಮಾಡುವ ಕ್ರಿಯಾಶೀಲರನ್ನು ಹೈ. ಕ. ಅಭಿವೃದ್ಧಿ ಮಂಡಳಿಗೆ ಅಧ್ಯಕ್ಷರನ್ನಾಗಿ ಮಾಡಬೇಕು. ಬೆಳಗಾವಿ ಸುವರ್ಣಸೌಧಕ್ಕೆ ವಿಧಾನಸೌಧದ ಮುಖ್ಯ ಕಛೇರಿಗಳು, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಕೆಲವು ಅಕಾಡೆಮಿಗಳು, ಕನ್ನಡ ಸಂಸ್ಕೃತಿ ಇಲಾಖೆಯ ಶಾಖೆ ಬರಬೇಕು.

ರಾಜ್ಯದಲ್ಲಿ ೬೧ ತಾಲೂಕುಗಳು ಅತಿ ಹಿಂದುಳಿದಿದ್ದು, ಅಂಥ ೨೧ ತಾಲೂಕುಗಳು ಹೈ.ಕದಲ್ಲಿವೆ. ಪ್ರಪಂಚದಲ್ಲಿಯೇ ಹಿಂದುಳಿದ ದೇವದುರ್ಗ ತಾಲೂಕು ರಾಯಚೂರು ಜಿಲ್ಲೆಯಲ್ಲಿದೆ. ರಾಯಚೂರು ಜಿಲ್ಲೆ ಹೈ.ಕದಲ್ಲಿದೆ. ಇಷ್ಟು ಹೇಳಿದರೆ ಉಳಿದದ್ದನ್ನು ಸಮಾನ ಅಭಿವೃದ್ಧಿ ಬಯಸುವವರಿಗೆ ಹೇಳಬೇಕಾದ ಅಗತ್ಯವಿಲ್ಲ.

**–ಅಲ್ಲಮಪ್ರಭು ಬೆಟ್ಟದೂರು, ಕೊಪ್ಪಳ**

(ಲೇಖಕರು ಮತ್ತು ಹೈ. ಕರ್ನಾಟಕ ಹೋರಾಟದ ಸಕ್ರಿಯ ಮುಂದಾಳು)

## ಪ್ರತ್ಯೇಕ ರಾಜ್ಯದ ಹುಯಿಲು: ದುರುದ್ದೇಶಪೂರಿತ



೧. ದಕ್ಷಿಣ ಕರ್ನಾಟಕ ಮೈಸೂರು ಅರಸರ ಜನಪರ ಕಾಳಜಿಯಿಂದಾಗಿ ಹಾಗೂ ನಿಸರ್ಗದ ಕೃಪೆಯಿಂದಾಗಿ ಸಮೃದ್ಧವಾಗಿತ್ತು. ಆದರೆ ಹೈದರಾಬಾದ್ ನಿಜಾಮರ ದುರಾಡಳಿತ ಹಾಗೂ ನಿಸರ್ಗದ ಅವಕೃಪೆಗೊಳಗಾಗಿದ್ದ ಉತ್ತರ ಕರ್ನಾಟಕ ಹಿಂದುಳಿದ ಪ್ರದೇಶವಾಗಿ ಉಳಿದಿತ್ತು. ರಾಜಪ್ರಭುತ್ವ ಹೋಗಿ ಪ್ರಜಾಪ್ರಭುತ್ವ ನೆಲೆಗೊಂಡಿತು. ಸಾಕಷ್ಟು ಪ್ರಗತಿ ಆಯಿತು. ಆದರೂ ಉತ್ತರ ಕರ್ನಾಟಕ, ಅದರಲ್ಲೂ ಹೈದರಾಬಾದ್ ಕರ್ನಾಟಕ ಸುಧಾರಣೆಯೇನೂ ಕಾಣಲಿಲ್ಲವೆನ್ನುವುದು ಸರ್ವವಿದಿತ.

ಕೆಳವರ್ಗದ ಜನರ ಜೀವನ ಮಟ್ಟದಲ್ಲಿ ಸುಧಾರಣೆ ಆಗಿಯೇ ಇಲ್ಲವೆನ್ನಬಹುದು. ಬಿಸಿಲು ಜಿಲ್ಲೆಗಳ ಈ ಜನ ಪದೇ ಪದೇ ತಮ್ಮ ತಮ್ಮ ಊರುಗಳನ್ನು ತೊರೆದು ಹೊಟ್ಟೆ ಹೊರೆಯುವುದಕ್ಕಾಗಿ ವಲಸೆ ಹೋಗುತ್ತಿರುವುದು ಮುಂದುವರಿದಿದೆ. ಶಿಕ್ಷಣ, ಆರೋಗ್ಯ, ಶುದ್ಧ ಕುಡಿಯುವ ನೀರು ಇವರ ಪಾಲಿಗೆ ಗಗನ ಕುಸುಮವಾಗಿ ಬಿಟ್ಟಿವೆ. ಉತ್ತರ ಕರ್ನಾಟಕ, ಅದರಲ್ಲೂ ಹೈದರಾಬಾದ ಕರ್ನಾಟಕದ ಕೆಳವರ್ಗದ ಜನರ ಬವಣೆ ನೀಗಲು ಜನ ಪರ ಕಾಳಜಿಯ ಹೋರಾಟಗಳನ್ನು ರೂಪಿಸುವ ನಿಟ್ಟಿನಲ್ಲಿ ಚಿಂತನೆ ಇಲ್ಲವೆ ಬದ್ಧತೆಯ ಸಂಘಟನಗಳೇ ಅಲ್ಲಿ ಹುಟ್ಟಿಕೊಂಡಿಲ್ಲ. ಮೇಲ್ವರ್ಗದ ಜನಪ್ರತಿನಿಧಿಗಳು ತಮಗೆ ಯಾವುದೇ ರೀತಿಯ ಅಡ್ಡಿ ಆತಂಕಗಳನ್ನು ಈ ಜನವರ್ಗ ಒಡ್ಡಲಾರದೆಂದು ಭಾವಿಸಿದ್ದಿರಬಹುದು. ಈವರೆಗೆ ತೆಲಂಗಾಣದಂತಹ ಸ್ಫೋಟಕ ಪರಿಸ್ಥಿತಿಯ ಮುನ್ಸೂಚನೆಗಳಿಲ್ಲವೆಂದು ಅವರು ನಿರಾಳವಾಗಿ ಇರಬಹುದು ಎನ್ನಲಾಗದು.

೨. ಇತ್ತೀಚೆಗೆ ಮುಖ್ಯಮಂತ್ರಿ ಸಿದ್ರಾಮಯ್ಯನವರೇ ಡಾ. ನಂಜುಂಡಪ್ಪ ವರದಿ ಜಾರಿ ಶುರುವಾಗಿ ಎಂಟು ವರ್ಷ ಕಳೆದಿದ್ದರೂ ನಿರೀಕ್ಷಿತ ಮಟ್ಟದಲ್ಲಿ ಅಭಿವೃದ್ಧಿ ಸಾಧಿಸಲಾಗಿಲ್ಲ ಎಂದು ಸ್ಪಷ್ಟವಾಗಿ ಹೇಳದಿದ್ದರೂ ಆ ಕುರಿತು ಹೈದರಾಬಾದ ಕರ್ನಾಟಕದ ಅಭಿವೃದ್ಧಿ ಸೂಚ್ಯಂಕಗಳು ವಾಸ್ತವ ಕತೆ ಹೇಳುತ್ತಿವೆ. ಡಾ. ನಂಜುಂಡಪ್ಪ ವರದಿಯ ಅನುಷ್ಠಾನದ ವಿಷಯವಾಗಿ ರಾಜಕೀಯ ಸಲ್ಲದು. ಉತ್ತರ ಕರ್ನಾಟಕದಂತೇ ದಕ್ಷಿಣ ಕರ್ನಾಟಕದ ಹಲವಾರು ತಾಲೂಕುಗಳು ಸಾಕಷ್ಟು ಹಿಂದುಳಿದಿವೆ ಎನ್ನುವುದನ್ನು ಡಾ. ನಂಜುಂಡಪ್ಪ ವರದಿ ಸ್ಪಷ್ಟಪಡಿಸಿದೆ. ಸರ್ಕಾರ ಮತ್ತು ಜನಪ್ರತಿನಿಧಿಗಳ ಪ್ರಾಮಾಣಿಕ ಪ್ರಯತ್ನ ಕರ್ನಾಟಕದ ಸರ್ವತೋಮುಖ ಅಭಿವೃದ್ಧಿಯನ್ನು ಸಾಧ್ಯವಾಗಿಸಬಲ್ಲದು. ಕರ್ನಾಟಕದ ನೈಸರ್ಗಿಕ ಹಾಗೂ ಮಾನವ ಸಂಪನ್ಮೂಲಗಳನ್ನು ಸಮರ್ಪಕವಾಗಿ ಬಳಸಿಕೊಂಡು ಕರ್ನಾಟಕದ ಜನತೆ ಸಮಗ್ರ ಅಭಿವೃದ್ಧಿಯ ಫಲಾನುಭವಿಗಳಾಗುವಂತೆ ಮಾಡಬೇಕು.

೩. ಹಿಂದುಳಿದ ಪ್ರದೇಶದ ರಾಜಕೀಯ ನಾಯಕರು ಆ ಪ್ರದೇಶದ ಅಭಿವೃದ್ಧಿಗಾಗಿ ಏಕೆ ಶ್ರಮಿಸಲಿಲ್ಲ ಎನ್ನುವ ಪ್ರಶ್ನೆ ಮುಖ್ಯವೆನಿಸುತ್ತದೆ. ಇದೇ ಪ್ರದೇಶದವರಾಗಿದ್ದ ವೀರೇಂದ್ರ ಪಾಟೀಲ, ಎಸ್.ಆರ್.ಕಂಠಿ, ಬಿ.ಡಿ.ಜತ್ತಿ, ಧರ್ಮಸಿಂಗ್, ಜಗದೀಶ್ ಶೆಟ್ಟರ್ ರಾಜ್ಯದ ಮುಖ್ಯಮಂತ್ರಿಗಳಾದರು. ಅದು ಹೋಗಲಿ ಕರ್ನಾಟಕದ ಇತರ ಜನರಂತೇ ಈ ಪ್ರದೇಶದ ಜನರಿಗೂ ಮತದಾನದ ಹಕ್ಕು ಇತ್ತು. ತಮ್ಮ ಆಶೋತ್ತರಗಳನ್ನು ಈಡೇರಿಸಬಲ್ಲರೆಂದು ಆಯ್ಕೆ ಮಾಡಿದ್ದ ಈ ಪ್ರದೇಶದ ಜನಪ್ರತಿನಿಧಿಗಳಿಗೆ ಅಭಿವೃದ್ಧಿ ಕಾಣದ ತಮ್ಮ ಪ್ರದೇಶ ಕಣ್ಣಿಗೆ ಬೀಳಲೇ ಇಲ್ಲವೆ? ಈಗ ಇದ್ದಕ್ಕಿದ್ದಂತೇ ಪ್ರತ್ಯೇಕ ರಾಜ್ಯದ ಹುಯಿಲೆಬ್ಬಿಸಿದವರಿಗೆ ಯಾವುದೋ ದುರುದ್ದೇಶವಿದೆಯೆನ್ನುವುದರ ಬಗ್ಗೆ ಅನುಮಾನ ಉಂಟಾಗುವುದು ಸಹಜವೇ. ಕರ್ನಾಟಕ ಏಕೀಕರಣಕ್ಕಾಗಿ ಶ್ರಮಿಸಿದವರಿಗೆ ಜನಪರ ಕಾಳಜಿ ಇತ್ತೇ ವಿನಾ ಯಾವುದೇ ಬಗೆಯ ಸ್ವಾರ್ಥವಿದ್ದಿರಲಿಲ್ಲ. ಇದೀಗ ಕರ್ನಾಟಕವನ್ನು ಒಡೆಯುವ ಹುನ್ನಾರ ಚೆಲುವ ಕನ್ನಡ ನಾಡಿನ ಆಶಯ ಉಳ್ಳವರ ಎದೆ ಒಡೆಯುವಂತೆ ಮಾಡಬಲ್ಲದು. ಪ್ರತ್ಯೇಕ ಕರ್ನಾಟಕದ ಕೂಗು ಕೇಳಿಬರದಂತೆ ಮಾಡಬೇಕು.

**–ಹಸನ್ ನಯೀಂ ಸುರಕೋಡ**

ಹಿರಿಯ ಅನುವಾದಕರು ಮತ್ತು ಸಮಾಜವಾದಿ ಚಿಂತಕರು, ರಾಮದುರ್ಗ

## ಮುಖ್ಯ ಪ್ರಶ್ನೆ ಪ್ರತ್ಯೇಕತೆಯದ್ದಲ್ಲ; ಅಭಿವೃದ್ಧಿಯದು



೧. ಭಾಷಾವಾರು ಪ್ರಾಂತಗಳನ್ನು ಅಭಿವೃದ್ಧಿಯ ನೆಪದಲ್ಲಿ ವಿಭಾಗಿಸುವ ತಂತ್ರವು ರಾಜಕೀಯ ಪ್ರೇರಿತವಾದದ್ದು. ಎಲ್ಲ ಕಾಲಕ್ಕೂ ಐಕ್ಯತೆಗಾಗಿ ಹಂಬಲಿಸುವ ಜನಮನದಲ್ಲಿ ದ್ವೇಷ, ಹತಾಶೆಗಳನ್ನು ಬಿತ್ತುವ ತಂತ್ರಗಾರಿಕೆಯಾಗಿದೆ. ಬರ್ಲಿನ ಗೋಡೆಯನ್ನೇ ಉರುಳಿಸಿ ಒಂದಾಗಿರುವ ಈ ಸಂದರ್ಭದಲ್ಲಿ, ಒಂದಾಗಿ ಬದುಕುವ ಮನುಷ್ಯ ಸಹಜ ಹಂಬಲವನ್ನು ಹತ್ತಿಕ್ಕುವುದು ಎಂದರೆ ಅದು ಒಂದು ರೀತಿಯ ಬೌದ್ಧಿಕ ಬಡತನದ ಸಂಕೇತವೇ ಸರಿ. ಪ್ರತ್ಯೇಕತೆಯನ್ನು ಪ್ರತಿಪಾದಿಸುವುದೆಂದರೆ, ನಿಜವಾದ ಬೆಳವಣಿಗೆಗೆ ತೊಡಕಾಗಿರುವ ಸಮಸ್ಯೆಗಳನ್ನು ಗುರುತಿಸಿ ಅವುಗಳನ್ನು ಪರಿಹರಿಸುವಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡದೇ ಜಾಣ ಕುರುಡುತನ ತೋರುವ ಚಾಲಾಕಿತನವಾಗುತ್ತದೆ.

ಒಂದು ಪ್ರದೇಶದ ಸರ್ವಾಂಗೀಣ ಅಭಿವೃದ್ಧಿ ಸಾಧಿಸುವ ನಿಟ್ಟಿನಲ್ಲಿ ಅಲ್ಲಿನ ಹಿಂದುಳಿದ ಪ್ರದೇಶಗಳನ್ನು ಗುರುತಿಸಿ, ಅವುಗಳ ಅಭಿವೃದ್ಧಿಗಾಗಿ ವಿಶೇಷ ಯೋಜನೆಗಳನ್ನು ಹಾಕಿಕೊಂಡು, ಇತರ ಪ್ರದೇಶಗಳ ಮಟ್ಟಕ್ಕೆ ಅಭಿವೃದ್ಧಿಯನ್ನು ಸಾಧಿಸುವುದು ಸಂವಿಧಾನ ಬದ್ಧವಾದ ಕರ್ತವ್ಯವಾಗಿರುತ್ತದೆ.

೨. ಈ ಭಾಗದ ಅಭಿವೃದ್ಧಿ ವಿಷಯದ ತಾರತಮ್ಯವು ಇಲ್ಲಿನ ರಾಜಕೀಯ ಜನರಿಗೆ ಹೋರಾಟದ ಮೊದಲ ಅಜೆಂಡಾ ಆಗಿ ಪರಿಣಮಿಸಿದೆ. ಈ ಎಲ್ಲ ತಾರತಮ್ಯಗಳನ್ನು ಹೋಗಲಾಡಿಸುವತ್ತ ಪ್ರೊ. ನಂಜುಂಡಪ್ಪನವರು ೨೦೦೨ರಲ್ಲಿ ವರದಿ ಸಲ್ಲಿಸಿದರೂ ಅದರ ಅನುಷ್ಠಾನ ಮಾತ್ರ ಪ್ರಾರಂಭವಾದದ್ದು ೨೦೦೬–೦೮ರಲ್ಲಿ. ವರದಿಯಲ್ಲಿ ಸೂಚಿತವಾಗಿರುವ ಈ ಭಾಗಗಳಿಗೆ ಸಿಗಬೇಕಾದ ೬೦ ಪ್ರತಿಶತದಲ್ಲಿ ದಕ್ಕಿದ್ದು ೪೬ ಪ್ರತಿಶತ ಮಾತ್ರ.

ರಾಜ್ಯದ ಒಟ್ಟು ೩೯ ಅತಿ ಹಿಂದುಳಿದ ತಾಲೂಕಗಳಲ್ಲಿ ೨೬ ತಾಲೂಕುಗಳು ಉತ್ತರ ಕರ್ನಾಟಕ ಪ್ರದೇಶಕ್ಕೆ ಸೇರಿದವುಗಳಾಗಿವೆ. ಈ ಪೈಕಿ ೨೧ ತಾಲೂಕುಗಳು ಕಲಬುರ್ಗಿ ವಿಭಾಗದಲ್ಲಿವೆ. ಹೈದ್ರಾಬಾದ ಕರ್ನಾಟಕ ಅಭಿವೃದ್ಧಿ ಪ್ರಾಧಿಕಾರವು ಸುಮಾರು ೨೧ ಸಾವಿರಕ್ಕೂ ಹೆಚ್ಚು ಕಾಮಗಾರಿಗಳನ್ನು ಕೈಗೊಂಡಿರುವ ಬಗ್ಗೆ ದಾಖಲಿಸುತ್ತದೆ. ಆದರೆ ಅದ್ಯಾವುದೂ ಇಲ್ಲಿ ಕಣ್ಣಿಗೆ ಗೋಚರಿಸುವುದೇ ಇಲ್ಲ.

* ಅನುದಾನ ಬಿಡುಗಡೆಯಲ್ಲಿ ಆಗಿರುವ ವಿಳಂಬ
* ಕಾಮಗಾರಿಗಳ ಆದ್ಯತಾ ವಲಯದಲ್ಲಾದ ಸಮಸ್ಯೆಗಳು

* ಸಮಗ್ರ ಯೋಜನಾ ಪರಿಕಲ್ಪನೆಯೇ ಇಲ್ಲದೇ ಬರೀ ತುಂಡುಗುತ್ತಿಗೆಗಳಲ್ಲಿ ಕಾಮಗಾರಿಗಳನ್ನು ಪೂರೈಸಿದ್ದು

* ಪ್ರಾಮಾಣಿಕ ಅನುಷ್ಠಾನದಲ್ಲಿ ಆಡಳಿತ ಮತ್ತು ರಾಜಕೀಯ ವರ್ಗದ ಬದ್ಧತೆಯ ಕೊರತೆ ಮತ್ತು ಅಸಮರ್ಪಕ ಕಾಮಗಾರಿಗಳು

* ಸದಸ್ಯರನ್ನು ಪದೇ ಪದೇ ಬದಲಾವಣೆ ಮಾಡಿರುವುದರಿಂದ ಯೋಜನೆಯ ನಿರಂತರ ಅನುಪಾಲನೆ ಕೊರತೆ ಮತ್ತು

* ಬೃಹತ್ ಹಣ ಸೋರಿಕೆ.

ಹೀಗೆ, ನ್ಯೂನತೆಗಳನ್ನು ಪಟ್ಟಿ ಮಾಡುತ್ತ ಹೋದರೆ ಗಾಯದ ಮೇಲೆ ಬರೆ ಎಳೆದಂತಾಗುತ್ತದೆ ಅಷ್ಟೇ. ಇದುವರೆಗೂ ಇವನ್ನು ಸಮಗ್ರವಾಗಿ ನೋಡಿ ವಿಶ್ಲೇಷಿಸುವ ಕೆಲಸವು ಸರಿಯಾಗಿ ನಡೆದಿಲ್ಲ.

೩.ರಾಜ್ಯದ ಒಟ್ಟು ಆದಾಯ ಸಂಗ್ರಹಣೆಯಲ್ಲಿ ೫೧ ಪ್ರತಿಶತ ಬೆಂಗಳೂರು ವಿಭಾಗದ್ದು. ಉಳಿದ ಬೆಳಗಾವಿ, ಕಲಬುರ್ಗಿ, ಮೈಸೂರು ವಿಭಾಗಗಳಲ್ಲಿ ಮೈಸೂರಿನದ್ದೇ ಮೇಲುಗೈ. ಹೀಗಾಗಿ ಉತ್ತರ ಕರ್ನಾಟಕ ಸಂಪನ್ಮೂಲದ ಈ ಅಂಶವನ್ನು ಗಂಭೀರವಾಗಿ ಗಮನಿಸಬೇಕಾಗುತ್ತದೆ. ಪ್ರತ್ಯೇಕತೆಯ ಬಗ್ಗೆ ಮಾತನಾಡುವವರಲ್ಲಿ ಒಂದು ಬದಲಿ ವ್ಯವಸ್ಥೆಯ ಕುರಿತಾಗಿ ಯಾವುದೇ ಪರ್ಯಾಯ ಸಿದ್ಧಮಾದರಿಗಳಿಲ್ಲ. ಹೀಗಾಗಿ ಮುಖ್ಯ ಪ್ರಶ್ನೆ ಪ್ರತ್ಯೇಕತೆಯದ್ದಲ್ಲ; ನಿಜವಾದ ಪ್ರಶ್ನೆ ಇರುವುದು ಅಭಿವೃದ್ಧಿಯ ವಿಷಯದಲ್ಲಿ. ನಾಳೆ ಹೊಸ ರಾಜ್ಯ ನಿರ್ಮಾಣವಾದರೆ ಅದನ್ನು ಆಳುವವರು ಇವರೇ ಮತ್ತು ಇದೇ ಆಡಳಿತ ವ್ಯವಸ್ಥೆಯಾಗಿರುವುದೂ ವಾಸ್ತವ ಸಂಗತಿಯಾಗಿದೆ. ಇದರಿಂದ ಮುಕ್ತಿ ಉಂಟೇ? ಆಲೋಚಿಸಬೇಕಾಗಿದೆ.

೨೮ ಜನ ಲೋಕಸಭೆಯ ಹಾಗೂ ೧೦ ಜನ ರಾಜ್ಯಸಭೆಯ ಪ್ರತಿನಿಧಿಗಳನ್ನು ಹೊಂದಿದ ಕರ್ನಾಟಕವು ಕೇಂದ್ರದಿಂದ ಪಡೆಯುತ್ತಿರುವುದಾದರೂ ಏನು? ಈ ಹಿನ್ನೆಲೆಯಲ್ಲಿ ನಮ್ಮ ವಿಭಜಿತ ರಾಜ್ಯಗಳು ಅಲ್ಪ ಸದಸ್ಯರಿಂದ ಏನನ್ನು ಸಾಧಿಸಲು ಸಾಧ್ಯ! ನಮ್ಮ ದೇಶದ ವಿನೂತನ ಈಶಾನ್ಯ ರಾಜ್ಯಗಳ ಸ್ಥಿತಿಗತಿಗಳೇ ಇದಕ್ಕೊಂದು ನಿದರ್ಶನ.

ಹಾಗಾದರೆ ನಮ್ಮ ಮುಂದಿರುವ ದಾರಿಯಾವುದು? ಇದೊಂದು ಗೋಕಾಕ್ ಮಾದರಿಯ ಜನಪರ ಚಳುವಳಿಯಾಗುವ ಅವಶ್ಯಕತೆ ಇದೆಯೆ? ಹಾಗೊಂದು ಚಳುವಳಿಯಾದರೆ ಅದರ ಮುಂಚೂಣಿಯಲ್ಲಿದ್ದು ನಿಭಾಯಿಸುವ ಪ್ರಾಮಾಣಿಕ ಮುತ್ಸದ್ಧಿಗಳು ನಮ್ಮಲ್ಲಿದ್ದಾರೆಯೇ? ಈ ಕುರಿತು ಗಂಭೀರವಾಗಿ ಸಮಾಲೋಚಿಸಬೇಕಾಗಿದೆ.

**–ಎಂ.ಬಿ.ಪಾಟೀಲ,**

ಗುಲ್ಬರ್ಗ ದೂರದರ್ಶನದ ನಿವೃತ್ತ ಉಪ ನಿರ್ದೇಶಕರು ಮತ್ತು ಕೃಷಿಕರು, ಗುಲ್ಬರ್ಗ

---

## ಒಡೆಯುವುದು ಸುಲಭ, ಒಂದುಗೂಡಿಸುವುದು ಬಹು ಕಷ್ಟ.



ಪ್ರತ್ಯೇಕ ರಾಜ್ಯದ ಕೂಗು ಕೇವಲ ರಾಜಕೀಯ ಉದ್ದೇಶದ ಕೂಗಲ್ಲ. ಅಂಥ ಉದ್ದೇಶದ್ದಾಗಿದ್ದರೆ ಇಷ್ಟು ದಿನದ ಸಂಯಮ ಇದಕ್ಕೆ ಬೇಕಾಗಿರಲಿಲ್ಲವೆನಿಸುತ್ತದೆ. ಅಖಂಡ ಕರ್ನಾಟಕ ಸಮಸ್ತ ಕನ್ನಡಿಗರ ಅಸ್ಮಿತೆಯ ಕುರುಹು. ನಾಡು ಏಕೀಕರಣಗೊಂಡು ೫೮ ವರ್ಷಗಳಾಗಿವೆ. ಅದರ ಸುವರ್ಣ ಉತ್ಸವವನ್ನು ಸಂಭ್ರಮದಿಂದ ಆಚರಿಸಿದ್ದೂ ಆಗಿದೆ. ಆದರೆ ಅದರ ಒಳಸ್ತರದಲ್ಲಿ ಅಪಸ್ವರದ ಆಲಾಪವೊಂದು ತಣ್ಣಗೆ ಕೇಳಿಸುತ್ತಲೇ ಇದೆ. ಕರ್ನಾಟಕ ಒಂದು ಸಮುದಾಯವೆಂದು ಭಾವಿಸುವಲ್ಲಿ, ಪ್ರೀತಿಯಿಂದ ಒಪ್ಪಿ, ಅಪ್ಪಿಕೊಳ್ಳುವಲ್ಲಿ, ಸರ್ವ ಜನಾಂಗ, ಪ್ರದೇಶಗಳನ್ನು ವಿಕಾಸಗೊಳಿಸುವಲ್ಲಿ ತಿಳಿದೋ ತಿಳಿಯದೆಯೋ ತಾರತಮ್ಯವನ್ನು ಅನುಸರಿಸಿಕೊಂಡು ಬರುತ್ತಿರುವುದು ಈ ಅಪಸ್ವರಕ್ಕೆ ಕಾರಣವೆನಿಸಿದೆ.

ಅಭಿವೃದ್ಧಿ ಎನ್ನುವುದು ಮರೀಚಿಕೆಯಾಗಿ ಉತ್ತರ ಕರ್ನಾಟಕದ ಗ್ರಾಮೀಣ ಭಾಗಗಳು ಸಾವು–ಬದುಕಿನ ನಡುವೆ ತಹತಹಿಸುತ್ತಿವೆ. ನಿಸರ್ಗದ ನಿರಂತರ ಕಣ್ಣುಮುಚ್ಚಾಲೆಯಾಟದೊಂದಿಗೆ ರಾಜಕಾರಣಿಗಳ ಹುಸಿ ಭರವಸೆಗಳು, ಭ್ರಷ್ಟ ಅಧಿಕಾರಿ ವರ್ಗದವರ ಅಮಾನುಷ ಉಪೇಕ್ಷೆಗಳಿಂದ ಕಂಗೆಟ್ಟ ಜನ ಗೇಣು ಹೊಟ್ಟೆ–ಬಟ್ಟೆಗೆಂದು ಗುಳೆ ಹೋಗುತ್ತಿದ್ದಾರೆ. ಕೆಲವು ಕಡೆಗೆ ಹಸಿವಿಗಾಗಿ ಮಕ್ಕಳನ್ನು ಮಾರಿಕೊಳ್ಳುವ, ಹೆಣ್ಣುಮಕ್ಕಳು ವೇಶ್ಯಾವೃತ್ತಿಗಿಳಿವ ದುರಂತವೂ ಒಡೆದು ಕಾಣಿಸುತ್ತದೆ. ಇಲ್ಲಿನ ಭೌಗೋಳಿಕ ಸಂಪತ್ತು ಉಳ್ಳವರ ಪಾಲಾಗಿ ದಾರಿದ್ರ್ಯ ರೋಗ–ರುಜಿನಗಳು ಜೀವಪ್ರೀತಿಯನ್ನು ಆಪೋಶನ ತೆಗೆದುಕೊಳ್ಳುತ್ತಿವೆ. ಕುಡಿಯುವ ನೀರು, ರಸ್ತೆ, ಶೌಚಾಲಯ, ನಿರುದ್ಯೋಗ, ಪ್ರತಿಭಾ ನಿರ್ಲಕ್ಷ್ಯ ಇತ್ಯಾದಿ ಸಮಸ್ಯೆಗಳ ಚಡಪಡಿಕೆಯಿಂದ ಉತ್ತರ ಕರ್ನಾಟಕವು ರಕ್ತ ಕಣ್ಣೀರು ಸುರಿಸುತ್ತಿದೆ. ಒಳಗಣ್ಣುಗಳಿಗೆ ಮಾತ್ರ ಇದು ಗೋಚರಿಸುತ್ತದೆ

೨. ಡಾ. ನಂಜುಂಡಪ್ಪನವರು ಉತ್ತರ ಕರ್ನಾಟಕದ ೧೩ ಜಿಲ್ಲೆಗಳು ಅತ್ಯಂತ ಹಿಂದುಳಿದ ಜಿಲ್ಲೆಗಳೆಂದು ಸ್ಪಷ್ಟವಾದ ವರದಿ ಸಲ್ಲಿಸಿ, ಇವುಗಳ ಅಭಿವೃದ್ಧಿಗೆ ಹಲವಾರು ಸೂತ್ರಗಳನ್ನು ವಿಧಿಸಿದ್ದರು. ಆದರೆ ಇದೂವರೆಗೆ ೧೫% ರಷ್ಟು ಮಾತ್ರ ಪ್ರಗತಿಯನ್ನು ಸಾಧಿಸಲಾಗಿದೆಯೆಂದು ತಿಳಿದು ಬರುತ್ತಿದೆ. ನಂಜುಂಡಪ್ಪ ವರದಿ ಶಿಫಾರಸು ಅನುಷ್ಠಾನಗೊಳ್ಳುವಲ್ಲಿ ಇಚ್ಛಾಶಕ್ತಿಯ ಕೊರತೆ ಇದೆಯೆನ್ನುವುದಕ್ಕೆ ಇದು ಸಾಕ್ಷಿಯಾಗಿದೆ. ಇದರಿಂದ ಕೃಷ್ಣಾ ಮೇಲ್ದಂಡೆ ಯೋಜನೆ ಕುಂಟುತ್ತ ಸಾಗಿದೆ. ಇನ್ನುಳಿದ ಕ್ಷೇತ್ರಗಳಲ್ಲಿ ಅಭಿವೃದ್ಧಿ ಕನಸಿನ ಮಾತಾಗಿ ಪರಿಣಮಿಸಿದೆ. ಅಂದಂದಿನ ಲೆಕ್ಕಾಚಾರದಂತೆ ಅಭಿವೃದ್ಧಿಗೆ ಒತ್ತು ಕೊಟ್ಟು ನಿಗದಿ ಪಡಿಸಿದ ಹಣವನ್ನು ಬಜೆಟ್ನಲ್ಲಿ ತೆಗೆದಿರಿಸಿ ಕಾಲಕಾಲಕ್ಕೆ ಪೂರೈಸಿದ್ದರೆ ಫಲವಂತಿಕೆಯ ಅನುಭವದಿಂದ ಸಮಾಧಾನವಾಗುತ್ತಿತ್ತು. ಇಂದಿನ ಲೆಕ್ಕಾಚಾರವು ವರದಿಯ ಅನುಷ್ಠಾನವನ್ನು ತಲೆಕೆಳಗಾಗುವಂತೆ ಮಾಡಿದೆ. ಇದು ಪ್ರಾಮಾಣಿಕತೆಯ ಕೊರತೆಯೆನ್ನದೆ ವಿಧಿಯಿಲ್ಲ.

೩.ಪ್ರತ್ಯೇಕ ರಾಜ್ಯದ ಕೂಗಿಗೆ ಪ್ರತ್ಯೇಕ ರಾಜ್ಯ ಸ್ಥಾಪನೆ ಮಾತ್ರ ಉತ್ತರವಾಗಲಾರದು. ಹಾಗಾದರೆ ಅದಕ್ಕೆ ಯಾವುದೇ ಅರ್ಥವಿಲ್ಲ. ಆದರೆ ಈಗ ಕೇಳಿಬರುತ್ತಿರುವ ಪ್ರತ್ಯೇಕ ರಾಜ್ಯದ ಕೂಗು ತಮಾಷೆ ಅಥವಾ ಬೆದರಿಕೆಯದ್ದಲ್ಲ. ಬಹು ದಿನಗಳ ಹತಾಶೆಯ ಒಡಲಾಳದ್ದು. ಪ್ರತಿಯೊಬ್ಬರಿಗೂ ಸಮಪಾಲು–ಸಮಬಾಳು ದಕ್ಕಬೇಕಾಗಿದ್ದು ನ್ಯಾಯ. ಇದು ಪ್ರಜಾಪ್ರಭುತ್ವದ ಸಿದ್ಧಾಂತ ಮತ್ತು ಮೌಲ್ಯ ಕೂಡ. ನಮ್ಮನ್ನಾಳುವವರು ಯಾವುದೇ ರಾಜಕೀಯ ಪಕ್ಷ, ಮತ, ಜನಾಂಗವನ್ನು ಪ್ರತಿನಿಧಿಸಲಿ ಅದನ್ನೆಲ್ಲಾ ಮೀರಿ ಅವರು ಅಖಂಡ ಕರ್ನಾಟಕದ ಅಭಿವೃದ್ಧಿಗೆ ಶ್ರದ್ಧೆಯಿಂದ ಶ್ರಮಿಸಬೇಕು. ಒಂದು ಪ್ರದೇಶವನ್ನು ಸ್ವರ್ಗವಾಗಿಸುವ, ಮತ್ತೊಂದು ಪ್ರದೇಶವನ್ನು ನರಕ ಸದೃಶ್ಯವಾಗಿಸುವ ನಿಲವು ಸಂವಿಧಾನಕ್ಕೆ ಮಾಡಿದ ದ್ರೋಹವೇ. ಅನ್ಯಾಯಕ್ಕೂ ಒಂದು ಮಿತಿ ಇರುವಂತೆ ಸಹನೆಗೂ ಒಂದು ಮಿತಿಯಿದೆ. ಪ್ರತ್ಯೇಕತೆಯ ಬೇಡಿಕೆಗೆ ಇದು ಧ್ವನಿಯಾಗಿದೆ.

ಇಷ್ಟಕ್ಕೆ ಅಖಂಡ ಕರ್ನಾಟಕವನ್ನು ವಿಭಜಿಸಬೇಕೇ? ವಿಭಜಿಸಬೇಕೆಂದಾದರೆ ಏಕೀಕರಣದ ಉದ್ದೇಶವೇನು? ಹರಿದು ಹಂಚಿ ಹೋಗಿದ್ದ ಕನ್ನಡ ಸೀಮೆಗಳನ್ನು ಒಂದುಗೂಡಿಸಿದ್ದು ಯಾಕೆ? ಪೂರ್ವಾಗ್ರಹ ಪೀಡಿತ ಮನೋಧರ್ಮ, ಮಲತಾಯಿ ಧೋರಣೆ ಸಾಧುವೆ?

ಒಡೆಯುವುದು ಸುಲಭ, ಒಂದುಗೂಡಿಸುವುದು ಬಹು ಕಷ್ಟ. ಕಟ್ಟುವಾಗಿರುವ ಆತ್ಮವಿಶ್ವಾಸವನ್ನು ಬದುಕುವಾಗಿನ ಮನಸಾಕ್ಷಿಯನ್ನು ಪ್ರಮಾಣಬದ್ಧಗೊಳಿಸಿದರೆ ನಾಡು–ನುಡಿಯ ಹಿತ ಕಾಪಿಟ್ಟುಕೊಳ್ಳಲು ಸಾಧ್ಯ. ಭೌಗೋಳಿಕವಾಗಿ ಗೆರೆಗಳನ್ನೆಳೆದು ಪ್ರತ್ಯೇಕವಾಗುವುದರ ಹಠಮಾರಿತನವೂ ಸಮನಾಗಿ ಹಂಚಿ ಸುಖಿಸದ ದುರ್ಯೋಧನ ಮನಸ್ಥಿತಿಯೂ ದುರಂತದ ಸರಮಾಲೆ ತರುವುದರ ಸೂಕ್ಷ್ಮಗಳನ್ನು ಸಮಸ್ತ ಕನ್ನಡಿಗರು ತುರ್ತಾಗಿ ಮಥಿಸಬೇಕಾದ ಸಂದರ್ಭವಿದು. ವೈಯಕ್ತಿಕ ಹಿಕಮತ್ತು, ಪರಸ್ಪರ ದೋಷಾರೋಪಣೆಗಳಿಂದ ಸಮಗ್ರತೆಯನ್ನು ತುಂಡರಿಸುವ ಬದಲು, ಅಸಮತೋಲನದ ರೂಕ್ಷ ಕೀಟಾಣುಗಳನ್ನು ಲಯವಾಗಿಸಿ ಪ್ರತಿಯೊಂದು ಕ್ಷೇತ್ರಕ್ಕೂ ಉಸಿರು ತುಂಬಿ ಹಚ್ಚಹಸಿರುಗೊಳಿಸುವ ಸಂಚಲನದ ಕಾಳಜಿ ನಮ್ಮದಾಗಬೇಕು. ಅಖಂಡ ಕರ್ನಾಟಕತ್ವ ಮೇರುಗಾಣಬೇಕು.

**–ಅಬ್ಬಾಸ್ ಮೇಲಿನಮನಿ**

ನಿವೃತ್ತ ಕನ್ನಡ ಉಪನ್ಯಾಸಕರು ಹಾಗೂ ಕವಿ, ಕಥೆಗಾರ, ಕಾದಂಬರಿಕಾರರು ಮತ್ತು ಪ್ರಗತಿಪರ ಚಿಂತಕರು, ಬಾಗಲಕೋಟೆ

‘ಹೊಸ ಮನುಷ್ಯ’ ಪತ್ರಿಕೆಗೆ
ಐದನೇ ವರ್ಷಕ್ಕೆ ಕಾಲಿಡುತ್ತಿರುವ ಶುಭ ಸಂದರ್ಭದಲ್ಲಿ
ಹುಟ್ಟುಹಬ್ಬದ ಶುಭಾಶಯಗಳು



**ಪಾಪ ಮತ್ತು ಪಾದರಸಗಳನ್ನು ಅರಗಿಸಿಕೊಳ್ಳುವುದು ಬಹಳ ಕಷ್ಟ**

–ರಾಮಕೃಷ್ಣ ಪರಮಹಂಸ

**ಹೋಟೆಲ್ ವಿಶ್ವ ರೆಸಾರ್ಟ್**

ಮಾಲೀಕರು: **ನಾರಾಯಣ ಶೆಟ್ಟಿ**
**ಮತ್ತು ಕುಟುಂಬ**
**ಮಮ್ಮಿಗಟ್ಟಿ ಗ್ರಾಮ**
**ಪವರ್ ಗ್ರಿಡ್ ಎದುರು**
**ಧಾರವಾಡ ತಾಲ್ಲೂಕು**

## ಪುಸ್ತಕಾವಲೋಕನ

ಪು: **ನಮ್ಮ ಸಮಾಜವಾದಿಗಳು** ಸಂ: **ಡಿ.ಎಸ್. ನಾಗಭೂಷಣ,** ಪ್ರ: **ಸಮತ ಪ್ರಕಾಶನ,** ಚಾಮರಾಜನಗರ ಪು: **೨೦೫,** ಬೆಲೆ: **ರೂ.೧೫೦/-**

# ಕ್ರಿಯಾಶೀಲ ನೆಲೆ – ಒತ್ತಾಸೆಗಳ ಸೂಚಿ




"ನಮ್ಮ ಸಮಾಜವಾದಿಗಳು" ಪುಸ್ತಕವನ್ನು ಸಮೀಕ್ಷಿಸುವುದೆಂದರೆ ನಮ್ಮನ್ನು, ನಮ್ಮ ಕಾಲವನ್ನು ಕೂಡ ಸಮೀಕ್ಷಿಸುವುದೆಂದೇ ಅರ್ಥ. ನಿನ್ನೆಯ ತಕ್ಷಣದ ಇತಿಹಾಸ ಮತ್ತು ಈವತ್ತಿನ ಮಧ್ಯಾಹ್ನದ ಸಮಕಾಲೀನತೆ ಎರಡೂ ಒಟ್ಟಿಗೇ ಅನುಭವಕ್ಕೆ ಬರುವಷ್ಟು ಇಲ್ಲಿನ ವ್ಯಕ್ತಿಚಿತ್ರಗಳು ಈಗಾಗಲೇ ನಮಗೆ ಆತ್ಮೀಯ. ಕೆಲವರಂತೂ ನಮ್ಮ ವ್ಯಕ್ತಿತ್ವದ, ಪ್ರಜ್ಞೆಯ ಒಂದು ಭಾಗ. ಇಂತವರೆಲ್ಲ ನಮ್ಮ ತಾಯಿ – ತಂದೆಗಳ ತಲೆಮಾರಿನಲ್ಲಿದ್ದು, ನಮ್ಮ ಸಮಕಾಲೀನರು ಕೂಡ ಆಗಿದ್ದು ನಾವು ಒಂದು ನೆಮ್ಮದಿಯ ಸಮಾಜವನ್ನು ಕಟ್ಟಲು ಸಾಧ್ಯವಾಗಲಿಲ್ಲವಲ್ಲ ಎಂಬ ಕೊರಗು ಯಾರಿಗಾದರೂ ಮೂಡುತ್ತದೆ.

ಈ ಪುಸ್ತಕದಲ್ಲಿ ಸುಮಾರು ೪೫ ಜನ ಕರ್ನಾಟಕದ ಸಮಾಜವಾದಿಗಳನ್ನು ಪರಿಚಯಿಸಲಾಗಿದೆ. ಇವರಲ್ಲಿ ಕರ್ನಾಟಕದಲ್ಲಿ ಸಮಾಜವಾದಿ ಆಂದೋಲನಕ್ಕೆ ಅಡಿಗಲ್ಲು ಹಾಕಿದ ಕಮಲಾದೇವಿ ಚಟ್ಟೋಪಾಧ್ಯಾಯರಿಂದ ಹಿಡಿದು, ಈ ಆಂದೋಲನವನ್ನು ಕಟ್ಟಿದ ಗೋಪಾಲಗೌಡರು, ಸದಾಶಿವರಾಯರು, ಪದಕಿ ವಕೀಲರು, ನೀಲಗಂಗಯ್ಯ ಪೂಜಾರರು ಸೇರಿದಂತೆ, ಆಂದೋಲನಕ್ಕೆ ಒಂದು ಬೌದ್ಧಿಕ ಬೆಡಗು ನೀಡಿದ ತೇಜಸ್ವಿ, ನಂಜುಂಡಸ್ವಾಮಿಯವರವರೆಗೆ ವಿವಿಧ ತಲೆಮಾರುಗಳ ಸಮಾಜವಾದಿಗಳು ಸೇರಿದ್ದಾರೆ. ಜೊತೆಗೆ ಸಮಾಜವಾದಿ ಆಂದೋಲನದ ಎರಡು ವಿಶಿಷ್ಟ ನೆನಪಿನ ಲೇಖನಗಳನ್ನೂ ಈ ಪುಸ್ತಕ ಒಳಗೊಂಡಿದ್ದು, ಕರ್ನಾಟಕದ ಸಮಾಜವಾದಿ ಆಂದೋಲನ ಕುರಿತಂತೆ ಒಂದು ಸರಿ ಸುಮಾರಾದ ಸಮಗ್ರ ಚಿತ್ರ ನೀಡುತ್ತದೆ. ಇಲ್ಲಿ ಈ ಲೇಖನಗಳನ್ನು ಬರೆದಿರುವವರಲ್ಲಿ ಈ ಸಮಾಜವಾದಿಗಳನ್ನು ಹತ್ತಿರದಿಂದ ಬಲ್ಲವರು ಮತ್ತು ಅವರ ಬಗ್ಗೆ ಪ್ರೀತಿಯಿಟ್ಟು ವಿಷಯ ಸಂಗ್ರಹಿಸಿ ಬರೆದವರೂ ಸೇರಿದ್ದು, ಬಹಳಷ್ಟು ಬರಹಗಳಲ್ಲಿ ಒಂದು ವಿಮರ್ಶಾತ್ಮಕ ದೂರವನ್ನೂ ಕಾಪಾಡಿಕೊಳ್ಳಲಾಗಿರುವುದು ಒಂದು ವಿಶೇಷ.

ಇಲ್ಲಿ ಪರಿಚಯವಾಗಿರುವ ಬಂಧುಗಳಲ್ಲಿ ಕೆಲವರು ಅಧ್ಯಯನ, ಶಿಕ್ಷಣ, ಧೀಮಂತರೊಡನೆ ಒಡನಾಟದ ಪ್ರಭಾವದಿಂದಾಗಿ ಸಮಾಜವಾದಿಗಳಾದವರು. ಮತ್ತೆ ಕೆಲವರು ಜೀವನಾನುಭವದ ಹಿನ್ನೆಲೆಯಲ್ಲಿ, ತಾವು ಕಂಡ ಕಷ್ಟ ಸುಖಗಳ ಬೆಳಕಿನಲ್ಲಿ ಸಮಾಜವಾದಿಗಳಾದವರು. ಇಬ್ಬರಿಗೂ ಸಮಾನವಾದ ಒಂದಂಶವೆಂದರೆ, ಕಾಳಜಿ, ಕಳಕಳಿಯೆಲ್ಲ ತಮ್ಮ ಜೊತೆ ಬದುಕುತ್ತಿರುವವರ ನಾನಾ ರೀತಿಯ ಅವಕಾಶವಿಹೀನತೆಗಳ ಬಗ್ಗೆ. ಈಗ ಹಿನ್ನೋಟದಲ್ಲಿ ಕೆಲವರ ಆತ್ಮಪ್ರತ್ಯಯ ಹೆಚ್ಚಿದೆಯೆನಿಸಬಹುದು. ಇನ್ನು ಕೆಲವರು ವ್ಯಕ್ತಿವಾದಿಗಳಾಗಿ, ಅರಾಜಕತಾವಾದಿಗಳಾಗಿ ಕಾಣಬಹುದು. ಆದರೆ ಎರಡೂ ವರ್ಗದವರಲ್ಲೂ ಒಂದೇ ರೀತಿಯ ನಿಸ್ಪೃಹತೆ. ತಮ್ಮ ವ್ಯಕ್ತಿತ್ವದಲ್ಲಿ, ಕಾಳಜಿಯಲ್ಲಿ, ಹಿನ್ನೆಲೆಯಲ್ಲಿ ಒಟ್ಟು ಸಮಾಜಕ್ಕೆ ಏನನ್ನಾದರೂ ಕೊಡುವುದು ಇದೆ. ಕೊಟ್ಟೇಕೊಡಬೇಕು ಎಂಬ ತವಕ – ತಳಮಳ, ಕಣ್ಣೆದುರುಗಿನ ಅನ್ಯಾಯವನ್ನು ಆ ಕ್ಷಣದಲ್ಲೇ ಪ್ರತಿಭಟಿಸುವ ತಹತಹ.

ಭೂಸುಧಾರಣೆಗಾಗಿ ಹೋರಾಡಿದವರೆಂದು ಇವರು ದೊಡ್ಡವರಲ್ಲ. ಅಷ್ಟಕ್ಕೇ ಆಗಿದ್ದರೆ ಯಥಾಪ್ರಕಾರದ ಸಮಾಜವಾದಿಗಳಾಗುತ್ತಿದ್ದರು. ಸಮಾಜವಾದಿ ಪ್ರಜ್ಞೆ ಎಂಬುದು ಇಲ್ಲಿ ಕೆಲವರಲ್ಲಿ ಸ್ವಭಾವದಲ್ಲಿ ಎಷ್ಟು ಅಂತರ್ಗತವಾಗಿದೆಯೆಂದರೆ, ಕಾನೂನು ಜಾರಿಗೆ ಬರುವ ಮುನ್ನವೇ ಸ್ವಯಂಪ್ರೇರಣೆಯಿಂದ ಗೇಣಿದಾರರಿಗೆ ಜಮೀನನ್ನು ಹಂಚುವಷ್ಟು. ಸಮಾಜವಾದಿ ಪ್ರಜ್ಞೆಯ ವೈಶಿಷ್ಟ್ಯವೆಂದರೆ, ನಮ್ಮ ಜೊತೆಯೇ ಇರುವ ಅವಕಾಶವಿಹೀನರಿಗೆ ಅವಕಾಶಗಳನ್ನು ಒದಗಿಸಿಕೊಟ್ಟು ಸ್ವಾವಲಂಬಿ, ಸ್ವಯಂಪೂರ್ಣರನ್ನಾಗಿ ಮಾತ್ರ ಮಾಡುವುದಷ್ಟೇ ಅಲ್ಲ. ಅವರ ಪ್ರಗತಿ, ನೆಮ್ಮದಿಯನ್ನು ಕಂಡು ಸಂತೋಷಪಡುವಷ್ಟು ಹೃದಯ ಶ್ರೀಮಂತಿಕೆಯೂ ಇರಬೇಕಾಗುತ್ತದೆ. ಹೀಗೆ ಹೊಸವರ್ಗಗಳು ಈಗಾಗಲೇ ಉಳ್ಳವರಿಗೆ, ಅದೃಷ್ಟವಂತರಿಗೆ ಸಮಾನರಾಗುವಾಗ ತೋರುವ ಆತುರ, ಮಾಡುವ ತಪ್ಪುಗಳ ಬಗ್ಗೆ ಇತಿಹಾಸಪ್ರಜ್ಞೆ ತುಂಬಿದ ಔದಾರ್ಯವೂ ಇರಬೇಕಾಗುತ್ತದೆ. ಇಲ್ಲಿ ದಾಖಲಾಗಿರುವ ಬಹುಪಾಲು ಧೀಮಂತರ ವೈಯುಕ್ತಿಕ – ಕೌಟುಂಬಿಕ ಜೀವನ ಮೂರಾಬಟ್ಟೆಯಾಗಿದೆ. ಅಶಿಸ್ತಿನಿಂದ ಕೂಡಿದೆಯಲ್ಲ, ಕೊನೆಗೆ ಹೀಗಾಯಿತಲ್ಲ ಎಂದೆನಿಸಿದರೂ, ತಮ್ಮ ತಮ್ಮ ವರ್ಗ – ಜಾತಿಪ್ರಜ್ಞೆಯನ್ನು ಮೀರುವುದರಿಂದ ಬರುವ ಸಂತೋಷ, ಬಿಡುಗಡೆ, ಆತ್ಮವಿಶ್ವಾಸಗಳು ಕೂಡ ಈ 'ವ್ಯಕ್ತಿತ್ವ'ಗಳಲ್ಲಿ 'ನೋಡುವವರ' ಕಣ್ಣಿಗೆ ಖಂಡಿತ ಗೋಚರವಾಗುತ್ತದೆ. ಹೀಗಲ್ಲದಿದ್ದರೆ ತಾವು ಇರುವ ಊರುಗಳಲ್ಲೇ, ಪಟ್ಟಣಗಳಲ್ಲೇ ಯಜಮಾನರಾಗಿರುವವರ ವಿರುದ್ಧ ಒಬ್ಬ ನಾಗಪ್ಪ, ಒಬ್ಬ ರಾಚಪ್ಪ ಹಡಪದ, ಒಬ್ಬ ವೀರಣ್ಣ ತಿಮ್ಮಾಜಿ ಬಂಡೇಳುವುದೆಂದರೇನು – ಈ ವ್ಯಕ್ತಿಚಿತ್ರಗಳನ್ನು ಒಟ್ಟಿಗೇ ಓದುವಾಗ ನಮಗೆ ಸ್ಪಷ್ಟವಾಗುವ ಇನ್ನೊಂದು ಸಂಗತಿಯೆಂದರೆ ಉತ್ತಮ ಶಿಕ್ಷಣ, ಸಾಮಾಜಿಕ ಹಿನ್ನೆಲೆ, ಆರ್ಥಿಕ ಶ್ರೀಮಂತಿಕೆಯ ಬೆಂಬಲದ ಒತ್ತಾಸೆಯಿರುವವರೆಲ್ಲರಲ್ಲೂ ಇರುವ ಕೆಳಜಾತಿ, ಕೆಳವರ್ಗಗಳಿಂದ ಕಾರ್ಯಕರ್ತರನ್ನು, ನಾಯಕತ್ವವನ್ನು ರೂಪಿಸಬೇಕೆಂಬ ಪ್ರಾಮಾಣಿಕ ಬಯಕೆ. ಹೀಗೆ ರೂಪುಗೊಂಡ ಕಾರ್ಯಕರ್ತರು, ನಾಯಕರಲ್ಲಿ ರಾಜ್ಯ – ರಾಷ್ಟ್ರಮಟ್ಟದ ಪ್ರಸಿದ್ಧಿ ಪಡೆದವರು ಮಾತ್ರ ಇಲ್ಲಿ ದಾಖಲಾಗಿದ್ದಾರೆ. ಹೀಗೆ ದಾಖಲಾಗದ ಸಾವಿರಾರು ಕಾರ್ಯಕರ್ತರು, ನಾಯಕರು ಕೂಡ "ನಮ್ಮ ಸಮಾಜವಾದಿಗಳೇ". ಅಂತಹ ಕಾರ್ಯಕರ್ತರು, ನಾಯಕರ ಜೀವನಶೈಲಿ ಕೂಡ ಸಮಾಜವಾದಿ ಆಶಯದಿಂದಲೇ ತುಂಬಿರುತ್ತದೆ. ನಿಜ ಹೇಳಬೇಕೆಂದರೆ ನಾವು ಮನಸಾರೆ ಬಯಸುವ ಆಶಯಗಳು ಹೀಗೆ ಸಮಾಜದ ನಾನಾ ಸ್ತರದ ಜನಗಳ ವೈಯುಕ್ತಿಕ – ಕೌಟುಂಬಿಕ ಜೀವನದಲ್ಲಿ ಹೊಸ ಬೆಳಕು ಮತ್ತು ಅರ್ಥ ಕಾಣಿಸಿದಾಗಲೇ – ಅದಕ್ಕೊಂದು ಪ್ರಭೆ ಬರುವುದು.

ಈ ಸಮೀಕ್ಷೆ ಬರೆಯುವ ಮುನ್ನ ಯೋಚಿಸುತ್ತಿದ್ದಾಗ ಓದುಗರಿಗೆ ಪರಿಚಯಿಸಲೆಂದು ಬೇರೆ ಬೇರೆ ಸ್ವಭಾವದ ಬೇರೆ ಬೇರೆ ವ್ಯಕ್ತಿಗಳನ್ನು ಉದಾಹರಿಸಲೇ, ಉದ್ದೇಶಿಸಲೇ ಎಂದು ಮತ್ತೆ ಮತ್ತೆ ಯೋಚಿಸಿದೆ. ಹಾಗೆ ಮಾಡುವುದು ತಪ್ಪೆಂದು ನನಗೆ ಹೊಳೆಯಿತು. ಏಕೆಂದರೆ ಇಲ್ಲಿ ದಾಖಲಾಗಿರುವ ಪ್ರತಿಯೊಬ್ಬರೂ ಇನ್ನೊಬ್ಬರಲ್ಲಿ ಹಾಸುಹೊಕ್ಕಾಗಿದ್ದಾರೆ. ತಮ್ಮ ತಮ್ಮ ವ್ಯಕ್ತಿತ್ವದ ಪೂರ್ಣತೆಯನ್ನು ಇನ್ನೊಬ್ಬರಲ್ಲಿ, ಸಂಘಟನೆಯಲ್ಲಿ, ಸಮುದಾಯದಲ್ಲಿ ಕಂಡುಕೊಂಡಿದ್ದಾರೆ. ಹಾಗೆ ನೋಡಿದರೆ ಇಲ್ಲಿ ದಾಖಲಾಗಿರುವ ವ್ಯಕ್ತಿತ್ವ ಒಂದೇ, ಎಲ್ಲರ ಸ್ವಭಾವದ ಮೂಲಕ, ಕೆಲವರ ಧೀಮಂತಿಕೆ, ಅರ್ಥಪೂರ್ಣತೆಯ ಮೂಲಕ, ಇನ್ನು ಕೆಲವರ ಹತಾಶೆ ಸೋಲುಗಳ ಮೂಲಕ. ಒಂದು 'ಅಭಿನ್ನ' ವ್ಯಕ್ತಿತ್ವದ ಕಲ್ಪನೆ, ಆ ವ್ಯಕ್ತಿತ್ವ ಕನವರಿಸಿದ ರೀತಿ, ಕ್ರಿಯಾಶೀಲತೆಯ ಮೂಲಕ ಮುಪ್ಪರಿಗೊಂಡ ಪರಿ ನಮಗೆ ಮತ್ತೆ ಮತ್ತೆ ಸ್ಪಷ್ಟವಾಗುತ್ತದೆ.

ಜೀವನ ಸೌಂದರ್ಯದ ಹಂಬಲ ಮತ್ತು ಗಾಢವಾದ ಸೌಂದರ್ಯಪ್ರಜ್ಞೆ ಇಲ್ಲಿಯ ಚಿತ್ರಗಳಲ್ಲಿ ವ್ಯಕ್ತವಾಗುವ ರೀತಿಯೇ ಅಪೂರ್ವವಾದದ್ದು. ಸೌಂದರ್ಯಪ್ರಜ್ಞೆ ಎಂಬುದು ಕೇವಲ ಕಲೆ – ಸಾಹಿತ್ಯದ ಅಭಿವ್ಯಕ್ತಿ, ಆಸಕ್ತಿಗಳಲ್ಲಿ ಮಾತ್ರ ಕಾಣಬೇಕಾಗಿಲ್ಲ. ಸಮಾನತೆಯ, ನೆಮ್ಮದಿಯ ಒಂದು ಸಮಾಜವನ್ನು ಬಯಸುವುದು, ಪ್ರತಿಭಟನೆಯಲ್ಲು ಜೀವನ ದರ್ಶನವನ್ನು ಕಾಣುವುದು– ಇತಿಹಾಸದ ಚಲನೆಯ ಭಾಗವಾಗುವುದು – ಇಂತಹ ನೆಲೆಗಳಲ್ಲೂ ಜೀವನದ ಸೌಂದರ್ಯ ವ್ಯಕ್ತವಾಗುತ್ತದೆ. 'ಮೂರಾಬಟ್ಟೆ' ಆಗಿಹೋಯಿತಲ್ಲ ಇಂತಿಂತವರ ಜೀವನ ಎಂದು ನಾವು ನಿರಾಶೆ ಪಡುವಾಗ, ಇಂತವರಿಗೆಲ್ಲ ಜೀವನ ಸೌಂದರ್ಯ ಈ ನೆಲೆಗಳಲ್ಲಿ ಸಾಕ್ಷಾತ್ಕಾರವಾಗಿರುತ್ತದೆ ಎಂಬುದನ್ನು ಕೂಡ ಮರೆಯಬಾರದು. ಸಂವೇದನಾಶೀಲರಾದವರ, ಸೂಕ್ಷ್ಮ ಮನೋಪ್ರವೃತ್ತಿಯುಳ್ಳವರ, ಇತಿಹಾಸದ ಕನಸಿಗೆ ತೆತ್ತುಕೊಂಡವರ ಬದುಕಿನ – ವೈಯುಕ್ತಿಕ – ಕೌಟುಂಬಿಕ – ಎರಡೂ ಲಯಗಳು ಕೂಡ ಮಧ್ಯಮವರ್ಗದ ಶಿಸ್ತು, ಸಭ್ಯತೆ, ನಿಯಮಬದ್ಧತೆಯಿಂದ ವಿಮುಖವಾಗಿರುತ್ತದೆ. ಇಂತವರ ಜೀವನದ ವೈಯುಕ್ತಿಕ ದೌರ್ಬಲ್ಯ – ಸೋಲುಗಳನ್ನು ಮನ್ನಿಸಬೇಕು ಎಂದು ಇದರ ಅರ್ಥವಲ್ಲ. ಇದೇ ಮಹಾಪರಾಧವಲ್ಲ ಮತ್ತು ಒಂದು ಚಳುವಳಿ, ಸಂಘಟನೆ, ಇಂತಹ ವಿಕ್ಷಿಪ್ತತೆ, ವಕ್ರತೆಗಳಿಂದಲೂ ತನ್ನ ಬೆಳವಣಿಗೆಗೆ, ಜೀವಂತಿಕೆಗೆ ಬೇಕಾದ್ದನ್ನು ಹೀರಿಕೊಳ್ಳುತ್ತದೆ

ಎಂಬುದನ್ನು ಮರೆಯಬಾರದಷ್ಟೇ. ಏನೇ ಆದರೂ ಇಂತವರನ್ನೆಲ್ಲ ಹಣ, ಮದ್ಯದ ಲಂಪಟತೆಯಿಂದ ಮಲಿನಗೊಂಡವರೆಂದೋ, ಪಥಭ್ರಷ್ಟರೆಂದೋ ಮಾತ್ರವೇ ನೋಡುವುದು, ಮನುಷ್ಯ ಸ್ವಭಾವದ ಬಗ್ಗೆ ನಮಗಿರುವ ಅಸ್ಪಷ್ಟ ತಿಳುವಳಿಕೆಯನ್ನು ಮಾತ್ರ ಸೂಚಿಸುತ್ತದೆ.

ಸಮಾಜವಾದಿ ಪಕ್ಷಗಳಿಂದ ವಲಸೆ ಹೊರಟೋ, ಇಲ್ಲ ತಾತ್ಕಾಲಿಕವಾಗಿಯೋ ಬೇರೆ ಸಂಘಟನೆಗಳೊಡನೆ ಸರ್ಕಾರಗಳೊಡನೆ ಕೆಲಸ ಮಾಡಿದವರನ್ನು/ಕೆಲಸ ಮಾಡುತ್ತಿರುವವರನ್ನು ಕುರಿತು ಸಿನಿಕತನದಿಂದಲೇ ಟೀಕೆ ಮಾಡುವ ಅಗತ್ಯವಿಲ್ಲ. ವೈಯುಕ್ತಿಕ ಮಹತ್ವಾಕಾಂಕ್ಷೆಯನ್ನು ಈಡೇರಿಸಿಕೊಳ್ಳಲು, ಆಸ್ತಿಪಾಸ್ತಿ ಸಂಗ್ರಹಿಸಲು ಹೊರಟವರ ಬಗ್ಗೆ ಟೀಕೆ ಸರಿ ಮತ್ತು ಅಗತ್ಯ. ಒಂದು ರಾಜಕೀಯ ಸಂದರ್ಭದಲ್ಲಿ ಅನಿವಾರ್ಯವಾಗಿ ಕೆಲಸ ಮಾಡಬೇಕಾಗಿ ಬಂದ ಜಾರ್ಜ್ ಫರ್ನಾಂಡಿಸ್, ನಿತೀಶ್ ಕುಮಾರ್‌ರಂತವರನ್ನು, ಬಂಗಾರಪ್ಪ, ಯಾದವ ತ್ರಿಮೂರ್ತಿಗಳನ್ನೂ ಒಂದೇ ತಕ್ಕಡಿಯಲ್ಲಿ ತೂಗುವುದು ಔಚಿತ್ಯಪೂರ್ಣವಲ್ಲ.

ಈ ಸಂಪುಟದ ಸಂಪಾದಕರಿಗೂ, ವ್ಯಕ್ತಿಚಿತ್ರಗಳನ್ನು ಬರೆದ ಇತರ ಲೇಖಕರಿಗೂ ಕಾರ್ಯಕರ್ತರು, ನಾಯಕರು ವಿರೋಧ ಪಕ್ಷದಲ್ಲಿದ್ದಾಗ, ಹೋರಾಟ ಮಾಡುವಾಗ, ಇರುವಷ್ಟು ಪ್ರೀತಿ – ಗೌರವ ಅವರು ಅಧಿಕಾರದ ಹತ್ತಿರಕ್ಕೆ ಬಂದಾಗ ಇರುವಂತೆ ಕಾಣುವುದಿಲ್ಲ. ಸಂಘಟನಾತ್ಮಕ ಮತ್ತು ವೈಯುಕ್ತಿಕ ಮಹತ್ವಾಕಾಂಕ್ಷೆ ಇಲ್ಲದವರು ಯಶಸ್ವಿ ನಾಯಕರಾಗಿ ರೂಪುಗೊಂಡದ್ದು ಯಾವ ಪಕ್ಷದ ಇತಿಹಾಸದಲ್ಲೂ ಇಲ್ಲ. ಮೊದಲೇ ಸೂಚಿಸಿದ ಹಾಗೆ ತನ್ನ ಕಾರ್ಯಕರ್ತರ ಮಹತ್ವಾಕಾಂಕ್ಷೆಯ ಈ ಸ್ವರೂಪವನ್ನು ಗುರುತಿಸುವ/ಬೆಳೆಸುವ ಸ್ವರೂಪದಲ್ಲಿ ಸಮಾಜವಾದೀ ಪಕ್ಷ, ಸಂಘಟನೆ ಇರಲಿಲ್ಲ. ಮತ್ತು ಆ ದಿಕ್ಕಿನಲ್ಲಿ ಯೋಚಿಸಲೂ ಇಲ್ಲವೆನಿಸುತ್ತದೆ.

ಕಮಲಾದೇವಿ, ಶಾಂತವೇರಿ, ದಿನಕರ ದೇಸಾಯಿ, ಪೂರ್ಣಚಂದ್ರ ತೇಜಸ್ವಿ – ಇಂತಹ ಚಿಂತಕರನ್ನು/ ನಾಯಕರನ್ನು ಒಳಗೊಂಡಿದ್ದ ಸಮಾಜವಾದೀ ಸಂಘಟನೆ/ಪಕ್ಷ ಏಕೆ ಒಂದು ಹಂತದ ನಂತರ ಕೇವಲ ಆರ್ಥಿಕ ವಿಚಾರಗಳನ್ನು ಮಾತ್ರ ಕೈಗೆತ್ತಿಕೊಳ್ಳುವ ಚಿಂತನಾಲಹರಿಯನ್ನು ಮಾತ್ರ ಪ್ರತಿನಿಧಿಸುವಂತೆ ಕಂಡಿತು? ಸಮಾಜವಾದಿ ಹಿನ್ನೆಲೆಯಿಂದಲೇ ಮೂಡಿಬಂದ ಹಿಂದುಳಿದ ಜಾತಿಗಳವರು – ಮಧ್ಯಮ ಜಾತಿಗಳಾಗುವತನಕ ಸಮಾಜದಿಂದ/ಸರಕಾರದಿಂದ ಅನುಕೂಲ, ಸವಲತ್ತುಗಳನ್ನು ಪಡೆದ ಮೇಲೆ ಏಕೆ ತಮ್ಮ ಜೀವನ ಶೈಲಿ/ಲೋಕದೃಷ್ಟಿಯಲ್ಲಿ ಮೇಲುಜಾತಿ ವರ್ಗದವರಿಗೇ ಸಮೀಪವಾಗಿರಲು ಪ್ರಯತ್ನಿಸುತ್ತಾರೆ – ಎಂಬ ಪ್ರಶ್ನೆ ಇಲ್ಲಿಯ ನಿಸ್ಪೃಹ ವ್ಯಕ್ತಿಗಳನ್ನು ಕುರಿತು ಓದುವಾಗ ನಮ್ಮ ಮನಸ್ಸಿನಲ್ಲಿ ಮೂಡುತ್ತದೆ, ಖೇದವೆನಿಸುತ್ತದೆ.

ಒಂದು ಪಕ್ಷ/ವೈಚಾರಿಕ ಸಂಘಟನೆಯ ಕಾರ್ಯಕರ್ತರನ್ನೇ ಕುರಿತು ಕನ್ನಡದಲ್ಲಿ ಈ ರೀತಿಯ ಸಂಪುಟಗಳು ಹೊರಬಂದಿಲ್ಲ. ಸ್ವಾತಂತ್ರ್ಯ ಹೋರಾಟಗಾರರನ್ನು ಕುರಿತು ಇಂತಹ ಸಂಪುಟಗಳನ್ನು ರಾಜ್ಯ ಸರಕಾರವೇ ಪ್ರಕಟಿಸಿದ್ದರೂ. ಆವಾಗಿನ ಉದ್ದೇಶ – ಸ್ವರೂಪವೇ ಬೇರೆಯಾಗಿತ್ತು. ಶಾಂತವೇರಿಯವರ ಪ್ರಕಟಿತ ದಿನಚರಿ ಮತ್ತು ಅವರ ಒಡನಾಡಿಗಳ ವಲಯದ ಸ್ವರೂಪವು ಸೂಚಿಸುವ ಹಾಗೆ, ಆ ತಲೆಮಾರಿನ ಸಮಾಜವಾದಿಗಳಲ್ಲಿದ್ದ ಬೇರೆ ಬೇರೆ ವೃತ್ತಿಯ, ಹಿನ್ನೆಲೆಯ ಜನ, ಭಾಷಿಕ ಅಲ್ಪಸಂಖ್ಯಾತರು, ಮತ್ತು ನಗರ ಪ್ರದೇಶಗಳ ಕಾರ್ಯಕರ್ತರನ್ನು ಮುಂದಿನ ಸಂಪುಟ ಒಳಗೊಳ್ಳಲಿ ಎಂದು ಆಶಿಸಬಹುದು. ಕಿರು ಪತ್ರಿಕೆಯೊಂದು ತನಗಿರುವ ಸೀಮಿತ ಸಂಪನ್ಮೂಲದಲ್ಲೇ – ಇಂತಹದೊಂದು ಸಂಪುಟವನ್ನು, ರೂಪಿಸಿರುವುದು – ನಮ್ಮ ಸಾಂಸ್ಕೃತಿಕ ಕ್ಷೇತ್ರದಲ್ಲಿ ಕ್ರಿಯಾಶೀಲ ನೆಲೆ – ಒತ್ತಾಸೆಗಳು ಎಲ್ಲಿವೆ ಎಂಬುದನ್ನು ಸೂಚಿಸುತ್ತದೆ. ಸಂಪಾದಕರಿಗೂ, ಲೇಖಕರಿಗೂ ಅಭಿನಂದನೆಗಳು.

**–ಕೆ.ಸತ್ಯನಾರಾಯಣ**



**(ವರಮಾನ ತೆರಿಗೆ ಆಯುಕ್ತರಾಗಿ ನಿವೃತ್ತರಾಗಿ ಬೆಂಗಳೂರಿನಲ್ಲಿ ನೆಲೆಸಿರುವ ಈ ಲೇಖಕರು ಕನ್ನಡದ ಕಥೆ, ಕಾದಂಬರಿ, ಪ್ರಬಂಧ, ಅಂಕಣ ಬರಹ, ಪ್ರವಾಸ ಕಥನ, ವಿಮರ್ಶೆ ಹೀಗೆ ಹಲವು ಪ್ರಕಾರಗಳಲ್ಲಿ ಕೆಲಸ ಮಾಡಿ ಹೆಸರು ಮಾಡಿದವರಾಗಿದ್ದಾರೆ)**


ಶುಭಾಶಯಗಳೊಂದಿಗೆ-

# ಜಿಲ್ಲಾ ಬಾಲಭವನ, ದಾವಣಗೆರೆ

## –:ಸಂಪನ್ಮೂಲ ವ್ಯಕ್ತಿಗಳು:–

**ದೊಗ್ಗಳ್ಳಿಗೌಡ್ರು ಪುಟ್ಟರಾಜು, ಎಂ. ಗುರುಸಿದ್ದಸ್ವಾಮಿ, ಕಲಿವೀರ ಕಳ್ಳೀಮನಿ, ಎ. ಹೆಚ್. ವಿವೇಕಾನಂದಸ್ವಾಮಿ, ಆರ್. ಬಿ. ಹನುಮಂತಪ್ಪ, ಪ್ರಶಾಂತ್‌ರಾಜ್, ಗಿರೀಶ್ ಎಸ್ ದೇವರಮನೆ, ಉಮೇಶ್‌ಬಾಬು, ಪ್ರಹ್ಲಾದ್ ಎಸ್ ಭಟ್, ಪ್ರತಿಭಾ ಪಿ ದೊಗ್ಗಳ್ಳಿ, ಯು. ಕೆ. ಉಗ್ರಪ್ಪ, ರಾಧಾ ಪಿ. ಎಸ್, ಎನ್. ಬಿ. ಲೀಲಾ, ಹೆಚ್. ಎನ್ ಶೋಭಾ.**

ಲಹರಿ...

# ದಯವಿಟ್ಟು ಕ್ಷಮಿಸಿ!

–ಎಂ.ಬಿ. ನಟರಾಜ್

ನಮ್ಮ ಬುದ್ಧಿ ಬೇಡವೆಂದರೂ ಶರೀರ ಅದರ ಪ್ರತಿಕ್ರಿಯೆಯನ್ನು, ಚೇಷ್ಟೆಯನ್ನು ತೋರಿಸುವುದು ಸಹಜ ತಾನೆ? ಎದೆಯಲ್ಲಿ ಉಬ್ಬಿ ಬಂದ ದಮ್ಮು ಕೆಮ್ಮಿನ ರೂಪದಲ್ಲಿ, ಹೊಟ್ಟೆ ತುಂಬಿದಾಗ ತೇಗಿನ ರೂಪದಲ್ಲಿ ನಮ್ಮ ಅವಸ್ಥೆಯನ್ನು ಜಾಹೀರುಪಡಿಸುವುದು ಅದರ ಹಕ್ಕು. ಅನಿರೀಕ್ಷಿತವಾಗಿ ಬಂದ ಎರಡು ಮೂರು ದಪ್ಪ ಕೆಮ್ಮುಗಳು ರೈಲಿನ ಸದ್ದಿಗೆ ತಬಲ ಸಾತ್ ನೀಡಿದಂತಾಯಿತು. ಪಕ್ಕದಲ್ಲೇ ಮೊದಲಿಂದ ಗಂಭೀರವಾಗಿ ಕುಳಿತಿದ್ದ ಸಹ ಪ್ರಯಾಣಿಕ ನನ್ನನ್ನು ಅನುಕಂಪದಿಂದ ನೋಡಿ "ದಯವಿಟ್ಟು ಕ್ಷಮಿಸಿ, ಸರ್" ಎಂದ. ಅರೆ! ಅಕ್ಕ ಪಕ್ಕದವರಿಗೆ ತೊಂದರೆಯಾಗಬಾರದೆಂದು ಬಾಯಿಯನ್ನು ಕೈಗಳಲ್ಲಿ ಮರೆಮಾಡಿಕೊಂಡು ಸಾಧ್ಯವಾದಷ್ಟು ತಳಧ್ವನಿಯಲ್ಲಿ ಕೆಮ್ಮಲು ಕಷ್ಟಪಟ್ಟವನು ನಾನು. ಆದರೂ ಅದು ನನ್ನ ಅಂಕೆಯನ್ನು ಮೀರಿ ತನ್ನ ಡ್ರಮ್ ಬೀಟನ್ನು ಅನುರಣಿಸಿತು. ಅದು ಅರ್ಧ ಚಟವನ್ನು ತೀರಿಸಿಕೊಂಡಿದೆ. ನಾನು ಇಲ್ಲಿ ಕೇವಲ ನಿಮಿತ್ತ ಮಾತ್ರ. ಹಾಗೇ ಆತ ಹೇಳಿದವ ತನ್ನ ಕಿಸೆಯಿಂದ ಒಂದು ಗುಳಿಗೆಯನ್ನು ತೆಗೆದವನೇ ನನಗೆ ಕೊಡಲು ಮುಂದಾದ. ಆದರೆ ಗುಳಿಗೆಯ ವಿವರವನ್ನು ಓದಿಕೊಂಡು ಅದನ್ನು ಮತ್ತೆ ಕಿಸೆಗೆ ಹಾಕಿಕೊಂಡು "ದಯವಿಟ್ಟು ಕ್ಷಮಿಸಿ ಸರ್" ಎಂದ. ಕೆಮ್ಮಿನ ವಿಚಾರ ಹಾಗಿರಲಿ; ಆತ ತರಿಸಿಕೊಂಡ ಕಾಫಿಯನ್ನು ಇನ್ನೇನು ಹೀರಲು ಪ್ರಾರಂಭಿಸಬೇಕು – ತಲೆಯನ್ನೊಮ್ಮೆ ನಸು ಬಾಗಿಸಿ, ವಿನಯ ಮತ್ತು ಮೆಲುನಗೆಯನ್ನು ಬೆರೆಸಿದ ಮುಖದಿಂದ "ಕ್ಷಮಿಸಿ ಸರ್" ಎನ್ನುತ್ತಿದ್ದಂತೆ – ಮೊದಲ ಗುಟುಕನ್ನು ಆತ ಗುಟುಕರಿಸಿ ಮುಂದುವರೆಸಿದ. ಬೀರೂರಿನಲ್ಲಿ ಆತ ತೆಗೆದುಕೊಂಡ ಇಡ್ಲಿಯನ್ನು ತಿನ್ನಲು ಪ್ರಾರಂಭಿಸುವಾಗ ಇನ್ನೇನು "ಕ್ಷಮಿಸಿ ಸಾರ್" ಬೀಳುತ್ತದೆ ಎಂದು ನನಗೆ ಖಾತ್ರಿಯಾಗಿ, ಅದರಿಂದ ತಪ್ಪಿಸಿಕೊಳ್ಳಲು ಕಿಟಕಿಯಾಚೆಗಿನ ಬೋಳು ಜಮೀನನ್ನು ನೋಡುತ್ತಿದ್ದೆ. ಆದರೆ ಅವನು ಹತಾಶನಾಗದೆ, ಎದುರು ಕುಳಿತಿದ್ದ ಬಾಣಾವರದ ಅಜ್ಜಿಗೆ "ಕ್ಷಮಿಸಿ ಅಜ್ಜಿ" ಎಂದು ಹೇಳಿ ಇಡ್ಲಿಯ ಧ್ವಂಸ ಕಾರ್ಯದಲ್ಲಿ ಮುಳುಗಿದ.

ಹೀಗೆ ಕ್ಷಮಿಸಿ ಎಂಬ ಶಬ್ದದುಂಬಿ ನನ್ನನ್ನು ಎಡೆಬಿಡದೆ ಕೊರೆಯುತ್ತಿದ್ದರೂ, ಕರ್ಣನಂತೆ ನಾನು ಕೊರೆಸಿಕೊಂಡನೇ ಹೊರತು ನನಗೇನು ಹೇಳಬೇಕೆಂದು ತೋಚಲಿಲ್ಲ. ಥ್ಯಾಂಕ್ಸ್ ಎನ್ನಲೆ? ಸಾರಿ ಎನ್ನುವುದೆ? ಏನು ತಪ್ಪು ಯಾರಿಂದ ನಡೆದಿದೆ? ಅಥವಾ ಈ ಕ್ಷಮಿಸಿ ಎಂಬ ಪದಕ್ಕೆ ಇನ್ನೂ ಯಾವುದಾದರೂ ಹೊಸ ಜಾಗತಿಕ ಅರ್ಥಗಳಿವೆಯೆ? ನೀನು ಇಡ್ಲಿಯನ್ನು ಕಬಳಿಸಲು ಸ್ವತಂತ್ರ; ನಿನ್ನ ಹಣ, ನಿನ್ನ ಖುಷಿ. ಅದಕ್ಕೆ ಬಾಣಾವರದ ಅಜ್ಜಿ ಯಾಕೆ ಕ್ಷಮಿಸಬೇಕು? ಅಜ್ಜಿಯಿಂದ ನೀನೇನು ಇಡ್ಲಿಯನ್ನು ಕಸಿದುಕೊಂಡಿಲ್ಲವಲ್ಲ? ಹೀಗೆಂದುಕೊಂಡು ಅವನ ಮುಖವನ್ನೇ ನೋಡುತ್ತಾ ಕುಳಿತಿದ್ದೆ. ರೈಲು ಓಡುತ್ತಿತ್ತು.


ಕೆಮ್ಮು, ಸೀನು, ಗೊರಕೆ, ಕನವರಿಕೆ, ಉಬ್ಬಸದ ದಮ್ಮು ಇಂತಹವು ಬೇರೆಯವರಿಗೆ ರಗಳೆಯಾಗುವುದು ನಿಜವೆ. ಹಾಗೆಂದು ಆ ತೊಂದರೆಗೊಳಗಾದವರು ಅವುಗಳನ್ನು ಮುಚ್ಚಿಡಲಾಗುವುದೆ? ನಮ್ಮನ್ನು ಮೀರಿದ ಆ ರೋಗ ಶಕ್ತಿ ಹಕ್ಕು ಚಲಾಯಿಸಿ ಅದರ ಗೆಲುವನ್ನು ಸಾಧಿಸುತ್ತದೆ. ಮಲಿನಗೊಂಡ ವಾತಾವರಣವನ್ನು ತಿಳಿಗೊಳಿಸಲು ನಾನೇ ಮೊದಲು "ದಯವಿಟ್ಟು ಕ್ಷಮಿಸಿ" ಎಂದು ಕೇಳಬೇಕಿತ್ತು. ನಾನು ಮಾಡದ ಕೆಲಸವನ್ನು ಆ ಸಹ ಪ್ರಯಾಣಿಕ ಮಾಡಿದನೆ? ಅದು ವ್ಯಂಗ್ಯವೆ? ಅಥವಾ ಕೃತಕ ನಡವಳಿಕೆಯೆ? ಅಥವಾ ಈ ಸಂದರ್ಭದಲ್ಲಿ ತಾನೇನೂ ಮಾಡಲಾಗದ ಅಸಹಾಯಕತೆಯ ಸಹಜ ಮಾತುಗಳೆ? ಆದರೆ ಪದೇ ಪದೇ "ಕ್ಷಮಿಸು" ಎಂಬುದು ಹಾಸ್ಯಾಸ್ಪದವಾಗುವುದಿಲ್ಲವೆ? ಕೆಮ್ಮುವುದು ಇತ್ಯಾದಿ ಹಕ್ಕಿನಂತೆಯೂ ಕ್ಷಮಿಸಿ ಎನ್ನುವುದು ಕರ್ತವ್ಯದ ಸಂಕೇತವಾಗಿಯೂ ನನಗೆ ಕಾಣತೊಡಗಿತು. ಹಕ್ಕನ್ನೇನೊ ಚಲಾಯಿಸಿದ್ದಾಯಿತು. ಆದರೆ ಕರ್ತವ್ಯ? ಮತ್ತೆ ಯಾರೋ ನಡೆಸಿದರು! ಹಕ್ಕು ಒಬ್ಬರಿಗೆ, ಕರ್ತವ್ಯ ಮತ್ತೊಬ್ಬರಿಗೆ! ರೈಲು ಡಬ್ಬಿಯಲ್ಲಿರುವ ನೂರಾರು ಪ್ರಯಾಣಿಕರಲ್ಲಿ ಯಾರೊ ಒಬ್ಬಿಬ್ಬರು ಮಾತ್ರ ಇಂತಹ "ಹಕ್ಕ"ನ್ನು ಚಲಾಯಿಸುತ್ತಿರಬಹುದು. ಅದು ಹಾಗಿರಲಿ, ರಾತ್ರಿ ಪ್ರಯಾಣದಲ್ಲಿ ಮಲಗಿರುವ ಬಹುಮಂದಿ ಪ್ರಯಾಣಿಕರು ವಿವಿಧ ಸ್ವರಗಳಲ್ಲಿ ಗೊರಕೆಯನ್ನು ನೇಯುತ್ತಾ ಇರುತ್ತಾರೆ. (ನೂರು ಮರ ನೂರು ಸ್ವರ! ಒಂದೊಂದೂ



ಅತಿ ಮಧುರ!) ಅದನ್ನು ಹಕ್ಕು ಎನ್ನುವುದೆ? ಅಯ್ಯೋ ಪಾಪ! ಹಗಲೆಲ್ಲಾ ಏನು ಕಷ್ಟವೊ ಏನೋ... ಇವರಿಗೆ ರೈಲಿನಲ್ಲಾದರೂ ಸುಖ ನಿದ್ರೆ! ಎಂದು ಕಣ್ಣಿಗೆ ರೆಪ್ಪೆಯನ್ನೆ ಹಚ್ಚಲಾಗದ ಒಂದಿಬ್ಬರು ಉದಾರತೆಯಿಂದ ಸುಮ್ಮನಿರುವುದೊ? ಇರಲಿ, ಸಮೂಹದ ವಿಚಾರ. ಇಲ್ಲೆಲ್ಲೊ ನಾನು ತಪ್ಪು ಮಾಡಿದ್ದೇನೆ – ಎನಿಸಿತು. "ದಯವಿಟ್ಟು ಕ್ಷಮಿಸಿ" ಎಂದು ಕೇಳುವ ಸೌಜನ್ಯತೆ ಮೊದಲೇ ನನಗಿರಲಿಲ್ಲ, ಹಾಗೆಯೇ ಒಂದು ವೇಳೆ ಕೇಳಬೇಕೆಂದಿದ್ದರೂ ಈ ಹಾಳು ಕೆಮ್ಮು ದಬಾಯಿಸಿಕೊಂಡು ಹೊರಬಂದದ್ದು ಸಹ ನನ್ನ ಬುದ್ಧಿಗೆ ಯಾವ ನಡತೆಯನ್ನೂ ಹೊಳೆಯಿಸಲಿಲ್ಲ. ನೆನ್ನೆಯೇ ಕೆಮ್ಮು ಪ್ರಾರಂಭವಾಗುವ ಸೂಚನೆಯಿದ್ದರೂ ಔಷಧಿಯನ್ನು ತೆಗೆದುಕೊಳ್ಳಲಿಲ್ಲ. ಈ ತಪ್ಪಿಗೂ ಆತ ಗುಳಿಗೆಯನ್ನು ನೀಡಲು ಬಂದ ಔದಾರ್ಯಕ್ಕೂ ಸಂಬಂಧವಿದೆ. ಇಲ್ಲೆಲ್ಲೊ ವಾತಾವರಣ ಕಲುಷಿತವಾಗುವ, ರೋಗ ಹರಡುವ ಸೂಚನೆಗಳ ಗ್ರಹಿಕೆಯಿದೆ. ನನಗವು ಅರ್ಥವಾಗಲಿಲ್ಲ.

ಇಲ್ಲಿ ನಾನೊಂದು ಹೊಯ್ದಾಟದಲ್ಲಿ ತೊಳಲಾಡುತ್ತಿದ್ದೆ. ನನ್ನ ಗಂಟಲು ಕೆಮ್ಮಲು – ಕೆಮ್ಮದಿರಲು ಆಟವನ್ನು ಹೂಡಿತ್ತು. ಈ ನನ್ನ ಬವಣೆಯನ್ನು ಅರ್ಥಮಾಡಿಕೊಂಡ ಸಹ ಪ್ರಯಾಣಿಕ ಮಾತಿನಲ್ಲಿ ಏನೂ ಹೇಳಲಿಲ್ಲ, ಅಷ್ಟೆ. ಅನುಕಂಪದಿಂದ ನೋಡಿದ. ನನಗೆ ಕೆಮ್ಮುವ ಸ್ವಾತಂತ್ರ್ಯವನ್ನು ಆತ ಬಯಸುತ್ತಿದ್ದ, ಬೇರೆಯವರು ಯಾರೂ ಅದನ್ನು ಕಸಿದುಕೊಂಡಿರಲಿಲ್ಲ. ಆದರೂ ನನಗೆ ಕೆಮ್ಮಲು ಬೇಕಾದ ಸ್ವಾತಂತ್ರ್ಯವನ್ನು ನೀಡುವ ಸ್ವಾತಂತ್ರ್ಯ ತನ್ನೊಬ್ಬನಿಗೆ ಇಲ್ಲವಲ್ಲ ಎಂದೊ ಏನೊ ಆತ "ದಯವಿಟ್ಟು ಕ್ಷಮಿಸಿ" ಎಂದಿರಬೇಕು! ಅರ್ಥಾತ್ "ಸ್ವಾಮಿ, ನೀವು ಕೆಮ್ಮಲು ನಿರ್ಬಂಧಿಸಬೇಡಿ. ಆದರೆ ಅದನ್ನು ಬೇಗ ಗುಣಪಡಿಸಿಕೊಳ್ಳಿ" ಎಂದಿರಬೇಕು. ಆದರೆ, ಇವರೆಲ್ಲಾ ನೀಡಿರುವ ಸ್ವಾತಂತ್ರ್ಯವನ್ನು ದುರುಪಯೋಗ ಪಡಿಸಿಕೊಳ್ಳುತ್ತಿಲ್ಲವೆ?

'ಕ್ಷಮಿಸಿ' ಯ ಒಳಮರ್ಮ ದಮನವಲ್ಲ; ಸ್ವಾತಂತ್ರ್ಯ, ಔದಾರ್ಯ, ಕ್ಷಮೆ ಕೇಳುವುದು, ಕ್ಷಮಿಸುವುದು ಬಲಹೀನತೆಯ ಸಂಕೇತವಲ್ಲ. ವಿವಿಧ ಸಂದರ್ಭಗಳಲ್ಲಿ, ವಿವಿಧ ರೀತಿಯಲ್ಲಿ ಪ್ರಕಟವಾದ ಕೂಡಲೆ ಬಣ್ಣ ಬಣ್ಣಗಳಲ್ಲಿ ರಂಜನೀಯವಾಗುತ್ತದೆ, ಬೆಳ್ಳನೆಯ ಬೆಳಕಾಗಿ ಮನಸ್ಸು ಹಗುರಾಗುತ್ತದೆ. ಇದೇ ವಾದವೇ ಆವತ್ತು ಅಧ್ಯಾಪಕರ ಕೊಠಡಿಯಲ್ಲಿ ಬಿರುಸಾಗಿ ನಡೆದಿತ್ತು. 'ಈ ವಿದ್ಯಾರ್ಥಿಗಳು ಕ್ಷಮೆ ಕೇಳುವುದಕ್ಕು ಪುನಃ ಕಿತಾಪತಿ ಮಾಡುವುದಕ್ಕು ಏನೂ ವ್ಯತ್ಯಾಸವಿಲ್ಲ. ಕ್ಷಮೆ ಎನ್ನುವುದು ಗುಜರಿ ವಸ್ತು' – ಒಬ್ಬ ಅಧ್ಯಾಪಕರು ಹೇಳಿದರು. ಮತ್ತೊಬ್ಬರು 'ಅಷ್ಟಾದರೂ ಆ ಹುಡುಗ ಕೇಳಿದ ತಾನೆ? ಸಮಾಧಾನ ಪಡಬೇಕು. 'To Err is human, To forgive is devine' ಎಂದೇನೊ ಹೇಳಿದರು. ಅದೇ ವೇಳೆಗೆ ಹೊರಗೆ ಒಬ್ಬ ವಿದ್ಯಾರ್ಥಿ, ಕಿವಿಗಡಚಿಕ್ಕುವಂತೆ ಮೊಬೈಕನ್ನು ಚಾಲು ಮಾಡಿ ಅದು ಅಬ್ಬರಿಸುವಂತೆ ಮಾಡಿದ. ರಾಕ್ಷಸನ ಅವತಾರದ ಸೂಚನೆ ಎಂಬಂತೆ ಭಯಂಕರ ಶಬ್ದ ಹರಡುತ್ತ ಕೊಠಡಿಯನ್ನೆಲ್ಲ ಆವರಿಸಿತು. ಆ ಬೇಸತ್ತ ಅಧ್ಯಾಪಕ 'ಇದಕ್ಕೆ ಕ್ಷಮೆ ಇದೆಯಾ? ಏನು ಹೇಳಿ' – ಎಂದು ಸವಾಲೆಸೆದರು. ಗುಂಪಿನಲ್ಲಿ ಕುಳಿತಿದ್ದ ಇಂಗ್ಲೀಷ್ ಅಧ್ಯಾಪಕರು ಏನೋ ಹೇಳಲು ಎದ್ದು ನಿಂತು 'Please excuse me Sir' ಎಂದು ಹೇಳಿ, ತಮ್ಮ ಎಡಗೈ ಕಿರುಬೆರಳನ್ನು ತೋರುತ್ತ ಶೌಚಾಲಯದ ಕಡೆ ದಡ ದಡನೆ ಹೊರಟರು. ಭಾಷೆ ಎಂಬುದು ಒಂದು ಸಂಕೇತ, ವಾಹಕ; ಅದು ನಮ್ಮ ಭಾವನೆಯನ್ನು ಕೊಂಡೊಯ್ಯಲು ಒಂದು ನಿಮಿತ್ತ; ಕಾರ್ಯವಾದ ಕೂಡಲೇ ಅದು ಮಾಯವಾಗುತ್ತದೆ. ಮನುಷ್ಯನಿಲ್ಲದ ಕಡೆ ಭಾಷೆ ಎಲ್ಲಿದೆ? ಅಧ್ಯಾಪಕ ಮಿತ್ರ ಏನು ಹೇಳಬೇಕೆಂದಿದ್ದರೊ...? ಅವರು



ಭಾಷೆಗೆ ಮೀರಿದ ಮತ್ತೊಂದು ಸಂಕೇತ – ಕಿರುಬೆರಳು ತೋರಿಸುತ್ತಾ ಹೊರಟರು. ಆದರೆ ತನ್ನ 'ಅವಸರ' ದ ಕ್ಷಣದಲ್ಲಿ ಈ 'ಕ್ಷಮಿಸಿ' ಎನ್ನುತ್ತಾ ಹೊರಟರಲ್ಲ? ಇದೇನು ನಮಗೆ ಇಷ್ಟವಿಲ್ಲದ, ಅಪಮಾನವಾಗುವ ಕಾರ್ಯವೆ? ಇದು ಯಾವುದಲ್ಲದಿದ್ದರೂ ಅವರು ಸಹಜವಾದ ತಿಳಿ ಹಾಸ್ಯ ಮಿಶ್ರಿತವಾಗಿ ತಮ್ಮ ಶರೀರದ ಸದ್ಯದ ವಿಚಾರವನ್ನು 'ಕ್ಷಮಿಸಿ' ಎಂದು ಸೌಜನ್ಯದಿಂದ ಹೇಳಿದರಷ್ಟೆ. ಇದೇ ಮಿತ್ರರು ಮತ್ತೊಂದು ಸಂದರ್ಭದಲ್ಲಿ "ನೀವೆಲ್ಲಾ ಮಾತನಾಡುತ್ತಿರಿ ನಾನು ಒಂದು ನಿಮಿಷ 'ದ.ಕ್ಷ' ಗೆ ಹೋಗಿ ಬರುತ್ತೇನೆ" ಎಂದು ಹೊರಟರು. ಇಲ್ಲಿ ಅವರು ಕ್ಷಮಿಸಿ ಪದದ ವಿಚಾರದಲ್ಲಿ ಮತ್ತೊಂದು ಹೆಜ್ಜೆ ಮುಂದುವರೆದಿದ್ದರು. ಅವರು ಹೊರಬಿದ್ದ ಜಾಗ (ಶೌಚಾಲಯ)ವನ್ನೆ ಅನಾಮತ್ತಾಗಿ 'ದಯವಿಟ್ಟು ಕ್ಷಮಿಸಿ' ಎಂಬ ಸಂಕ್ಷೇಪ ರೂಪದಲ್ಲಿ ಕರೆದಿದ್ದರು. ನಾನು, ಕ್ಷಮಿಸಿ ಪದದ ಘನತೆಯನ್ನು ಕಡಿಮೆಗೊಳಿಸುತ್ತಿದ್ದಾರೆಂದು ಆಕ್ಷೇಪಿಸಿದೆ. ಆದರೆ ಅವರು 'ದಯವಿಟ್ಟು ಕ್ಷಮಿಸಿ' – ಈ ಪದವನ್ನು ಜನ ಉಪಯೋಗಿಸುತ್ತಿರುವುದೇ ಕಡಿಮೆಯಾಗುತ್ತಿದೆ. ಅದನ್ನು ಹೆಚ್ಚು ಚಾಲ್ತಿಗೆ ತರಬೇಕೆಂದು ನನ್ನ ಉದ್ದೇಶ. ಇನ್ನು ಘನತೆಯ ಪ್ರಶ್ನೆ. ಅದೆಂದೂ ನಾಶವಾಗುವುದಿಲ್ಲ. ಪದವನ್ನು ಬಳಸುವ ವ್ಯಕ್ತಿಯ ಘನತೆಯ ಮೇಲೆ ನಿಂತಿರುತ್ತದೆ" – ಎಂದರು.

ಕ್ಷಮೆಯನ್ನು ಕೇಳಿದವರ ದೊಡ್ಡತನ ವ್ಯಕ್ತವಾಗುತ್ತದೆಂದು, ಹಾಗೇ ಕೇಳಿಸಿಕೊಂಡವರ ಮಹತ್ವ ಅಥವಾ ಬೆಲೆ ಅರಿವಾಗುತ್ತದೆಂದು ಯೋಚಿಸುತ್ತೇವೆ. ಮೊಬೈಕನ್ನು ಘೀಳಿಡಿಸಿದ ಹುಡುಗನಿಗೆ ಅಧ್ಯಾಪಕರ ಕೊಠಡಿಯಿಂದ ಸಂದೇಶ ರವಾನಿಸಿದರು. ಮಿತ್ರರು ಆತ ಕೊಠಡಿಗೆ ಬಂದು ಕ್ಷಮಾಪಣೆ ಕೇಳಬಹುದೆಂಬ ನಿರೀಕ್ಷಣೆ ಕೈಕೊಟ್ಟಿತು. ಬದಲಾಗಿ, ಆತ ಬೈಕಿನ ಆರ್ಭಟ ಇನ್ನೂ ತೀವ್ರಗೊಳಿಸಿ ಹೊರಟು ಹೋದ.

'ಕ್ಷಮಿಸಿ' ಗೆ ಇನ್ನೊಂದು ರೂಪವೂ ಇದೆ; ನಮ್ಮ ಅಧ್ಯಾಪಕರ ಕೊಠಡಿ ಶುಚಿಗೊಳಿಸುತ್ತಿದ್ದ ಗುಂಡಪ್ಪ ಹಾಸ್ಯ ಸ್ವಭಾವದವನು. ಕೊಠಡಿಯಲ್ಲಿ ಹರಡಿದ ಎರಡು ಮೂರು ದಿನದ ಕಸವನ್ನು ನೋಡಿ 'ಏನು ಗುಂಡಪ್ಪ ಹೀಗಿದೆ? ಯಾಕೆ ಸೋಮಾರಿತನ? ಈ ಕೆಲಸ ನಿನಗೆ ಇಷ್ಟವಿಲ್ಲವೆ?' ಎಂದು ಕೇಳಿದೆ. ಆತ ಕೂಡಲೇ ವಿನಯವಾಗಿ 'ದಯವಿಟ್ಟು ಕ್ಷಮಿಸಿ ಸಾರ್' ಎಂದು ಅಚ್ಚರಿ ಹುಟ್ಟಿಸಿದ. ನಮ್ಮ ವ್ಯಾಧಿ ಇವನಿಗೆ ತಗುಲಿದೆ ಎಂದು ತಿಳಿಸಿದೆ. ನಾನು ಸುಧಾರಿಸಿಕೊಂಡು 'ಏನಯ್ಯ ಕ್ಷಮಿಸುವುದು? ಇದು ನಿನ್ನ ಕೆಲಸವಲ್ಲವೇನಯ್ಯ? ಎಂದು ಕೇಳಿದೆ. ಆದರೆ ಆತ 'ದಯವಿಟ್ಟು ಕ್ಷಮಿಸಿ ಸಾರ್. ನನಗೆ ಬಡ್ತಿ ಸಿಕ್ಕಿದೆ. ಶುಚಿ ಮಾಡಲು ಬೇರೆ ಜನ ಬರುತ್ತಾರೆ' ಎಂದ ನಗುತ್ತ. ತಮಗಿಷ್ಟವಾಗದ, ಒಪ್ಪದ ಮಾತನ್ನು ಸೌಮ್ಯವಾಗಿ, ಗೌರವಪೂರ್ವಕವಾಗಿ ತಿರಸ್ಕರಿಸುವ ಸೂಕ್ಷ್ಮತೆ ಇದರಲ್ಲಡಗಿದೆ. 'ಈ ತಿಂಡಿ ಪಟ್ಟಿಯಲ್ಲಿರುವುದೆಲ್ಲ ನಿಮ್ಮ ಹೋಟೆಲ್‌ನಲ್ಲಿ ಸಿಗುವುದೆ?' 'ದಯವಿಟ್ಟು ಕ್ಷಮಿಸಿ ಸಾರ್' 'ನೀವು ನನ್ನ ಜತೆ ಈಗ ಮಾಂಸಾಹಾರ ಊಟ ಮಾಡುತ್ತೀರ?' 'ದ.ಕ್ಷ.ಸ' 'ನಮ್ಮ ಹುಡುಗಿ/ಹುಡುಗ ನಿಮಗೆ ಮದುವೆಗೆ ಒಪ್ಪಿಗೆ ಇದೆಯೇ?' 'ದ.ಕ್ಷ.ಸ' – ಹೀಗೆ ನಕಾರಾತ್ಮಕ ರೂಪವನ್ನು ತಾಳಿ ತನ್ನ ಕೆಲಸವನ್ನು ಮುಗಿಸುತ್ತದೆ.

ಆದರೆ ನಮ್ಮದು ಸ್ವಲ್ಪ ಚೌಕಾಸಿ ಮಾಡುವ ಜಾಯಮಾನ. ಸುಲಭವಾಗಿ 'ಕ್ಷಮಿಸಿ' ಯನ್ನು ಸ್ವೀಕರಿಸದೆ 'ನೋಡಿ, ಇನ್ನೊಮ್ಮೆ ಯೋಚಿಸಿ, ಮನಸ್ಸು ಮಾಡಿ' ಎಂದು ಮತ್ತೆ ಮತ್ತೆ ಆಲಾಪನೆ ನಡೆಸುತ್ತೇವೆ. ಆದರೆ ಆ ಅತಿಥಿ ಮಹಾಶಯ ತನ್ನ ನಿಲುವನ್ನು ಬದಲಾಯಿಸುವುದಿಲ್ಲ. 'ಕ್ಷಮಿಸಿ ಎಂದು ಆಗಲೆ ಹೇಳಿದೆನಲ್ಲ...? ಮತ್ತೆ ಏಕೆ ನಿಮ್ಮ ಹಳೆಯ ಪಿಟೀಲು ಕೊಯ್ತ?' ಎಂದು ಆತ ತನ್ನ ಸ್ವರವನ್ನೇ ಬದಲಾಯಿಸಿ ಹೇಳಬಹುದು. ಈತ 'ಏನು ಕ್ಷಮಿಸುವುದೊ... ಕ್ಷಮಿಸುವುದೊ... ಅಯ್ಯೊ' ಎಂದು ಗೊಣಗುಟ್ಟುತ್ತಾ ಹೋಗಬಹುದು. ಎಂದರೆ ಕ್ಷಮಿಸಿ ಎಂಬ ಶಬ್ದದ ಉತ್ಪಾದಕ ಮತ್ತು ಅನುಭೋಗಿಯ ಮನೋಭಾವಗಳು ಪರಸ್ಪರ ಕೂಡಿ ಬರಬೇಕು!

ಕ್ಷಮಾಪಣೆಯ ಸಂದರ್ಭದಲ್ಲಿ 'ಕ್ಷಮೆ' ಎಂಬ ಪದವೆ ಬರಬೇಕು, ಆಗ ಮಾತ್ರ ಹಾಗೆ ಕ್ಷಮೆ ಯಾಚಿಸಿದ್ದಕ್ಕು ಒಂದು ಅರ್ಥವಿರುತ್ತದೆ – ಎಂದು ಕೆಲವರು ಜಿಗುಟಾದ ನಿಲುವನ್ನು ತಾಳುತ್ತಾರೆ. 'ನೋಡಯ್ಯ ಎಂತಹ ಚತುರ! ಕ್ಷಮೆಯನ್ನು ಕೇಳಿದಂತಾಗಬೇಕು, ಕೇಳಿರಬಾರದು! ಹಾಗೆ ಕೇಳಿದರೆ ಅವನ ಮರ್ಯಾದೆಗೆ ಹಾನಿಯಾಗುತ್ತದಲ್ಲ...?' ಎಂದು ಹೀಯಾಳಿಕೆಯ ಮಾತುಗಳು ಕೇಳಿಬರುತ್ತದೆ. ಆದರೆ ಒತ್ತಾಯದಿಂದ ಕ್ಷಮೆ ಕೇಳಿಸುವುದು ಹೇಗೊ, ಹಾಗೆಯೇ ಆ 'ಪದ'ಕ್ಕಾಗಿ ಹಟ ಮಾಡುವುದು ಸಹ ನಿಷ್ಪ್ರಯೋಜಕ. ಈ 'ಅಕ್ಷರ' ರೂಪಕ್ಕಿಂತ ಅಂತರಂಗಕ್ಕೆ ಮಣಿದರೆ ಮಾತ್ರ ಮನುಷ್ಯ ಸಂಬಂಧ, ಪ್ರೀತಿ ವಿಶ್ವಾಸಗಳು. ಒತ್ತಾಯದ ಕ್ಷಮೆಯನ್ನು ಅಪೇಕ್ಷಿಸುವವರು ಅರ್ಥಾತ್ ಕ್ಷಮಾದಾಹಿಗಳು – ಅವರ ಹಿನ್ನೆಲೆಯೂ ಮುಖ್ಯವಾದುದು. ಭ್ರಷ್ಟ ಅಧಿಕಾರಿಯೊಬ್ಬ ಅಪರಾಧಿಯನ್ನು ಲಾಠಿಯಿಂದ ಬಾರಿಸಿ ಹೆದರಿಸಿ ಕ್ಷಮೆಕೇಳಿಸಿಕೊಂಡರೇನು ಸಾರ್ಥಕತೆ? ಆದ್ದರಿಂದಲೆ ಕಳ್ಳರು ಕಳ್ಳರಾಗಿಯೇ ಮುಂದುವರೆಯುತ್ತಾರೆ. ಜೈಲಿನಲ್ಲಿದ್ದ ಒಬ್ಬ ಕಳ್ಳನನ್ನು ಸಂದರ್ಶನದಲ್ಲಿ ಕೇಳಿದರಂತೆ; 'ಯಾಕೆ ನೀನು ಜೈಲಿಗೆ ಬಂದೆ? ಬಿಡುಗಡೆಯ ನಂತರ ಏನು ಮಾಡುತ್ತಿ?' ಕಳ್ಳ ಹೇಳಿದ 'ನಾನು ದರಿದ್ರದವನು, ಸ್ವಾಮಿ. ಮಗುವಿನ ಔಷಧಿಗಾಗಿ ಕದ್ದೆ. ಎಷ್ಟು ಕಣ್ಣೀರು ಹಾಕಿದರೂ ಬಿಡದೆ ಪೊಲೀಸರು ತಿಂದ ದುಡ್ಡಿಗೆ ಸರಿಯಾಗಿ ಬಾರಿಸಿದರು. ಬಿಡುಗಡೆ...? ಆಗಲಿ. ಆ ಇನ್ಸ್‌ಪೆಕ್ಟರ್‌ನ ಹೆಂಡತಿಯ ಸರ ಕದೀದೆ ಬಿಡ್ತೀನ? ಮತ್ತೆ ಜೈಲಾದರು ಚಿಂತೆಯಿಲ್ಲ' ಎಂದು ವೀರಾವೇಶದಿಂದ ಹೇಳಿದ.

ತಪ್ಪುಗಳ ಸರಮಾಲೆಯೆ ಇರಬಹುದು, ಅವುಗಳನ್ನು ತಿಳಿದೋ ತಿಳಿಯದೆಯೊ ಮಾಡಬಹುದು; ಇಷ್ಟವಿಲ್ಲದೆ ಮಾಡಬಹುದು, ಅವಿವೇಕದಿಂದ ಮಾಡಬಹುದು. ಒಂದೊಂದರ ಹಿನ್ನೆಲೆಯೂ ಒಂದೊಂದು ರೀತಿ. ತಾಳ್ಮೆವಹಿಸಿದರೆ ಒಂದು ಸಂದರ್ಭ ನುಗ್ಗಿ ಬಂದು ಪಶ್ಚಾತ್ತಾಪದ ಕುದಿಯಲ್ಲಿ ಅವನ ಕಣ್ಣೀರು ಅವನಿಗರಿವಿಲ್ಲದೆಯೆ ಬರಬಹುದು. ಅದಕ್ಕಾಗಿ ಕಾಯಬೇಕಷ್ಟೆ. 'ಅಯ್ಯೊ, ನಾನು ಮಾಡಬಾರದ್ದನ್ನು ಮಾಡಿದ್ದೇನೆ. ನನ್ನ ತಪ್ಪನ್ನು ಹೊಟ್ಟೆಗೆ ಹಾಕ್ಕೊಬೇಕು' ಎಂಬ ಆ ಮಾತುಗಳು ಉಪಚಾರದ ಮಾತುಗಳಲ್ಲ. ಅವು ಅವನ ಗೋಳಿನ ಕಥೆಯನ್ನು ಹೇಳುತ್ತವೆ.

ಕ್ಷಮೆಯನ್ನು ನಿರೀಕ್ಷಿಸುವವನಲ್ಲಿ ನೈತಿಕ ಬಲವಿದ್ದರೆ, ತಾಯಿಯ ಗುಣವಿದ್ದರೆ ಅಪರಾಧದ ಮುಂದುವರಿಕೆ ಸ್ಥಗಿತವಾಗಬಹುದು. 'ಬಂಜೆ ಬೇನೆಯನರಿವಳೆ? ಬಲದಾಯಿ ಮುದ್ದಬಲ್ಲಳೆ?' ನಾವು ಏನಲ್ಲವೊ ಅದನ್ನು ಬೇರೊಬ್ಬರಿಂದ ಕಡ್ಡಾಯವಾಗಿರಬೇಕೆಂದು ಅಪೇಕ್ಷಿಸುವುದು ಹೇಗೆ? ಮಗ್ದಲದ ಮೇರಿ ಎಂಬಾಕೆ ನಡತೆ ಕೆಟ್ಟವಳೆಂದು ಆ ಗ್ರಾಮದವರು ಆಕೆಯನ್ನು ತುಚ್ಛವಾಗಿ ನಿಂದಿಸುತ್ತ ಸಾಯಿಸಲು ಯತ್ನಿಸುತ್ತಾರೆ. ಅಲ್ಲಿಗೆ ಬಂದ ಏಸು ಗ್ರಾಮದವರನ್ನು ಕೇಳುತ್ತಾನೆ – 'ನೀವೆಲ್ಲ ನಿಮ್ಮನ್ನೆ ಪ್ರಶ್ನಿಸಿಕೊಳ್ಳಿ. ನಿಮ್ಮ ಇಡೀ ಬದುಕಿನಲ್ಲಿ ಯಾವುದೇ ಒಂದು ತಪ್ಪನ್ನು ಮಾಡಿಲ್ಲವೆ? ಹಾಗೆ ಪರಿಪೂರ್ಣವಾಗಿ ಶುದ್ಧವಾಗಿದ್ದವರು ಮಾತ್ರ ಮೇರಿಯ ವಿರುದ್ಧ ದಂಡನೆ ವಿಧಿಸಿರಿ' ಎನ್ನುತ್ತಾನೆ. ಅವರೆಲ್ಲರು ತಮ್ಮ ಬಗ್ಗೆ ತಾವೇ ಪ್ರಾಮಾಣಿಕವಾಗಿ ಪರೀಕ್ಷಿಸಿಕೊಳ್ಳುತ್ತಾರೆ. ತಮ್ಮ ತಪ್ಪಿನ ಅರಿವಾಗುತ್ತದೆ. ಮೇರಿಯ ವಿರುದ್ಧದ ಕ್ರಮವನ್ನು ಕೈ ಬಿಟ್ಟು ಕ್ಷಮೆಯನ್ನು ಕೇಳುತ್ತಾರೆ. ಆದ್ದರಿಂದ, ಕ್ಷಮೆ – ನಮ್ಮಿಂದಲೇ ಮೊದಲು ಹೊರಡಬೇಕು. ಇದನ್ನು ಬೇರೆ ಮತ್ತೊಬ್ಬರಿಂದ ನಿರೀಕ್ಷಿಸುವುದಲ್ಲ.

ಡಿ. ದೇವರಾಜ್ ಅರಸರ ಜೀವನದಲ್ಲಿ ನಡೆದ ಒಂದು ಘಟನೆ: ಅವರ ತೋಟದಲ್ಲಿ ಬೆಳೆದಿದ್ದ ಬಾಳೆ ಗೊನೆಯನ್ನು ಯಾರೊ ಒಬ್ಬಾತ ಕಳ್ಳತನ ಮಾಡಿದನೆಂದು ಅವನನ್ನು ಹಿಡಿದು ಬಾರು ಕೋಲಿನಲ್ಲಿ ಬಾರಿಸುತ್ತಾರೆ. ಕೆಲವು ದಿನಗಳಾದನಂತರ ಅವನು ಕದ್ದವನಲ್ಲವೆಂದು ತಿಳಿಯುತ್ತದೆ. ಅರಸು ಅವರು ಕೂಡಲೇ ಊರಿನ ಜನರನ್ನೆಲ್ಲ ಕರೆದು, ಅವರೆಲ್ಲರ ಮುಂದೆ ಆ ಕಳ್ಳನಲ್ಲದ ವ್ಯಕ್ತಿಯ ಕ್ಷಮೆ ಕೇಳುತ್ತಾರೆ. ಕ್ಷಮೆ ಕೇಳುವುದು ತಪ್ಪು, ಅದರಿಂದ ನಮ್ಮ ಅಭಿಮಾನಕ್ಕೆ


ಧಕ್ಕೆಯಾಗುತ್ತದೆ, ನಮ್ಮ ಮರ್ಯಾದೆಗೆ ಕಡಿಮೆಯಾಗುತ್ತದೆ ಎಂಬ 'ಅಹಂ' ನ ಗೋಡೆ ವ್ಯಕ್ತಿ ಸಂಬಂಧವನ್ನು ನಾಶಪಡಿಸುತ್ತದೆ.

'ಕ್ಷಮಯಾ ಧರಿತ್ರೀ' ಎಂದು ಆಗಾಗ್ಗೆ ಉಗ್ಗಡಿಸುತ್ತಿದ್ದ ನನ್ನ ಮಿತ್ರರೊಬ್ಬರು, ಕ್ಷಮೆ ಎಂದರೇನು, ಅದಕ್ಕೆ ಎಂತಹ ನೆಲೆ – ಬೆಲೆ ಇದೆ, ಕ್ಷಮಾ ಗುಣದಲ್ಲಿ ಆ ಭೂಮಿತಾಯಿಯನ್ನು ಮೀರಿಸುವವರು ಯಾರು? – ಇದೆಲ್ಲವನ್ನು ಹುರುಪುಗೊಂಡು ಹೇಳುತ್ತಿದ್ದರು. ಆದರೆ ಅವರ ಪತ್ನಿಯ ಎದುರು ಆ ಉತ್ಸಾಹವೆಲ್ಲ ತಣ್ಣಗಾಗಿ ಮೌನವಾಗಿರುತ್ತಿದ್ದರು. ಅವರ ಈ ವಿಚಿತ್ರದ ಬಗ್ಗೆ ಪೀಡಿಸಿ ಕೇಳಿದ ನಂತರ ಗುಟ್ಟಾಗಿ ಹೇಳಿದರು: 'ಕ್ಷಮಯಾ ಧರಿತ್ರೀ ಅಲ್ಲ ಸ್ವಾಮಿ! ಥರ ಥರ ಧರಿತ್ರೀ' ಎಂದರು. ನಮಗೆ ಅರ್ಥವಾಗದೆ ಕಣ್ಣು ಕಣ್ಣು ಬಿಟ್ಟೆವು. ಧಡೂತಿಯಾಗಿದ್ದ ಅವರ ಪತ್ನಿ ಅವರೆದುರು ಇಲ್ಲದುದನ್ನು ಖಚಿತ ಮಾಡಿಕೊಂಡು 'ಆ ಮಹಾತಾಯಿಯ ಹೆಸರು ಧರಿತ್ರಿ. ನಮ್ಮ ಮನೆಯಲ್ಲಿ ಅವಳ ಮಾತುಗಳು ಕೋರ್ಟ್ ಆಜ್ಞೆ – ಅವಳ ಕಣ್ಣುಗಳು ಯಾವಾಗಲು ನಿಗಿ ನಿಗಿ ಕೆಂಡ. ಮನೆಯಲ್ಲಿ ತುರ್ತು ಪರಿಸ್ಥಿತಿಯ ಶಾಂತಿ! ಭಯ ಧರಿತ್ರೀ!' ಎಂದರು. ಈ ಮನೆಯಲ್ಲಿ 'ದಯವಿಟ್ಟು' ಅಥವಾ 'ಕ್ಷಮಿಸಿ' ಯಾವುದಕ್ಕು ಅವಕಾಶವಿಲ್ಲ.

ಆದರೆ, ವಿದೇಶದಲ್ಲಿ ಸಾಕಷ್ಟು ಕಾಲ ವಾಸವಾಗಿದ್ದು ಹಿಂದಿರುಗಿದ ಒಂದು ಕುಟುಂಬದಲ್ಲಿ ಇನ್ನೊಂದು ವಿಚಿತ್ರ: ಮನೆಯವರೆಲ್ಲರ ನಾಲಗೆಯ ಮೇಲೆ 'ಕ್ಷಮಿಸಿ' 'ಧನ್ಯವಾದ' ಪದಗಳು – ಹೆಚ್ಚಾಗಿ ಇಂಗ್ಲೀಷ್‌ನಲ್ಲಿ – ಯಾವಾಗಲು ಕುಣಿಯುತ್ತಿದ್ದವು, ಅವರವರಲ್ಲೆ ಯಥೇಚ್ಛವಾಗಿ ವಿನಿಮಯವಾಗುತ್ತಿದ್ದವು. ಆದರೆ ಆಗಾಗ್ಗೆ ಇದರ ಸಂವಹನ ತುಂಡಾಗುತ್ತಿತ್ತು? 'Excuse me, Pappa, once again my result is disappointing' ಎಂದು ಚಿಕ್ಕ ಮಗ, ಪರೀಕ್ಷೆಯಲ್ಲಿ ಮೂರನೆ ಬಾರಿಗೆ ನಪಾಸಾದವನು, ನಿರ್ಲಿಪ್ತನಾಗಿ ಹೇಳಿದ. ಅಪ್ಪ 'Excuse me. I Don't excuse' ಎಂದರು. ಅವರ ಮನೆಗೆ ಹೊಸದಾಗಿ ಬಂದ ಸೊಸೆಗೆ, ಈ 'ಕ್ಷಮಿಸಿ' 'ಧನ್ಯವಾದ' ಗಳ ಸ್ಫೋಟನೆಗಳನ್ನು ಕೇಳಿ ಕೇಳಿ, ಆಕೆಯ ಹೊಸ ದಾಂಪತ್ಯ ಜೀವನವೆ ರೋಸುವಂತಾಯಿತು. ಯಾವುದೊ ಮಾತಿಗೆ ಗಂಡ 'ಕ್ಷಮಿಸು' ಎಂದು ಏನೊ ಹೇಳಲು ತೊಡಗಿದ ಕೂಡಲೆ ಆಕೆ 'ನಿಮ್ಮ ಕ್ಷಮಿಸಿ ಗೆ ನನ್ನ ಕ್ಷಮೆ ಇಲ್ಲ. ನಿಮ್ಮ ಈ ಕುಟುಂಬದಲ್ಲಿ ಕ್ಷಮಾ ರೋಗವಿಲ್ಲದವ, ನೇರವಾಗಿ ಮಾತಾಡುವವ ಎಂದರೆ – ಒಬ್ಬನೆ – ಅವನು ಆ ಬಿಳಿಯ ಎಂದಳು, ಮೂಲೆಯ ಕಡೆ ಕೈ ತೋರಿಸುತ್ತ. ಬಿಳಿಯ ಎಂದರೆ ಆ ಮನೆಯ ಕಾವಲುಗಾರ – ನಾಯಿ!

ಕ್ಷಮಿಸು ಎಂದು ಮಾತು ಪ್ರಾರಂಭಿಸುವುದು, ತಪ್ಪಿಗೆ ಕ್ಷಮೆ ಕೇಳುವುದು, ಕೇಳದಿರುವುದು, ಕ್ಷಮಾದಾತ ಕ್ಷಮಿಸುವುದು/ಕ್ಷಮಿಸದಿರುವುದು – ಈ ಎಲ್ಲಾ ಶಬ್ದ ಮಾಲಿನ್ಯಕ್ಕೆ ಬೇಸತ್ತು ಸಂತನಾಗುವುದೇ ಒಳ್ಳೆಯದೆನಿಸಬಹುದು – ಆದರೆ ಪ್ರಾಮಾಣಿಕರಿಗೆ? ಆದ್ದರಿಂದಲೇ ಇರಬಹುದು ಇಂತಹವರು ತಮ್ಮನ್ನು ತಾವು ಪರೀಕ್ಷೆಗೊಳಪಡಿಸಿಕೊಂಡು, ತಪ್ಪು ನಡೆದಿದೆ ಎಂದರೆ, ತಾವೇ ನೇರವಾಗಿ ದಂಡನೆಗೆ ಒಳಪಡಿಸುತ್ತಾರೆ. 'ಮಾಡುವಲ್ಲಿ ನೀಡುವಲ್ಲಿ ಶುದ್ಧವಿಲ್ಲದಿರ್ದಡೆ ನೀನಂದೆ ಮೂಗ ಕೊಯ್ಯಿ ಕೂಡಲ ಸಂಗಮ ದೇವ!' 'ಮಾಡಿದೆನೆಂದು ಮನದಲ್ಲಿ ಹೊಳೆದರೆ ಏಡಿಸಿ ಕಾಡಿತ್ತು ಶಿವನ ಡಂಗುರ!' 'ಪ್ರಭು, ಅಲ್ಲಾಹ್, ಸತ್ಯ ವಿಶ್ವಾಸಿಯಾಗಿರುವ ನಮ್ಮೆಲ್ಲರನ್ನೂ ಕ್ಷಮಿಸಿಬಿಡು. ಅಕ್ರಮಿಗಳಿಗೆ ವಿನಾಶದ ಹೊರತು ಇನ್ನೇನನ್ನು ವೃದ್ಧಿಸಬೇಡ'

(ಪ್ರೇರಣೆ: ಎ.ಜಿ ಗಾರ್ಡಿನರ್ ಅವರ – **On Saying Please** ಪ್ರಬಂಧ)



**(ಅರವತ್ತು–ಎಪ್ಪತ್ತರ ದಶಕಗಳಲ್ಲಿ ಮೈಸೂರಿನಲ್ಲಿ ಸಮಾಜವಾದಿ ಯುವಜನ ಸಭಾದಲ್ಲಿ ಸಕ್ರಿಯರಾಗಿದ್ದ ಎಂ.ಬಿ. ನಟರಾಜ್, ಶಿವಮೊಗ್ಗದಲ್ಲಿ ಕನ್ನಡ ಉಪನ್ಯಾಸಕರಾಗಿ ನಿವೃತ್ತರಾಗಿರುವ, ಹಿರಿಯ ಕಥೆಗಾರರು ಮತ್ತು ವಿನೋದ ಬರಹಗಾರರು ಕೂಡ.)**


'ಹೊಸ ಮನುಷ್ಯ' ಪತ್ರಿಕೆಗೆ

ಐದನೇ ವರ್ಷಕ್ಕೆ ಕಾಲಿಡುತ್ತಿರುವ ಶುಭ ಸಂದರ್ಭದಲ್ಲಿ

ಹುಟ್ಟುಹಬ್ಬದ ಶುಭಾಶಯಗಳು

Davangere University

**ಡಾ. ಹೆಚ್. ವಿಶ್ವನಾಥ್**

**ಸಿಂಡಿಕೇಟ್ ಸದಸ್ಯರು**

**ದಾವಣಗೆರೆ ವಿಶ್ವವಿದ್ಯಾನಿಲಯ, ದಾವಣಗೆರೆ.**

**ಹೊಸ ಮನುಷ್ಯ' ಓದುಗರೆಲ್ಲರಿಗೆ**

**ಸ್ವಾತಂತ್ರ್ಯೋತ್ಸವದ ಹಾರ್ದಿಕ ಶುಭಾಶಯಗಳು**



**ಕೂಲಿಗಾರನ ಬೆವರು ಆರುವ ಮುನ್ನವೇ ಅವನ ಕೂಲಿ ಕೊಟ್ಟುಬಿಡಿ.**

– ಮಹಮದ್ ಪೈಗಂಬರ್

**ದವಲ್ ಸಾಬ್ ಅರಳಿಕಟ್ಟೆ**

**ಮತ್ತು ಕುಟುಂಬ**

**ಫ್ಯಾಬ್ರಿಕೇಷನ್ ಗುತ್ತಿಗೆದಾರರು**

**ಯಾಲಕ್ಕಿ ಶೆಟ್ರ ಕಾಲೋನಿ**

**ಧಾರವಾಡ**

# ಐ.ಪಿ.ಎಲ್ ಎಂಬ ಭಾರತೀಯ ಕ್ರಿಕೆಟ್‌ನ ಅನೈತಿಕ ಕೂಸು

–ಅವಿನಾಶ್ ಟಿ.

ವಸಾಹತುಶಾಹಿ ಸಂಪರ್ಕದಿಂದ ಬಳುವಳಿಯಾಗಿ ಬಂದರೂ ನಮ್ಮದೇ ಎನ್ನುವಷ್ಟು ಸಹಜವಾಗಿ ಭಾರತೀಯ ಸಮಾಜದಲ್ಲಿ ಮಿಳಿತವಾದ ಕ್ರಿಕೆಟ್ ಕ್ರೀಡೆ ಇತ್ತೀಚಿನ ದಿನಗಳಲ್ಲಿ ಅನೈತಿಕ ಮತ್ತು ಅಸಹಜ ಬೆಳವಣಿಗೆಗೆ ಈಡಾಗಿದೆ. ಇದು ಬದಲಾವಣೆಗಳ ಮಹಾಪರ್ವದ ಕಾಲ ಎಂಬುದೇನೋ ನಿಜ. ಆದರೆ ಯಾವಾಗ ಬದಲಾವಣೆ ಎನ್ನುವುದು ಕೃತಕ ವೇಗವನ್ನು ಪಡೆದುಕೊಳ್ಳುತ್ತದೋ ಆಗ ಅದು ತನ್ನ ಸಹಜತೆ, ಸರಳತೆ ಹಾಗೂ ವಿವೇಕವನ್ನು ಕಳೆದುಕೊಳ್ಳುತ್ತದೆ. ಕಳೆದ ಕೆಲವಾರು ವರ್ಷಗಳಿಂದ ಕೇಳಿ ಬರುತ್ತಿರುವ ಕಳ್ಳಾಟ, ಬೆಟ್ಟಿಂಗ್, ಫಿಕ್ಸಿಂಗ್ ಹಾಗೂ ಪರಮ ಭ್ರಷ್ಟಾಚಾರಕ್ಕೂ ಕ್ರಿಕೆಟ್ ಪಡೆದುಕೊಂಡಿರುವ ಈಗಿನ ಸ್ವರೂಪಕ್ಕೂ ಅವಿನಾಭಾವ ಸಂಬಂಧವಿದೆ. ಫಿಕ್ಸಿಂಗ್ ಭೂತವನ್ನು ಕೆಲವೇ ಕೆಲವು ಆಟಗಾರರ ದುರಾಸೆಯ ಫಲ ಎಂದು ವ್ಯಾಖ್ಯಾನಿಸಿದರೆ ಸಮಸ್ಯೆಯ ಮೂಲ ನಮಗೆ ಅರಿವಾಗುವುದಿಲ್ಲ. ಬಂಡವಾಳ, ಉದ್ಯಮ ಹಾಗೂ ಕಾರ್ಪೊರೇಟ್ ಶೈಲಿಯ ಆಡಳಿತಕ್ಕೆ ಕ್ರಿಕೆಟ್ ತನ್ನನ್ನು ತಾನು ತೆರೆದುಕೊಂಡಿರುವುದಕ್ಕೂ ಮತ್ತು ಈಗಿನ ಆಟದ ವಾಣಿಜ್ಯೀಕರಣಕ್ಕೂ ನೇರ ಸಂಬಂಧವಿದೆ.

ಕ್ರಿಕೆಟ್ ಮೂಲಭೂತವಾಗಿ ಸಭ್ಯರ, ವಿವೇಕಿಗಳ ಸಾವಧಾನದ ಕ್ರೀಡೆ. ಸಭ್ಯತೆ, ನೈತಿಕತೆ, ಪಾರದರ್ಶಕತೆ, ಸಾವಧಾನ–ವ್ಯವಧಾನ, ತಾಂತ್ರಿಕ ಕೌಶಲ್ಯ, ತಾಳುವಿಕೆಯ ಗುಣ, ಸಾಂಘಿಕ ಪ್ರಯತ್ನ ಮೊದಲಾದವು ಸಾಂಪ್ರದಾಯಿಕ ಟೆಸ್ಟ್ ಕ್ರಿಕೆಟ್‌ನ ಕೆಲ ಮೂಲಭೂತ ಲಕ್ಷಣಗಳು. ದಿನಗಟ್ಟಲೆ ದೇಹ ಮತ್ತು ಮನಸ್ಸನ್ನು ಕೇಂದ್ರೀಕರಿಸುವುದನ್ನು ಬಯಸುವ ಇದು ಅತ್ಯಂತ ರೋಚಕ ಕ್ರೀಡೆ ಕೂಡಾ ಹೌದು. ಅನಿರೀಕ್ಷಿತ ತಿರುವುಗಳ ಮೂಲಕ ಕ್ಷಣಾರ್ಧದಲ್ಲೇ ಫಲಿತಾಂಶಗಳನ್ನು ಬದಲಿಸಿಬಿಡುವ ಶಕ್ತಿ ಈ ಆಟಕ್ಕಿದೆ. ಆದರೆ ಕ್ರಿಕೆಟ್ ಎಂಬ ಉಪಖಂಡದ ಈ ಧರ್ಮ ಈಗ ಬೆಟ್ಟಿಂಗ್, ಫಿಕ್ಸಿಂಗ್, ಕಪ್ಪುಹಣದ ಕರಾಳ ಮುಖ, ಕ್ಷುದ್ರ ರಾಜಕಾರಣ ಹಾಗೂ ಅನೈತಿಕತೆಯಿಂದಲೇ ವಿಜೃಂಭಿಸತೊಡಗಿದೆ. ಅದರಲ್ಲೂ ಅತಿ ವಿಜೃಂಭಣೆ ಮತ್ತು ಭಾರಿ ಉದ್ರೇಕಗೊಳಿಸುವ ಹತಾರಗಳನ್ನು ಹೊಂದಿರುವ ಐಪಿಎಲ್ ಟಿ–೨೦ ಎಂಬದು ಆಧುನಿಕ ಕ್ರಿಕೆಟ್‌ನ ವಿಕಾರಕ್ಕೆ ಒಂದು ಅತ್ಯುತ್ತಮ ಉದಾಹರಣೆ. ಈ ಐಪಿಎಲ್ ಎಂಬ ತಲೆಕೆಳಗಾದ ವಾಣಿಜ್ಯ ಜಗತ್ತಿನಲ್ಲಿ ಅಸಭ್ಯತೆ, ಅನೈತಿಕತೆ, ತೋರಿಕೆಯ ಸ್ಪರ್ಧೆ, ಕಪ್ಪು ಹಣದ ಅಶ್ಲೀಲ ಪ್ರದರ್ಶನಗಳೇ ನಮಗೆ ಎದ್ದು ಕಾಣುತ್ತಿದೆ. ಇದರ ಜೊತೆಗೆ ಸ್ಪಾಟ್ ಫಿಕ್ಸಿಂಗ್ ಭೂತ ಹಾಗೂ ಭೂಗತ ಜಗತ್ತಿನ ಜಾಲವನ್ನು ಜೋಡಿಸಿದರೆ ಈ ಟೂರ್ನಿಗಿರುವ ಅಶ್ಲೀಲತೆ ನಮ್ಮ ಗಮನಕ್ಕೆ ಬರುತ್ತದೆ. ಸರಕು ಸಂಸ್ಕೃತಿಯ ಅವಿಭಾಜ್ಯ ಅಂಗವಾಗಿರುವ ಐಪಿಎಲ್ ನಿಜಾರ್ಥದಲ್ಲಿ ಕಾರ್ಪೊರೇಟ್ ದಾಹ ಮತ್ತು ದ್ರೋಹದ ಕಥನವಾಗಿದೆ. ಐಪಿಎಲ್ ಎಂಬುದೇ ಕೋಟ್ಯಾಂತರ ರೂಪಾಯಿಗಳ ವಹಿವಾಟಿನ ಒಂದು ಬೃಹತ್ ಉದ್ಯಮ. ಇದು ಮಹಾ ದ್ರೋಹದ ಒಂದು ವಿರಾಟ್ ಕಥನ. ಮೊದಲನೆಯದಾಗಿ ಈ ತಂಡದ ಒಡೆಯರುಗಳೇ ಉದ್ಯಮಿಗಳು, ಗ್ಲಾಮರ್ ಜಗತ್ತಿನ ಮಾನಿನಿಯರು ಹಾಗೂ ಏಜೆಂಟರ್‌ಗಳು. ಈ ಪ್ರಾಂಚೈಸಿಗಳೆಂದು ಕರೆಯಲ್ಪಡುವ ತಂಡಗಳ ನಿಜವಾದ ಯಜಮಾನರು ಯಾರು ಎಂಬುದೇ ಸಾರ್ವಜನಿಕರಿಗೆ ಸರಿಯಾಗಿ ಗೊತ್ತಿಲ್ಲ.

ಒಂದು ಅಂದಾಜಿನಂತೆ ಈ ಐಪಿಎಲ್ ಎಂಬ 'ಕ್ರೀಡೋದ್ಯಮ'ಕ್ಕೆ ದೊಡ್ಡ ಮಟ್ಟದಲ್ಲಿ ಹಣ ಹೂಡಿರುವವರು ಭೂಗತ ಜಗತ್ತನ್ನು ಆಳುತ್ತಿರುವವರು ಎಂಬ ಗುಮಾನಿ ಇದೆ. ಹಾಗೆಯೇ ಈ ಫ್ರಾಂಚೈಸಿಗಳು ಕಪ್ಪು ಹಣವನ್ನು ಬಿಳಿಯಾಗಿಸಲು ಕ್ರಿಕೆಟ್‌ನ್ನು ಉಪಯೋಗಿಸುತ್ತಿವೆ ಎಂಬ ಅಂಶ ತನಿಖೆಯಿಂದ ಬಹಿರಂಗವಾಗುತ್ತಿದೆ. ಅಂದರೆ ಮುಖಕ್ಕಿಂತಲೂ ಮುಖವಾಡಗಳೇ ತುಂಬಿರುವ ಟೂರ್ನಿ ಇದು. *ಜೀ ಟಿವಿ*ಯಿಂದ ಟಿ–೨೦ ಕಲ್ಪನೆಯನ್ನು ಕದ್ದು ಯಶಸ್ಸು ಪಡೆದವನು ಲಲಿತ್ ಮೋದಿ ಎಂಬ ಉದ್ದಿಮೆದಾರ. ಮುಂದುವರೆಸಿದ್ದು ಬಿಸಿಸಿಐ ಎಂಬ ಪ್ರೈವೇಟ್ ಕಂಪನಿ. ಇಲ್ಲಿ ಆಟ ನಡೆಯುವುದು ಕ್ಷಣ ಮಾತ್ರ. ಸುತ್ತಮುತ್ತಲೂ ಹೆಂಗಳೆಯರು, ಮದ್ಯ ಹಾಗೂ ಗ್ಲಾಮರ್ ಜಗತ್ತಿನ ಲಲನಾಮಣಿಗಳ ಅಟ್ಟಹಾಸ. ನಂತರ ಪಾನಗೋಷ್ಠಿ. ಪರಿಸ್ಥಿತಿ ಹೀಗಿರುವಾಗ ಇಂತಹ ನಿರ್ಲಜ್ಜತನ ಹಾಗೂ ನೈತಿಕ ಪರಿಶುದ್ದತೆ ಈ ವಾತಾವರಣದಲ್ಲಿ ಸಹಬಾಳ್ವೆ ನಡೆಸುವ ಪ್ರಯತ್ನ ಯಶಸ್ವಿಯಾದೀತೆ? ಎಲ್ಲಿ ಅನೈತಿಕತೆ ಹಾಗು ಅಶ್ಲೀಲತೆ ವಿಜೃಂಭಿಸುತ್ತಿರುತ್ತದೆಯೋ ಅಲ್ಲಿ ಭೂಗತ ಜಗತ್ತಿನವರು ತಮ್ಮ ಪಾಲನ್ನು ಕೇಳುತ್ತಾ ಠಳಾಯಿಸುತ್ತಿರುತ್ತಾರೆ.



ಐ.ಪಿ.ಎಲ್.ನಲ್ಲಿ ಸಿನಿಮಾ ತಾರೆಯರೊಂದಿಗೆ ಲಲಿತ್ ಮೋದಿ

ಇದನ್ನು ನಿಯಂತ್ರಿಸಬೇಕಾದ ಹಾಗೂ ಆಟದ ಘನತೆಯನ್ನು ಕಾಪಾಡಬೇಕಾದ ಬಿಸಿಸಿಐಗೂ ಈ ವಿಷಯ ಗೊತ್ತಿಲ್ಲದ ವಿಚಾರವೇನಲ್ಲ. ಆದರೆ ಲಾಭಕೋರತನದಲ್ಲಿ ಮುಳುಗಿರುವ ಹಾಗೂ ರಚನಾತ್ಮಕ ಟೀಕೆಗಳನ್ನು ಯಾವತ್ತೂ ಸ್ವೀಕರಿಸದ ಭಾರತೀಯ ಆಡಳಿತಗಾರರು ಪಾರದರ್ಶಕವಾಗಿ ವರ್ತಿಸುತ್ತಿಲ್ಲ.

ಆಟವನ್ನು ಶುದ್ಧಿಕರಿಸುವ ಮತ್ತು ಆಟದ ಘನತೆಯನ್ನು ಎತ್ತಿ ಹಿಡಿಯುವ ಜವಾಬ್ದಾರಿ ಇರುವ ಬಿಸಿಸಿಐ ಒಂದು ಜಡವಾದ, ಭ್ರಷ್ಟ ಸಂಸ್ಥೆ. ರಾಷ್ಟ್ರೀಯ ತಂಡವನ್ನು ಆರಿಸುವ ಇದು ಒಂದು ಖಾಸಗಿ ಸಂಸ್ಥೆ! ಸರ್ಕಾರದ ಅನುದಾನ ಪಡೆಯದೇ ಇರುವುದರಿಂದ ಇದು ಆರ್ ಟಿ ಐ ವ್ಯಾಪ್ತಿಗೂ ಬರುವುದಿಲ್ಲ. ಆದ್ದರಿಂದಲೇ ಇದಕ್ಕೆ ಸಾರ್ವಜನಿಕ ಉತ್ತರದಾಯಿತ್ವ ಇಲ್ಲ. ಮಿತಿಮೀರಿದ ಬಂಡವಾಳ ಮತ್ತು ಖಾಸಗಿ ಅಧಿಕಾರವನ್ನು ಹೊಂದಿರುವ ಈ ಸಂಸ್ಥೆಯ ಮೂಲಭೂತ ವ್ಯವಸ್ಥೆಯನ್ನು ಸರ್ಜರಿ ಮಾಡುವ ಛಾತಿ ಯಾರಿಗೂ ಇಲ್ಲ. ಬಿಸಿಸಿಐನ ಆಧುನಿಕ ಮಹಾರಾಜರಿಗೆ ಅದು ಬೇಕಾಗಿಯೂ ಇಲ್ಲ. ಪಾರದರ್ಶಕ ಆಡಳಿತಕ್ಕೂ ಬಿಸಿಸಿಐಗೂ ಯಾವುದೇ ಸಂಬಂಧವಿಲ್ಲ. ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ ಅನ್ನು ಸಂಪೂರ್ಣ ನಿಯಂತ್ರಿಸುತ್ತಿರುವ ಬಿಸಿಸಿಐನಲ್ಲಿ ರಾಜಕೀಯ ಪುಡಾರಿಗಳು, ಖುಲ್ಲ ವ್ಯಾಪಾರಿಗಳು, ಸಿನಿಮಾ ಸ್ಟಾರ್‌ಗಳು ಹಾಗೂ ಉದ್ದಿಮೆದಾರರೇ ತುಂಬಿಹೋಗಿದ್ದಾರೆ. ನೈಜ ಕಾಳಜಿ ಇಲ್ಲದಿರುವ ಬಿಸಿಸಿಐನ ಆಡಳಿತಗಾರರಿಗೆ ಬೇಕಾಗಿರುವುದು ಖ್ಯಾತಿ ಮತ್ತು ಹಣ ಮಾತ್ರ. ಲಲಿತ್ ಮೋದಿಯಿಂದ ಹಿಡಿದು ಎನ್. ಶ್ರೀನಿವಾಸನ್ ರೀತಿಯ ಭ್ರಷ್ಟರಿಂದ ತುಂಬಿರುವ ಬಿಸಿಸಿಐನ ಖಾಸಗಿ ವಾಣಿಜ್ಯ ವ್ಯವಸ್ಥೆಯೇ ಭಾರತದಲ್ಲಿ ಕ್ರಿಕೆಟ್ ದಾರಿ ತಪ್ಪಲು ಮೂಲ ಕಾರಣ. ಲಲಿತ್ ಮೋದಿ ಮಾಡಿರುವ ಆರ್ಥಿಕ ಅಪರಾಧ ಹಾಗೂ ಕಪ್ಪುಹಣದ ಬಳಕೆ ಆತನೊಬ್ಬನಿಗೆ ಸೀಮಿತವಾಗಿಲ್ಲ. ಅರುಣ್ ಜೈಟ್ಲಿ, ಲಲ್ಲೂ ಪ್ರಸಾದ್ ಯಾದವ್, ಸ್ವತಃ ನರೇಂದ್ರ ಮೋದಿ, ರಾಜೀವ್ ಶುಕ್ಲ, ಶಶಿ ತರೂರ್ ಮೊದಲಾದವರು ಈ ಕ್ರಿಕೆಟ್ ಆಡಳಿತದಲ್ಲಿ ಮೂಗು ತೂರಿಸಿದವರೇ, ತೂರಿಸುತ್ತಿರುವವರೇ! ಬಿಸಿಸಿಐ ಎಂಬ ಕ್ರೀಡಾ ಸಂಸ್ಥೆ ಬಹುತೇಕ ಉದ್ದಿಮೆದಾರರಿಗೆ ಮತ್ತು ಪುಡಾರಿಗಳಿಗೆ ಲಾಂಚಿಂಗ್ ಪ್ಯಾಡ್ ಆಗಿ ಬದಲಾವಣೆ ಹೊಂದಿದೆ. ಒಂದು ಅನುಮಾನದ ಪ್ರಕಾರ ಸುನಂದಾ ಪುಷ್ಕರ್‌ಳ ಮರಣ ಐಪಿಎಲ್ ಕರಾಳ ಧಂಧೆಯೊಂದಿಗೆ ತಳಕು ಹಾಕಿಕೊಂಡಿದೆ. ಹಾಗಾಗಿಯೇ ತೆರಿಗೆ ವಂಚನೆ, ಹಣ ಕಳ್ಳಸಾಗಣೆಯಂತಹ ಆರೋಪಗಳನ್ನು ಹೊತ್ತು ದೇಶಬಿಟ್ಟು ಓಡಿ ಹೋಗಿರುವ ಲಲಿತ್ ಮೋದಿಯನ್ನು ಆರು ವರ್ಷಗಳಾದರೂ ದೇಶಕ್ಕೆ ಕರೆತಂದು ವಿಚಾರಣೆಗೆ ಒಳಪಡಿಸಲಾಗಿಲ್ಲ ಮತ್ತು ಇತ್ತೀಚೆಗೆ ಬಯಲಾಗಿರುವ ವಿದೇಶಾಂಗ ಮಂತ್ರಿ ಸುಷ್ಮಾ ಸ್ವರಾಜ್ ಮತ್ತು ರಾಜಸ್ಥಾನದ ಮುಖ್ಯಮಂತ್ರಿ ವಸುಂಧರಾ ರಾಜೇ ಈತನಿಗೆ ಸಹಾಯ ಒದಗಿಸಿದ್ದಾರೆಂಬ ಸುದ್ದಿ ರಾಷ್ಟ್ರೀಯ ರಾಜಕಾರಣದಲ್ಲಿ ಒಂದು ಬಿರುಗಾಳಿಯನ್ನೇ ಎಬ್ಬಿಸಿದೆ.

ಬಿಸಿಸಿಐನ ರಚನೆಯೇ ಯಾವುದೇ ಭ್ರಷ್ಟ ರಾಜಕೀಯ ಪಕ್ಷಕ್ಕಿಂತ ಬೇರೆಯಾಗಿಲ್ಲ. ಇದರಲ್ಲಿ ಅಧಿಕಾರ ಹಿಡಿಯುವವರು ಓಟ್ ಬ್ಯಾಂಕ್ ರಾಜಕಾರಣದಲ್ಲಿ ನುರಿತವರಿರುತ್ತಾರೆ. ಆದ್ದರಿಂದಲೇ ಬಿಜೆಪಿಯ ಅರುಣ್ ಜೆಟ್ಲಿ,



**ರಾಜೀವ್ ಶುಕ್ಲಾ, ಅರುಣ್ ಜೈಟ್ಲಿ, ಲಲಿತ್ ಮೋದಿಯ ರಸಕ್ಷಣಗಳು**

ಕಾಂಗ್ರೆಸ್‌ನ ರಾಜೀವ್ ಶುಕ್ಲಾ ಮತ್ತು ಎನ್ ಸಿ ಪಿ ಯ ಶರತ್ ಪವಾರ್‌ರಿಗೆ ಬಿಸಿಸಿಐ ವಿಚಾರದಲ್ಲಿ ಯಾವುದೇ ಭಿನ್ನಾಭಿಪ್ರಾಯವಿಲ್ಲ! ಬಣ ರಾಜಕೀಯ, ಅಂದಾದುಂದಿ ವ್ಯವಹಾರ ಹಾಗೂ ತೆರೆಮರೆಯ ಹಣಬಲದಿಂದ ಅಧಿಕಾರ ಹಿಡಿಯುವ ಆಡಳಿತಗಾರರಿಂದ ಯಾವ ಬಗೆಯ ಜವಾಬ್ದಾರಿಯನ್ನು ಮತ್ತು ಮುಂದಾಲೋಚನೆಯನ್ನು ಒಬ್ಬ ಕ್ರೀಡಾಪ್ರೇಮಿ ನಿರೀಕ್ಷಿಸಬಹುದು? ಟಿ ವಿ ನೇರಪ್ರಸಾರದಿಂದ ಬರುವ ಆದಾಯದಿಂದ ಕೊಬ್ಬಿರುವ ಬಿಸಿಸಿಐಗೆ ಸಾಂಪ್ರದಾಯಿಕ ಟೆಸ್ಟ್ ಕ್ರಿಕೆಟ್ ಆದ್ಯತೆಯ ವಸ್ತುವೂ ಅಲ್ಲ. ತನ್ನ ಬಗೆಗಿನ ಟೀಕೆಯನ್ನು ಯಾವತ್ತೂ ತೆರೆದ ಮನದಿಂದ ಸ್ವೀಕರಿಸದಿರುವ ಆಡಳಿತಗಾರರು ಒಂದು ಬಗೆಯ ಕರ್ಫ್ಯೂ ಹಾಕಿರುವ ವಾತಾವರಣವನ್ನು ನಿರ್ಮಿಸಿದ್ದಾರೆ. ಹಾಲಿ ಆಟಗಾರರು ಹೋಗಲಿ ಮಾಜಿ ಆಟಗಾರರು ಅಥವಾ ಖ್ಯಾತ ವೀಕ್ಷಕ ವಿವರಣೆಕಾರರು ತನ್ನ ವಿರುದ್ಧ ಮಾತನಾಡದಿರುವ ವ್ಯವಸ್ಥೆ ಅಲ್ಲಿ ಸದ್ಯಕ್ಕೆ ಚಾಲ್ತಿಯಲ್ಲಿದೆ. ಸುನಿಲ್ ಗವಾಸ್ಕರ್ ಮತ್ತು ರವಿಶಾಸ್ತ್ರಿ ತರದ ಖ್ಯಾತನಾಮರು ಇದರ ಗುತ್ತಿಗೆ ವೀಕ್ಷಕ ವಿವರಣೆಕಾರರು!. ಈಗ ತಾನೇ ನಿವೃತ್ತಿ ಹೊಂದಿರುವ ತೆಂಡೂಲ್ಕರ್, ಗಂಗೂಲಿ, ಲಕ್ಷ್ಮಣ್ ಮುಂತಾದವರು ಇದರ ಸಲಹೆಗಾರರ ಯಾದಿಯಲ್ಲಿದ್ದಾರೆ. ಆದರೆ ಈ ಸಲಹೆಗಾರ ಎಂದರೆ ಏನು ಎಂಬುದು ಸ್ವತಃ ಗಂಗೂಲಿ, ಲಕ್ಷ್ಮಣ್‌ಗೂ ಗೊತ್ತಿಲ್ಲವಂತೆ! ಅಷ್ಟೇ ಅಲ್ಲ ಸದ್ಯಕ್ಕೆ ಭಾರತದಲ್ಲಿ ಸ್ವಾತಂತ್ರ್ಯ ಇರುವ ಕ್ರೀಡಾ ವಾಹಿನಿಯಾಗಲಿ, ವೀಕ್ಷಕ ವಿವರಣೆಕಾರರಾಗಲಿ ಇಲ್ಲ. ಬಿಸಿಸಿಐನ ಯಾವುದೇ ನೀತಿಯನ್ನು ಟೀಕಿಸುವವರಿಗೆ ಅಘೋಷಿತ ಬಹಿಷ್ಕಾರ ಹಾಕಲಾಗುತ್ತದೆ. ನೋಮ್ ಚೋಮಸ್ಕಿ ವಾದಿಸುವಂತೆ ಮ್ಯಾನ್ಯುಫ್ಯಾಕ್ಚರಿಂಗ್ ಕನ್ಸೆಂಟ್ ಎಂಬ ನೀತಿ ಈಗ ಜಾರಿಯಲ್ಲಿದೆ.

ಭಾರತ ತಂಡವು ಪುಟಿದೇಳುವ ವಿದೇಶಿ ಪಿಚ್‌ಗಳಲ್ಲಿ ದಯನೀಯ ವೈಫಲ್ಯ ಅನುಭವಿಸುತ್ತಿದ್ದರೂ ಸಂಸ್ಥೆ ಇದಕ್ಕೆ ಚಿಕ್ಕ ಪರಿಹಾರವನ್ನು ಹುಡುಕಲೆತ್ನಿಸಿಲ್ಲ. ದೇಸಿ ರಣಜಿ ಪಂದ್ಯಾವಳಿ ತನ್ನ ಮಹತ್ವ ಕಳೆದುಕೊಂಡು ಎಷ್ಟೋ ಕಾಲವಾಗಿದೆ. ಕಂಪ್ಯೂಟರ್ ತಂತ್ರಜ್ಞಾನದಲ್ಲಿ ಮೇರು ಸಾಧನೆ ಮಾಡಿರುವ ಈ ದೇಶದಲ್ಲಿ ಡಿಆರ್‌ಎಸ್ ತಂತ್ರಜ್ಞಾನದ ಸುಳಿವು ಇಲ್ಲ. ಹಾಗೆಯೇ ಐಪಿಎಲ್‌ನ ಉದ್ರೇಕಕಾರಿ ಆಟ ಹಲವು ಅವಾಂತರಗಳನ್ನು ಸೃಷ್ಟಿಸಿದೆ. ಈ ಟೂರ್ನಿಯಲ್ಲಿ ಆಡುವ ಬಹುತೇಕ ಆಟಗಾರರಿಗೆ ರಾಷ್ಟ್ರೀಯ ತಂಡದಲ್ಲಿ ಆಡುವ ಮನಸ್ಸಿಲ್ಲ. ಟೆಸ್ಟ್ ಪಂದ್ಯ ಎಂದ ಕೂಡಲೇ ಆಯಾಸ ಪಡುವ ಭಾರತೀಯ ಕ್ರಕೆಟ್ ತಂಡಕ್ಕೆ ಐಪಿಎಲ್ ಆಡಲು ಯಾವಾಗಲೂ ತೆರೆದ ಮನಸ್ಸಿರುತ್ತದೆ. ಇಲ್ಲಿಯವರೆಗೆ ಅನಿಶ್ಚಿತತೆ ಹಾಗೂ ಅನಿರೀಕ್ಷಿತಗಳೇ ಕ್ರಿಕೆಟ್‌ನ ಬಂಡವಾಳವಾಗಿತ್ತು. ಈಗ ಎಲ್ಲವೂ ನಿಶ್ಚಿತ. ಪಂದ್ಯದ ಗತಿಯನ್ನು ನಿರ್ಧರಿಸುವವರು ಪಾತಕ ಲೋಕದ ಬುಕ್ಕಿಗಳು ಮತ್ತು ಇವರಿಗೆ ಸಾಥ್ ನೀಡುತ್ತಿರುವ ಖಾಸಗಿ ವ್ಯವಸ್ಥೆ. ಹೀಗಾದ್ದರಿಂದ ಕ್ರಿಕೆಟ್ ಕುರಿತ ನಮ್ಮೆಲ್ಲ ತಲತಲಾಂತರದ ತಿಳುವಳಿಕೆ, ವಿವೇಕ ಹಾಗೂ ಸೌಂದರ್ಯಾಭಿಜ್ಞತೆಗಳು ತಲೆಕೆಳಗಾಗಿವೆ. ಆದ್ದರಿಂದ ಆಟದ ಅನಿಯಂತ್ರಿತ ವಾಣಿಜ್ಯೀಕರಣವನ್ನು ತಪ್ಪಿಸುವುದು ಇವತ್ತಿನ ಆದ್ಯತೆಯಾಗಬೇಕಾಗಿದೆ. ಹಾಗೆಯೇ ಬಿಸಿಸಿಐಯನ್ನು ಮಾಹಿತಿ ಹಕ್ಕು ಕಾಯ್ದೆಯ ಒಳಗೆ ಬರುವಂತೆ ಮಾಡಿ ಇದರ ಹಣಕಾಸಿನ ವ್ಯವಹಾರವನ್ನು ಕಂಟ್ರೋಲರ್ ಮತ್ತು ಆಡಿಟರ್ ಜನರಲ್ ಆಫ್ ಇಂಡಿಯಾದ ವ್ಯಾಪ್ತಿಗೆ ಬರುವಂತೆ ಮಾಡಿದರೆ ಇದರ ಅನಾಹುತಕಾರಿ ಆಡಳಿತ ನಿಯಂತ್ರಣಕ್ಕೆ ಬರಬಹುದು.



**(ಲೇಖಕ ಟಿ. ಅವಿನಾಶ್, ಶಿವಮೊಗ್ಗದ ಸಹ್ಯಾದ್ರಿ ಕಾಲೇಜಿನಲ್ಲಿ ಇಂಗ್ಲಿಷ್ ಅಧ್ಯಾಪಕರಾಗಿದ್ದು, ಸಾಹಿತ್ಯ ಚಿಂತನೆ ಮತ್ತು ಕ್ರೀಡಾ ಬರಹ ಅವರ ವಿಶೇಷ ಆಸಕ್ತಿಗಳು)**

ಶುಭಾಶಯಗಳೊಂದಿಗೆ–

ಹಣ್ಣು ಬಿಟ್ಟ ಮರಗಳು ಬಾಗುತ್ತವೆ. ಹಾಗೇ ತಿಳುವಳಿಕೆಯುಳ್ಳ ಸಜ್ಜನರೂ ಬಾಗುತ್ತಾರೆ

**– ವ್ಯಾಸ ಸುಭಾಷಿತ**



**–ಅಶೋಕ ಸಬರದ**

**ಮತ್ತು ಕುಟುಂಬ**

**ಶ್ರೀನಗರ, ಧಾರವಾಡ**

# ಇಂದಿನ ಕನ್ನಡ ಚಲನಚಿತ್ರೋದ್ಯಮ ಏಕೆ ಹೀಗಿದೆ?: ಒಂದು ವಿಶ್ಲೇಷಣೆ

–ಡಾ ಕೆ.ಪುಟ್ಟಸ್ವಾಮಿ

**ಜೆ.ಎಚ್. ಪಟೇಲ್‌ರವರ ಮಂತ್ರಿ ಮಂಡಲದಲ್ಲಿ ವಾರ್ತಾ ಸಚಿವರಾಗಿದ್ದ ಅಂದಿನ ವಾರ್ತಾಮಂತ್ರಿ ಎಂ.ಸಿ. ನಾಣಯ್ಯ ಅವರು 'ಈರುಳ್ಳಿ, ಬೆಳ್ಳುಳ್ಳಿ ಮಾಡುವವರೆಲ್ಲ ಕನ್ನಡ ಚಿತ್ರ ನಿರ್ಮಿಸುತ್ತಿರುವುದರಿಂದಲೇ ಈ ರಂಗಕ್ಕೆ ಇಂಥ ಗತಿ ಬಂದಿದೆ' ಎಂದು ಮರುಗಿದ್ದರು. ಅವರ ಮಾತಿನ ಇಂಗಿತಾರ್ಥವನ್ನು ಅರಿಯದೆ, ವಾಚ್ಯಾರ್ಥವನ್ನು ಗ್ರಹಿಸಿದವರು ಈರುಳ್ಳಿ ಬೆಳ್ಳುಳ್ಳಿ ವ್ಯಾಪಾರಿಗಳಿಗೆ ಚಿತ್ರ ಮಾಡುವ ಹಕ್ಕಿಲ್ಲವೇ? ಎಂದು ಪ್ರಶ್ನಿಸಿ ಚರ್ಚೆಯ ದಿಕ್ಕು ತಪ್ಪಿಸಿದ್ದರು. ಕನ್ನಡ ಸಂಸ್ಕೃತಿಯ ಗಂಧ ಗಾಳಿ ತಿಳಿಯದ, ಚಲನಚಿತ್ರ ಮಾಧ್ಯಮದ ಉದ್ದೇಶಗಳ ಬಗ್ಗೆ ತಿಳುವಳಿಕೆಯಿಲ್ಲದವರ ಕೈಗೆ ಸಿಕ್ಕ ಕನ್ನಡ ಚಿತ್ರೋದ್ಯಮ ಸೊರಗಿದೆ..**


ಇವು ಕನ್ನಡ ಸಿನಿಮಾ ಬಗ್ಗೆ ನಡೆಯುವ ಯಾವುದೇ ವಿಚಾರ ಸಂಕಿರಣ ಕಾರ್ಯಾಗಾರ ಅಥವಾ ಚರ್ಚೆಗಳಲ್ಲಿ ಕಡ್ಡಾಯವಾಗಿ ಉದ್ಭವವಾಗುತ್ತಿರುವ ಪ್ರಶ್ನೆಗಳು. ಇತ್ತೀಚಿನ ಕನ್ನಡ ಚಿತ್ರಗಳ ಗುಣಮಟ್ಟ, ಕಲಾತ್ಮಕತೆ, ವಸ್ತು, ವಿಷಯ ನಿರೂಪಣೆಯಲ್ಲಿ ಕಾಣದ ನಾವಿನ್ಯ, ಪರಭಾಷಾ ಚಿತ್ರಗಳಿಗೆ ಹೋಲಿಸಿದರೆ ಕನ್ನಡ ಚಿತ್ರರಂಗದಲ್ಲಿ ಕಂಡುಬರುವ ಪ್ರಯೋಗಗಳ ಅಭಾವದ ಬಗ್ಗೆ ಏಳುತ್ತಿರುವ ಪ್ರಶ್ನೆಗಳಿವು. ಆದರೆ ಕನ್ನಡ ಚಿತ್ರರಂಗ ಎದುರಿಸುತ್ತಿರುವ ಸಮಸ್ಯೆ ಇಷ್ಟಕ್ಕೆ ಸೀಮಿತವಲ್ಲ.

ಹಿಂದೆ ಡಾ. ರಾಜ್‌ಕುಮಾರ್ ಅವರು 'ಅನ್ನದಾತ'ರೆಂದು ಕರೆಯುತ್ತಿದ್ದ ನಿರ್ಮಾಪಕರು, ಕನ್ನಡ ನಟರು ಟಿ.ವಿ. ರಿಯಾಲಿಟಿ ಶೋಗಳಲ್ಲಿ ನಟಿಸುವುದಕ್ಕೆ ನಿಷೇಧ ಹೇರಬೇಕೆಂದು ಒತ್ತಾಯಿಸಿ ಇತ್ತೀಚೆಗೆ ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಯಲ್ಲಿ 'ಅಮರಣಾಂತ' ಉಪವಾಸ ಕೈಗೊಂಡಿದ್ದರು. ಇದು ಇತ್ತೀಚಿನ ದಿನಗಳಲ್ಲಿ ಕಂಡ ಅತ್ಯಂತ ಹಾಸ್ಯಾಸ್ಪದ ಪ್ರಹಸನ. ತಾವು ನಿರ್ಮಿಸಿದ ಚಿತ್ರಗಳಲ್ಲಿರುವ ಯಾವುದೋ ಕಳಪೆ ಹಾಸ್ಯ ದೃಶ್ಯವೊಂದನ್ನು ಅವರು ಅಭಿನಯಿಸಿದಂತಿತ್ತು. ನಟ ಅರವಿಂದ್, ಪುನೀತ್, ಸುದೀಪ್‌ರವರ ರಿಯಾಲಿಟಿ ಶೋಗಳು ಟಿ.ವಿ.ಗಳಲ್ಲಿ ಜನಪ್ರಿಯವಾಗುತ್ತಿರುವುದರಿಂದ ಜನ ಚಿತ್ರಮಂದಿರಕ್ಕೆ ಬರುವುದಿಲ್ಲ ಎಂಬ ಕೊರಗು ಒಂದಾದರೆ, ಈ ಜನಪ್ರಿಯ ನಟರು ಸಿನಿಮಾಗಳಿಗೆ ಲಭ್ಯವಾಗುತ್ತಿಲ್ಲ ಎನ್ನುವ ಅಳಲು ಪ್ರತಿಭಟನೆಗೆ ಕಾರಣ. ನಿರೀಕ್ಷಿಸಿದಂತೆ ಅದು ಯಾವುದೇ ಫಲಿತಾಂಶವಿಲ್ಲದೆ ಮುಕ್ತಾಯವಾಯಿತು. ಈ ನಟರಿಲ್ಲದೆ ಚಿತ್ರಗಳನ್ನು ನಿರ್ಮಿಸುವ ಕ್ರಿಯಾಶೀಲತೆ ತಮ್ಮಲ್ಲಿಲ್ಲ ಎಂದು ಅವರೇ ಒಪ್ಪಿಕೊಂಡಂತಾಯಿತು. ಇಂಥ ಬರಡು ನಿರ್ಮಾಪಕರಿಂದ ಕನ್ನಡ ಚಿತ್ರೋದ್ಯಮ ಉಳಿಯಬೇಕಾದ ಅನಿವಾರ್ಯ ಸೃಷ್ಟಿಯಾಗಿರುವುದರಿಂದಲೇ ಕನ್ನಡ ಚಿತ್ರರಂಗ ಈಗಿನಂತಿದೆ.

ರಿಯಲ್ ಎಸ್ಟೇಟ್ ದಳ್ಳಾಳಿಗಳು, ಭೂಗಳ್ಳರು, ಉದ್ಯಮಿಗಳು, ಗುತ್ತಿಗೆದಾರರು, ರಾಜಕೀಯ ಕ್ಷೇತ್ರವನ್ನು ಆಕ್ರಮಿಸಿಕೊಂಡಂತೆ ಈಗ ಕನ್ನಡ ಚಿತ್ರರಂಗವನ್ನು ಕೈವಶ ಮಾಡಿಕೊಂಡಿದ್ದಾರೆ. ಕನ್ನಡ ಚಿತ್ರರಂಗದ ಅಧೋಗತಿಯನ್ನು ಜೆ.ಎಚ್. ಪಟೇಲ್‌ರವರ ಮಂತ್ರಿ ಮಂಡಲದಲ್ಲಿ ವಾರ್ತಾ ಸಚಿವರಾಗಿದ್ದ ಅಂದಿನ ವಾರ್ತಾಮಂತ್ರಿ ಎಂ.ಸಿ. ನಾಣಯ್ಯ ಅವರು 'ಈರುಳ್ಳಿ, ಬೆಳ್ಳುಳ್ಳಿ ಮಾಡುವವರೆಲ್ಲ ಕನ್ನಡ ಚಿತ್ರ ನಿರ್ಮಿಸುತ್ತಿರುವುದರಿಂದಲೇ ಈ ರಂಗಕ್ಕೆ ಇಂಥ ಗತಿ ಬಂದಿದೆ' ಎಂದು ಮರುಗಿದ್ದರು. ಅವರ ಮಾತಿನ ಇಂಗಿತಾರ್ಥವನ್ನು ಅರಿಯದೆ, ವಾಚ್ಯಾರ್ಥವನ್ನು ಗ್ರಹಿಸಿದವರು ಈರುಳ್ಳಿ ಬೆಳ್ಳುಳ್ಳಿ ವ್ಯಾಪಾರಿಗಳಿಗೆ ಚಿತ್ರ ಮಾಡುವ ಹಕ್ಕಿಲ್ಲವೇ? ಎಂದು ಪ್ರಶ್ನಿಸಿ ಚರ್ಚೆಯ ದಿಕ್ಕು ತಪ್ಪಿಸಿದ್ದರು. ಕನ್ನಡ ಸಂಸ್ಕೃತಿಯ ಗಂಧ ಗಾಳಿ ತಿಳಿಯದ, ಚಲನಚಿತ್ರ ಮಾಧ್ಯಮದ ಉದ್ದೇಶಗಳ ಬಗ್ಗೆ ತಿಳುವಳಿಕೆಯಿಲ್ಲದವರ ಕೈಗೆ ಸಿಕ್ಕ ಕನ್ನಡ ಚಿತ್ರೋದ್ಯಮ ಸೊರಗಿದೆ..

ಮತ್ತೊಂದು ಪ್ರಸಂಗ. ಖಾಸಗಿ ಸಂಸ್ಥೆಯೊಂದು ನಡೆಸಿದ ಸಮೀಕ್ಷೆಯು ಕನ್ನಡ ಚಿತ್ರಗಳನ್ನು ನೋಡುವವರ ಸಂಖ್ಯೆ ರಾಜ್ಯದಲ್ಲಿ ೨೫ ಲಕ್ಷ ಮೀರಿಲ್ಲವೆಂದು ವರದಿ ಮಾಡಿದೆ. ಇದನ್ನು ನಂಬಿ ಅನೇಕರು ಕನ್ನಡ ಚಿತ್ರರಂಗ ಕ್ರಮೇಣ ಸ್ಥಗಿತವಾಗಬಹುದೆಂಬ ಆತಂಕ ವ್ಯಕ್ತಪಡಿಸಿದ್ದಾರೆ. ಕನ್ನಡ ಚಿತ್ರಗಳನ್ನು ನೋಡುವವರ ಸಂಖ್ಯೆ ಆರಂಭದಿಂದಲೂ ಒಂದು ಮಿತಿಯಲ್ಲಿದೆ. ಹಾಗೆಂದು ಕನ್ನಡ ಚಿತ್ರರಂಗ ನಶಿಸಿಹೋಗಿಲ್ಲ. ವರ್ಷಕ್ಕೆ ನೂರಕ್ಕೂ ಹೆಚ್ಚು ಚಲನಚಿತ್ರಗಳನ್ನು ತಯಾರಿಸುವ ಭಾರತದ ಮೊದಲ ಐದು ಭಾಷೆಯ ಚಿತ್ರಗಳಲ್ಲಿ ಕನ್ನಡಕ್ಕೂ ಸ್ಥಾನವಿದೆ. ಈಗಿನ ಪರಿಸ್ಥಿತಿಗಿಂತಲೂ ಘೋರವಾದ ಪರಿಸ್ಥಿತಿಯನ್ನೆದುರಿಸಿ ಕನ್ನಡ ಚಿತ್ರರಂಗ ಉಳಿದಿದೆ. ಆದ್ದರಿಂದ ಈ ಆತಂಕವನ್ನು ಸದ್ಯ ಪಕ್ಕಕ್ಕಿಡಬಹುದು.

ಕನ್ನಡ ಚಿತ್ರರಂಗದ ಇಂತಹ ದುಃಸ್ಥಿಯ ಬಗ್ಗೆ ಚಿಂತನೆ ನಡೆಸುವ ಹೊತ್ತಿನಲ್ಲಿ ಎಸ್.ಎಸ್. ರಾಜಮೌಳಿಯವರ 'ಬಾಹುಬಲಿ' ಎಂಬ ಚಂದಮಾಮ ಕತೆಯ ಸಿನಿಮಾದ ಬಿಡುಗಡೆಯ ಅಬ್ಬರ ಕನ್ನಡ ಚಿತ್ರರಂಗವನ್ನು ನಡುಗಿಸಿದ



'ವಜ್ರಕಾಯ' ಚಿತ್ರದಲ್ಲಿ ಶಿವರಾಜಕುಮಾರ್

ವಿದ್ಯಮಾನವೂ ಸಂಭವಿಸಿದೆ. ಈ ಚಿತ್ರವನ್ನು ಜನರ 'ಮನೆ–ಮನ'ಕ್ಕೆ ಮುಟ್ಟಿಸಲು ಕನ್ನಡ ಟಿ.ವಿ. ಚಾನೆಲ್‌ಗಳು ಸ್ಪರ್ಧೆಗೆ ಬಿದ್ದು ಅದಕ್ಕೆ ನೀಡಿದ ಪ್ರಚಾರ ಸಹ ಬೆಚ್ಚಿ ಬೀಳಿಸುವಂತಿದೆ. (ಪೇಯ್ಡ್ ನ್ಯೂಸ್ ಇದ್ದ ಹಾಗೆ ಇವು ಪೇಯ್ಡ್ ಎಪಿಸೋಡ್‌ಗಳಿರಬಹುದು ಎಂದುಕೊಂಡರೂ, ನಿರೂಪಕರು ಬಳಸುತ್ತಿದ್ದ ಭಾಷೆ, ತೋರುತ್ತಿದ್ದ ಉತ್ಸಾಹ ಕನ್ನಡಿಗರನ್ನು ಬೆಚ್ಚಿಬೀಳಿಸುವಂತಿತ್ತು!)

ಮತ್ತೊಂದು ತಾಜಾ ಸುದ್ದಿ. ಇತರ ಭಾಷೆಯ ಚಲನಚಿತ್ರಗಳನ್ನು ಮತ್ತು ಟಿ.ವಿ. ಕಾರ್ಯಕ್ರಮಗಳನ್ನು ಕನ್ನಡಕ್ಕೆ ಡಬ್ ಆಗುವುದನ್ನು ವಿರೋಧಿಸಿದ ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ, ಕರ್ನಾಟಕ ಟಿ.ವಿ. ಒಕ್ಕೂಟ ಮತ್ತು ಕರ್ನಾಟಕ ಚಲನಚಿತ್ರ ನಿರ್ಮಾಪಕರ ಸಂಘಗಳಿಗೆ ಭಾರತೀಯ ಸ್ಪರ್ಧಾ ಆಯೋಗ ಬೆವರಿಳಿಸಿದೆ. ಕನ್ನಡ ಗ್ರಾಹಕರ ಕೂಟ ಮತ್ತು ಖಾಸಗಿ ವ್ಯಕ್ತಿಯೊಬ್ಬರು ಈ ಮೂರು ಸಂಘಗಳ ನಿಲುವಿನ ವಿರುದ್ಧ ಸಲ್ಲಿಸಿದ್ದ ಅರ್ಜಿಗೆ ಸಂಬಂಧಿಸಿದಂತೆ ತನ್ನ ಅಭಿಪ್ರಾಯ ನೀಡುವ ಆಯೋಗ 'ಕನ್ನಡ ಭಾಷೆ, ಚಲನಚಿತ್ರ ಉದ್ಯಮ ಮತ್ತು ಟಿ.ವಿ. ಉದ್ಯಮವನ್ನು ರಕ್ಷಿಸುವ ನೆಪದಲ್ಲಿ ಯಾವುದೇ ಕಾನೂನು ಬಲ ಇಲ್ಲದೆ ಈ ಮೂರು ಸಂಘಗಳು ವಿರೋಧಿಸುತ್ತಾ ಬಂದಿವೆ ಎಂದು ಟೀಕಿಸುವ ಆಯೋಗವು ಈ ಮೂರು ಸಂಘಟನೆಗಳಿಗೆ ಭಾರಿ ದಂಡ ವಿಧಿಸಿದೆ.

ಇಂತಹ ಸಂದಿಗ್ಧ ಸ್ಥಿತಿಯಲ್ಲಿ ಕನ್ನಡ ಚಿತ್ರರಂಗ ಅದನ್ನು ಸವಾಲಾಗಿ ಸ್ವೀಕರಿಸಿ ತನ್ನ ದಾರಿಯನ್ನು ಕಂಡುಕೊಳ್ಳುವ ಪ್ರಯತ್ನ ಮಾಡಬೇಕಿತ್ತು. ಆದರೆ ಈ ವರ್ಷದ ಮೊದಲ ಆರು ತಿಂಗಳಿನಲ್ಲಿ (ಜನವರಿ–ಜೂನ್) ಬಿಡುಗಡೆಯಾದ ಕನ್ನಡ ಚಿತ್ರರಂಗದ ಕಳೆ–ಬೆಳೆಯನ್ನು ಅವಲೋಕಿಸಿದರೆ ಅಪರೂಪದ ಕೆಲವು ಪ್ರಯತ್ನಗಳನ್ನು ಹೊರತು ಪಡಿಸಿದರೆ ಕನ್ನಡ ಚಿತ್ರರಂಗ ನಿಂತ ನೀರಾಗಿರುವುದು ಕಾಣುತ್ತದೆ. ಈ ವರ್ಷದ ಮೊದಲ ಆರು ತಿಂಗಳಲ್ಲಿ ಬಿಡುಗಡೆಯಾದ ಚಿತ್ರಗಳು ಒಟ್ಟು ೫೪. (ಸೆನ್ಸಾರ್ ಆದ ಚಿತ್ರಗಳ ಸಂಖ್ಯೆ ೮೦ ಮೀರಿದೆ) ಈ ಪಟ್ಟಿಯಲ್ಲಿ ೧೯೭೪ರಲ್ಲಿ ಬಿಡುಗಡೆಯಾಗಿದ್ದ 'ಎರಡು ಕನಸು' ಮತ್ತು ೧೯೯೫ರಲ್ಲಿ ಬಿಡುಗಡೆಯಾಗಿದ್ದ 'ಓಂ' ಚಿತ್ರಗಳೂ ಸೇರಿವೆ. ಈ ವರ್ಷ ಬಿಡುಗಡೆಯಾದ ಮೊದಲ ಚಿತ್ರ ಗಣೇಶ್ ನಾಯಕರಾಗಿದ್ದ 'ಖುಷಿ ಖುಷಿಯಾಗಿ'. ಮೊದಲ ಚಿತ್ರವೇ 'ಗುಂಡೆ ಜಾರಿ ಗುಳ್ಳಂತಾಯಿಂದೆ' ತೆಲುಗು ಚಿತ್ರದ ರೀಮೇಕ್. ಅಲ್ಲಿಗೆ ಕನ್ನಡ ಚಿತ್ರರಂಗ ಹಿಡಿದ ದಾರಿಗೊಂದು ಸೂಚನೆ ಸಿಕ್ಕಿದಂತಾಯಿತು. ಬಿಡುಗಡೆಯಾದ ೫೨ ಹೊಸ ಚಿತ್ರಗಳಲ್ಲಿ ಸುಮಾರು ಇಪ್ಪತ್ತು ಚಿತ್ರಗಳು ಪ್ರಣಯ ಕತೆಗಳ ಚಿತ್ರಗಳು. ಜೊತೆಗೆ ಒಂದಿಷ್ಟು ಹೊಡೆದಾಟದ ದೃಶ್ಯಗಳಿದ್ದ ಈ ವರ್ಗದಲ್ಲಿ ಗೆದ್ದ ಚಿತ್ರಗಳೆಂದರೆ 'ಕೃಷ್ಣಲೀಲಾ', 'ಎಂದೆಂದಿಗೂ' ಮತ್ತು 'ಖುಷಿ ಖುಷಿಯಾಗಿ' ಮಾತ್ರ. ಸಂಖ್ಯಾ ಪ್ರಮಾಣದಲ್ಲಿ ಎರಡನೆಯ ಸ್ಥಾನ ಆಕ್ಷನ್ ಚಿತ್ರಗಳೆಂದು



ಗಿರಿರಾಜ್ ಅವರ 'ಮೈತ್ರಿ' ಚಿತ್ರದಲ್ಲಿ ಸಹನಟಿಯೊಂದಿಗೆ ಮೋಹನಲಾಲ್

ಕರೆಸಿಕೊಳ್ಳುವ ಸೇಡು ಹೊಡೆದಾಟದ ಚಿತ್ರಗಳದ್ದು. ಸುಮಾರು ಹದಿನೆಂಟು ಸಾಹಸಭರಿತ ಚಿತ್ರಗಳು ಬಿಡುಗಡೆಯಾದರೂ ಹಣ ತಂದುಕೊಟ್ಟ ಚಿತ್ರಗಳು– ರನ್ನ, ರಣವಿಕ್ರಮ, ವಜ್ರಕಾಯ ಮತ್ತು ಓಂ ಮಾತ್ರ. ಇವುಗಳಲ್ಲಿ 'ರನ್ನ' ರೀಮೇಕ್ ಆದರೆ 'ಓಂ' ಮರುಬಿಡುಗಡೆಗೊಂಡ ಚಿತ್ರ.

ಕನ್ನಡ ಚಿತ್ರರಂಗದಲ್ಲಿ ಇತ್ತೀಚಿನ ವರ್ಷಗಳಲ್ಲಿ ಕಾಣಿಸಿಕೊಂಡ ಹೊಸ ಪ್ರವೃತ್ತಿ ಎಂದರೆ ಕಾಮೆಡಿ ಚಿತ್ರಗಳ ನಿರ್ಮಾಣ. ಸುಮಾರು ಎಂಟು ಚಿತ್ರಗಳು 'ಕಾಮೆಡಿ'. ಪಟ್ಟ ಹೊತ್ತು ಬಿಡುಗಡೆಯಾದರೂ ಯಶಸ್ಸು ಕಂಡದ್ದು ಶರಣ್ ಅಭಿನಯದ 'ರಾಜ ರಾಜೇಂದ್ರ' ಹಾಗೂ ತಮಿಳು ಚಿತ್ರದ ರೀಮೇಕ್ 'ಜಾಕ್ಸನ್' ಮಾತ್ರ.

ಅಪಾರ ನಿರೀಕ್ಷೆಯನ್ನು ಮೂಡಿಸಿದ ಚಿತ್ರಗಳು ಮುಗ್ಗರಿಸಿಬಿದ್ದದ್ದು ಈ ಅವಧಿಯ ಮತ್ತೊಂದು ವಿಶೇಷ. ಯೋಗರಾಜ್ ಭಟ್‌ರವರ ನಿರ್ದೇಶಿಸಿದ ಜಗ್ಗೇಶ್ ಅಭಿನಯದ 'ವಾಸ್ತು ಪ್ರಕಾರ' ಚಿತ್ರದ 'ಟೈಂ' ಸರಿ ಇರಲಿಲ್ಲ. ಇದಕ್ಕೆ ಸೃಷ್ಟಿಯಾಗಿದ್ದ ಹೈಪ್‌ನಿಂದ ಮರಳಾದ ಪ್ರೇಕ್ಷಕನೊಬ್ಬ ನಿರಾಶೆಗೊಂಡು ಫೇಸ್‌ಬುಕ್‌ನಲ್ಲಿ ಈ ಚಿತ್ರ ವೀಕ್ಷಿಸಿದವರು ಗ್ರಾಹಕರ ನ್ಯಾಯಾಲಯಕ್ಕೆ ಮೊರೆ ಹೋಗಿ ದುಡ್ಡು ವಸೂಲು ಮಾಡಬೇಕೆಂದು ಕರೆಕೊಟ್ಟಿದ್ದರು. ಭಟ್ಟರ ಚಿತ್ರಗಳು ತಾವೇ ಸೃಷ್ಟಿಸಿಕೊಂಡ ಭಾರಕ್ಕೆ ಕುಸಿದರೆ, ಸಾಕಷ್ಟು ಕುತೂಹಲ ಮೂಡಿಸಿದ್ದ ಪತ್ರಕರ್ತ ಟಿ.ಕೆ. ದಯಾನಂದ ಅವರ ಚೊಚ್ಚಲ ಚಿತ್ರ 'ಬೆಂಕಿಪಟ್ಣ' ತನ್ನ ತರ್ಕ ಮತ್ತು ನಿರೂಪಣೆಯಲ್ಲಿನ ಗೊಂದಲದಿಂದ ಪ್ರೇಕ್ಷಕರನ್ನು ಸೆಳೆಯಲು ವಿಫಲವಾಯಿತು. ಬಿಡುಗಡೆಗೂ ಮುನ್ನ ವಿವಾದಗಳಿಂದ ಕುತೂಹಲ ಮೂಡಿಸಿದ್ದ ಪೂಜಾ ಗಾಂಧಿ ನಿರ್ಮಾಣ ಮತ್ತು ಅಭಿನಯದ 'ಅಭಿನೇತ್ರಿ' ಸಹ ವೈಫಲ್ಯ ಕಂಡಿತು. ನಟಿ ಕಲ್ಪನಾ ಅವರ ಜೀವನಕತೆಯನ್ನು ಆಧರಿಸಿ ಕಲ್ಪನಾ–ಪುಟ್ಟಣ್ಣನವರ ಸಂಬಂಧಗಳನ್ನು ಅನಾವರಣ ಮಾಡುವ ಕತೆಯೆಂದು ಬಿಡುಗಡೆಗೂ ಮೊದಲು ವಿವಾದ ಸೃಷ್ಟಿಸಿದ ಈ ಚಿತ್ರ ನಟಿ ಕಲ್ಪನಾ ಅವರಿಗೆ ಗೌರವವನ್ನು ಸಲ್ಲಿಸಲಿಲ್ಲ. ಒಬ್ಬ ನಟಿಯ ವೃತ್ತಿ ಪ್ರಯಾಣದ ಏಳು–ಬೀಳುಗಳನ್ನು ದಾಖಲಿಸದೆ ಎಡಬಿಡಂಗಿ ಚಿತ್ರವಾಯಿತು. ಪೂಜಾ ಗಾಂಧಿಯ ನಟನೆಯನ್ನು ನೋಡುವುದೇ ಒಂದು ಹಿಂಸೆಯಾಯಿತು. ಉಪೇಂದ್ರ ಅವರ 'ಶಿವಂ', ನಟ ಪ್ರೇಂ ಅವರ 'ಡಿಕೆ', ಎಸ್. ನಾರಾಯಣ್‌ರವರ 'ದಕ್ಷ', ರಾಜೇಂದ್ರಸಿಂಗ್ ಬಾಬು ಅವರ 'ರೆಬೆಲ್'– ಈ ವರ್ಷ ನಿರೀಕ್ಷೆ ಹುಟ್ಟಿಸಿ ಮರೆಯಾದ ಚಿತ್ರಗಳು.

ಈ ನಿರಾಶೆಯ ನಡುವೆಯೂ ಕೆಲವು ಚಿತ್ರಗಳು ಕನ್ನಡ ಚಿತ್ರರಂಗದ ಚೈತನ್ಯ ಇನ್ನೂ ಬತ್ತಿಲ್ಲವೆಂಬುದನ್ನು ನಿರೂಪಿಸಿವೆ. 'ಜಟ್ಟ' ಚಿತ್ರದ ಮೂಲಕ ಭರವಸೆ ಮೂಡಿಸಿದ ನಿರ್ದೇಶಕ ಎನ್. ಗಿರಿರಾಜ್ ಬಾಲಾಪರಾಧಿಯ ಕತೆಯನ್ನು ಆಧರಿಸಿ ರೂಪಿಸಿದ 'ಮೈತ್ರಿ' ಪ್ರೇಕ್ಷಕರ–ವಿಮರ್ಶಕರ ಗಮನ ಸೆಳೆಯಿತು. ಮಲಯಾಳಂನ ಪ್ರಖ್ಯಾತ ನಟ ಮೋಹನ್‌ಲಾಲ್ ಜೊತೆಗೆ ಪುನೀತ್ ರಾಜ್‌ಕುಮಾರ್ ತಮ್ಮ ಸ್ಟಾರ್‌ಗಿರಿಯನ್ನು ತೊರೆದು ಕತೆಗೆ ಪೂರಕವಾಗಿ ಅಭಿನಯಿಸಿದ್ದು ಈ ಚಿತ್ರದ ಮತ್ತೊಂದು ವಿಶೇಷ.

ಪಿ. ಶೇಷಾದ್ರಿ ಅವರ 'ವಿದಾಯ' ಚಿತ್ರವು ದಯಾಮರಣದ ಎಳೆಯನ್ನು ಆಧರಿಸಿದ ಚಿತ್ರ. ಅವರ ಹಿಂದಿನ 'ಡಿಸೆಂಬರ್ ೧', 'ಭಾರತ್ ಸ್ಟೋರ್ಸ್'ನಷ್ಟು ಲವಲವಿಕೆಯ ನಿರೂಪಣೆಯಿಲ್ಲದ ಕಾರಣ ಬಿಡುಗಡೆಯಾದರೂ ಯಶ ಕಾಣಲಿಲ್ಲ.

ಪ್ರಸ್ತುತ ಮಲಯಾಳಂ, ತಮಿಳು ಮತ್ತು ಮರಾಠಿ ಚಿತ್ರರಂಗದ



ಮಹಾಂತೇಶ್ ರಾಮದುರ್ಗ ಅವರ 'ಅಗಸಿ ಪಾರ್ಲರ್'ನ ಒಂದು ದೃಶ್ಯ

ಹೊಸ ಪ್ರತಿಭೆಗಳು ಹೊಸ ಪ್ರಯೋಗಗಳಿಗೆ ಒಡ್ಡಿಕೊಂಡು ಪಡೆಯುತ್ತಿರುವ ಯಶಸ್ಸು ನಮ್ಮ ಚಿತ್ರೋದ್ಯಮಿಗಳಿಗೆ ಪಾಠವಾಗಬೇಕಿತ್ತು. ಒಂದೆಡೆ ಸ್ಟಾರ್ ಪದ್ಧತಿಯನ್ನು ತಮಿಳು ಚಿತ್ರರಂಗ ಪೋಷಿಸಿದರೂ ಅದಕ್ಕೂ ಅಧಿಕ ಪ್ರಮಾಣದಲ್ಲಿ ಹೊಸ ಪ್ರತಿಭೆಗಳಿಗೆ ಅವಕಾಶ ನೀಡಿ ಬೆಳೆಸುತ್ತಿದೆ. ತಮಿಳು ನಾಡಿನ ಮೂಲೆ ಮೂಲೆಯಿಂದ ಯುವ ಪ್ರತಿಭೆಗಳು ಲಗ್ಗೆ ಹಾಕಿ ದೊಡ್ಡ ಸ್ಟಾರ್‌ಗಳ ಮೈಚಳಿ ಬಿಡಿಸುತ್ತಿವೆ. ಮಲಯಾಳಂ ಚಿತ್ರರಂಗದಲ್ಲಿ ಜನಪ್ರಿಯತೆಯ ತುತ್ತತುದಿಗೇರಿರುವ ಸ್ಟಾರ್‌ಗಳಿದ್ದರೂ ಅಲ್ಲಿ ಸ್ಟಾರ್‌ಗಿರಿಯಿಲ್ಲ. ವಸ್ತು, ವಿಷಯ, ನಿರೂಪಣೆಯದೇ ಮೇಲುಗೈ. ಹಾಗಾಗಿ ಅಲ್ಲಿ ಅನೇಕ ಬಗೆಯ ಪ್ರಯೋಗಗಳು ನಡೆಯಲು, ಯಶಸ್ವಿಯಾಗಲು ಸಾಧ್ಯವಾಗಿದೆ. ಇನ್ನು ಮರಾಠಿ ಚಿತ್ರರಂಗ ಕಳೆದ ಒಂದು ದಶಕದಿಂದ ಹೊರಳುದಾರಿ ಹಿಡಿದಿದೆ. ಹಿಂದಿ ಚಿತ್ರರಂಗದ ಪ್ರಭಾವದಲ್ಲಿ ಉಸಿರುಗಟ್ಟಿದಂತಿದ್ದ ಮರಾಠಿ ಚಿತ್ರರಂಗದಲ್ಲಿ ಈಗ ಯುವ ಪ್ರತಿಭೆಗಳದೇ ಕಾರುಬಾರು. ಮಹಾರಾಷ್ಟ್ರದ ಸಂಸ್ಕೃತಿಯನ್ನು ಬಿಂಬಿಸುವ, ಸಾಮಾಜಿಕ ಸಮಸ್ಯೆಗಳನ್ನು ಗಂಭೀರವಾದ ಶೈಲಿಯಲ್ಲಿ ಚರ್ಚಿಸುವ, ದಮನಿತ ವರ್ಗಗಳ ತಲ್ಲಣಗಳನ್ನು ವಾಸ್ತವ ದೃಷ್ಟಿಕೋನದಿಂದ ನಿರೂಪಿಸುವ ಚಿತ್ರಗಳು ಮರಾಠಿ ಜನರ ಮನಗೆದ್ದಿವೆ. ಅಲ್ಲಿನ ಚಿತ್ರಗಳಲ್ಲಿ ನಿರೂಪಿತವಾಗುತ್ತಿರುವ ವಸ್ತು ವೈವಿಧ್ಯ ಬೆರಗುಗೊಳಿಸುವಂಥದ್ದು. ವಾಣಿಜ್ಯ ಚಿತ್ರಗಳಿಗೆ ಬೆನ್ನು ತಿರುಗಿಸಿರುವ ಮರಾಠೀ ಚಿತ್ರರಂಗ ಈಗ ತನ್ನ ಹಾದಿಯನ್ನು ಸ್ಪಷ್ಟವಾಗಿ ಗುರುತಿಸಿಕೊಂಡು ಸಂಸ್ಕೃತಿ ಮುಖಿಯಾಗಿದೆ. ಜೊತೆಗೆ ರಾಜ್ಯ ಸರ್ಕಾರವು ಜಾರಿಗೊಳಿಸಿರುವ ಪ್ರೋತ್ಸಾಹ ಯೋಜನೆಗಳನ್ನು ಸದುಪಯೋಗಪಡಿಸಿಕೊಳ್ಳುತ್ತಿದೆ.

ಈ ದೃಷ್ಟಿಯಲ್ಲಿ ಕನ್ನಡ ಚಿತ್ರರಂಗ ಮತ್ತು ರಾಜ್ಯ ಸರ್ಕಾರ ಮರು ಚಿಂತನೆಯಲ್ಲಿ ತೊಡಗಬೇಕಿದೆ. ಕನ್ನಡ ಚಿತ್ರರಂಗದಲ್ಲಿ ಪ್ರಯೋಗಶೀಲತೆಯ ಕೊರತೆ, ಸದಭಿರುಚಿಯ ಚಿತ್ರಗಳ ಅಭಾವವಿರುವುದನ್ನು ಗಿರೀಶ್ ಕಾಸರವಳ್ಳಿಯಂತಹ ನಿರ್ದೇಶಕರು ತಳ್ಳಿ ಹಾಕುತ್ತಾರೆ. ಕನ್ನಡದ ಇತ್ತೀಚಿನ ವರ್ಷಗಳಲ್ಲಿ ಅವರು ಗುರುತಿಸುವ ಹಾಗೆ ಉತ್ತಮ ಚಿತ್ರಗಳನ್ನು ರೂಪಿಸಿದ ಯುವ ನಿರ್ದೇಶಕರ ದಂಡೇ ಹರಿದು ಬಂದಿದೆ. ಪಿ. ಶೇಷಾದ್ರಿ (*ಬೆಟ್ಟದ ಜೀವ, ಡಿಸೆಂಬರ್ ೧, ವಿದಾಯ, ಭಾರತ್ ಸ್ಟೋರ್ಸ್*), ಬಿ. ಎಸ್. ಲಿಂಗದೇವರು (*ಮೌನಿ, ನಾನು ಅವನಲ್ಲ, ಅವಳು*) ಉಮಾಶಂಕರಸ್ವಾಮಿ (*ಬನದ ನೆರಳು, ಮುನ್ನಿಂಫ, ಕುವೆಂಪು ಕತೆ ಆಧರಿಸಿದ ಸಾಲದ ಮಗು*), ಮಂಸೋರೆ (*ಹರಿವು*) ನಿಖಿಲ್‌ಗೌಡ (*ಹಜ್*) ಪಂಚಾಕ್ಷರಿ (*ಪ್ರಕೃತಿ*) ಪವನ್‌ಕುಮಾರ್ (*ಲೂಸಿಯಾ*) ಗಿರಿರಾಜ್ (**ಜಟ್ಟ, ಮೈತ್ರಿ**), ವೆಂಟಾಚಲ (*ಚಿತ್ರಮಂದಿರದಲ್ಲಿ*), ಮಹಾಂತೇಶ ರಾಮದುರ್ಗ( *ಅಗಸಿ ಪಾರ್ಲರ್*), ವಿಸಾಲ್ ರಾಜ್(*ಇಂಗಳೆ ಮಾರ್ಗ*), ರಕ್ಷಿತ್ ಶೆಟ್ಟಿ(*ಉಳಿದವರು ಕಂಡಂತೆ*) –ಹೀಗೆ ವೈವಿಧ್ಯ ವಸ್ತು–ನಿರೂಪಣೆಯ ಚಿತ್ರಗಳನ್ನು ರೂಪಿಸಿದ ನಿರ್ದೇಶಕರ ದಂಡೇ ಇದೆ.

ಒಂದು ಅಂದಾಜಿನ ಪ್ರಕಾರ ವರ್ಷಕ್ಕೆ ಕನಿಷ್ಠ ೨೦ ಇಂತಹ ಚಿತ್ರಗಳು ತಯಾರಾಗುತ್ತವೆ. ಆದರೆ ಅವು ಪ್ರಶಸ್ತಿಯ ಪ್ಯಾನೆಲ್ ಸದಸ್ಯರನ್ನು ಬಿಟ್ಟು ಪ್ರೇಕ್ಷಕ ಸಮೂಹವನ್ನು ಏಕೆ ತಲುಪುತ್ತಿಲ್ಲ? ಯಾಕೆಂದರೆ ಕನ್ನಡ ಚಿತ್ರರಂಗ ವ್ಯಾಪಾರಿ– ಕಲಾತ್ಮಕ ಎಂಬ ಸುಳ್ಳು ವರ್ಗೀಕರಣದಲ್ಲಿ ಒಡೆದ ಮನೆಯಾಗಿದೆ. ಪರಸ್ಪರ ಅಪನಂಬಿಕೆ ಮನೆ ಮಾಡಿದೆ. ಕನ್ನಡ ಚಲನಚಿತ್ರರಂಗದ ವಿತರಣೆ ಮತ್ತು ಪ್ರದರ್ಶನದ ವಲಯಕ್ಕೆ ಈ ಬಗೆಯ ಚಿತ್ರಗಳನ್ನು ಬಿಡುಗಡೆ ಮಾಡಲು ಆಸಕ್ತಿಯಿಲ್ಲ. ಪರ್ಯಾಯವಾಗಿ ಇಂತಹ ಚಿತ್ರಗಳನ್ನು ಜನರ ಬಳಿಗೆ ಕೊಂಡೊಯ್ಯುವ ಯಾವ



ರಕ್ಷಿತ್ ಶೆಟ್ಟಿಯವರ 'ಉಳಿದವರು ಕಂಡಂತೆ' ಚಿತ್ರದ ಒಂದು ದೃಶ್ಯ

ಯೋಜನೆಯೂ ಇಲ್ಲ. ವ್ಯಾಪಾರಿ ಚಿತ್ರರಂಗದ ಪೋಷಕನಂತೆ ನಟಿಸುವ ಆಳುವ ಸರ್ಕಾರಗಳು, ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಯ ಬೇಡಿಕೆಗಳನ್ನು ಬಹು ಗಂಭೀರವಾಗಿ ಪರಿಗಣಿಸುತ್ತದೆ. ಹತ್ತು ಲಕ್ಷ ರೂಪಾಯಿಗಳಿದ್ದ ಸಹಾಯಧನವನ್ನು ೨೦ ಲಕ್ಷಕ್ಕೇರಿಸಲು ಒತ್ತಾಯಿಸಿದೆ. ೫೦ ಚಿತ್ರಗಳಿಗೆ ನೀಡುತ್ತಿರುವ ಸಬ್ಸಿಡಿಯನ್ನು ೧೦೦ ಚಿತ್ರಗಳಿಗೆ ವಿಸ್ತರಿಸುವ ಇಂಗಿತವನ್ನು ಸರ್ಕಾರವೇ ನೀಡಿದೆ. ತೆರಿಗೆ ವಿನಾಯಿತಿ ನೀಡುತ್ತಿದೆ. ಇಷ್ಟೆಲ್ಲ ಸೌಕರ್ಯಗಳಿದ್ದರೂ ಕನ್ನಡ ಚಿತ್ರೋದ್ಯಮ ಪ್ರೇಕ್ಷಕರಿಗೆ ಉಣಬಡಿಸುವುದು ಅದೇ ಹಳಸಲು ಕತೆಗಳನ್ನು; ರೀಮೇಕ್ ಸರಕನ್ನು. ಪ್ರೇಕ್ಷಕರನ್ನು ತಿದ್ದುವ, ಅಭಿರುಚಿಯನ್ನು ಬೆಳೆಸುವ, ಚಲನಚಿತ್ರ ಸಂಸ್ಕೃತಿಯ ಬಗ್ಗೆ ಗಂಭೀರವಾದ ಅಧ್ಯಯನ ಮತ್ತು ಸಂಶೋಧನೆಗಳಲ್ಲಿ ತೊಡಗಿಸಿಕೊಳ್ಳಬೇಕಾದ ಕರ್ನಾಟಕ ಚಲನಚಿತ್ರ ಅಕಾಡೆಮಿ ಈಗ ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಯ ಶಾಖೆಯಂತೆ ವರ್ತಿಸುತ್ತಿದೆ. ಸಬ್ಸಿಡಿ, ಮನರಂಜನೆ ತೆರಿಗೆ ವಿನಾಯಿತಿ ಬಗ್ಗೆ ಸರ್ಕಾರ ಮರುಚಿಂತನೆ ಮಾಡುವುದೊಳಿತು. ಕಟ್ಟುನಿಟ್ಟಾದ ನಿಯಮಗಳನ್ನು ರೂಪಿಸಿ ಉತ್ತಮ ಚಿತ್ರಗಳಿಗೆ ಮಾತ್ರ ಸಬ್ಸಿಡಿ ದೊರಕಬೇಕು. ಚಿತ್ರಗಳ ಸಂಖ್ಯೆಯನ್ನು ಮಿತಗೊಳಿಸಬೇಕು. ಇಲ್ಲದಿದ್ದರೆ ತೆರಿಗೆದಾರನ ಹಣ ಚಿತ್ರ ನಿರ್ಮಿಸುವ ತೆವಲಿನ ನಿರ್ಮಾಪಕನ ಜೇಬು ತುಂಬುತ್ತದೆ. ಆದರೆ ಇದು ಸಾಧ್ಯವಾಗದ ಮಾತು. ಯಾಕೆಂದರೆ ಎಲ್ಲ ರಂಗದಲ್ಲಿಯೂ ಇರುವಂತೆ ಕನ್ನಡ ಚಿತ್ರರಂಗದ ನಿರ್ಮಾಣ, ವಿತರಣೆ ಮತ್ತು ಪ್ರದರ್ಶನದ ನಿಯಂತ್ರಣ ಕೆಲವೇ ಶಕ್ತಿಗಳಲ್ಲಿ ಕೇಂದ್ರೀಕರಣಗೊಂಡಿದೆ. ಆ ಶಕ್ತಿಗಳಿಗೆ ಸರ್ಕಾರ ಶರಣಾಗಿದೆ. ಹಾಗಾಗಿ ಸದ್ಯಕ್ಕಂತೂ ಕನ್ನಡ ಚಿತ್ರರಂಗದ ಪ್ರಹಸನಗಳು ಹಾಗೆಯೇ ಮುಂದುವರೆಯುವ ಲಕ್ಷಣಗಳಿವೆ.



**ಲೇಖಕ ಡಾ ಕೆ.ಪುಟ್ಟಸ್ವಾಮಿಯವರು ವೃತ್ತಿಯಿಂದ ರಾಜ್ಯ ಸರ್ಕಾರದ ಹಿರಿಯ ಅಧಿಕಾರಿಯಾಗಿದ್ದು ಚಲನಚಿತ್ರಗಳ ಬಗ್ಗೆ ಗಮನಾರ್ಹ ಪುಸ್ತಕಗಳನ್ನು ಬರೆದು ಹೆಸರು ಮಾಡಿದವರು. ಕೆಲ ಮುಖ್ಯ ವಿಜ್ಞಾನ ಕೃತಿಗಳನ್ನೂ ಅವರು ಕನ್ನಡಕ್ಕೆ ತಂದಿದ್ದಾರೆ.**

**ಪತ್ರಿಕೆಯ ಚಂದಾ ವಿವರ**

**ಪ್ರಿಯ ಓದುಗರೇ,**

**'ಹೊಸ ಮನುಷ್ಯ' ಪತ್ರಿಕೆಗೆ ಚಂದಾದಾರರಾಗಬಯಸುವವರು ಆಗಸ್ಟ್ 2015ರ ವಿಶೇಷ ಸಂಚಿಕೆಯಿಂದ ಆಗಸ್ಟ್ 2016ರ ಆಗಸ್ಟ್ ವಿಶೇಷ ಸಂಚಿಕೆಯವರೆಗೆ ಒಟ್ಟು ಚಂದಾ ರೂ. 200/–. ಈ ಮೊತ್ತವನ್ನು *ಸಂಪಾದಕರು, ಹೊಸ ಮನುಷ್ಯ*–ಈ ಹೆಸರಿನಲ್ಲಿ ಶಿವಮೊಗ್ಗದ ಸ್ಟೇಟ್ ಬ್ಯಾಂಕ್ ಆಫ್ ಮೈಸೂರ್‌ನ (IFSC Code: SBMY 0040444) ವಿನೋಬನಗರ ಶಾಖೆಯಲ್ಲಿ ತೆರೆದಿರುವ ಕರೆಂಟ್ ಅಕೌಂಟ್ ಸಂಖ್ಯೆ: 64110358330 ಇಲ್ಲಿಗೆ ಚಂದಾ ಮೊತ್ತವನ್ನು ವರ್ಗಾಯಿಸಿ ಪತ್ರ ಮುಖೇನ ಅಥವಾ ದೂರವಾಣಿ ಸಂದೇಶದ ಮೂಲಕ ತಮ್ಮ ವಿಳಾಸವನ್ನು ತಪ್ಪದೆ ಸಂಪಾದಕರಿಗೆ ತಿಳಿಸಬೇಕು. ದೂರವಾಣಿ ಸಂಖ್ಯೆ, ಈ ಮೇಲ್ ಹಾಗೂ ಅಂಚೆ ವಿಳಾಸ ಪತ್ರಿಕೆಯ ಮುಖಪುಟದಲ್ಲಿದೆ–ಸಂಪಾದಕ**

'ಹೊಸ ಮನುಷ್ಯ' ಪತ್ರಿಕೆಗೆ

ಐದನೇ ವರ್ಷಕ್ಕೆ ಕಾಲಿಡುತ್ತಿರುವ ಶುಭ ಸಂದರ್ಭದಲ್ಲಿ

ಹುಟ್ಟುಹಬ್ಬದ ಶುಭಾಶಯಗಳು



ಅಹಾ! ನಾನೇನೂ ಮಾಡದೆ ಸುಮ್ಮನೆ ಕೂತಿದ್ದೆ. ಆದರೂ ಬಂತು ವಸಂತ! ಹುಲ್ಲು ತನಗೆ ತಾನೇ ಬೆಳೆಯಿತು!

–ಒಂದು ಝೆನ್ ಸಾಲು

**–ಸಿ. ಚಿದಾನಂದ**

**ಮತ್ತು ವಿಜಯಲಕ್ಷ್ಮಿ ಹಿರೇಮಠ**

**ಬೆಂಗಳೂರು**

ಹೊಸ ಮನುಷ್ಯ' ಓದುಗರೆಲ್ಲರಿಗೆ

ಸ್ವಾತಂತ್ರ್ಯೋತ್ಸವದ ಹಾರ್ದಿಕ ಶುಭಾಶಯಗಳು

ಗಾಳಿಯ ಬೀಜ ಬಿತ್ತಿದವನು ಬಿರುಗಾಳಿಗೂ ಸಿಕ್ಕಿಕೊಳ್ಳುವನು.

**-ಬೈಬಲ್**



ನೂತವಾಗಿ ಆಯ್ಕೆಯಾಗಿರುವ ಹನಗವಾಡಿ ಗ್ರಾಮ ಪಂಚಾಯ್ತಿ ಸದಸ್ಯರುಗಳಾದ

ಶ್ರೀಮತಿ/ಶ್ರೀ

**ಪ್ರಮೋದ್ ಬಣಕಾರ್**
**ವನಜಾಕ್ಷಮ್ಮ ಕೋಂ ಡಿ.ವಿರೂಪಾಕ್ಷಪ್ಪ**
**ಸರೋಜಮ್ಮ ಕೋಂ ಹರಿಯಪ್ಪ**
**ಕೆಂಚಪ್ಪ ಈರಪ್ಪ ಹನಗವಾಡಿ**
**ಈರಮ್ಮ ಕೋಂ ವೀರಭದ್ರಪ್ಪ ಮಾನಾರ**
**ನಾಗಮ್ಮ ಹಾಲೇಶಪ್ಪ**
**ರೇವಣಸಿದ್ದಪ್ಪ ಬುಳ್ಳಾಪುರ**
**ಮಂಜುಳಾ ಹರಗನಳ್ಳಿ**
. **ಕೆ, ರಾಜು ಹರಗನಳ್ಳಿ**
. **ಕೆಂಚಪ್ಪ ಹರಗನಳ್ಳಿ**
. **ಮಾರಮ್ಮ ಕೋಂ ತೀರ್ಥಪ್ಪ ದೊಗ್ಗಳ್ಳಿ**
**ಯಶೋದಮ್ಮ ಕೋಂ ಮಹೇಶಪ್ಪ ದೊಗ್ಗಳ್ಳಿ**
**ಮಂಜುನಾಥ್ ದೊಗ್ಗಳ್ಳಿ**

ಇವರಿಗೆ ಶುಭಕೋರುವವರು,

ಸಿ. ತಿಪ್ಪಣ್ಣ
ಟ್ರಸ್ಟಿ, ಪ್ರೊ ಬಿ. ಕೃಷ್ಣಪ್ಪ ಟ್ರಸ್ಟ್,
ಬೆಂಗಳೂರು.

ಬಿ. ನಿಂಗಪ್ಪ
ಮಾಜಿ ಉಪಾಧ್ಯಕ್ಷರು,
ಪಿ.ಎಲ್.ಡಿ. ಬ್ಯಾಂಕ್, ಹನಗವಾಡಿ.

ಜಗದೀಶಪ್ಪ ಬಣಕಾರ್
ನಿರ್ದೇಶಕರು, ಹಾಲು ಒಕ್ಕೂಟ,
ಹನಗವಾಡಿ, ದಾವಣಗೆರೆ ಜಿಲ್ಲೆ.

**‘ಹೊಸ ಮನುಷ್ಯ’ ಪತ್ರಿಕೆಗೆ**

**ಐದನೇ ವರ್ಷಕ್ಕೆ ಕಾಲಿಡುತ್ತಿರುವ ಶುಭ ಸಂದರ್ಭದಲ್ಲಿ**

**ಹುಟ್ಟುಹಬ್ಬದ ಶುಭಾಶಯಗಳು**



ಬಾಯಲ್ಲಿ ನಾಲಗೆ ಚಲಿಸುತ್ತಿರುತ್ತದೆ

ಮನಸ್ಸು ಹತ್ತಾ ದಿಕ್ಕಿನಲ್ಲಿ ಹರಿದಾಡುತ್ತಿರುತ್ತದೆ

ಇದು ಸ್ಮರಣೆಯಲ್ಲ

**-ಕಬೀರ**

–ಹಾಶಾಂಪೀರ್ ಎಂ. ಮೇಸ್ತ್ರಿ

ಸೆಂಟ್ರಂಗ್ ಕಾಮಗಾರಿಯ ಗುತ್ತಿಗೆದಾರರು

**ಲಕ್ಷ್ಮಿಸಿಂಗನಕೇರಿ, ನಗರ್‌ಕರ್ ಕಾಲೋನಿ**

**ಧಾರವಾಡ**

'ಹೊಸ ಮನುಷ್ಯ' ಪತ್ರಿಕೆಗೆ
ಐದನೇ ವರ್ಷಕ್ಕೆ ಕಾಲಿಡುತ್ತಿರುವ ಶುಭ ಸಂದರ್ಭದಲ್ಲಿ
ಹುಟ್ಟುಹಬ್ಬದ ಶುಭಾಶಯಗಳು



ಸತ್ಯವೊಂದೇ. ಜ್ಞಾನಿಗಳು ಅದನ್ನು ಹಲವು ಹೆಸರುಗಳಿಂದ ಕರೆಯುತ್ತಾರೆ.

–ಋಗ್ವೇದ

**ಮೆ. ವಿಶ್ವೇಶ್ವರ ಪಾಲಿಮರ್ಸ್**

ಪಾಲುದಾರರು: **ಎಂ.ಎಸ್. ನರಗುಂದ**

ಮತ್ತು **ಶೋಭಾ ನರಗುಂದ**

(ಎಚ್.ಡಿ.ಪಿ.ಇ. ಪೈಪುಗಳ ತಯಾರಕರು ಮತ್ತು ಮಾರಾಟಗಾರರು)

**ಬೇಲೂರು ಕೈಗಾರಿಕಾ ಕ್ಷೇತ್ರ**

**ಧಾರವಾಡ**

'ಹೊಸ ಮನುಷ್ಯ' ಪತ್ರಿಕೆಗೆ

ಹುಟ್ಟುಹಬ್ಬದ ಶುಭಾಶಯಗಳು



*ಸ್ವಚ್ಛ ಆತ್ಮಸಾಕ್ಷಿಗಿಂತ ಮೆದುವಾದ ತಲೆದಿಂಬು ಇನ್ನೊಂದಿಲ್ಲ.*

***–ಫ್ರೆಂಚ್ ಗಾದೆ***

**ಇಸ್ಮಾಯಿಲ್ ಎಂ ಅರಳಿಕಟ್ಟಿ**

**ಇಂಜಿನಿಯರಿಂಗ್ ವರ್ಕ್ಸ್**

ಫ್ಯಾಬ್ರಿಕೇಶನ್ ಗುತ್ತಿಗೆದಾರರು

ಯಾಲಕ್ಕಿ ಶೆಟ್ರ, ಕಾಲೋನಿ

**ಧಾರವಾಡ**

**ಹೊಸ ಮನುಷ್ಯ' ಓದುಗರೆಲ್ಲರಿಗೆ**

**ಸ್ವಾತಂತ್ರ್ಯೋತ್ಸವದ ಹಾರ್ದಿಕ ಶುಭಾಶಯಗಳು**



ಹೆಪ್ಪು ಹಾಕುತ್ತಲೇ ಹಾಲು ಮೊಸರಾಗುವುದಿಲ್ಲ. ಪಾಪ ಕೃತ್ಯವೇನೂ ಕೂಡಲೇ ಪರಿಣಮಿಸದು ಆದರೆ ಅದು ನಿಧಾನಕ್ಕೆ ಫಲ ಬಂದು ಅದು ಗೈದವನ್ನು ಘಾಸಿಗೊಳಿಸುವುದು.

**–ದಮ್ಮ ಪದ**

ಮೊಹಮ್ಮದ್ ಹನೀಫ್ ಮೇಸ್ತ್ರಿ

ಮಾಲೀಕರು: **ಸ್ಟಾರ್ ಫೋಟೋ ಸ್ಟುಡಿಯೋ**

ಅಂಜುಮಾನ್ ಕಾಂಪ್ಲೆಕ್ಸ್

ಸಿಟಿ ಬಸ್ ಟರ್ಮಿನಲ್ ಎದುರು

**ಹೊಸ ಮನುಷ್ಯ' ಓದುಗರೆಲ್ಲರಿಗೆ**

**ಸ್ವಾತಂತ್ರ್ಯೋತ್ಸವದ ಹಾರ್ದಿಕ**
**ಶುಭಾಶಯಗಳು**



ನಿರ್ಮಲ ಮನಸ್ಸೇ ಧರ್ಮ

–ತಿರುವಳ್ಳುವರ್

**ಮೆ. ಗ್ಲೋಬಲ್ ಸೇಲ್ಸ್ ಕಾರ್ಪೋರೇಶನ್**

ಮಾಲೀಕರು: ಉತ್ಕರ್ಷ ಸಾಬಳೆ

ಮತ್ತು ವಿಜಯ ಸಾಬಳೆ

ಲಕ್ಕಮ್ಮನಹಳ್ಳಿ ಕೈಗಾರಿಕಾ ಕ್ಷೇತ್ರ

ಧಾರವಾಡ

'ಹೊಸ ಮನುಷ್ಯ' ಪತ್ರಿಕೆಗೆ

ಐದನೇ ವರ್ಷಕ್ಕೆ ಕಾಲಿಡುತ್ತಿರುವ ಶುಭ ಸಂದರ್ಭದಲ್ಲಿ

ಹುಟ್ಟುಹಬ್ಬದ ಶುಭಾಶಯಗಳು



ಮಾಡುವಂತಿರಬೇಕು ಮಾಡದಂತಿರಬೇಕು

ಮಾಡುವ ಮಾಟದೊಳಗೆ ತಾನಿಲ್ಲದಿರಬೇಕು

**–ಬಸವಣ್ಣ**

**ನಾಗರಾಜ ದೊಡ್ಡವಾಡ**

ಮತ್ತು ವಿ**ಜಯಕುಮಾರ ದೊಡ್ಡವಾಡ**

ಸಿವಿಲ್ ಗುತ್ತಿಗೆದಾರರು

**ಸವದತ್ತಿ**(ಬೆಳಗಾವಿ ಜಿಲ್ಲೆ)

ಹೊಸ ಮನುಷ್ಯ' ಓದುಗರೆಲ್ಲರಿಗೆ

ಸ್ವಾತಂತ್ರ್ಯೋತ್ಸವದ ಹಾರ್ದಿಕ ಶುಭಾಶಯಗಳು



ನಿಮ್ಮಲ್ಲಿ ಯಾರಾದರೂ ತಿಳಿಗೇಡಿತನದಿಂದ ತಪ್ಪು ಮಾಡಿದರೆ ಅದಕ್ಕಾಗಿ
ನೀವು ಪಶ್ಚಾತ್ತಾಪ ಪಟ್ಟರೆ ಅಲ್ಲಾಹುನು ಖಂಡಿತವಾಗಿಯೂ
ಅವನನ್ನು ಕ್ಷಮಿಸುತ್ತಾನೆ

–ಕುರ್ರಾನ್

**–ಮೆ. ಸಾವಳಗಿ ಡ್ರಗ್ಸ್ ಎಂಪೋರಿಯಂ**

ಮಾಲಿಕರು: ಮೊಹಮ್ಮದ್ ಶರೀಫ್ ಸಿ. ಸಾವಳಗಿ

ಟೋಲ್‌ನಾಕ, ಪಿ.ಬಿ.ರಸ್ತೆ

ಧಾರವಾಡ

‘ಹೊಸ ಮನುಷ್ಯ’ ಪತ್ರಿಕೆಗೆ
ಐದನೇ ವರ್ಷಕ್ಕೆ ಕಾಲಿಡುತ್ತಿರುವ ಶುಭ ಸಂದರ್ಭದಲ್ಲಿ
ಹುಟ್ಟುಹಬ್ಬದ ಶುಭಾಶಯಗಳು



**ಸ್ನಾನ ಮಾಡಿರೋ ಜ್ಞಾನತೀರ್ಥದಲಿ**
**ನಾನು ನೀನೆಂಬ ಅಹಂಕಾರ ಬಿಟ್ಟು**
**ತನ್ನೊಳು ತಾನೆ ತಿಳಿದರೊಂದು ಸ್ನಾನ**
**ಅನ್ಯಾಯ ನುಡಿಯದಿದ್ದರೆ ಒಂದು ಸ್ನಾನ**
**ಅನ್ಯಾಯ ಮಾಡದಿರಲು ಒಂದು ಸ್ನಾನ**
**-ಪುರಂದರದಾಸರು**

**ಸಚಿನ್ ಪೈ**
ಮಾಲೀಕರು: **ಸಚಿನ್ ಸೇಲ್ಸ್ ಕಾರ್ಪೋರೇಶನ್**
**ಕಟಿಂಗ್ ಟೂಲ್ಸ್ ವ್ಯಾಪಾರಿಗಳು**
**ಕಲಘಟಗಿ ರಸ್ತೆ, ಧಾರವಾಡ**

'ಹೊಸ ಮನುಷ್ಯ' ಪತ್ರಿಕೆಗೆ

ಐದನೇ ವರ್ಷಕ್ಕೆ ಕಾಲಿಡುತ್ತಿರುವ ಶುಭ ಸಂದರ್ಭದಲ್ಲಿ

ಹುಟ್ಟುಹಬ್ಬದ ಶುಭಾಶಯಗಳು



ವಿಜಯದಿಂದ ವೈರ ಹುಟ್ಟುತ್ತದೆ ಸೋತವನು ನೋವಿನಿಂದ ನರಳುತ್ತಾನೆ

ಶಾಂತಚಿತ್ತರು ಸೋಲು ಗೆಲುವುಗಳ ಗೋಜಿಗೆ ಹೋಗದೆ ಸಂತೋಷದಿಂದಿರುತ್ತಾರೆ

~ಭಗವಾನ್ ಬುದ್ಧ

**–ಘೋಷಾಲ್ ಎಂ.**

**ಬೆಳ್ಳಿ ರವಿವರ್ಮ**

---

'ಹೊಸ ಮನುಷ್ಯ' ಪತ್ರಿಕೆಗೆ

ಐದನೇ ವರ್ಷಕ್ಕೆ ಕಾಲಿಡುತ್ತಿರುವ ಶುಭ ಸಂದರ್ಭದಲ್ಲಿ

ಹುಟ್ಟುಹಬ್ಬದ ಶುಭಾಶಯಗಳು



**– ಎಂ.ರಾಜು**

**ಮತ್ತು ಕೆ.ಮಂಜುಳಾ ರಾಜು**

---

'ಹೊಸ ಮನುಷ್ಯ' ಪತ್ರಿಕೆಗೆ

ಹುಟ್ಟುಹಬ್ಬದ ಶುಭಾಶಯಗಳು

**ಅಧ್ಯಕ್ಷರು ಹಾಗೂ ಸದಸ್ಯರು,**

**ಎಂ. ಸಿ. ಸಿ ಯೂತ್ಸ್ ಕ್ಲಬ್**

**(SET DEMS)**

**ದಾವಣಗೆರೆ.**

'ಹೊಸ ಮನುಷ್ಯ' ಪತ್ರಿಕೆಗೆ

ಹುಟ್ಟುಹಬ್ಬದ ಶುಭಾಶಯಗಳು



**– ಎನ್.ಎಸ್.ಗಂಗಾಧರ ಮೂರ್ತಿ**

ತುಮಕೂರು

**'ಹೊಸ ಮನುಷ್ಯ' ಪತ್ರಿಕೆಗೆ**

**ಐದನೇ ವರ್ಷಕ್ಕೆ ಕಾಲಿಡುತ್ತಿರುವ ಶುಭ ಸಂದರ್ಭದಲ್ಲಿ**


**ಹುಟ್ಟುಹಬ್ಬದ ಶುಭಾಶಯಗಳು**



**– ಡಿ. ಮೋಹನಶಾಸ್ತ್ರೀ**

**ಮತ್ತು ಕುಟುಂಬ,**

ಶಿವಮೊಗ್ಗ



ರಸತೀರ್ಥದಲಿ ಮಿಂದವಗೆ ಭವದ ಭಯವೇಕೆ?

ಪುಣ್ಯದಾಲಯವಿದು ಪೃಥ್ವಿ.

ಸ್ವರ್ಗವದು ಪರದೇಶಿ!

**–ಕುವೆಂಪು**

ಶುಭಾಶಯಗಳೊಂದಿಗೆ-

**ಬಿ.ಎಸ್. ದಿವಾಕರ್**

ಬೆಂಗಳೂರು

'ಹೊಸ ಮನುಷ್ಯ' ಪತ್ರಿಕೆಗೆ

ಹುಟ್ಟುಹಬ್ಬದ ಶುಭಾಶಯಗಳು



**ಆಡಳಿತ ಮಂಡಳಿ ಸದಸ್ಯರು,**

**ಮುಖ್ಯೋಪಾಧ್ಯಾಯರು,**

**ಶಿಕ್ಷಕರು ಹಾಗೂ**

**ಸಿಬ್ಬಂದಿ ವರ್ಗ**

## ನಿಸರ್ಗ ವಿದ್ಯಾನಿಕೇತನ

**ಸಿಡೇದಹಳ್ಳಿ, ನಾಗಸಂದ್ರ ಅಂಚೆ,**

**ಬೆಂಗಳೂರು–560073.**

'ಹೊಸ ಮನುಷ್ಯ' ಪತ್ರಿಕೆಗೆ
ಐದನೇ ವರ್ಷಕ್ಕೆ ಕಾಲಿಡುತ್ತಿರುವ ಶುಭ ಸಂದರ್ಭದಲ್ಲಿ
ಹುಟ್ಟುಹಬ್ಬದ ಶುಭಾಶಯಗಳು



**–ನಮ್ ಟೀಮ್?!**

ನಂ. ೧೫೯, ಅಂಬರ, ೧ನೇ ತಿರುವು

೬ನೇ ಮುಖ್ಯರಸ್ತೆ, ಲಾಲ್ ಬಹಾದ್ದೂರ್ ಶಾಸ್ತ್ರೀ ನಗರ,

ಶಿವಮೊಗ್ಗ.

ದೂ: 98445–18866

**ಹೊಸ ಮನುಷ್ಯ' ಓದುಗರೆಲ್ಲರಿಗೆ**

**ಸ್ವಾತಂತ್ರ್ಯೋತ್ಸವದ ಹಾರ್ದಿಕ ಶುಭಾಶಯಗಳು**



**–ಪ್ರೊ.ಬಿ.ಪಿ.ವೀರೇಂದ್ರ ಕುಮಾರ್,**

**ರೂಪಕಲಾ,**

**ಅಪೂರ್ವ ಮತ್ತು ಮಮತಾ**

**ಬೆಂಗಳೂರು**

'ಹೊಸ ಮನುಷ್ಯ' ಪತ್ರಿಕೆಗೆ
ಐದನೇ ವರ್ಷಕ್ಕೆ ಕಾಲಿಡುತ್ತಿರುವ ಶುಭ ಸಂದರ್ಭದಲ್ಲಿ
ಹುಟ್ಟುಹಬ್ಬದ ಶುಭಾಶಯಗಳು



**–ಡಾ. ಶೇಖರ್ ಗೌಳೇರ್**

**ಮತ್ತು ಕುಟುಂಬ,**

**ಶಿವಮೊಗ್ಗ**

**'ಹೊಸ ಮನುಷ್ಯ' ಪತ್ರಿಕೆಗೆ**
**ಹುಟ್ಟುಹಬ್ಬದ ಶುಭಾಶಯಗಳು**



**–ಜಯವಂತ್ ಕಾಮತ್**

ಮತ್ತು **ಬೇಲಾಡಿ ಕುಟುಂಬ**

೫ನೇ ವರ್ಷಕ್ಕೆ ಕಾಲಿಡುತ್ತಿರುವ 'ಹೊಸ ಮನುಷ್ಯ'ನಿಗೆ ಹಾರ್ದಿಕ ಶುಭಾಶಯಗಳು

- ಕ್ಷಯ ರೋಗವು ವಂಶಪಾರಂಪರಿಕವಲ್ಲ. ಇದೊಂದು ಸಾಂಕ್ರಾಮಿಕ ರೋಗ.
- ಕ್ಷಯ ರೋಗದ ಲಕ್ಷಣಗಳು:

೧. ಎರಡು ವಾರ ಅಥವಾ ಅದಕ್ಕಿಂತ ಮೇಲ್ಪಟ್ಟು ಸತತವಾದ ಕೆಮ್ಮು

೨. ಜ್ವರ, ಅದರಲ್ಲೂ ಸಂಜೆಯ ವೇಳೆ ಹೆಚ್ಚಾಗುವುದು

೩. ಎದೆಯಲ್ಲಿ ನೋವು, ತೂಕ ಕಡಿಮೆಯಾಗುವುದು, ಹಸಿವಾಗದಿರುವುದು.

೪. ಕಫದಲ್ಲಿ ರಕ್ತ ಬೀಳುವುದು

ಕ್ಷಯ ರೋಗದ ಚಿಕಿತ್ಸೆ ಆರರಿಂದ ಎಂಟುತಿಂಗಳು. ನಿಯಮಿತವಾಗಿ ಹಾಗೂ ನಿಗದಿತ ಅವಧಿಯವರೆಗೆ ಚಿಕಿತ್ಸೆ ಪಡೆದರೆ ಕ್ಷಯ ರೋಗವನ್ನು ಪೂರ್ಣವಾಗಿ ಗುಣಪಡಿಸಬಹುದು.

ಕ್ಷಯ ರೋಗದ ಪರೀಕ್ಷೆ ಹಾಗೂ ಚಿಕಿತ್ಸೆ ಎಲ್ಲಾ ಸರ್ಕಾರೀ ಆರೋಗ್ಯ ಕೇಂದ್ರಗಳಲ್ಲಿ ಉಚಿತವಾಗಿ ದೊರೆಯುತ್ತದೆ.

**–ಡಾ. ಎಚ್. ಎಸ್. ರುದ್ರೇಶ್,**

(ಕ್ಷಯರೋಗ ಮತ್ತು ಎದೆರೋಗಗಳ ತಜ್ಞರು)

ನಿವೃತ್ತ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಹಾಗೂ ಗೌ.ಕಾರ್ಯಗದರ್ಶಿ: ಕರ್ನಾಟಕ ರಾಜ್ಯ ಕ್ಷಯರೋಗ ನಿವಾರಣಾ ಸಂಸ್ಥೆ

**'ಹೊಸ ಮನುಷ್ಯ' ಪತ್ರಿಕೆಗೆ**

**ಐದನೇ ವರ್ಷಕ್ಕೆ ಕಾಲಿಡುತ್ತಿರುವ ಶುಭ ಸಂದರ್ಭದಲ್ಲಿ**

**ಹುಟ್ಟುಹಬ್ಬದ ಶುಭಾಶಯಗಳು**



**– ಪ್ರೊ. ಶಿವರಾಮು ಕಾಡನಕುಪ್ಪೆ**

ಮತ್ತು **ಕುಟುಂಬ,**

ಮೈಸೂರು.

**ಹೊಸ ಮನುಷ್ಯ' ಓದುಗರೆಲ್ಲರಿಗೆ**

**ಸ್ವಾತಂತ್ರ್ಯೋತ್ಸವದ ಹಾರ್ದಿಕ ಶುಭಾಶಯಗಳು**



ಸಹನ ಎಂಟರ್ ಪ್ರೈಸಸ್

ಇಂಡಿಯಾ ಸಿಮೆಂಟ್ಸ್, ರಾಸಿ, ಕೋರಮಂಡಲ

ಮತ್ತು ಶಂಕರ್ ಸಿಮೆಂಟುಗಳ

ಅಧಿಕೃತ ಮಾರಾಟಗಾರರು ಮತ್ತು ಸರ್ಕಾರಿ

ಪೂರೈಕೆದಾರರು,

**ಗೋಪಾಳ ಮುಖ್ಯ ರಸ್ತೆ,**

**ಪದ್ಮ ಚಿತ್ರ ಮಂದಿರದ ಹತ್ತಿರ,**

**ಶಿವಮೊಗ್ಗ.**

'ಹೊಸ ಮನುಷ್ಯ' ಪತ್ರಿಕೆಗೆ

ಹುಟ್ಟುಹಬ್ಬದ ಶುಭಾಶಯಗಳು



– ಎಂ. ಚಂದ್ರಶೇಖರಯ್ಯ

ಮತ್ತು ರೇಣುಕಾ

ಭದ್ರಾವತಿ

ಹೊಸ ಮನುಷ್ಯ' ಓದುಗರೆಲ್ಲರಿಗೆ

ಸ್ವಾತಂತ್ರ್ಯೋತ್ಸವದ ಹಾರ್ದಿಕ ಶುಭಾಶಯಗಳು



**ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಬ್ಯಾಂಕ್(ರಿ),**

ಗೋಕಾಕ

'ಹೊಸ ಮನುಷ್ಯ' ಪತ್ರಿಕೆಗೆ
ಐದನೇ ವರ್ಷಕ್ಕೆ ಕಾಲಿಡುತ್ತಿರುವ ಶುಭ ಸಂದರ್ಭದಲ್ಲಿ
ಹುಟ್ಟುಹಬ್ಬದ ಶುಭಾಶಯಗಳು



**– ತಾರಿಣಿ ಶುಭದಾಯಿನಿ**

ಮತ್ತು **ಕುಟುಂಬ,**

ಚಿತ್ರದುರ್ಗ

ಹೊಸ ಮನುಷ್ಯ' ಓದುಗರೆಲ್ಲರಿಗೆ

ಸ್ವಾತಂತ್ರ್ಯೋತ್ಸವದ ಹಾರ್ದಿಕ ಶುಭಾಶಯಗಳು




**ಸದಾನಂದ**

ನಂ.೨೧, ೪ನೇ ಮುಖ್ಯ ರಸ್ತೆ

೮ನೇ ಅಡ್ಡ ರಸ್ತೆ, ಮಲ್ಲೇಶ್ವರಂ

**ಬೆಂಗಳೂರು–೫೬೦ ೦೦೩**

**ತಿಂಗಳ ಸಾಲುಗಳು...**



ಅತ್ಯುನ್ನತ ರೂಪದ ಸ್ವಾತಂತ್ರ್ಯ ತನ್ನಲ್ಲಿ ಅತ್ಯುನ್ನತ ರೂಪದ ಶಿಸ್ತು ಮತ್ತು ವಿನಯವನ್ನು ಒಳಗೊಂಡಿರುತ್ತದೆ. ಶಿಸ್ತು ಮತ್ತು ವಿನಯಗಳಿಂದಲೇ ಸ್ವಾತಂತ್ರ್ಯ ಸಹಜವಾಗಿ ಅರಳುವುದು. ಅನಿರ್ಬಂಧಿತ ಸ್ವಾತಂತ್ರ್ಯ ಸ್ವೇಚ್ಛಾಚಾರಕ್ಕೆ ದಾರಿ ಮಾಡಿ ತನಗೂ ಅಕ್ಕಪಕ್ಕದವರಿಗೂ ಕೇಡನ್ನುಂಟುಮಾಡಬಲ್ಲುದು.

-ಮಹಾತ್ಮ ಗಾಂಧಿ

ಶುಭಾಶಯಗಳೊಂದಿಗೆ–

**–ಬಿ. ಸುರೇಶ**

**ಡಾ. ವಿಜಯಾ**